

...num time allowed for
... shall be one fortnight.
... again if not required by

...ce books shall be lent out.

...er shall have more than
... the Library at one time.

... must not pass books from
... must return them to the

...oks must not be used as

...who defaces by writing or
... any book shall pay the
...k or of the entire works,
...re than one volume.

...ower shall be responsible
... books lent out to him if
...aged or otherwise cannot
... the Library when they are
...ed.

...ne presence of the voucher with
...rarian shall be considered sufficient
... of the non-return of books.

ಓಂ

ಶ್ರೀಕಾಶೀನಾಥಗ್ರಂಥಮಾಲಾ

ಪಂಚಮಪುಷ್ಪ

ವೀರಶೈವರತ್ನ

ಐದನೆಯಾವೃತ್ತಿ

೨೦೦೦ ಪ್ರತಿಗಳು

ಮೈಸೂರು:

ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,

1936

ಬೆಲೆ ೨ ರೂ.

ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ಪ್ರಸ್ತಾವನೆ.

ಪರಮಪವಿತ್ರವಾದ ನಮ್ಮ ಭರತಭೂಮಿಯಲ್ಲಿ ವೇದಾಗಮಾವಲಂಬಿಗಳಾದ ಮತಗಳನೇಕವಾಗಿರುವುವು. ನಿಗಮಾಗಮೈಕಶರಣಗಳಾದೀ ಮತಗಳೇ ಆರ್ಯಮತಗಳೆಂದೂ, ಸನಾತನಮತಗಳೆಂದೂ ಲೋಕದಲ್ಲಿ ಪ್ರಜ್ವಲಿಸುತ್ತಿರುವುವು. ಇವುಗಳಲ್ಲಿ ದ್ವೈತ-ಅದ್ವೈತ-ವಿಶಿಷ್ಟಾದ್ವೈತ-ಶಕ್ತಿವಿಶಿಷ್ಟಾದ್ವೈತ ಎಂಬೀ ನಾಲ್ಕು ಮತಗಳುಮಾತ್ರ ಜಗದ್ವಿಖ್ಯಾತವಾಗಿವೆ. ಈ ಮತಗಳನ್ನು ಅನುಕ್ರಮವಾಗಿ ಮಧ್ವಾಚಾರ್ಯ, ಶಂಕರಾಚಾರ್ಯ, ರಾಮಾನುಜಾಚಾರ್ಯ, ರೇಣುಕಾದಿಪಂಚಾಚಾರ್ಯರೆಂಬ ಆಚಾರ್ಯರು ಸೂತ್ರಭಾಷ್ಯಾದಿಗಳ ದ್ವಾರಾ ನೆಲೆಗೊಳಿಸಿದರು. ಈ ಆಚಾರ್ಯರಲ್ಲಿ ಶ್ರೀಶಂಕರಾಚಾರ್ಯರು ಈಗ್ಗೆ ಸುಮಾರು ಎರಡುಸಾವಿರ ವರ್ಷಗಳ ಪೂರ್ವದಲ್ಲಿದ್ದರೆಂದೂ, ಶ್ರೀ ರಾಮಾನುಜಾಚಾರ್ಯರು ಒಂಭತ್ತುನೂರು ವರ್ಷಗಳ ಪೂರ್ವದಲ್ಲಿದ್ದರೆಂದೂ, ಶ್ರೀ ಮಧ್ವಾಚಾರ್ಯರು ಆರುನೂರು ವರ್ಷಗಳ ಪೂರ್ವದಲ್ಲಿದ್ದರೆಂದೂ ಆಯಾ ಮತೀಯರು ಬರೆದ ಗ್ರಂಥಗಳಿಂದ ವೇದ್ಯವಾಗುತ್ತದೆ. ಆದರೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿದ ಶ್ರೀರೇಣುಕಾದಿಪಂಚಾಚಾರ್ಯರ ಕಾಲವನ್ನು ಅನ್ಯಮತಾಚಾರ್ಯರಂತೆ ಕಂಡುಹಿಡಿಯುವುದು ಸಾಧ್ಯವಿಲ್ಲದಾಗಿದೆ. ಏಕೆಂದರೆ—ಶ್ರೀಮತ್ಪಂಚಾಚಾರ್ಯರು ಕೃತಾದಿಚತುರ್ಯುಗಗಳಲ್ಲಿಯೂ ಅವತಾರವನ್ನೆತ್ತಿ ಈ ಸಿದ್ಧಾಂತವನ್ನು ಸ್ಥಾಪಿಸಿದರೆಂದು ಶಿವಾಗಮಗಳು

ಘಂಟಾಘೋಷವಾಗಿ ಸಾರುತ್ತವೆ. ಇದರ ಮೇಲಿಂದ ಈ ಮಹಾಚಾರ್ಯರ ಕಾಲನಿರ್ಣಯವನ್ನುಮಾಡುವುದು ಅತ್ಯಂತಕಷ್ಟದಾಯಕವಾದುದೆಂಬ ವಿಷಯವು ಪ್ರತಿಯೊಬ್ಬರಿಗೂ ವೇದ್ಯವಾಗದಿರದು. ಅಲ್ಲದೆ ಈ ಪೂಜ್ಯಪಾದರು ಅನ್ಯಮತಾಚಾರ್ಯರಂತೆ ಜನನೀಜನಕರ ಸಂಬಂಧವುಳ್ಳ ಗರ್ಭದಿಂದವತರಿಸದೆ, ಚತುರ್ಯುಗಗಳಲ್ಲಿಯೂ ಶ್ರೀ ಸೋಮನಾಥಾದಿಪಂಚಶಿವಲಿಂಗಗಳಿಂದ ದಿವ್ಯದೇಹಧಾರಿಗಳಾಗಿ ಅವತರಿಸಿದರೆಂದು ಶಿವಾಗಮಗಳೂ, ಅವರ ಲೀಲಾಬೋಧಕಚರಿತ್ರಗಳೂ ಉದ್ಘೋಷಿಸುತ್ತಿರುವುವು. ಜನನೀಜನಕರ ಸಂಬಂಧವಿಲ್ಲದೆ, ಕೇವಲ ದಿವ್ಯದೇಹಧಾರಿಗಳಾಗಿ ಅವತರಿಸಿದ ಈ ಲೀಲಾವಿಭೂತಿಗಳ ಕಾಲವನ್ನು ಕಂಡುಹಿಡಿಯುವದಂತೂ ಯಾರಿಗೂ ಶಕ್ಯವಿಲ್ಲ. ಆದರೆ, ಈ ಮಹನೀಯರು ಪ್ರತಿಯೊಂದು ಯುಗದ ಆದಿಯಲ್ಲಿ, ಖಿಲವಾಗಿದ್ದ ವೀರಶೈವಸಿದ್ಧಾಂತವನ್ನು ಪ್ರತಿಷ್ಠಿಸುವುದಕ್ಕೋಸ್ಕರ ಅವತರಿಸಿ, ಆಯಾ ಕಾಲದಲ್ಲಿದ್ದ ಅನೇಕಜನಚಕ್ರವರ್ತಿಗಳಿಗೂ, ಮಹಾರಾಜರಿಗೂ, ಸಿದ್ಧರಿಗೂ, ಮುನಿಗಳಿಗೂ ಶಿವಸಿದ್ಧಾಂತವನ್ನುಪದೇಶಿಸಿರುವುದರಿಂದ, ಆಯಾ ಯುಗದ ಇಂಥ ಇಂಥ ಕಾಲದಲ್ಲಿ ಈ ಭೂಮಂಡಲವನ್ನಲಂಕರಿಸಿದ್ದರೆಂದುಮಾತ್ರ ಹೇಳಬಹುದಾಗಿದೆ. ಒಟ್ಟಿನಮೇಲೆ ಜಗದಾದಿಯ ವಿಷಯವನ್ನು ವಿಮರ್ಶಿಸಿದರೆ ಇವರು ನಿತ್ಯರೆಂದೂ, ಕಾಲಾತೀತರೆಂದೂ ಸಿದ್ಧವಾಗುತ್ತದೆ. ಆದುದರಿಂದಲೇ ಇಂದಿನವರೆಗೆ ಯಾವ ಇತಿಹಾಸಜ್ಞರೂ ಇವರ ಕಾಲನಿರ್ಣಯವೆಂಬ ಮಹಾರ್ಣವದಲ್ಲಿ ಬಿದ್ದು ತೀರವನ್ನು ಕಂಡಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಇಂಥ ಜಗದ್ವಿಖ್ಯಾತಮಹಾಚಾರ್ಯರ ವಿಷಯದಲ್ಲಿಯೂ, ಅವರಿಂದ ಸ್ಥಾಪಿಸಲ್ಪಟ್ಟ ವೀರಶೈವಮತದ ವಿಷಯದಲ್ಲಿಯೂ ಪರಮತೀಯರಲ್ಲಿ ಅನೇಕರಿಗೆ ವಿಪರೀತಭಾವನೆಯುಂಟಾಗಿರುವುದು.

ಅವರೀವಿಧವಾದ ಭಾವನೆಗೆ ಬಸವಪಂಥಿಗಳ ನಡತೆಯೇ ಮೂಲಕಾರಣ ವೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಅವೈದಿಕವಾದ ಬಸವ ಪಂಥಕ್ಕೂ ವೈದಿಕವಾದ ವೀರಶೈವಮತಕ್ಕೂ ಯಾವ ಸಂಬಂಧವೂ ಇಲ್ಲವೆಂಬ ವಿಷಯವನ್ನು ಇವರು ತಿಳಿಯದಿರುವುದರಿಂದಲೇ, ಲಿಂಗ ಧಾರಿಗಳೆಲ್ಲರೂ ಒಂದೇ ಎಂದೂ, ಇವರು ಇತ್ತೀಚಿನವರೆಂದೂ, ಈಮತವು ಪುರಾತನವಾದುದಲ್ಲವೆಂದೂ, ಲಿಂಗಧಾರಣವು ವೇದಾಗ ಮೋಪನಿಷತ್ಪುರಾಣಾದಿಗಳಲ್ಲುಕ್ತವಾಗಿಲ್ಲವೆಂದೂ, ಇವೇ ಮೊದಲಾದ ವಿಷಯಗಳನ್ನು ಹೇಳುತ್ತ ತಾವೂ ಭ್ರಾಂತರಾಗಿರುವರಲ್ಲದೆ, ಅನ್ಯರನ್ನೂ ಸಹ ಭ್ರಾಂತರನ್ನಾಗಿ ಮಾಡಿರುವರು. ಶಾಸ್ತ್ರವಿರುದ್ಧವಾದ ಈ ಮಿಥ್ಯಾಪ ವಾದವನ್ನು ಹೋಗಲಾಡಿಸಿ, ಯಥಾರ್ಥತತ್ತ್ವವನ್ನು ಸರ್ವರ ಹೃದಯ ದಲ್ಲಿಯೂ ನೆಲೆಗೊಳಿಸಬೇಕೆಂಬ ಸದುದ್ದೇಶದಿಂದ **ನಾಗನೂರು ಬೃಹನ್ಮಠಾಧ್ಯಕ್ಷರಾದ ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು** ಭರತಖಂಡದ ನಾನಾಭಾಗಗಳಲ್ಲಿ ಸಂಚರಿಸಿ ವೇದ, ಆಗಮ, ಪುರಾಣ, ಇತಿಹಾಸ, ಶಿಲಾಶಾಸನ, ತಾಮ್ರಶಾಸನ ಮೊದಲಾದ ಪ್ರಮಾಣಗಳಿಂದ ಸ್ವಮತಪರಮತತುಲನಾಪೂರ್ವಕವಾಗಿ, ಅಲ್ಲಲ್ಲಿ ಅನೇಕವ್ಯಾಖ್ಯಾನ ಗಳನ್ನು ಕೊಟ್ಟು ಜಗದ್ವಂದ್ಯರಾಗಿರುವ ವಿಷಯವು ಜಗತ್ಪ್ರಸಿದ್ಧವೇ ಅದೆ. ಈ ಮಹನೀಯರು ಮೈಸೂರುರಾಜಧಾನಿಗೆ ಆಗಮಿಸಿದ ಮೇಲೆ ಪ್ರತಿವರ್ಷ ವೈಶಾಖಶುದ್ಧ ಪಂಚಮೀದಿವಸ ನೆರವೇರುವ ವೀರಶೈವ ಮತಸ್ಥಾಪಕರಲ್ಲೊಬ್ಬರಾದ ಶ್ರೀಜಗದ್ಗುರುದಾರುಕಾಚಾರ್ಯರ ಜಯಂತೀಮಹೋತ್ಸವಸಮಯದಲ್ಲಿ ಅಪ್ಪಣೆಕೊಡಿಸಿದ ಕೆಲವು ಅಮೂಲ್ಯವ್ಯಾಖ್ಯಾನಗಳು ಈ ಪುಸ್ತಕದಲ್ಲಿ ಮುದ್ರಿಸಲ್ಪಟ್ಟಿವೆ. ಈ ಪುಸ್ತಕದಲ್ಲಿ ನಿರೂಪಿತಗಳಾಗಿರುವ ಭಾಷಣಗಳ ಮಹತ್ತ್ವವನ್ನು ಕೊಂಡಾಡಲು ಆದಿಶೇಷನೂ ಸಹ ಸಮರ್ಥನಾಗಲಾರನೆಂದು ಅತ್ಯಾ

ನಂದದಿಂದ ಉದ್ಘೋಷಿಸಬೇಕಾಗಿದೆ. ವೀರಶೈವಮತದ ಸರ್ವಸ್ವವೇ ಈ ಭಾಷಣಗಳಲ್ಲಿರುವುದು. ಪರಮತೀಯರಂತೂ ಈ ಭಾಷಣಗಳನ್ನು ಓದಿ ಪಂಡಿತರ ಘನತೆಯನ್ನು ಮುಕ್ತಕಂಠದಿಂದ ಸಾರುತ್ತಿರುವರು. ಈ ಭಾಷಣಗಳ ಮಹತ್ತ್ವವನ್ನು ಕಂಡು ಮತಾಭಿಮಾನಿಗಳು ಇವುಗಳನ್ನು ಇಂಗ್ಲೀಷ, ಮಹಾರಾಷ್ಟ್ರ, ತೆಲಗು, ತಮಿಳು ಮೊದಲಾದ ಭಾಷೆಗಳಲ್ಲಿ ಪರಿವರ್ತಿಸಿ, ವೀರಶೈವಮತದ ವೈಭವವನ್ನು ಲೋಕಕ್ಕೆಲ್ಲಾ ತೋರ್ಪಡಿಸಿ ಮಹೋಪಕಾರವನ್ನು ಮಾಡಹತ್ತಿರುವರು. ಪ್ರತಿಯೊಬ್ಬ ವೀರಶೈವರು ಇಷ್ಟಲಿಂಗದ ವಿಷಯದಲ್ಲಿ ಯಾವ ವಿಧವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿರುವರೋ, ಅದರಂತೆಯೇ ಅಮೂಲ್ಯಭಾಷಣಗಳಿಂದ ಯುಕ್ತವಾದ ಈ ಗ್ರಂಥರತ್ನದ ವಿಷಯದಲ್ಲಿಯೂ ಅನಿತರಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸಬೇಕೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ವೀರಶೈವರಿಗೆ ರತ್ನಸ್ವರೂಪವಾಗಿರುವ ಈ ಗ್ರಂಥವು ಹತ್ತರಿದ್ದರೆ, ಪರಮತೀಯರಾರೂ ಈ ಮತದ ವಿಷಯದಲ್ಲಿ ಹೆಚ್ಚು ಮಾತನಾಡಲು ಸಮರ್ಥರಾಗಲಾರರು. ಈ ಪವಿತ್ರಗ್ರಂಥವು ವೀರಶೈವರಿಗೆ ರತ್ನಸ್ವರೂಪವಾಗಿರುವುದರಿಂದ, ಇದಕ್ಕೆ "**ವೀರಶೈವರತ್ನ**" ಎಂಬ ದಿವ್ಯನಾಮವು ಕೊಡಲ್ಪಟ್ಟಿದೆ. ಈ ಗ್ರಂಥವು ಸ್ವಲ್ಪದಿವಸಗಳಲ್ಲಿಯೇ ನಾಲ್ಕುಸಾರೆ ಮುದ್ರಿಸಲ್ಪಟ್ಟಿದ್ದು, ಇದು ಐದನೆಯ ಮುದ್ರಣವಾಗಿದೆ. ಈರೀತಿ ಈ ಗ್ರಂಥವು ಮೇಲಿಂದ ಮೇಲೆ ಮುದ್ರಣವಾಗುತ್ತಿರುವುದನ್ನು ನೋಡಿದರೆ, ಈ ಗ್ರಂಥದ ಯೋಗ್ಯತೆಯು ಎಷ್ಟು ಘನತರವಾಗಿರಬಹುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. "**Speeches by Pandit Shri Kashinatha Shastri**" ಎಂಬ ಹೆಸರಿನಿಂದ ಇಂಗ್ಲೀಷ್ ಭಾಷೆಯಲ್ಲಿ ಮುದ್ರಿತವಾಗಿರುವ ಪಂಡಿತರ ಭಾಷಣಪುಸ್ತಕವನ್ನು ಬನಾರಸ್ - ಗುತ್ತಿ ಮೊದಲಾದ

ಬ್ರಿಟಿಷ್ ಕೋರ್ಟುಗಳ ನ್ಯಾಯಾಧೀಶರು ಕೆಲವು ಮತಸಂಬಂಧವಾದ ವ್ಯಾಜ್ಯಗಳಲ್ಲಿ ಪ್ರಮಾಣವನ್ನಾಗಿ ಅಂಗೀಕರಿಸಿದ್ದಾರೆ. ಇದರಿಂದ ಇದರ ಯೋಗ್ಯತೆಯು ಎಷ್ಟರನುಟ್ಟಿಗಿರಬಹುದೆನ್ನುವುದನ್ನು ವಾಚಕರೇ ಊಹಿಸಬಹುದಾಗಿದೆ. ಅಸ್ತು !

ಈ ಭಾಷಣಗಳಲ್ಲಿ ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಉತ್ಪತ್ತಿವಿಷಯವೂ, ಈ ಮಹಾಚಾರ್ಯರ ಧರ್ಮ ಪೀಠಗಳಿಗೆ ಸಾವಿರಾರುವರ್ಷಗಳ ಪೂರ್ವದಲ್ಲಿದ್ದ ರಾಜಾಧಿರಾಜರು ಅತ್ಯಂತಭಕ್ತಿಯಿಂದ ಶಾಸನಗಳನ್ನು ಬರೆದುಕೊಟ್ಟಿರುವ ವಿಷಯವೂ, **ಯುರೋಪ, ಆಫ್ರಿಕಾ, ಅಮೇರಿಕಾ** ಮೊದಲಾದ ಪಾಶ್ಚಾತ್ಯದೇಶ ಗಳಲ್ಲಿಯೂ ಸಹ ಇಂದಿನವರೆಗೆ ಅಚ್ಚಳಿಯದೆ ಪರಿಶೋಭಿಸುತ್ತಿರುವ **ಪ್ರಾಚೀನಶಿವಾಲಯಗಳ** ವಿಷಯವೂ, ಪೂರ್ವಕಾಲದಲ್ಲಿ **ಅನ್ನಾಂ, ಕಾಂಬೋಡಿಯಾ, ಜಾವಾ, ಸುಮಾತ್ರಾ** ಮೊದಲಾದ ದೇಶಗಳ ನ್ನಾಳುತ್ತಿದ್ದ ಶಿವಭಕ್ತಿಸಂಪನ್ನರಾದ ಮಹಾರಾಜರು ಅಸಾಧಾರಣ ಭಕ್ತಿವಿಶೇಷದಿಂದ ತಮ್ಮತಮ್ಮ ರಾಜ್ಯಗಳಲ್ಲಿ ಮಹಾಮಹಾಶಿವದೇವಾ ಲಯಗಳನ್ನು ನಿರ್ಮಿಸಿ ಶಿವಭಕ್ತಿಯನ್ನು ಹೆಚ್ಚಿಸಿರುವ ವಿಷಯವೂ, ಈ ವಿಷಯವನ್ನು ಪ್ರತಿಪಾದಿಸತಕ್ಕ ಅಸಂಖ್ಯಸಂಸ್ಕೃತಶಿಲಾಶಾಸನ ಗಳು ಇಂದಿಗೂ ಆಯಾ ದೇಶಗಳಲ್ಲಿ ವಿರಾಜಿಸುತ್ತಿರುವ ವಿಷಯವೂ, ವೀರಶೈವಮತದ ಪ್ರಾಚೀನಪಂಡಿತರ ವಿಷಯವೂ ಹಾಗೂ ಅವರಿಂದ ರಚಿಸಲ್ಪಟ್ಟ ಮಹಾಮಹಾಗ್ರಂಥಗಳ ವಿಷಯವೂ, ಈ ಮತಸ್ಥಾಪನಾ ಚಾರ್ಯರ ಲೀಲಾವಿಷಯವೂ, ವರ್ಣಾಶ್ರಮಧರ್ಮವಿಷಯವೂ, ಶಿವಸರ್ವೋತ್ತಮತ್ವವಿಷಯವೂ, ಶ್ರೀವೈಷ್ಣವಮತಕ್ಕೂ ವೀರಶೈವ ಮತಕ್ಕೂ ಇರತಕ್ಕ ತಾರತಮ್ಯವಿಷಯವೂ, ತಿರುಪತಿವೆಂಕಟರಮಣ

ಮೂರ್ತಿಯು ಆದಿಯಲ್ಲಿ ವಿಷ್ಣುಮೂರ್ತಿಯಾಗಿರದೆ ವೀರಭದ್ರ ಮೂರ್ತಿಯಾಗಿದ್ದಿತೆಂಬ ವಿಷಯವೂ, ಶ್ರೀರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಲೀಶ್ವರಲಿಂಗವನ್ನನುಗ್ರಹಿಸಿರುವ ವಿಷಯವೂ, ಲಿಂಗಧಾರಣವು ವೇದ-ಆಗಮ-ಉಪನಿಷತ್ತು-ಪುರಾಣಾ ದಿಗಳಲ್ಲಿ ಘಂಟಾಘೋಷವಾಗಿ ಪ್ರತಿಪಾದಿಸಲ್ಪಟ್ಟಿರುವುದೆಂಬ ವಿಷ ಯವೂ, ಶಕ್ತಿವಿಶಿಷ್ಟಾದ್ವೈತಸಿದ್ಧಾಂತವಿಷಯವೂ, ಶ್ರೀ ಜಗದ್ಗುರು ಪಂಚಾಚಾರ್ಯರ ವಿಷಯವನ್ನು ಪ್ರಾಚೀನಗ್ರಂಥಕಾರರು ತಮ್ಮ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವ ವಿಷಯವೂ, ಬನಾರಸ್ ಸಬ್‌ಜಡ್ಜ ಕೋರ್ಟಿನ ನ್ಯಾಯಾಧೀಶರು ಕಾಶೀಪೀಠದ ಒಂದಾನೊಂದು ವ್ಯಾಜ್ಯ ದಲ್ಲಿ, ಆ ಧರ್ಮಪೀಠಕ್ಕೆ ಪೂರ್ವದಲ್ಲಿ ಅನೇಕಜನ ಚಕ್ರವರ್ತಿಗಳು ಭೂದಾನವನ್ನು ಮಾಡಿರುವ ವಿಷಯವನ್ನು ಪ್ರತಿಪಾದಿಸತಕ್ಕ ಅತ್ಯಂತ ಪ್ರಾಚೀನದಾನಶಾಸನಗಳನ್ನು ಕೂಲಂಕಷವಾಗಿ ವಿಮರ್ಶಿಸಿ, ತಮ್ಮ ಜಡ್ಜಮೆಂಟಿನಲ್ಲಿ ಕಾಶೀಪೀಠವ ಪ್ರಾಚೀನತ್ವವನ್ನು ಸ್ಥಿರಗೊಳಿಸಿರುವ ವಿಷಯವೂ ಇವೇ ಮೊದಲಾದ ಅಮೂಲ್ಯವಿಷಯಗಳು ಪ್ರಮಾಣ ಪುರಸ್ಸರವಾಗಿ ಯಾವ ಶಂಕೆಗೂ ಅವಕಾಶವಿಲ್ಲದಂತೆ ಪ್ರತಿಪಾದಿಸಲ್ಪ ಟ್ಟಿರುವುವು. ಇಂತಹ ಅತ್ಯದ್ಭುತವಿಷಯಗಳನ್ನು ಆಮೂಲಾಗ್ರವಾಗಿ ಪರಿಶೋಧಿಸಿ, ವೀರಶೈವಜಗತ್ತಿಗೆ ಮಹೋಪಕಾರವನ್ನುಮಾಡಿ, ಜಗದಾಚಾರ್ಯರ ಅಪರಾವತಾರಿಗಳೆಂಬ ಜಗದ್ವಿಖ್ಯಾತರಾಗಿರುವ **ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರ ಪವಿತ್ರಜೀವನಚರಿತ್ರವನ್ನು** ತಿಳಿದು ಸಂತುಷ್ಟರಾಗಬೇಕೆಂದು ಅನೇಕಜನರು ವಿಶೇಷಾಭಿಲಾಷವನ್ನು ತೋರಿಸಿದಕಾರಣ, ಅವರ ಮನೋಭಿಲಾಷವನ್ನು ಪೂರ್ತಿಗೊಳಿ ಸುವುದಕ್ಕಾಗಿ ಪಂಡಿತರ ಪವಿತ್ರಜೀವನಚರಿತ್ರವು ಇಲ್ಲಿ ಸಂಕ್ಷೇಪವಾಗಿ ವಿವರಿಸಲ್ಪಡುವುದು.



ನಾಗನೂರು ಬೃಹನ್ಮಠಾಧ್ಯಕ್ಷರಾದ
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು.

ಪಂಡಿತರ ಸಂಕ್ಷಿಪ್ತ ಜೀವನಚರಿತ್ರ.

ಜನನ ಮತ್ತು ವಿದ್ಯಾಭ್ಯಾಸ.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಧಾರವಾಡ ಡಿಸ್ಟ್ರಿಕ್ಟ್ ಗದಗ ತಾಲೂಕು ನಾರಾಯಣಪುರ ಎಂಬ ಗ್ರಾಮದಲ್ಲಿ ಸ್ವಸ್ತಿಶ್ರೀ ವಿಜಯಾಭ್ಯುದಯ ಶ್ರೀಮನ್ನೃಪಶಾಲೀವಾಹನಶಕ ೧೮೧೭ ನೆಯ ಶ್ರೀಮನ್ಮಥನಾಮಸಂವತ್ಸರದ ಜ್ಯೇಷ್ಠ ಶುದ್ಧ ೪ ಮಂಗಳವಾರ (ತಾ॥ ೨೮-೫-೧೮೯೫ ನೆಯ ಇಸ್ವಿ) ದಿವಸ ಜನ್ಮವೆತ್ತಿದರು. ನಾರಾಯಣಪುರವೆಂಬುದು ಪಂಡಿತರ ತಾಯಿಯವರ ತವರೂರು. ಈ ಮಹನೀಯರು ಧಾರವಾಡ ಡಿಸ್ಟ್ರಿಕ್ಟ್ ನವಲಗುಂದ ತಾಲೂಕು ನಾಗನೂರು ಗ್ರಾಮದ ಧರ್ಮಾಧಿಕಾರಿಗಳು. (ಬೃಹನ್ಮಠಾಧಿಕಾರಿಗಳು.) ಇವರ ತಂದೆಯವರ ಹೆಸರು ವೇ॥ ಸಿದ್ಧೇಶ್ವರಯ್ಯನವರು. ತಾಯಿಯವರ ಹೆಸರು ನಾಗಮ್ಮನವರು. ಈ ಮಹಾತಾಯಿಯವರು ತಮ್ಮ ಮಠದ (ನಾಗನೂರು ಹಿರಿಯಮಠದ) ಪ್ರಥಮಾಚಾರ್ಯರಾದ ಶ್ರೀಸಿದ್ಧೇಶ್ವರ ಶಿವಾಚಾರ್ಯರ ಪೀಠದಲ್ಲಿ ಅನಿತರಸಾಧಾರಣಭಕ್ತಿಯನ್ನು ವಹಿಸಿ, ಆ ಮಹಾಮಹಿಮಾಶಾಲಿಗಳ ಮಹಿಮಾಪ್ರಭಾವದಿಂದ ಈ ಪುತ್ರ ರತ್ನವನ್ನು ಪಡೆದರು. ಪಂಡಿತರು ತಮ್ಮ ತಾಯಿಯವರ ಜನ್ಮಭೂಮಿಯಾದ ನಾರಾಯಣಪುರದ ಹಿರಿಯಮಠದಲ್ಲಿಯೇ ತಮ್ಮ ಸೋದರ ಮಾವಂದಿರ ಪೋಷಣೆಯಲ್ಲಿ ಬೆಳೆಯುತ್ತ, ಅಲ್ಲಿ ಹನ್ನೆರಡನೆಯ ವಯಸ್ಸಿನವರೆಗಿದ್ದು ಕನ್ನಡಭಾಷೆಯ ಶಿಕ್ಷಣವನ್ನು ಹೊಂದಿ, ಅಲ್ಲಿಂದ ತಮ್ಮ ಗ್ರಾಮವಾದ ನಾಗನೂರಿಗೆ ಹೋಗಿ, ಅಲ್ಲಿ ಕೆಲವು ದಿವಸಗಳ

ವರೆಗೆ ಉತ್ತಮಶಿಕ್ಷಕರಿಂದ ಕನ್ನಡಭಾಷೆಯನ್ನೇ ಚನ್ನಾಗಿ ಅಭ್ಯಾಸ ಮಾಡಿದರು. ಇಷ್ಟಕ್ಕೆ ಈ ಮಹನೀಯರಿಗೆ ೧೫ ವರ್ಷಗಳು ಪೂರ್ತಿ ಯಾದುವು. ಅಷ್ಟರಲ್ಲಿ ಇವರಿಗೆ ಜ್ಞಾನೋದಯವಾಗಿ, ಕೇವಲ ಕನ್ನಡ ಭಾಷೆಯನ್ನೇ ಕಲಿಯುವುದರಿಂದ ಯಾವ ಪ್ರಯೋಜನವೂ ಇಲ್ಲ ವೆಂದೂ, ತಾವು ಅನೇಕಜನಶಿಷ್ಯರುಳ್ಳ ಗುರುವರ್ಗಮಠಾಧಿಕಾರಿಗಳಾಗಿ ರುವುದರಿಂದ ಗುರುತ್ವಕ್ಕೆ ಅತ್ಯಂತಭೂಷಣವಾಗಿರುವ ಸಂಸ್ಕೃತಭಾಷೆ (ದೇವಭಾಷೆ) ಯನ್ನು ಅಭ್ಯಾಸಮಾಡಬೇಕೆಂದೂ ನಿಶ್ಚಯಿಸಿದರು.

ಸಂಸ್ಕೃತಶಿಕ್ಷಣಪ್ರಾರಂಭ.

೧೯೧೧ ನೆಯ ಇಸ್ವಿಯಲ್ಲಿ ತಮ್ಮ ಸೋದರಮಾವಂದಿರ ಸಹಾಯವಿಶೇಷದಿಂದ ಧಾರವಾಡ ಡಿಸ್ಟ್ರಿಕ್ಟ ರೋಣ ತಾಲೂಕು ಅಬ್ಬಿಗೇರಿ ಗ್ರಾಮದಲ್ಲಿ ವಿರಾಜಿಸುತ್ತಿದ್ದ ವೀರಶೈವಸಂಸ್ಕೃತಪಾಠ ಶಾಲೆಗೆ ಹೋಗಿ ಸಂಸ್ಕೃತಶಿಕ್ಷಣವನ್ನಾರಂಭಿಸಿದರು. ಈ ಸಂಸ್ಕೃತ ಪಾಠಶಾಲೆಯಲ್ಲಿ ನಮ್ಮ ಚರಿತ್ರಪುರುಷರು ಪೂರ್ವಜನ್ಮಪುಣ್ಯಸಂಸ್ಕಾರ ವಿಶೇಷದಿಂದ ೨ ವರ್ಷಗಳಲ್ಲಿಯೇ ಪಂಚಕಾವ್ಯಗಳನ್ನೂ, ರಾಮಾ ಯಣಾದಿಚಂಪೂಗ್ರಂಥಗಳನ್ನೂ, ಶಾಕುಂತಲಾದಿನಾಟಕಗಳನ್ನೂ ಪೂರ್ತಿಗೊಳಿಸಿದರು. ವಿದ್ಯಾಭ್ಯಾಸದ ವಿಷಯದಲ್ಲಿ ಇವರಿಗಿರತಕ್ಕ ಉತ್ಕಟಾಭಿಲಾಷವನ್ನೂ, ಇವರ ಬುದ್ಧಿಯ ಪ್ರಭಾವವನ್ನೂ ನೋಡಿ ಪ್ರತಿಯೊಬ್ಬರೂ ಇವರನ್ನು ಅತ್ಯಂತವಾಗಿ ಪ್ರೀತಿಸುತ್ತಿದ್ದರು. ಅನಂತರ ಈ ಮಹನೀಯರು ಈ ಪಾಠಶಾಲೆಯನ್ನು ಬಿಟ್ಟು, ಸೊಲ್ಲಾ ಪುರದಲ್ಲಿ ಕೈ|| ರಾವಬಹದ್ದೂರ್ ಶ್ರೀಮಂತ ವಾರದ ಮಲ್ಲಪ್ಪನವ ರಿಂದ ಸ್ಥಾಪಿಸಲ್ಪಟ್ಟಿದ್ದ ಸಂಸ್ಕೃತಪಾಠಶಾಲೆಗೆ ೧೯೧೩ ನೆಯ ಇಸ್ವಿಯಲ್ಲಿ ಹೋದರು. ಅಲ್ಲಿ ಒಂದು ವರ್ಷದವರೆಗಿದ್ದು ಆ ಪಾಠ

ಶಾಲೆಯ ಪ್ರಧಾನಾಧ್ಯಾಪಕರಾದ ವೇ|| ಪಂ|| ಶ್ರೀಜಗದೀಶಶಾಸ್ತ್ರಿಗಳು ನಾಲ್ವಾರ ಈ ವಿಪ್ರನ್ಮಣಿಗಳಲ್ಲಿ ಅಲಂಕಾರಗ್ರಂಥಗಳನ್ನೂ, ನ್ಯಾಯ ಶಾಸ್ತ್ರದ ಕೆಲವು ಗ್ರಂಥಗಳನ್ನೂ ಅಭ್ಯಾಸಮಾಡಿ, ೧೯೧೪ ನೆಯ ಇಸ್ವಿಯ ಅಂತ್ಯದಲ್ಲಿ ಉನ್ನತಶಿಕ್ಷಣವನ್ನು ಪಡೆಯುವುದಕ್ಕೋಸ್ಕರ ಸಂಸ್ಕೃತಭಾಷೆಗೆ ಮಾತೃಸ್ಥಾನವಾಗಿ ಮೆರೆಯುತ್ತಿರುವ ಶ್ರೀಕಾಶೀ ಕ್ಷೇತ್ರಕ್ಕೆ ಪ್ರಯಾಣಮಾಡಿದರು.

ಶ್ರೀಕಾಶೀಕ್ಷೇತ್ರದಲ್ಲಿ ವಿದ್ಯಾಭ್ಯಾಸ.

ಪಂಡಿತರು ಕಾಶೀಕ್ಷೇತ್ರಕ್ಕೆ ಹೋದ ಮೇಲೆ ತಮ್ಮ ಮಠದ ಮೂಲಾಚಾರ್ಯರಾದ ಶ್ರೀಜಗದ್ಗುರುವಿಶ್ವಾರಾಧ್ಯಪೂಜ್ಯಪಾದರ ಧರ್ಮಪೀಠ (ಜಂಗಮವಾಡೀಮಠ) ದಲ್ಲಿ ವಾಸಿಸಿದರು. ತಮ್ಮ ಮೂಲಗುರುವಾದ ಶ್ರೀವಿಶ್ವಾರಾಧ್ಯನಲ್ಲಿ ಅನಿತರಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿದ್ದ ನಮ್ಮ ಚರಿತ್ರನಾಯಕರು, ವಿಶ್ವ ರಕ್ಷಕನಾದ ವಿಶ್ವಾರಾಧ್ಯನ ಆಶೀರ್ವಾದಪ್ರಭಾವದಿಂದಲೂ, ವಿಶ್ವ ನಾಯಕನಾದ ವಿಶ್ವನಾಥನ ಅನುಗ್ರಹದಿಂದಲೂ, ಜಗತ್ಪಾವನೆಯಾದ ಗಂಗಾದೇವಿಯ ಸ್ನಾನಪ್ರಭಾವದಿಂದಲೂ ಮಹಾಮಹೋಪಾಧ್ಯಾಯ ಶ್ರೀದೇವೀಪ್ರಸಾದಶುಕ್ಲರೆಂಬ ಮಹಾಪಂಡಿತರಲ್ಲಿ ಉನ್ನತಶಿಕ್ಷಣವನ್ನು ಹೊಂದಿ, ತಾವು ಕಾಶಿಗೆ ಹೋದ ೨ ತಿಂಗಳುಗಳಲ್ಲಿಯೇ ಕಲಕತ್ತಾ ಗವರ್ನಮೆಂಟಿನ ಸಂಸ್ಕೃತಪರೀಕ್ಷೆಗೆ ಕುಳಿತು, ಅಷ್ಟರಲ್ಲಿಯೇ ಪರ ಭಾಷೆಯಾದ ಹಿಂದೀಭಾಷೆಯನ್ನೂ ಸಹ ಅಭ್ಯಾಸಮಾಡಿ, "ಸಾಹಿತ್ಯ ಮಧ್ಯಮ" ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮರುವರುಷ ಅಂದರೆ ೧೯೧೬ ನೆಯ ಇಸ್ವಿಯಲ್ಲಿ ಮೇಲ್ಕಂಡ ಗವರ್ನಮೆಂಟಿನ ಪರೀಕ್ಷೆಗೆ ಕುಳಿತು, "**ಸಾಹಿತ್ಯತೀರ್ಥ**" ಎಂಬ ಪದವಿಯನ್ನು ಪಡೆದರು.

ಇಷ್ಟು ಶೀಘ್ರವಾಗಿ ಸಂಸ್ಕೃತಾಭ್ಯಾಸವನ್ನು ಮಾಡಿ ಲೋಕೋತ್ತರ ವಾದ ಕೀರ್ತಿಯನ್ನು ಗಳಿಸಿಕೊಂಡವರೆಂದರೆ, ಈ ಮಹನೀಯರೊಬ್ಬ ರೆಂದೇ ಅತ್ಯಾನಂದದಿಂದ ಹೇಳಬಹುದಾಗಿದೆ. ಅನಂತರ ನವಿಶ್ವಾ ಪಂಡಿತರು ಮೇಲ್ಕಂಡ ಮಹಾಮಹೋಪಾಧ್ಯಾಯರಲ್ಲಿ ಸಾಂಖ್ಯ ಮತ್ತು ಯೋಗಶಾಸ್ತ್ರದ ಗ್ರಂಥಗಳನ್ನೂ ಪೂರ್ವಮೀಮಾಂಸಾ ಶಾಸ್ತ್ರದ ಗ್ರಂಥಗಳನ್ನೂ ಅಭ್ಯಾಸಮಾಡಿದರು. ತಮಗೆ ವಿದ್ಯಾಗುರು ಗಳಾಗಿದ್ದ ಈ ಮಹಾಮಹೋಪಾಧ್ಯಾಯ ಶ್ರೀದೇವೀಪ್ರಸಾದಶುಕ್ಲ ಮಹೋದಯರಂತೂ ಇವರ ಬುದ್ಧಿಕೌಶಲವನ್ನು ಕಂಡು ಬಹು ಸಂತೋಷದಿಂದ ಇವರಿಗೆ ಪಾಠವನ್ನು ಹೇಳುತ್ತಿದ್ದರು. ಈ ಮಹೋ ದಯರ ಪ್ರೇಮಪ್ರಭಾವದಿಂದಲೇ ಪಂಡಿತರಿಗೆ ಸಂಸ್ಕೃತದಲ್ಲಿ ಗದ್ಯ ಪದ್ಯಗಳನ್ನು ಬಹುಮನೋಹರವಾಗಿ ರಚಿಸುವ ಸಾಮರ್ಥ್ಯವುಂಟಾ ಯಿತು. ಆಗ್ಗೆ ಪ್ರಯಾಗಕ್ಷೇತ್ರದಲ್ಲಿ (ಅಲಹಾಬಾದಿನಲ್ಲಿ) ಪ್ರಕಟ ವಾಗುತ್ತಿದ್ದ "ಶಾರದಾ" ಎಂಬ ಶ್ರೇಷ್ಠತರಗತಿಯ ಸಂಸ್ಕೃತಮಾಸ ಪತ್ರಿಕೆಯಲ್ಲಿ ಈ ಮಹನೀಯರು ಅನೇಕಗದ್ಯಪದ್ಯಾತ್ಮಕಲೇಖನ ಗಳನ್ನು ಬಹುಮನೋಹರವಾದ ಶೈಲಿಯಿಂದ ಬರೆದು ಪ್ರಕಟಿಸು ತ್ತಿದ್ದರು. ಪಂಡಿತರ ಲೇಖನಗಳಲ್ಲಿರತಕ್ಕ ಶಬ್ದಸೌಷ್ಠವವನ್ನೂ, ಪ್ರೌಢಿಮೆಯನ್ನೂ, ಅರ್ಥಗಾಂಭೀರ್ಯವನ್ನೂ, ಪ್ರಾಸನ್ನೂ ನೋಡಿ ಆ ದೇಶದ ಪಂಡಿತರು ಸಂತೋಷಪಟ್ಟು ಇವರಿಗೆ '**ಕವಿರತ್ನ**' ಎಂಬ ಪದವಿಯನ್ನು ಪ್ರಯೋಗಿಸಿ ಪತ್ರವ್ಯವಹಾರಮಾಡುತ್ತಿದ್ದರು. ಈ ರೀತಿಯಾಗಿ ಪಂಡಿತರು ತಮ್ಮ ಕಾಲವನ್ನೆಲ್ಲಾ ಸದಾ ವಿದ್ಯಾವಿನೋದ ದಲ್ಲಿಯೇ ಕಳೆಯುತ್ತಿದ್ದರು. ಈ ಸಂದರ್ಭದಲ್ಲಿ ಆ ದೇಶದಲ್ಲಿ ಸುಪ್ರಸಿದ್ಧ ವಾಗಿರುವ 'ಡುಮರಾಂವ' ರಾಜಧಾನೀನಿವಾಸಿಗಳೂ, ಮಹಾ ಪಂಡಿತರೂ ಆದ ಕಾಲಿಕೇಶ್ವರದತ್ತರೆಂಬ ಪಂಡಿತರು 'ಶೈವಬ್ರಾಹ್ಮ

ಜೋತ್ಪತ್ತಿ ' ಎಂಬ ಗ್ರಂಥವನ್ನು ರಚಿಸಿ, ಆ ಗ್ರಂಥದ ಪ್ರಸ್ತಾವನೆಯಲ್ಲಿ, ಶೈವರು ವೈದಿಕ-ಅವೈದಿಕರೆಂದು ಎರಡು ಭಾಗವಾಗಿರುವರೆಂದೂ, ವೇದಮಾರ್ಗದಂತೆ ವರ್ತಿಸುವವರು ವೈದಿಕಶೈವರೆಂದೂ, ವೇದಮಾರ್ಗಕ್ಕೆ ವಿರೋಧವಾಗಿ ಲಿಂಗಧಾರಣಮಾಡಿಕೊಳ್ಳುವವರು ಅವೈದಿಕಶೈವರೆಂದೂ, ಈ ಜನರು ಕರ್ಣಾಟಕ-ಮಹಾರಾಷ್ಟ್ರ-ತೆಲಗು ಮೊದಲಾದ ದೇಶಗಳಲ್ಲಿರುವರೆಂದೂ ಬರೆದು ಮುದ್ರಿಸಿ ಪ್ರಸಿದ್ಧಮಾಡಿದರು. ಈ ಗ್ರಂಥಕಾರರು ಪರಮಪವಿತ್ರವಾದ ವೀರಶೈವಮತದ ಬಗ್ಗೆ ಬರೆದ ಅಮಂಗಲವಾಕ್ಯಗಳನ್ನು ನೋಡಿ, ನಮ್ಮ ಪಂಡಿತರು ಸಂತಾಪಗೊಂಡು, ಕಾಲಿಕೇಶ್ವರದತ್ತಪಂಡಿತರ ದುರಭಿಪ್ರಾಯವನ್ನು ವಾದಮೂಲಕವಾಗಿ ಸಂಪೂರ್ಣಖಂಡಿಸಬೇಕೆಂದು ನಿಶ್ಚಯಿಸಿ, ಜಂಗಮವಾಡೀಮಠದಲ್ಲಿ ಅಭ್ಯಾಸಮಾಡುತ್ತಿದ್ದ ಸಕಲಶಾಸ್ತ್ರಿಜನಗಳನ್ನೂ ಕೂಡಿಸಿ, ಅವರೊಡನೆ ಈ ವಿಷಯವನ್ನು ಪ್ರಸ್ತಾಪಿಸಿದರು. ಆದರೆ ಆ ಶಾಸ್ತ್ರಿಜನಗಳೆಲ್ಲರೂ, ಅಸಾಧಾರಣಪಾಂಡಿತ್ಯದಿಂದೊಡಗೂಡಿರುವ ಈ ದೇಶದ ಪಂಡಿತರೊಡನೆ ವಾದಮಾಡಿ ನಮ್ಮ ಸಿದ್ಧಾಂತವನ್ನು ನೆಲೆಗೊಳಿಸುವುದು ಯಾರಿಗೂ ಸಾಧ್ಯವಿಲ್ಲವೆಂದೂ, ಈ ಕಾರ್ಯದಲ್ಲಿ ನಾವು ಕೈಹಾಕಲು ನಮಗೆ ಶಕ್ತಿಯು ಸಾಲದೆಂದೂ, ಆದುದರಿಂದ ಈ ಗೊಂದಲದಲ್ಲಿ ಬೀಳದೆ ಮೌನವಾಗಿರುವುದೇ ಮೇಲೆಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇವರಾಡುವ ಈ ವಿಧವಾದ ಮಾತುಗಳನ್ನು ಕೇಳಿ ಪಂಡಿತರಿಗೆ ಬಹುವ್ಯಸನವುಂಟಾಯಿತು. ಆದರೂ ಪಂಡಿತರು ಉತ್ಸಾಹಹೀನರಾಗದೆ, ಆ ಕಾಲದಲ್ಲಿ ಕಾಶೀಜಗದ್ಗುರುಪೀಠಾಧಿಪತಿಗಳಾಗಿದ್ದ ಶ್ರೀಜಗದ್ಗುರುಶಿವಲಿಂಗಶಿವಾಚಾರ್ಯ ಮಹಾಸ್ವಾಮಿಗಳವರಲ್ಲಿ, ಮತಕ್ಕೆ ಅಪಮಾನಕಾರಕವಾಗಿರುವ ಈ ವಿಷಯವನ್ನು ಅರಿಕೆಮಾಡಿಕೊಂಡರು. ಅದಕ್ಕೆ ಶ್ರೀಜಗದ್ಗುರುಗಳವರು

ಪಂಡಿತರಿಗೆ ನೀವು ಆ ಗ್ರಂಥಕರ್ತರ ದುರಭಿಪ್ರಾಯವನ್ನು ಖಂಡಿಸಲು ಸಿದ್ಧರಾಗಬೇಕೆಂದೂ, ಈ ಕಾರ್ಯದಲ್ಲಿ ನಿಮಗೆ ಸಂಪೂರ್ಣವಾಗಿ ಯಶಸ್ಸು ದೊರೆಯುವುದೆಂದೂ ಆಶೀರ್ವದಿಸಿದರು. ಪಂಡಿತಸಿಂಹರು ಶ್ರೀಜಗದ್ಗುರುಗಳವರ ಮುಖದಿಂದ ಹೊರಹೊರಟ ಈ ಪವಿತ್ರವಚನಗಳನ್ನು ಕೇಳಿ ಸಂತುಷ್ಟಚಿತ್ತರಾಗಿ, ಡುಮರಾಂವ ರಾಜಧಾನಿಯಲ್ಲಿದ್ದ ಮೇಲ್ಕಂಡ ಗ್ರಂಥಕರ್ತರೊಡನೆ ಲೇಖನವ್ಯವಹಾರವನ್ನು ನಡೆಯಿಸಿದರು. ಆರುತಿಂಗಳುಗಳವರೆಗೆ ಉಭಯರಿಗೂ ಖಂಡನಮಂಡನಗಳು ನಡೆದವು. ಅಂತ್ಯದಲ್ಲಿ ಕಾಲಿಕೇಶ್ವರದತ್ತಪಂಡಿತರು ಖಂಡನವನ್ನು ಮಾಡಲು ಶಕ್ತಿಸಾಲದೆ ಅಪಜಯವನ್ನು ಹೊಂದಿದರು. ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಗುರುಕೃಪೆಯಿಂದ ಜಯವನ್ನುಹೊಂದಿ ತಮಗೂ, ಆ ಪರಮತಪಂಡಿತರಿಗೂ ನಡೆದ ಖಂಡನಮಂಡನಾತ್ಮಕ ಲೇಖನಗಳನ್ನೆಲ್ಲಾ ಒಟ್ಟುಗೂಡಿಸಿ, "**ದುರ್ವಾದದೂರೀಕರಣ**" ಎಂಬ ಹೆಸರಿನಿಂದ ಒಂದು ಗ್ರಂಥವನ್ನಾಗಿ ಮುದ್ರಿಸಿ ಪ್ರಸಿದ್ಧಪಡಿಸಿ, ಶ್ರೀಕಾಶೀಕ್ಷೇತ್ರದಲ್ಲಿರುವ ಪರಮತೀಯಪಂಡಿತರಿಗೆಲ್ಲಾ ಕೊಟ್ಟು ವೀರಶೈವಮತದ ಗೌರವವನ್ನು ಕಾಪಾಡಿದರು.

ಶ್ರೀಜಗದ್ಗುರು ಪಂಚಾಚಾರ್ಯಸಮ್ಮೇಲನ.

ಈ ವಾದಸಮಯದಲ್ಲಿ ಪಂಡಿತರಿಗೆ ವೀರಶೈವಮತಗ್ರಂಥಗಳನ್ನು ವಿಶೇಷವಾಗಿ ನೋಡುವ ಭಾಗಬಿತ್ತು. ಮತಗ್ರಂಥಗಳಲ್ಲಿ ಮತಸ್ಥಾಪನಾಚಾರ್ಯರ ವೈಭವವು ವಿಶೇಷವಾಗಿ ಪ್ರತಿಪಾದಿಸಲ್ಪಟ್ಟಿದ್ದರೂ, ಕಾಲಮಹಿಮೆಯಿಂದ ಮತಸ್ಥಾಪಕರ ಧರ್ಮಪೀಠಗಳು ಬಹುಹೀನಾವಸ್ಥೆಯಲ್ಲಿರುವುದನ್ನೂ, ಈ ಪೀಠಾಧಿಪತಿಗಳು ಒಬ್ಬರಿಗೊಬ್ಬರು ಸಂಬಂಧವಿಲ್ಲದೆ ವರ್ತಿಸುತ್ತಿರುವುದನ್ನೂ ಕಂಡು ಪಂಡಿತರು ವ್ಯಾಕುಲಿತಮನಸ್ಕ

ರಾಗಿ, ಈ ವಿಷಯವನ್ನು ಗತಿಸಿದ ಶ್ರೀಕಾಶೀಪೀಠದ ಜಗದ್ಗುರುಗಳವರಲ್ಲಿ ಯೋಚಿಸಿ, ಪಂಚಪೀಠಾಧಿಪತಿಗಳೆಲ್ಲರೂ ಏಕಾಭಿಪ್ರಾಯವುಳ್ಳವರಾಗುವುದಕ್ಕಾಗಿ ಯಾವುದಾದರೊಂದು ಸ್ಥಳದಲ್ಲಿ ಪಂಚಾಚಾರ್ಯರ ಸಮ್ಮೇಲನವಾಗಬೇಕೆಂದು ಅರಿಕೆಮಾಡಿಕೊಂಡರು. ಪಂಡಿತರ ಈ ಸದಭಿಪ್ರಾಯಕ್ಕೆ ಜಗದ್ಗುರುಗಳವರು ಅತ್ಯಂತಸಂತೋಷಪಟ್ಟು, ಈ ಮಹಾಕಾರ್ಯವು ಈ ಪವಿತ್ರಕ್ಷೇತ್ರದಲ್ಲಿಯೇ ನೆರವೇರಿದರೆ ಉತ್ತಮವಾಗುವುದೆಂದೂ, ಈ ಕಾರ್ಯವನ್ನು ನೀವು ಮನಮುಟ್ಟಿ ಮಾಡಬೇಕೆಂದೂ ಅಪ್ಪಣೆಕೊಡಿಸಿದರು. ಆಗ್ಗೆ ಪಂಡಿತರು ಅತ್ಯಂತೋತ್ಸಾಹದಿಂದೊಡಗೂಡಿ, ಅನೇಕಸದುಪಾಯಗಳಿಂದ ಎಲ್ಲಾ ಆಚಾರ್ಯರೂ ಏಕತ್ರ ಸಂಮಿಲಿತರಾಗುವಂತೆ ಮಾಡಿ, ಭೂಕೈಲಾಸ ಶ್ರೀಕಾಶೀಕ್ಷೇತ್ರದಲ್ಲಿಯೇ ೧೯೧೮ನೆಯ ಇಸ್ವಿ ಮಾರ್ಚ ತಿಂಗಳಲ್ಲಿ "**ಶ್ರೀಜಗದ್ಗುರು ಪಂಚಾಚಾರ್ಯಸಮ್ಮೇಲನ**" ವನ್ನು ನೆರವೇರಿಸಿ, ಆ ಮಹಾಸಮ್ಮೇಲನಕ್ಕೆ ತಾವೇ ಸೆಕ್ರೆಟರಿಗಳಾಗಿ, ಬಹುದಕ್ಷತೆಯಿಂದ ಆ ಕಾರ್ಯವನ್ನು ಕೊನೆಗಾಣಿಸಿದರು. ಅಂದಿನಿಂದಲೂ ಶ್ರೀಜಗದ್ಗುರುಪಂಚಾಚಾರ್ಯಪೀಠಗಳಲ್ಲಿ ಐಕ್ಯವು ನೆಲೆಗೊಂಡು ಗುರುವರ್ಗದವರಲ್ಲಿ ನವಚೈತನ್ಯವು ಉದ್ಭವಿಸಲಾರಂಭಿಸಿತು. ಆಚಾರ್ಯಮಹಾಸಮ್ಮೇಲನವು ಮುಗಿದ ಕೂಡಲೆ ಪಂಡಿತರು ಕಾಶೀಕ್ಷೇತ್ರದಲ್ಲಿರದೆ, ಗುರುವರ್ಗದವರನ್ನು ಸುಧಾರಿಸುವುದಕ್ಕಾಗಿ ತಮ್ಮ ಜನ್ಮಭೂಮಿಯಾದ ಕರ್ಣಾಟಕದೇಶಕ್ಕೆ ಆಗಮಿಸಿದರು.

ಗುರುವರ್ಗದ ಜಾಗೃತಿ

ಕರ್ಣಾಟಕದೇಶದಲ್ಲಿ ವೀರಶೈವರ ಜನಸಂಖ್ಯೆಯು ವಿಶೇಷವಾಗಿದ್ದು, ಇವರ ಮೇಲೆ ಗುರುತ್ವವನ್ನು ವಹಿಸಿರುವ ಗುರುವರ್ಗಮಠಾಧಿಕಾರಿಗಳಾದರೂ ಪ್ರತಿಯೊಂದುಗ್ರಾಮಕ್ಕೆ ಇದ್ದೇ ಇರುವರೆಂಬ

ವಿಷಯವು ಪ್ರತಿಯೊಬ್ಬರಿಗೂ ವೇದ್ಯವಾದುದಾಗಿದೆ. ಗುರುತ್ವವನ್ನು ವಹಿಸಿದ ಈ ಗುರುವರ್ಗದವರು ತಮ್ಮ ಕರ್ತವ್ಯಕರ್ಮವನ್ನೂ, ತಮ್ಮ ಸ್ಥಾನದ ಮಹತ್ತ್ವವನ್ನೂ ಮರೆತು ಅತ್ಯಂತಹೀನಸ್ಥಿತಿಯೊಳಗಿದ್ದರು. ಇವರೀವಿಧವಾದ ಹೀನಸ್ಥಿತಿಗೆ ವಿರಕ್ತಮತದವರ ಉಪದ್ರವವೇ ಮೂಲಕಾರಣವಾಗಿತ್ತು. ತಮ್ಮ ಆಶ್ರಮಧರ್ಮಕ್ಕೆ ವಿರೋಧವಾಗಿ ವರ್ತಿಸುತ್ತ ಅಸಾಧಾರಣಸಂಪತ್ತಿನಿಂದೊಡಗೂಡಿ ಮೆರೆಯುತ್ತಿದ್ದ ವಿರಕ್ತರ ಆರ್ಭಟಕ್ಕೆ ಹೆದರಿ, ಪವಿತ್ರಗುರುವರ್ಗದವರು ಮೂಲೆಯಲ್ಲಿ ಅವಿತುಕೊಂಡಿದ್ದರು. ಎಲ್ಲಿ ನೋಡಿದರೂ ಕಲಿಪುರುಷರಾದ ಈ ವಿರಕ್ತರ ಚಲ್ಲಾಟವೇ ಚಲ್ಲಾಟವಾಗಿತ್ತು. ಇವರಿಂದ ಲೋಕೋದ್ಧಾರಕವಾದ ಗುರುವರ್ಗಕ್ಕುಂಟಾಗಿದ್ದ ಈ ವಿಧವಾದ ವಿಪನ್ನಾವಸ್ಥೆಯನ್ನು ಗುರುಕುಲತಿಲಕಾಯಮಾನರಾದ ಪಂಡಿತರು ಕಣ್ಣಾರೆ ಕಂಡು, ಕನಿಕರಪಟ್ಟು, ಈಗಿನ ನಾಮಧಾರಿವಿರಕ್ತರ ಉಪಟಳವು ನಾಶವಾಗದೆ ಗುರುವರ್ಗದವರು ಎಂದೂ ಮುಂದೆ ಬರಲಾರರೆಂದು ಯೋಚಿಸಿ, ಪ್ರಪಂಚದಲ್ಲಿ ಶಾಸ್ತ್ರವಿಹಿತವಾದ ಅದ್ಭುತಚಳವಳಿಯನ್ನೆಬ್ಬಿಸಿದರು. ಪಂಡಿತರ ಈ ಚಳವಳಿಗೆ ಮೊದಲು ಒಬ್ಬರೂ ಸಹಾಯಕರಿರಲಿಲ್ಲ. ಎಲ್ಲಿ ನೋಡಿದರೂ ನಾಮಧಾರಿವಿರಕ್ತರ ಕೋಲಾಹಲವೇ ಕೋಲಾಹಲವಾಗಿತ್ತು. ಧನಮದದಿಂದ ಉನ್ಮತ್ತರಾಗಿದ್ದ ನಾಮಧಾರಿವಿರಕ್ತರು ಆ ಸಮಯದಲ್ಲಿ ಪಂಡಿತರಿಗೆ ಅನೇಕವಿಧವಾದ ಕಷ್ಟಗಳನ್ನು ಕೊಟ್ಟರು. ಈ ಮಧ್ಯದಲ್ಲಿ ಕೆಲಜನ ಸನಾತನವರ್ಣಾಶ್ರಮಧರ್ಮವಿರೋಧಿಗಳಾದ ಬಸವಪಂಥಿಗಳು ಪಂಡಿತರ ವೈದಿಕತತ್ತ್ವಕ್ಕೆ ಪ್ರಬಲವಿರೋಧಿಗಳಾಗಿ ನಿಂತರು. ಈ ಉಭಯಶತ್ರುಮಂಡಲದಲ್ಲಿ ಮೊದಲು ಪಂಡಿತರು ಒಬ್ಬರೇ ಒಬ್ಬರು ಹೋರಾಡಬೇಕಾದರೆ ಅವರಿಗೆ ಎಷ್ಟು ಕಷ್ಟವಾಗಿರಬೇಕೆಂಬ ವಿಷಯವನ್ನು ಬೇರೆ ಬರೆಯಬೇಕಾಗಿಲ್ಲ. ಅವರೂ

ಜಗದಾಚಾರ್ಯರ ಅನುಗ್ರಹವೇ ಮೂರ್ತಿಮತ್ತಾಗಿ ವಜ್ರಕಾಯರೆನಿಸಿ ಕೊಂಡಿರುವ ಪಂಡಿತರು ಈ ಉಭಯಶತ್ರುಮಂಡಲಕ್ಕೆ ಎದೆಗೊಟ್ಟು, ಅವರು ಕೊಡುವ ತೊಂದರೆಗಳನ್ನೆಲ್ಲಾ ತೃಣೀಕರಿಸಿ, ಸರ್ವತ್ರ ಪೂರ್ವಾಚಾರ್ಯರ ವೈದಿಕಸಿದ್ಧಾಂತವನ್ನೇ ಸಾರುತ್ತಬಂದರು. ಪಂಡಿತರು ಉದ್ಘೋಷಿಸುತ್ತಿದ್ದ ಪೂರ್ವಾಚಾರ್ಯಸಿದ್ಧಾಂತರೂಪಸಿಂಹನಾದವು ಸರ್ವರನ್ನೂ ಎಚ್ಚರಗೊಳಿಸಿತು. ಆಗ್ಗೆ ಗುರುವರ್ಗದವರೂ ಶುದ್ಧ ಸಂಪ್ರದಾಯದ ಭಕ್ತವರ್ಗದವರೂ ಮುಂದೆ ಬಂದು, ಪಂಡಿತರ ವೈದಿಕ ಸಿದ್ಧಾಂತಧ್ವಜವನ್ನು ಎತ್ತಿಹಿಡಿದರು. ಆಗ ಈ ಚಳವಳಿಗೆ ಅತ್ಯಂತ ಮಹತ್ತ್ವವು ಪ್ರಾಪ್ತವಾಯಿತು. ಪಂಡಿತರು ಪ್ರಾರಂಭಿಸಿದ ಈ ಶಾಸ್ತ್ರೀಯಚಳವಳಿಯು ಸ್ವಲ್ಪದಿವಸಗಳಲ್ಲಿಯೇ ಭರತಖಂಡದ ಮೂಲೆ ಮೂಲೆಗಳನ್ನೂ ವ್ಯಾಪಿಸಿತು. ಪಂಡಿತರು ಈ ಚಳವಳಿಗೆ ಸಂಬಂಧ ಪಟ್ಟ ಸಮಸ್ತಸೂತ್ರಗಳನ್ನೂ ತಮ್ಮ ಕೈಯಲ್ಲಿಟ್ಟುಕೊಂಡು, ಬಹು ಯುಕ್ತಿಯಿಂದ ಈ ಕಾರ್ಯವನ್ನು ಅಭಿವೃದ್ಧಿಗೊಳಿಸಿದರು. ಪಂಡಿತರು ತಾವು ಕೈಕೊಂಡಿರುವ ಗುರುವರ್ಗಸುಧಾರಣರೂಪವಾದೀ ಅದ್ಭುತ ಚಳವಳಿಯನ್ನು ಅವಿಚ್ಛಿನ್ನವಾಗಿ ನಡೆಯಿಸಬೇಕಾದರೆ ಇದಕ್ಕೆ ಬ್ರಹ್ಮಚರ್ಯಾಶ್ರಮವೇ ಅತ್ಯುತ್ತಮವಾದುದೆಂದು ಭಾವಿಸಿ, ತಮ್ಮ ಆಯುಸ್ಸನ್ನು ಇದೇ ಆಶ್ರಮದಲ್ಲಿಯೇ ಕಳೆಯಬೇಕೆಂದು ನಿಶ್ಚಯಿಸಿ, ಅತ್ಯುತ್ಸಾಹದಿಂದಲೂ ಅಸಾಧಾರಣವಾದ ಧೈರ್ಯದಿಂದಲೂ ಲೋಕ ಕಲ್ಯಾಣಕಾರಕವಾದೀ ಕಾರ್ಯವನ್ನು ಮುಂದುವರಿಸಿದರು.

ಗುರುವರ್ಗದ ಪಟ್ಟಚರಾಧಿಕಾರಿಗಳು ಸುಧಾರಿಸಿದರೆ ವೀರಶೈವ ಜಗತ್ತೆಲ್ಲಾ ಸುಧಾರಿಸುವುದೆಂದು ಯೋಚಿಸಿ, ಪಂಡಿತರು ಇವರ ಸುಧಾರಣೆಗೋಸುಗ ೧೯೧೯ ನೆಯ ಇಸ್ವಿಯಲ್ಲಿ “**ಪಟ್ಟಚರಾಧಿ ಕಾರಿಗಳ ಸಮ್ಮೇಲನ**” ಎಂಬ ಹೆಸರಿನಿಂದ ಒಂದು ಸಭೆಯನ್ನು

ಸ್ಥಾಪಿಸಿದರು. ಈ ಸಭೆಗಳು ಈಮಹನೀಯರ ಪ್ರಯತ್ನವಿಶೇಷದಿಂದ ಅನುಕ್ರಮವಾಗಿ ಜಮಖಂಡಿ ಸಂಸ್ಥಾನಕ್ಕೆ ಸೇರಿದ ಕುಂದಗೋಳ, ಧಾರವಾಡ ಡಿಸ್ಟ್ರಿಕ್ಟ್ ನವಲಗುಂದ, ವಿಜಾಪುರ ಡಿಸ್ಟ್ರಿಕ್ಟ್ ಮನಗೋಳಿ, ಬೆಳಗಾಂವ ಡಿಸ್ಟ್ರಿಕ್ಟ್ ಸತ್ತಿಗೇರಿ, ಬಳ್ಳಾರಿಡಿಸ್ಟ್ರಿಕ್ಟ್ ಉಜ್ಜಯಿನಿ ಗ್ರಾಮಗಳಲ್ಲಿ ಅತಿವೈಭವದಿಂದ ನೆರವೇರಿದವು. ಅಲ್ಲದೆ ವಿಜಾಪುರ ಡಿಸ್ಟ್ರಿಕ್ಟ್ ಕಲಾದಿಗಿಯಲ್ಲಿ **"ಗುರುವರ್ಗದವರ ಪ್ರಾಂತಿಕಪರಿಷತ್ತು"** ಎಂಬ ಹೆಸರಿನಿಂದ ಒಂದು ದೊಡ್ಡ ಸಭೆಯನ್ನು ನೆರವೇರಿಸಿದರು. ಭರತಖಂಡದಲ್ಲಿರುವ ಸಮಸ್ತವೀರಶೈವಗುರುವರ್ಗದವರಿಗೆ ನಾನಾ ವಿಧವಾಗಿ ಉತ್ತೇಜನವನ್ನು ಕೊಡುವುದಕ್ಕಾಗಿ, ಜಮಖಂಡಿ ಸಂಸ್ಥಾನಕ್ಕೆ ಶೇರಿದ ಕುಂದಗೋಳಪಟ್ಟಣದಲ್ಲಿ **"ಅಖಿಲಭಾರತೀಯ ಗುರುವರ್ಗೋತ್ತೇಜಕಸಂಘ"** ಎಂಬ ಹೆಸರಿನಿಂದ ಒಂದು ಸಂಸ್ಥೆಯನ್ನು ಸ್ಥಾಪಿಸಿ, ಆ ಸಂಸ್ಥೆಯ ದ್ವಾರಾ ಸರ್ವತೋಮುಖವಾಗಿ ಗುರುವರ್ಗದವರ ಸುಧಾರಣೆಯನ್ನು ಮಾಡತೊಡಗಿದರು.

ಶ್ರೀಜಗದ್ಗುರು ಕೇದಾರಪೀಠದ ಸೇವೆ.

ಅನಾದಿಕಾಲದಿಂದ ಹಿಮವತ್ಪರ್ವತದ ಮಧ್ಯದಲ್ಲಿ ಪರಿಶೋಭಿಸುತ್ತಿರುವ ಶ್ರೀಜಗದ್ಗುರು ಏಕೋರಾಮಾರಾಧ್ಯರ ಧರ್ಮಪೀಠವು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಧರ್ಮಪೀಠಗಳಲ್ಲಿ ಒಂದಾಗಿರುವುದೆಂಬ ವಿಷಯವು ಸರ್ವರಿಗೂ ವೇದ್ಯವಿರುವುದಷ್ಟೆ! ಈ ಪೀಠವು ರಾಜಾಧಿರಾಜಮಾನ್ಯವಾಗಿರುವುದಲ್ಲದೆ, ಭರತಖಂಡದಲ್ಲಿ ಸುಪ್ರಸಿದ್ಧಗಳಾಗಿರುವ ದ್ವಾದಶಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಶ್ರೀಕೇದಾರೇಶ್ವರನ ದೇವಸ್ಥಾನದ ಆಧಿಪತ್ಯದಿಂದಲೂ ಕೂಡಿರುವುದು. ಇದಲ್ಲದೆ ಪ್ರಾಚೀನಮಹಾರಾಜರಿಂದ ಈ ಪೀಠಕ್ಕೆ ೧೪೭ ಗ್ರಾಮಗಳೂ

ಸಹ ಉಂಬಳಿಯಾಗಿ ಕೊಡಲ್ಪಟ್ಟಿರುತ್ತವೆ. ಈ ಪೀಠವು ಇಂತಹ ಅಸಾಧಾರಣಗೌರವದಿಂದ ಕೂಡಿದ್ದರೂ ಕಾಲಮಹಿಮೆಯಿಂದ ಅತ್ಯಂತ ಶೈಥಿಲ್ಯಾವಸ್ಥೆಗೀಡಾಗಿತ್ತು. ಪೀಠಕ್ಕೆ ಋಣಬಾಧೆಯು ವಿಶೇಷವಾಗಿತ್ತು. ಇದರಿಂದ ಈ ಪೀಠಾಧಿಪತಿಗಳು ಯಾವಾಗಲೂ ವ್ಯಸನದಲ್ಲಿಯೇ ತಮ್ಮ ಶರೀರವನ್ನು ಸವಿಸುತ್ತಿದ್ದರು. ರಾಜವೈಭವದಿಂದ ವಿರಾಜಿಸುತ್ತಿದ್ದ ಗುರುಪೀಠಕ್ಕೆ ಪ್ರಾಪ್ತವಾಗಿದ್ದ ಈ ವಿಧವಾದ ತೊಂದರೆಯನ್ನು ದೂರ ಮಾಡಬೇಕೆಂಬ ಉದ್ದೇಶದಿಂದ ಪಂಡಿತರು, ೧೯೧೯ನೆಯ ಇಸ್ವಿಯಲ್ಲಿ ಆ ಪೀಠಾಧಿಪತಿಗಳನ್ನು, ತಾವು ಧಾರವಾಡ ಡಿ|| ಕುಂದಗೋಳದಲ್ಲಿ ನೆರವೇರಿಸಿದ ಪಟ್ಟಚರಾಧಿಕಾರಿಗಳ ಸಮ್ಮೇಲನಕ್ಕೆ ಹಿಮಾಲಯದಿಂದ ಬಿಜಮಾಡಿಸಿಕೊಂಡು, ಅವರಿಗೆ ಅದ್ಭುತವಾದ ಸ್ವಾಗತವನ್ನಿತ್ತು, ಕುಂದಗೋಳಪಟ್ಟಣದಲ್ಲಿ ಅವರ ಮಹೋತ್ಸವವನ್ನು ಸಮಸ್ತಬಿರುದಾವಳಿಗಳೊಡನೆ ಅಭೂತಪೂರ್ವವಾಗಿ ನೆರವೇರಿಸಿ, ಅವರ ನೇತೃತ್ವದಲ್ಲಿಯೇ ಸಮ್ಮೇಲನವನ್ನು ವಿಶೇಷವೈಭವದಿಂದ ನೆರವೇರಿಸಿದರು. ಸಮ್ಮೇಲನಕಾರ್ಯವು ಸಮಾಪ್ತಿಗೊಂಡಮೇಲೆ ಪಂಡಿತರು ಶ್ರೀಗಳವರಿಗೆ ನಾನಾರೀತಿಯಿಂದ ಧೈರ್ಯವನ್ನು ಹೇಳಿ, ಶ್ರೀಮದುಜ್ಜಯಿನೀಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರುಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಸಹಾಯವಿಶೇಷದಿಂದ, ಅವರಿಗೆ ಎಲ್ಲವಿಧವಾದ ಸೌಕರ್ಯಗಳನ್ನೊದಗಿಸಿಕೊಟ್ಟು, ಅವರ ಸಂಚಾರವು ಸುಲಲಿತವಾಗಿ ನಡೆಯುವಂತೆ ಏರ್ಪಡಿಸಿದರು. ಈ ಪೀಠಾಧಿಪತಿಗಳಾದ ಶ್ರೀಜಗದ್ಗುರು ವಿಶ್ವಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು, ಕೆಲವು ದಿವಸ ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಸಂಚಾರಮಾಡುತ್ತಿರಲು, ಅವರಿಗೆ ಆ ದೇಶದ ಹವೆಯು ತಡೆಯದೆ, ಶ್ರೀಮದುಜ್ಜಯಿನೀಸದ್ಧರ್ಮಪೀಠಕ್ಕಾಗಮಿಸಿ, ಶಿವಸಾಯುಜ್ಯವನ್ನು ಹೊಂದಿದರು.

ಶಿವಸಾಯುಜ್ಯವನ್ನು ಹೊಂದಿದ ಶ್ರೀಗಳವರು ಅವಸಾನಕಾಲದಲ್ಲಿ ತಮ್ಮ ಉತ್ತರಾಧಿಕಾರದ ಬಗ್ಗೆ, ಈಗ ಕೇದಾರಪೀಠವನ್ನಲಂಕರಿಸಿರುವ ಶ್ರೀಜಗದ್ಗುರುನೀಲಕಂಠಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಹೆಸರಿಗೆ ಮೃತ್ಯುಪತ್ರವನ್ನು ಬರೆದು ರಜಿಸ್ಟರ್ ಮಾಡಿಸಿದ್ದರು. ಆದರೂ ಕೆಲಜನ ಅಸೂಯಾಪರರು ಇದಕ್ಕೆ ವಿರುದ್ಧವಾಗಿ ಹಿಮಾಲಯದಲ್ಲಿ ವ್ಯಾಜ್ಯವನ್ನೆಬ್ಬಿಸಿದರು. ಆ ಬಗ್ಗೆ ಈ ದೇಶದಿಂದಾಗ ಬೇಕಾದ ಸಹಾಯಗಳಿಗಾಗಿ ಪಂಡಿತರು ಅಲ್ಲಲ್ಲಿ ಸಂಚರಿಸಿ ಸಭೆಗಳನ್ನು ಕೂಡಿಸಿ, ಶ್ರೀಸ್ವಾಮಿಗಳವರ ಮೃತ್ಯುಪತ್ರದ ಪ್ರಕಾರವಾಗಿಯೇ ಅಧಿಕಾರವಾಗಬೇಕೆಂದು ನಿರ್ಣಯಗಳನ್ನು ಮಾಡಿಸಿ, ಆ ನಿರ್ಣಯಗಳನ್ನು ಹಿಮಾಲಯಪ್ರಾಂತದಲ್ಲಿರುವ ಆ ಪೀಠದ ಶಿಷ್ಯರಾದ ಟಿಹರಿ ಮಹಾರಾಜರವರಿಗೂ, ಬ್ರಿಟಿಷ್‌ಗವರ್ನಮೆಂಟಿಗೂ ಕಳುಹಿಸಿ, ಈಗಿರುವ ಶ್ರೀಸ್ವಾಮಿಗಳವರನ್ನೇ ಅಧಿಕಾರಕ್ಕೆ ಬರುವಂತೆ ಮಾಡಿ, ಆ ಪೀಠದ ವೈಭವವು ಸರ್ವತ್ರ ಬೆಳಗುವಂತೆ ಮಾಡಿದರು. ಆ ಪೀಠಕ್ಕೆ ಅಧಿಕಾರಿಗಳಾಗಿರುವ ಈಗಿನ ಶ್ರೀಗಳವರು ವಿಶೇಷವೈಭವದೊಡನೆ ಸರ್ವತ್ರ ಸಂಚರಿಸಿ, ಪೂರ್ವದ ಋಣಬಾಧೆಯನ್ನೆಲ್ಲಾ ಪರಿಹರಿಸಿ, ತಮ್ಮ ಪೀಠದ ಪ್ರಭಾವವನ್ನು ಸರ್ವತ್ರ ಹರಡುವಂತೆ ಮಾಡಿದರಲ್ಲದೆ, ಹಿಮಾಲಯದಲ್ಲಿ ವಿಶೇಷದ್ರವ್ಯವನ್ನು ವ್ಯಯಮಾಡಿ ಸಂಸ್ಕೃತ, ವೈದಿಕ, ಜ್ಯೌತಿಷ, ಆಯುರ್ವೇದಪಾಠಶಾಲೆಗಳನ್ನೂ, ತಮ್ಮ ಹೆಸರಿನಿಂದ ಒಂದು ಇಂಗ್ಲೀಷ್ ಮಿಡಲ್‌ಸ್ಕೂಲನ್ನೂ ಸ್ಥಾಪಿಸಿ, ಆ ದೇಶನಿವಾಸಿಗಳನ್ನು ಲೌಕಿಕಪಾರಮಾರ್ಥಿಕವಿದ್ಯೆಗಳಲ್ಲಿ ಅತ್ಯಂತಾಭಿವೃದ್ಧಿಸ್ಥಿತಿಗೆ ತಂದು, ಮಹಾಕೀರ್ತಿಶಾಲಿಗಳಾದರು. ಪಂಡಿತರು ಆ ಪೀಠಕ್ಕೆ ಈ ವಿಧವಾದ ವೈಭವಪ್ರಾಪ್ತಿಯನ್ನುಂಟುಮಾಡಿ, ಜಗದ್ಗುರು ಏಕೋರಾಮಾರಾಧ್ಯನ ಪೂರ್ಣಾನುಗ್ರಹಕ್ಕೆ ಪಾತ್ರರಾದರು.



ಶ್ರೀಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ
ಶ್ರೀಜಗದ್ಗುರು ನೀಲಕಂಠಲಿಂಗಶಿವಾಚಾರ್ಯ
ಮಹಾಸ್ವಾಮಿಗಳವರು.

ಶ್ರೀಜಗದ್ಗುರು ರಂಭಾಪುರೀಪೀಠದ ಸೇವೆ.

ಇದಾದ ಸ್ವಲ್ಪ ದಿವಸಗಳಲ್ಲಿಯೇ ಮೈಸೂರು ರಾಜ್ಯದಲ್ಲಿ ಪರಿಶೋಭಿಸುತ್ತಿರುವ ಶ್ರೀಜಗದ್ಗುರು ರೇಣುಕಾಚಾರ್ಯರ ಧರ್ಮ ಪೀಠಾಧಿಪತಿಗಳಾದ ಶ್ರೀಜಗದ್ಗುರು ಪಂಚಾಕ್ಷರಶಿವಾಚಾರ್ಯಮಹಾ ಸ್ವಾಮಿಗಳವರು, ತಮ್ಮ ಉತ್ತರಾಧಿಕಾರವನ್ನು ಯಾರಿಗೂ ಕೊಡದೆ ಶಿವಸಾಯುಜ್ಯವನ್ನೈದಿದರು. ಧರ್ಮಪೀಠವು ಅನಾಯಕವಾಯಿತು. ಇದನ್ನೇ ನಿರೀಕ್ಷಿಸುತ್ತಿದ್ದ ಒಬ್ಬಿಬ್ಬ ವಿರಕ್ತರು, ಈ ಮಹಾಪೀಠವು ಯಾವಾಗಲೂ ಅನಾಯಕವಾಗಿರಲೆಂಬ ಉದ್ದೇಶದಿಂದಲೋ ಅಥವಾ ಜಗತ್ಪೂಜ್ಯವಾದ ಈ ಪೀಠಕ್ಕೆ ಯಾವನಾದರೊಬ್ಬ ಅನಾಮಧೇಯ ನನ್ನು ಅಧಿಕಾರಿಯನ್ನಾಗಿ ಮಾಡಬೇಕೆಂಬ ಉದ್ದೇಶದಿಂದಲೋ, ಕೆಲಜನಭಕ್ತರನ್ನು ಮುಂದೆಮಾಡಿ, ಸರಕಾರದಲ್ಲಿ ವ್ಯಾಜ್ಯವನ್ನು ಹೂಡಿಸಿದರು. ಈ ವ್ಯಾಜ್ಯವು ಮೈಸೂರು ಗವರ್ನಮೆಂಟಿನಲ್ಲಿ ಮೂರು ವರ್ಷಗಳವರೆಗೆ ಅವಿಚ್ಛಿನ್ನವಾಗಿ ನಡೆಯಿತು. ಇಂಥ ಪ್ರಚಂಡ ವ್ಯಾಜ್ಯವು ಈ ಪ್ರಪಂಚದಲ್ಲಿ ಹಿಂದೆ ಎಂದೂ ಆಗಿರಲಿಕ್ಕಿಲ್ಲ, ಮುಂದೆ ಎಂದೂ ಆಗಲಿಕ್ಕಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಇಂತಹ ಭಯಂಕರಕಠಿನಪರಿಸ್ಥಿತಿಯಲ್ಲಿ ಯೋಗ್ಯರನ್ನೇ ಅಧಿಕಾರಿ ಗಳನ್ನಾಗಿ ಮಾಡಬೇಕೆಂದು ಪಂಡಿತರು ಮತ್ತು ನರಸಿಂಹರಾಜಪುರದ ಯಜಮಾನ ಮ|| ರಾ|| ಯಿಂ. ನಿ. ಶಾಂತಪ್ಪಶೆಟ್ಟರವರು ವೀರ ಕಂಕಣವನ್ನು ಕಟ್ಟಿ ಕೆಲಸಮಾಡಲುದ್ಯುಕ್ತರಾದರು. ಈ ಸಮಯದಲ್ಲಿ ಪಂಡಿತರು ತಮ್ಮ ಅತ್ಯದ್ಭುತವಾದ ಆತ್ಮಶಕ್ತಿಯ ಪ್ರಭಾವದಿಂದ, ಭರತಖಂಡದಲ್ಲಿರುವ ಸಮಸ್ತಗುರುಭಕ್ತರ ಸೂತ್ರಗಳನ್ನೆಲ್ಲಾ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು, ಅಹೋರಾತ್ರಿಯೆನ್ನದೆ ಜಗನ್ನಾಯಕನಂತೆ

ಕೆಲಸಮಾಡುತ್ತಿದ್ದರು. ವಿರೋಧಿಗಳು ಪ್ರತಿಕ್ಷಣದಲ್ಲಿಯೂ ಎಬ್ಬಿಸುತ್ತಿದ್ದ ಕ್ರಿಯೆಗಳಿಗೆ, ಪಂಡಿತರು ತತ್‌ಕ್ಷಣವೇ ಪ್ರತಿಕ್ರಿಯೆಯನ್ನು ಮಾಡುತ್ತಿದ್ದರು. ಇವರೀವಿಧವಾದ ಅದ್ಭುತಕರ್ತೃತ್ವಶಕ್ತಿಯನ್ನು ಕಂಡು ಜಗತ್ತಿನ ಜನರೆಲ್ಲಾ ಚಕಿತರಾಗಿದ್ದರಲ್ಲದೆ, ವಿರೋಧಿಗಳೂ ಸಹ ಇವರ ಆತ್ಮಶಕ್ತಿಯ ಪ್ರಭಾವವನ್ನು ವರ್ಣಿಸುತ್ತಿದ್ದರು.

೧೯೨೪ ನೆಯ ಇಸ್ವಿಯಲ್ಲಿ ಮೈಸೂರು ಗವರ್ನಮೆಂಟಿನವರು ಪೀಠವಿರೋಧಿಗಳ ಅಭಿಪ್ರಾಯದಂತೆ ಶ್ರೀರಂಭಾಪುರೀಪೀಠಕ್ಕೆ ವಟುವನ್ನು ಓಟಿನ ಮೂಲಕ ಆರಿಸಬೇಕೆಂಬ ಒಂದು ಆರ್ಡರನ್ನು ಹೊರಡಿಸಿದರು. ಈ ಆರ್ಡರನ್ನು ನೋಡಿದ ಕೂಡಲೇ ಪಂಡಿತರು ವಿಶೇಷ ವ್ಯಸನಕ್ಕೀಡಾದರು. ಆದರೂ ಪಂಡಿತರು ಎದೆಗುಂದದೆ ಇದಕ್ಕೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂದು ಯೋಚಿಸಿದರು. ಮುನಿಸಿಪಾಲಟಿ, ಡಿಸ್ಟ್ರಿಕ್ಟ್‌ಬೋರ್ಡ್ ಮೊದಲಾದವುಗಳಂತೆ, ಶ್ರೀಜಗದ್ಗುರುಪೀಠಕ್ಕೆ ಓಟಿನಿಂದ ವಟುವನ್ನು ಆರಿಸುವುದು ಕೇವಲ ಅನ್ಯಾಯವೆಂದೂ, ಈ ವಿಧವಾದ ವ್ಯವಸ್ಥೆಯು ಈವರೆಗೆ ಯಾವ ಮತದ ಧರ್ಮಪೀಠಕ್ಕೂ ಆಗಿರುವುದಿಲ್ಲವೆಂದೂ, ಹೀಗೆ ಮಾಡುವುದು ಧರ್ಮಪೀಠಸಂಪ್ರದಾಯಕ್ಕೆ ಅತ್ಯಂತವಿರುದ್ಧವಾದುದೆಂದೂ ದೇಶದೇಶಾಂತರಮಹಾಜನಗಳ ಮೂಲಕ ಮೈಸೂರು ಗವರ್ನಮೆಂಟಿಗೆ ತಿಳುಹಿಸುವಂತೆ ಮಾಡಿದರು. ಈ ಆರ್ಡರು ಹೊರಟ ಸಮಯದಲ್ಲಿ ಶ್ರೀಮನ್ಮಹಾರಾಜರವರು ಹಿಮಾಲಯಪ್ರಾಂತದಲ್ಲಿರುವ ಡೆಹರಾಡೂನಿನಲ್ಲಿ ವಾಸವಾಗಿದ್ದರು. ಗವರ್ನಮೆಂಟಿನವರು ಮಾಡಿದ ಈ ಅನ್ಯಾಯವನ್ನು ಮಹಾಪ್ರಭುಗಳವರಲ್ಲಿ ಅರಿಕೆಮಾಡಿಕೊಳ್ಳಬೇಕೆಂಬ ಉದ್ದೇಶದಿಂದ, ಪಂಡಿತರು ಭರತಖಂಡದ ಸಮಸ್ತಭಾಗಗಳಿಂದ ಡೆಹರಾಡೂನಿನಲ್ಲಿದ್ದ ಮಹಾಪ್ರಭುಗಳವರಿಗೆ ಒಂದೇ ದಿವಸ ಸುಮಾರು ೧೦೦೦ ಟೇಲಿಗ್ರಾಮು

ಗಳು ಹೋಗುವಂತೆ ವ್ಯವಸ್ಥೆಮಾಡಿದರು. ಅಲ್ಲದೆ ಓಟಿನ ಮೂಲಕ ವಟುವಿನ ಆರಿಸುವಿಕೆಯು ಸರಿಯಾದುದಲ್ಲವೆಂದೂ, ಸನಾತನವಾದೀ ಪೀಠಕ್ಕೆ ಸಮಾನವಾದ ಕಾಶೀ-ಕೇದಾರ-ಉಜ್ಜಯಿನಿ-ಶ್ರೀಶೈಲಕ್ಷೇತ್ರ ಗಳಲ್ಲಿರುವ ನಾಲ್ಕು ಪೀಠಾಧಿಪತಿಗಳ ಅಭಿಪ್ರಾಯದಂತೆ ವಟುವನ್ನು ನಿಯಮಿಸುವುದು ಯೋಗ್ಯವಾದುದೆಂದೂ ಶ್ರೀ ಶೃಂಗೇರಿಮಠದಿಂದ ಮಹಾಪ್ರಭುಗಳವರ ಗಮನಕ್ಕೆ ಬರುವಂತೆ ವ್ಯವಸ್ಥೆಮಾಡಿದರು.

ಶ್ರೀಶೃಂಗೇರಿಪೀಠದ ಶ್ರೀಗಳವರು ಆಗ್ಗೆ ರಾಮೇಶ್ವರದ ಹತ್ತಿರ 'ಕೊಮಾರಲಿಂಗಂ' ಎಂಬ ಟವನ್ನಿನಲ್ಲಿ ಮೊಕ್ಕಾಂ ಮಾಡಿದ್ದರು. ಶ್ರೀಗಳವರ ಅಪ್ಪಣೆಯ ಮೇರೆಗೆ ಆ ಮಠದ ಏಜಂಟರವರು ಪ್ರಭುಪ್ರೀತಿ ಪಾತ್ರರಿಗೆ ಈ ಕೆಳಗೆ ಕಾಣಿಸಿರುವಂತೆ ಒಂದು ಪತ್ರವನ್ನು ಬರೆದು, ಈ ವಿಷಯವು ಮಹಾಪ್ರಭುಗಳವರ ಗಮನಕ್ಕೆ ಬರುವಂತೆ ವ್ಯವಸ್ಥೆ ಮಾಡಿದರು.

"The Mutt at Balehonnur is an ancient one and His Holiness deems it proper that His Highness the Maharaja directs the adoption of a successor to the seat now reported to be vacant from a few years past, on the recommendation of the heads of the four Veerasaiva Mutts of equal status and Importance at Benares, Ujjani, Srisailam and Himavatkedara, and that it would not be so conducive to the moral and spiritual advancement of the community to act in the matter on the Votes of the general public

secured by the several aspirants to the vacant seat.

I am directed by His Holiness to request you to represent this aspect of the question to His Highness the Maharaja and obtain His Highness's favourable orders in the matter in keeping with the dignity and sanctity of this Institution."

"ಬಾಳೇಹೊನ್ನೂರಿನಮಠವು ಬಹುಪುರಾತನವಾದುದು. ಈಗ ಕೆಲವು ವರ್ಷಗಳಿಂದ ಸ್ವಾಮಿಗಳಿಲ್ಲದಿರುವ ಆ ಪೀಠಕ್ಕೆ ಉತ್ತರಾಧಿಕಾರಿಯನ್ನಾರಿಸುವುದರಲ್ಲಿ ಸಮಾನವಾದ ಗೌರವವನ್ನು ಪಡೆದಿರುವ ಕಾಶಿ, ಉಜ್ಜಯಿನಿ, ಶ್ರೀಶೈಲ, ಹಿಮವತ್ಕೇದಾರಗಳಲ್ಲಿರುವ ವೀರಶೈವಮಠಾಧಿಕಾರಿಗಳು ಅನುಮೋದಿಸುವವರನ್ನೇ ಶ್ರೀಮನ್ಮಹಾರಾಜರವರು ನಿಯಮಿಸುವುದು ಸಾಧುವಾದುದೆಂದು ಜಗದ್ಗುರುಗಳವರು ಅಭಿಪ್ರಾಯಪಡುತ್ತಾರೆ. ಹಾಗಲ್ಲದೆ ಸಾಮಾನ್ಯಜನರಿಂದ ಹೆಚ್ಚು ಓಟುಗಳನ್ನು ಪಡೆದು ಪೀಠಾಧಿಕಾರವನ್ನು ಪಡೆಯಲು ಯತ್ನಿಸುವವರನ್ನು ನಿಯಮಿಸುವುದು ಸಮಾಜದ ನೈತಿಕಾಧ್ಯಾತ್ಮಿಕಾಭಿವೃದ್ಧಿಗೆ ಸಹಾಯಕಾರಿಯಾಗಲಾರದು. ಆದುದರಿಂದ ತಾವು ದಯವಿಟ್ಟು ಈ ಅಭಿಪ್ರಾಯವನ್ನು ಶ್ರೀಮನ್ಮಹಾರಾಜರವರಿಗೆ ವಿವರವಾಗಿ ತಿಳುಹಿಸಿ, ಪೀಠದ ಘನತೆ ಮತ್ತು ಪವಿತ್ರತೆಯನ್ನು ಕಾಪಾಡುವುದಕ್ಕಾಗಿ ತಕ್ಕ ಅಪ್ಪಣೆಯು ದೊರೆಯುವಂತೆ ಮಾಡಬೇಕೆಂಬ ಅಂಶವನ್ನು ತಮಗೆ ತಿಳುಹಿಸಲು ಜಗದ್ಗುರುಗಳವರು ಅಪ್ಪಣೆಕೊಡಿಸಿರುತ್ತಾರೆ."

ಈ ರೀತಿಯಾಗಿ ಶೃಂಗೇರಿಪೀಠದಿಂದ ಬಂದ ಸದಭಿಪ್ರಾಯವನ್ನು ಮಹಾಪ್ರಭುಗಳವರು ಪರಾಮರ್ಶಿಸಿ, ಶ್ರೀಮದ್ರಂಭಾಪುರೀಪೀಠದ ಘನವಾದ ಯೋಗ್ಯತೆಯನ್ನು ತಮ್ಮ ದಿವ್ಯಚಿತ್ತಕ್ಕೆ ತಂದುಕೊಂಡು, ಆ ಪೀಠದ ಜೀರ್ಣೋದ್ಧಾರದ ಕಡೆಗೆ ತಮ್ಮ ಅಮೃತಮಯಕೃಪಾ ಕಟಾಕ್ಷವನ್ನು ಚಲ್ಲಿದರು.

ನಮ್ಮ ಭರತಖಂಡದಲ್ಲಿ ಸನಾತನವೈದಿಕಧರ್ಮರಕ್ಷಣೆಗಾಗಿ **ದರಭಂಗಾಮಹಾರಾಜ**ರವರ ಮತ್ತು **ಕಾಶ್ಮೀರಮಹಾರಾಜ**ರವರ ಅಧ್ಯಕ್ಷತೆಯಲ್ಲಿ “**ಭಾರತಧರ್ಮಮಹಾಮಂಡಲ**” ಎಂಬ ಮಹಾಸಂಸ್ಥೆಯು ಸ್ಥಾಪಿಸಲ್ಪಟ್ಟಿರುವ ವಿಷಯವು ಜಗತ್ಪ್ರಸಿದ್ಧವಷ್ಟೆ! ಜಗದ್ವಿಖ್ಯಾತವಾದೀ ಮಹಾಸಂಸ್ಥೆಯಿಂದಲೂ ಕೂಡ (ತಾ॥ ೧೭-೯-೧೯೨೪) ರಲ್ಲಿ—ಕಾಶೀ-ಕೇದಾರ-ಉಜ್ಜಯಿನೀ-ಶ್ರೀಶೈಲ ಪೀಠಾಧಿಪತಿಗಳು ಅನುಮೋದಿಸುವ ವಟುವನ್ನೇ ಶ್ರೀರಂಭಾಪುರೀ ಪೀಠಕ್ಕೆ ಸ್ವಾಮಿಗಳನ್ನಾಗಿಮಾಡಬೇಕೆಂಬ ಅಭಿಪ್ರಾಯದಿಂದೊಡಗೂಡಿದ ಪತ್ರವು ಮಹಾಪ್ರಭುಗಳವರಿಗೆ ಬರುವಂತೆ ವ್ಯವಸ್ಥೆ ಮಾಡಿದರು. ಇದೇ ವಿಷಯವನ್ನು ಕುರಿತು **ಸೊಂಡೂರುಮಹಾರಾಜ**ರವರಿಂದಲೂ ಸಹ ಮಹಾಪ್ರಭುಗಳವರಿಗೆ ಪತ್ರವು ಬರುವಂತೆ ವ್ಯವಸ್ಥೆಯನ್ನು ಮಾಡಿದರು. ಇದೇ ರೀತಿಯಾಗಿ ಇನ್ನೂ ಅನೇಕ ವಿಧವಾದ ಅಸಾಧ್ಯಸಾಹಸಗಳನ್ನು ನಾನಾರೀತಿಯಿಂದ ಮಾಡಿ, ಶ್ರೀರಂಭಾಪುರೀಪೀಠದ ವಿಷಯವು ಮಹಾಪ್ರಭುಗಳವರ ಮನಸ್ಸನ್ನು ಶೀಘ್ರವಾಗಿ ಆಕರ್ಷಿಸುವಂತೆ ಮಾಡಿದರು.

ಪಂಡಿತರು ತಮ್ಮ ದೇಶವಲ್ಲದ ಮೈಸೂರು ದೇಶದಲ್ಲಿ ಬಂದು, ಹಸಿವು ತೃಷೆಗಳ ಬಾಧೆಯನ್ನು ಗಮನಿಸದೆ, ತಮ್ಮ ದೇಹವನ್ನೇ ಶ್ರೀಜಗದ್ಗುರುರೇಣುಕನಿಗೆ ಧಾರೆಯೆರೆದು ಕೆಲಸಮಾಡಿದ ವಿಷಯವು,

ಜಗನ್ನಿಯಾಮಕನಾದ ಆ ಶ್ರೀರೇಣುಕನಿಗೆ ಮಾತ್ರ ವೇದ್ಯವಲ್ಲದೆ ಇನ್ನಾರಿಗೂ ವೇದ್ಯವಾಗದು. ಈ ರೀತಿಯಾಗಿ ಮೂರುವರ್ಷಗಳ ವರೆಗೆ ಕಷ್ಟಪಟ್ಟು ಕೆಲಸಮಾಡಿ, ಅಂತ್ಯದಲ್ಲಿ ಸಾಕ್ಷಾದ್ಧರ್ಮಾವತಾರಿಗಳೆಂದು ಜಗದ್ವಿಖ್ಯಾತರಾಗಿ ಜನಕಮಹರ್ಷಿಯಂತೆ ರಾಜ್ಯವನ್ನು ಪರಿಪಾಲಿಸುತ್ತಿರುವ, **ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್** ಮಹಾಪ್ರಭುಗಳವರನ್ನು ಪೂರ್ವಾಶ್ರಮದಲ್ಲಿದ್ದ ಈಗಿರುವ ಪೀಠಾಧಿಪತಿಗಳೊಡನೆ ತಾ॥ ೧೮-೧-೧೯೨೫ ನೆಯ ಇಸ್ವಿ ದಿವಸ, ಬೆಂಗಳೂರು ಅರಮನೆಯಲ್ಲಿ ಅವರ ಪೂಜಾಗೃಹದಲ್ಲಿ ಸಂದರ್ಶಿಸಿ, ಶ್ರೀಪೀಠದ ವಿಷಯಗಳನ್ನೆಲ್ಲಾ ಆಮೂಲಾಗ್ರವಾಗಿ ಅರಿಕೆಮಾಡಿಕೊಳ್ಳಲು, ಮಹಾಪ್ರಭುಗಳು ಆ ಧರ್ಮಪೀಠದ ವೈಭವವನ್ನೂ, ಶ್ರೀಜಗದ್ಗುರು ರೇಣುಕನ ಲೀಲೆಗಳನ್ನೂ ಕೇಳಿ ಆನಂದತುಂದಿಲಹೃದಯರಾಗಿ, ತತ್‌ಕ್ಷಣವೇ ಪೂರ್ವದಲ್ಲಾದ ಎಲ್ಲಾ ಆರ್ಡರುಗಳನ್ನೂ ರದ್ದುಮಾಡಿ, ಸರ್ವಸಮ್ಮತವಾದ ಒಂದು ಯೋಜನೆಯನ್ನು ಗವರ್ನಮೆಂಟಿನ ದ್ವಾರಾ ನಿರ್ಣಯಿಸಿ, ಅಧಿಕಾರಕಾರ್ಯವನ್ನು ಸಾಂಗಗೊಳಿಸುವಂತೆ ಮಾಡಿದರು. ವಟುಪರೀಕ್ಷಾಸಮಯದಲ್ಲಿ ಈಗ ಶ್ರೀರಂಭಾಪುರೀಪೀಠವನ್ನಲಂಕರಿಸಿರುವ ಶ್ರೀಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯಮಹಾಸ್ವಾಮಿಗಳವರೇ ಒಂದನೆಯವರಾಗಿ ಆರಿಸಿಬಂದರು. ಆಗ್ಗೆ ಪಂಡಿತರು ಗುರುಕುಲಚಕ್ರವರ್ತಿಯಾದ ಶ್ರೀರೇಣುಕನ ದಯೆಯಿಂದ ತಮಗುಂಟಾದ ಮಹಾವಿಜಯವನ್ನು ಜಗತ್ತಿಗೆಲ್ಲಾ ತಿಳುಹಿಸಿ, ತಾ॥ ೨೨-೧೧-೧೯೨೫ ನೆಯ ಇಸ್ವಿ ದಿವಸ ಶ್ರೀಜಗದ್ಗುರು ರಂಭಾಪುರೀಧರ್ಮಪೀಠಾಧಿಕಾರವನ್ನು ಅಸಾಧಾರಣವಾದ ವೈಭವದೊಡನೆ "ನ ಭೂತೋ ನ ಭವಿಷ್ಯತಿ" ಎಂಬಂತೆ ನೆರವೇರಿಸಿ, ಲೋಕವಿಖ್ಯಾತಕೀರ್ತಿಶಾಲಿಗಳಾದರು



ಮೈಸೂರು ಶ್ರೀಮನ್ಮಹಾರಾಜಾಧಿರಾಜ
ಧರ್ಮಾವತಾರಿ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರು.



ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ
ಶ್ರೀಜಗದ್ಗುರುಶಿವಾನಂದರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರು.

ಅಧಿಕಾರಸಮಯದಲ್ಲಿ ಮೈಸೂರು ಗವರ್ನಮೆಂಟಿನ ಪರವಾಗಿ ಮುಜರಾಯಿಕಮಿಾಷನರ್ ಮೆ॥ ಸಿ. ಎಸ್. ಬಾಲಸುಂದರಂ ಅಯ್ಯರ್ ಇವರು ಆಗಮಿಸಿದ್ದರಲ್ಲದೆ, ಮೆ॥ ಕಡೂರು ಡಿ॥ ಡೈಪುಟಿಕಮಿಾಷನರ್ ಸಾಹೇಬರವರು, ಮೆ॥ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಸಾಹೇಬರವರು, ಮೆ॥ ಸಬ್‌ಡಿವಿಜನ್ ಆಫೀಸರವರು ಇವರೇ ಮೊದಲಾದ ಗವರ್ನಮೆಂಟ್ ಅಧಿಕಾರಿಗಳು ಆಗಮಿಸಿದ್ದರು. ಇದಲ್ಲದೆ ರಾಜಸಭಾಭೂಷಣ ದಿವಾನ್ ಬಹದ್ದೂರ್ ಸರ್. ಕೆ. ಪಿ. ಪುಟ್ಟಣ್ಣ ಶೆಟ್ಟರು, ಮೈಸೂರು ಹೈಕೋರ್ಟಿನ ರಿ॥ ಚೀಫ್‌ಜಸ್ಟಿಸ್ ರಾಜಧರ್ಮ ಪ್ರವೀಣ ದಿವಾನ್ ಬಹದ್ದೂರ್ ಪಿ. ಮಹಾದೇವಯ್ಯನವರು, ಮೆ॥ ದಿವಾನ್ ಬಹದ್ದೂರ್ ಶಾಂತವೀರಪ್ಪನವರು ಮೆಣಶಿನಕಾಯಿ ಧಾರವಾಡ, ಇವರೇ ಮೊದಲಾದ ಅನೇಕಜನ ಸುಪ್ರಸಿದ್ಧಪುರುಷರು ಆಗಮಿಸಿದ್ದರು. ಈ ಮಹೋತ್ಸವಕ್ಕೆ ಭರತಖಂಡದ ನಾನಾ ಭಾಗಗಳಿಂದ ಸುಮಾರು ಹತ್ತುಸಾವಿರದವರೆಗೆ ಕೇವಲ ಸುಶಿಕ್ಷಿತರಾದ ಜನರೇ ಆಗಮಿಸಿದ್ದರು. ಈ ಪಟ್ಟಾಧಿಕಾರಮಹೋತ್ಸವದ ವ್ಯವಸ್ಥೆಗಾಗಿ ದಯಾಳುಗಳಾದ ಮೈಸೂರು ಗವರ್ನಮೆಂಟಿನವರು ಸುಮಾರು ೧೦೦ ಜನ ಲೋಕಲ್ ಪೋಲೀಸರನ್ನೂ, ೨೫ ಜನ ರಿಝರ್ವ ಪೋಲೀಸರನ್ನೂ, ೩-೪ ಜನ ಸಬ್‌ಇನ್‌ಸ್ಪೆಕ್ಟರವರನ್ನೂ, ಕೆಲಜನ ಜಮಾದಾರರನ್ನೂ ಕಳುಹಿಸಿ, ಅಧಿಕಾರಕಾರ್ಯವನ್ನು ಬಹುಶಾಂತ ರೀತಿಯಿಂದ ನೆರವೇರಿಸಿದರು. ಈ ಪಟ್ಟಾಧಿಕಾರಸಮಯದಲ್ಲಿ ಶ್ರೀಶೃಂಗೇರಿಪೀಠದ ಶ್ರೀಗಳವರು ತಮ್ಮ ಪೀಠದಿಂದ ಈ ಮಹಾ ಸಮಾರಂಭಕ್ಕಾಗಿ ಬೇಕಾಗುವ ಮುಖ್ಯಮುಖ್ಯವಾದ ಸಕಲಸಾಮಗ್ರಿಗಳನ್ನು ೧೬ ಗಾಡಿಗಳಲ್ಲಿ ತುಂಬಿಸಿ ಕಳುಹಿಸಿಕೊಟ್ಟಿದ್ದರಲ್ಲದೆ, ಉಳಿದ ಎಲ್ಲವಿಷಯಗಳಲ್ಲಿಯೂ ನಾನಾವಿಧವಾಗಿ ಸಹಾಯ

ಮಾಡಿದರು. ಶ್ರೀರಂಭಾಪುರೀಪೀಠಕ್ಕೆ ಈ ಮಹನೀಯರು ಮಾಡಿದ ಮಹೋಪಕಾರವು ಚಿರಸ್ಮರಣೀಯವಾಗಿದೆ.

ಭಯಂಕರವಾದ ಕಾನನದ ಮಧ್ಯದಲ್ಲಿದ್ದು ಅತ್ಯಂತಶೈಥಿಲ್ಯಾವಸ್ಥೆಯಿಂದ ಕೂಡಿದ್ದ ಈ ಧರ್ಮಪೀಠವು ಪಟ್ಟಾಧಿಕಾರಸಮಯದಲ್ಲಿ ಪಂಡಿತರ ಕಾರ್ಯಕುಶಲತೆಯಿಂದ, ಇಂದ್ರನ ನಂದನವನದಲ್ಲಿ ವಿರಾಜಿಸುತ್ತಿರುವಂತೆ ವಿರಾಜಿಸುತ್ತಿತ್ತು. ಮಠವನ್ನು ಶೃಂಗರಿಸುವುದಕ್ಕಾಗಿಯೇ ಪಂಡಿತರು ಬಹುದೂರದೂರದೇಶಗಳಿಂದ ಅನೇಕಜನ ಪ್ರಸಿದ್ಧಚಿತ್ರಕಲಾಕುಶಲರನ್ನು ಬರಮಾಡಿಕೊಂಡು, ಮಠದ ಸೌಂದರ್ಯವನ್ನು ವರ್ಣನಾತೀತವಾದುದನ್ನಾಗಿಮಾಡಿದ್ದರು. ಅಧಿಕಾರಸಮಾರಂಭಕ್ಕಾಗಿ ಆಗಮಿಸಿದ ಜನಗಳ ವ್ಯವಸ್ಥೆಯಂತೂ ಅನ್ಯಾದೃಶವಾಗಿತ್ತು. ಒಟ್ಟಿಗೆ ಪಂಡಿತರು ಏರ್ಪಡಿಸಿದ ಪಟ್ಟಾಧಿಕಾರದ ವೈಭವವನ್ನು ವರ್ಣಿಸಲು ಈ ಲೇಖನಿಯು ಎಂದೂ ಸಮರ್ಥವಾಗಲಾರದು. ಈ ರೀತಿಯಾಗಿ ಪಂಡಿತರು ವಿಶೇಷಕಷ್ಟಪಟ್ಟು ಅನಾಯಕವಾಗಿದ್ದ ಧರ್ಮಪೀಠವನ್ನು ಸನಾಯಕವನ್ನಾಗಿಮಾಡಿ, ಈ ಪೀಠದ ಯಶೋಧ್ವಜವು ದಶದಿಕ್ಕುಗಳಲ್ಲಿ ಮೆರೆಯುವಂತೆ ಮಾಡಿದರು.

ಅಧಿಕಾರವಾದ ಒಂದು ತಿಂಗಳಮೇಲೆ (ತಾ|| ೨೧-೧೨-೧೯೨೫ನೆಯ ದಿವಸ) ಪಂಡಿತರು ಮಠದ ಪೂರ್ವಪದ್ಧತಿಗನುಸಾರವಾಗಿ, ಶ್ರೀಗಳವರಿಂದ ಲಿಖಿಸಲ್ಪಟ್ಟ ಆಶೀರ್ವಾದರೂಪಶ್ರೀಮುಖವನ್ನು ಶ್ರೀಮನ್ಮಹಾರಾಜರವರಿಗೆ ಮೈಸೂರುಅರಮನೆಯಲ್ಲಿ ಒಪ್ಪಿಸಿದರು. ಆಗ್ಗೆ ಮಹಾಪ್ರಭುಗಳವರು ಅಸಾಧಾರಣವೈಭವದಿಂದ ನೆರವೇರಿದ ಪೀಠಾಧಿಕಾರದ ಸಮಗ್ರವಿಷಯಗಳನ್ನು ಪಂಡಿತರ ಮುಖದಿಂದ ಅರ್ಧಘಂಟೆಯವರೆಗೆ ಕೇಳಿ ಪರಮಾನಂದವನ್ನು ಹೊಂದಿದ್ದಲ್ಲದೆ, ಆ ಪ್ರಾಚೀನಪೀಠದ ಪರಮಪವಿತ್ರಚರಿತ್ರವನ್ನು ಕೇಳಿ, ಪೀಠದ

ವಿಷಯದಲ್ಲಿ ಅಸಾಧಾರಣಭಕ್ತಿಯುಳ್ಳವರಾದರು. ಅಲ್ಲದೆ ಶ್ರೀಗಳವರು ಮೈಸೂರುರಾಜ್ಯದಲ್ಲಿ ಸಂಚರಿಸುವುದಕ್ಕಾಗಿ ವಿಶೇಷವಾದ ರಾಜ ಬಿರುದುಗಳನ್ನು ದಯಪಾಲಿಸಿ, ಆ ಪೀಠದ ವೈಭವವು ಸರ್ವತ್ರ ಬೆಳಗುವಂತೆ ಮಾಡಿದರು. ವೀರಶೈವರಿಗೆ ಪರಮಪೂಜ್ಯವಾದೀ ಗುರುಪೀಠವನ್ನು ಜೀರ್ಣೋದ್ಧಾರಮಾಡಿದ ಧರ್ಮಪ್ರಭುಗಳವರಿಗೆ ಭರತಖಂಡದಲ್ಲಿರುವ ಇಡೀವೀರಶೈವಸಮಾಜವೇ ಚಿರಋಣಿಯಾಗಿರು ವುದೆಂಬವಿಷಯವನ್ನು ಸಾರಿಸಾರಿ ಹೇಳಬಹುದಾಗಿದೆ.

ಶ್ರೀಜಗದ್ಗುರು ರಂಭಾಪುರೀಪೀಠವನ್ನು ಜೀರ್ಣೋದ್ಧಾರಮಾಡಿ ದಿಗಂತವಿಶ್ರಾಂತಕೀರ್ತಿಶಾಲಿಗಳಾಗಿರುವ ಮಹಾಪ್ರಭುಗಳವರು, ಆ ಮಹಾಪೀಠದರ್ಶನಾಪೇಕ್ಷಿಗಳಾಗಿ ಪರಮಪವಿತ್ರವಾದ ಪ್ರಜೋತ್ಪತ್ತಿ ನಾಮಸಂವತ್ಸರದ ಕಾರ್ತಿಕ ಶು॥ ಪಂಚಮೀ ಸೋಮವಾರ ಶುಭದಿವಸ (ತಾ॥ ೩೦-೧೧-೧೯೩೧) ಶ್ರೀಜಗದ್ಗುರು ರಂಭಾಪುರೀಧರ್ಮಪೀಠ ಕ್ಕಾಗಮಿಸಿ ದರ್ಶನಮಾಡಿಕೊಂಡು, ಅಮೂಲ್ಯಗಳಾದ ಖಿಲ್ಲತ್ತು ಗಳನ್ನೂ, ವಿಶೇಷ ಕಾಣಿಕೆಯನ್ನೂ ಸಮರ್ಪಿಸಿ, ತಮ್ಮ ನೈಜವಾದ ಭಕ್ತಿಭಾವವನ್ನು ವ್ಯಕ್ತಗೊಳಿಸಿದರು. ಈ ಸಮಯದಲ್ಲಿ ಪಂಡಿತರು ಮೊದಲೇ ಪೀಠಕ್ಕಾಗಮಿಸಿ ಸಕಲವಿಧವಾದ ರಾಜವ್ಯವಸ್ಥೆಯನ್ನು ಬಹುತೃಪ್ತಿಕರವಾಗಿ ಏರ್ಪಡಿಸಿದ್ದರು. ಒಟ್ಟಿಗೆ ಪಂಡಿತರು ಶ್ರೀಜಗದ್ಗುರು ರಂಭಾಪುರೀಧರ್ಮಪೀಠದ ಕೀರ್ತಿಲತೆಯು ವಿಶ್ವವ್ಯಾಪಿ ಯಾಗುವಂತೆ ಮಾಡಿದರು.

ಶ್ರೀಜಗದ್ಗುರು ರಂಭಾಪುರೀಪೀಠದ ಶ್ರೀಗಳವರು ಈಗ್ಗೆ ೧೧೨ ವರ್ಷಗಳ ಪೂರ್ವದಲ್ಲಿ ಮೈಸೂರುರಾಜಧಾನಿಗೆ ಆಗಮಿಸಿ ರಾಜಗೌರವವನ್ನು ಪಡೆದಿದ್ದರಲ್ಲದೆ, ಇತ್ತೀಚೆಗೆ ಯಾವ ಶ್ರೀಗಳವರೂ ರಾಜಧಾನಿಗೆ ಆಗಮಿಸಿರಲಿಲ್ಲ. ಈ ವಿಷಯವನ್ನು ಪಂಡಿತರು ಪರ್ಯಾ

ಲೋಚಿಸಿ, ತಮ್ಮ ಕಾಲದಲ್ಲಾದರೂ ಈಗಿನ ಜಗದ್ಗುರುಗಳವರನ್ನು ರಾಜಧಾನಿಗೆ ಸಕಲರಾಜಮರ್ಯಾದೆಗಳೊಡನೆ ಬರಮಾಡಿಕೊಳ್ಳ ಬೇಕೆಂದು ಸಂಕಲ್ಪಿಸಿ, ಈ ಬಗ್ಗೆ ಬಹುಯುಕ್ತಿಪ್ರಯುಕ್ತಿಗಳಿಂದ ಕಾರ್ಯವನ್ನು ಮಾಡಿದರು. ಈ ಕಾರ್ಯದಲ್ಲಿ ಅನಂತಾನಂತವಿಘ್ನಗಳು ಸಂಭವಿಸಿದವು. ಆದರೂ ಪಂಡಿತರು ಅವುಗಳಿಗೆಲ್ಲಾ ಭಯಪಡದೆ, ಅವುಗಳನ್ನು ಯಾವ ಯಾವ ರೀತಿಯಿಂದ ದೂರಮಾಡಬೇಕೋ ಆ ಆ ರೀತಿಯಿಂದ ದೂರಮಾಡಿ, ತಾವು ಕೈಕೊಂಡ ಕಾರ್ಯವನ್ನು ಸರ್ವತೋಮುಖವಾಗಿ ಜಯಶಾಲಿಯನ್ನಾಗಿಮಾಡಿದರು. ಶ್ರೀಮನ್ಮಹಾಪ್ರಭುಗಳವರ ಕೃಪಾಕಟಾಕ್ಷಕ್ಕೆ ಸಂಪೂರ್ಣಪಾತ್ರರಾಗಿದ್ದ ಕೈ|| ರಾಜಕವಿಭೂಷಣ ಎಚ್. ಲಿಂಗರಾಜಅರಸರವರು ಪಂಡಿತರಲ್ಲಿ ನಿರತಿಶಯವಾದ ಪ್ರೇಮವನ್ನೂ ವಿಶ್ವಾಸವನ್ನೂ ಇಟ್ಟುಕೊಂಡಿದ್ದರು. ಆ ಮಹನೀಯರು ಪಂಡಿತರ ಮಾತಿನಲ್ಲಿ ವಿಶೇಷವಾದ ಗೌರವವನ್ನಿಟ್ಟುಕೊಂಡಿದ್ದುದರಿಂದ, ಪಂಡಿತರ ಅಭಿಪ್ರಾಯದ ಮೇರೆಗೆ ಮಹಾಪ್ರಭುಗಳವರಲ್ಲಿ ಸಕಲವಿಷಯಗಳನ್ನೂ ಬಿನ್ನವಿಸಿಕೊಂಡು, ಸಕಲರಾಜಮರ್ಯಾದೆಗಳು ದೊರೆಯುವಂತೆ ಏರ್ಪಡಿಸಿದರು. ರಾಜಧಾನಿಯಲ್ಲಿರುವ ಪ್ರಮುಖಭಕ್ತಮಂಡಳಿಯವರು ಪಂಡಿತರ ಅಭಿಪ್ರಾಯದ ಮೇರೆಗೆ ಅಹೋರಾತ್ರಿಯೆನ್ನದೆ ಕೆಲಸಮಾಡಿ, ಶ್ರೀ ಜಗದ್ಗುರುಗಳವರ ಮಹೋತ್ಸವದ ಸಿದ್ಧತೆಯನ್ನು ಬಹುತೃಪ್ತಿಕರವಾಗಿ ಮಾಡಿದ್ದರು. ರಾಜಧಾನಿಯಲ್ಲಿ ರಾಜಮರ್ಯಾದೆಗಳೊಡನೆ ಅದ್ಭುತವಾಗಿ ನೆರವೇರುವ ಈ ಗುರುಮಹೋತ್ಸವವನ್ನು ನೋಡುವುದಕ್ಕಾಗಿ ಭರತಖಂಡದ ನಾನಾಭಾಗಗಳಿಂದ ಅಗಣಿತಜನಭಕ್ತಮಾಹೇಶ್ವರರು ಆಗಮಿಸಿದ್ದರು. ಶ್ರೀಜಗದ್ಗುರುಗಳವರು ತಾ|| ೨೩-೯-೧೯೩೪ ನೆಯ ಇಸ್ವಿ ಭಾನುವಾರ ಪ್ರಾತಃಕಾಲ ೯ ಘಂಟೆಗೆ ರಾಜಧಾನಿಗೆ ಬಿಜಮಾಡಿದರು.



ಮೈಸೂರು ರಾಜಧಾನಿಯಲ್ಲಿ ಅಸಂಖ್ಯ ಜನಸ್ತೋಮದಿಂದೊಡಗೂಡಿ ಬರುತ್ತಿರುವ
ಶ್ರೀರಂಭಾಪುರೀಜಗದ್ಗುರುಗಳವರ ಮಹೋತ್ಸವದ ದೃಶ್ಯ।



ಶ್ರೀರಂಭಾಪುರೀಜಗದ್ಗುರುಗಳವರ ಮಹೋತ್ಸವದ ಮುಂಭಾಗದಲ್ಲಿ
ಅರಮನೆಯ ಸಿಬ್ಬಂದಿಯು ಹೋಗುತ್ತಿರುವ ದೃಶ್ಯ!

ಶ್ರೀಗಳವರ ಮಹೋತ್ಸವಕ್ಕಾಗಿ ಅರಮನೆಯಿಂದ ೨ ಆನೆಗಳು, ೧೧ ಕುದುರೆಗಳು, ೧೩ ಜನ ಬಾರ್ ಸಿಪಾಯಿಗಳು, ಅವರ ಮೇಲ್ಪಟ್ಟ ಅಧಿಕಾರಿಗಳು, ೧೮ ಜನ ಬ್ಯಾಂಡಿನವರು, ತಾಸಾಮಾರ್ಕು-ವಾಲಗದವರು, ೧೨ ಜನ ಸಾದಾಕಟ್ಟಿಗೆಯವರು, ೧೩ ಜನ ಬೆಳ್ಳಿಕಟ್ಟಿಗೆಯವರು, ೧೨ ಜನ ಹಸರುಕಟ್ಟಿಗೆಯವರು, ಹಗಲುದೀವಟಿಗೆ, ಛತ್ರಿ, ಚಾಮರ, ಚೌರಿ, ಮ್ಯಾನಾ ಇತ್ಯಾದಿ ರಾಜಮರ್ಯಾದೆಗಳನ್ನು ದಯಪಾಲಿಸಿದ್ದರಲ್ಲದೆ, ೧೧ ತೋಪುಗಳ ಘನವಾದ ಮರ್ಯಾದೆಯನ್ನೂ ದಯಪಾಲಿಸಿದ್ದರು. ಈ ವಿಧವಾದ ರಾಜವೈಭವದಿಂದ ಹೊರಟ ಶ್ರೀಜಗದ್ಗುರುಗಳವರ ಉತ್ಸವದ ಶೋಭೆಯು ಅನ್ಯಾದೃಶವಾಗಿತ್ತು. ನವರಾತ್ರಮಹೋತ್ಸವಕ್ಕೆ ಜನಸ್ತೋಮವು ಸಮ್ಮಿಲಿತವಾಗುವಂತೆ ಈ ಮಹೋತ್ಸವಕ್ಕಾದರೂ ಅಪಾರವಾದ ಜನಸ್ತೋಮವು ಸಮ್ಮಿಲಿತವಾಗಿತ್ತು. ಅರಮನೆಯ ಸಮೀಪದಲ್ಲಿರುವ ದೊಡ್ಡಗಡಿಯಾರದಹತ್ತರ ಉತ್ಸವವು ಬರುತ್ತಲೇ, ಗೌರವಾರ್ಥವಾಗಿ ೧೧ ತೋಪುಗಳು ಹಾರಿಸಲ್ಪಟ್ಟವು. ಈ ರೀತಿಯಾಗಿ ಜಗದಾಚಾರ್ಯರ ಮಹೋತ್ಸವವು ರಾಜಧಾನಿಯಲ್ಲಿ ಅಸಾಧಾರಣವೈಭವದೊಡನೆ ನೆರವೇರಿ ನಿಯಮಿತಸ್ಥಲಕ್ಕೆ ಬಂದು ತಲುಪಿತು. ಆ ದಿವಸ ರಾಜಧಾನಿಯಲ್ಲಿ ಎತ್ತನೋಡಿದತ್ತ ಆನಂದವೇ ಆನಂದವಾಗಿತ್ತು. ಇಂತಹ ಅದ್ಭುತಮಹೋತ್ಸವವು ರಾಜಧಾನಿಯಲ್ಲಿ ಇಂದಿನವರೆಗೆ ಯಾವ ಮತದ ಗುರುಗಳದೂ ಆಗಿಲ್ಲವೆಂದು ಸಕಲಮತೀಯರೂ ತಮ್ಮ ಆನಂದವನ್ನು ವ್ಯಕ್ತಪಡಿಸಿದರು.

ಶ್ರೀಮನ್ಮಹಾರಾಜರವರು ತಾ|| ೪-೧೦-೧೯೩೮ ನೆಯ ಗುರುವಾರದಿವಸ ಶ್ರೀಗಳವರನ್ನು ಮೇಲ್ಕಂಡ ಸಕಲರಾಜಮರ್ಯಾದೆಗಳೊಡನೆ ಸುವರ್ಣರಜತಾಂದೋಲಿಕಾಮಹೋತ್ಸವಪೂರ್ವಕವಾಗಿ ಅರಮನೆಗೆ ಬಿಜಯಮಾಡಿಸಿಕೊಂಡರು. ಅಂದಿನ ವೈಭವವನ್ನು

ವರ್ಣಿಸಲು ಆದಿಶೇಷನೂ ಸಹ ಸಮರ್ಥನಾಗಲಾರನು. ಅರಮನೆಯ ಮುಂಭಾಗಕ್ಕೆ ಶ್ರೀಗಳವರ ಪಲ್ಲಕ್ಕಿಯು ಬಂದಕೂಡಲೇ, ಅರಮನೆಯ ಸೈನ್ಯದಿಂದಕೂಡಿದ ಸೈನ್ಯಾಧಿಕಾರಿಗಳಿಂದ ಮಹಾಗೌರವಸೂಚಕವಾದ "**ಗಾರ್ಡ್ ಆಫ್ ಆನರ್**" ಎಂಬ ಘನಗೌರವವು ಸಮರ್ಪಿಸಲ್ಪಟ್ಟಿತು. ಈ ಮಹಾಗೌರವವು ವೈಸ್ರಾಯರೇ ಮೊದಲಾದವರಿಗೆ ಸಲ್ಲತಕ್ಕ ಗೌರವವಾಗಿರುವುದು. ಇಂತಹ ಅಸಾಧಾರಣಗೌರವವನ್ನು ಸ್ವೀಕರಿಸಿ, ಶ್ರೀಗಳವರು ಅರಮನೆಯನ್ನು ಪ್ರವೇಶಿಸಿ, ಅನುಷ್ಠಾನಾದಿಗಳನ್ನು ತೀರಿಸಿಕೊಂಡಮೇಲೆ, ರಾಜಬಂಧುಗಳ ಸ್ತೋಮದಲ್ಲಿ ವಂದಿಮಾಗಧರ ಮಂಗಲಸ್ತುತಿಯೊಡನೆ, ಸಾಕ್ಷಾದ್ಧರ್ಮಾವತಾರಿಗಳೂ ರಾಜರ್ಷಿ ಪುಂಗವರೂ ಆದ ಶ್ರೀಮನ್ಮಹಾರಾಜರವರು ಮತ್ತು ಶ್ರೀಮದ್ಯುವ ರಾಜರವರು ಶ್ರೀಗಳವರಲ್ಲಿಗೆ ದಯಮಾಡಿಸಿ, ರಾಜಖಿಲ್ಲತ್ತುಗಳನ್ನೂ ಕಾಣಿಕೆಯನ್ನೂ ಸನ್ನಿಧಿಯಲ್ಲಿ ಸಮರ್ಪಿಸಿ, ಶ್ರೀಗಳವರಿಂದ ತೀರ್ಥ ಪ್ರಸಾದಗಳನ್ನು ಸ್ವೀಕರಿಸಿದರು. ಬಳಿಕ ಶ್ರೀಗಳವರು ಉಭಯ ಪ್ರಭುಗಳವರಿಗೂ ತಮ್ಮ ಪೀಠದ ವತಿಯಿಂದ ಮಹಾರಾಜಯೋಗ್ಯ ವಾದ ಖಿಲ್ಲತ್ತುಗಳನ್ನು ಆಶೀರ್ವದಿಸಿದರು. ಅಂದು ಮಹಾಪ್ರಭು ಗಳವರಿಗುಂಟಾಗಿದ್ದ ಆನಂದವು ಅವರ್ಣನೀಯವಾದುದೆಂದು ಬರೆದರೆ ಅತಿಶಯೋಕ್ತಿಯೆನಿಸಲಾರದು. ಭರತಖಂಡವಿರಾಜಮಾನವಾದ ವೀರಶೈವಸಾಮ್ರಾಜ್ಯವೇ ಅಂದು ಆನಂದಸಾಗರದಲ್ಲಿ ಲೋಲಾಡು ತ್ತಿತ್ತು. ಈ ಆನಂದಸಂದೋಹಕ್ಕೆಲ್ಲಾ ನಮ್ಮ ಚರಿತ್ರನಾಯಕರ ಪ್ರಯತ್ನವಿಶೇಷವೇ ಕಾರಣವೆನ್ನುವುದು ಇಡೀ ಜಗತ್ತಿಗೆಲ್ಲಾ ತಿಳಿದ ವಿಷಯವಾಗಿದೆ. ಈ ರೀತಿಯಾಗಿ ಪಂಡಿತರು ಶ್ರೀಮದ್ರಂಭಾಪುರೀ ಪೀಠದ ವಿಷಯದಲ್ಲಿ ಘನವಾದ ಸೇವೆಯನ್ನು ಮಾಡಿ ಶ್ರೀರೇಣುಕನ ಕೃಪೆಗೆ ಪಾತ್ರರಾಗಿ ತಮ್ಮ ಜನ್ಮವನ್ನು ಸಫಲಗೊಳಿಸಿಕೊಂಡರು.



ಶ್ರೀರಂಭಾಪುರೀಜಗದ್ಗುರುಗಳವರು ಅರಮನೆಯಿಂದ ಸಕಲರಾಜಮರ್ಯಾದೆಗಳೊಡನೆ
ಹೊರಟಿರುವ ಮಹೋತ್ಸವದ ದೃಶ್ಯ!

ಯಾವಾಗಲೂ ಯೋಚನೆಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು. ತಮ್ಮ ಗುರುಪೀಠಕ್ಕೆ ಒಮ್ಮಿಂದೊಮ್ಮೆಲೇ ಪ್ರಾಪ್ತವಾದ ವಿಪನ್ನಾವಸ್ಥೆಯನ್ನು ಕಂಡು, ಪಂಡಿತರು ಆ ಗುರುಪೀಠಕ್ಕೆ ನಾನಾರೀತಿಯಿಂದ ಸಹಾಯಮಾಡುತ್ತ, ಸಮುದ್ರದಂತೆ ಮೇರೆದಪ್ಪಿಬಂದ ವಿಪನ್ನಾವಸ್ಥೆಯನ್ನು ದೂರಮಾಡಿ ಪೀಠದವೈಭವವು ಮೊದಲಿನಂತೆ ಸರ್ವತ್ರ ಪ್ರಜ್ವಲಿಸುವಂತೆ ಮಾಡಿದರು. ಈ ಸಮಯದಲ್ಲಿ ಪಂಡಿತರು ಮಾಡಿದ ಗುರುಪೀಠಸೇವೆಯು ಸರ್ವಜ್ಞಮೂರ್ತಿಯಾದ ಆ ವಿಶ್ವಾರಾಧ್ಯನಿಗೆ ಮಾತ್ರ ವೇದ್ಯವಾಗಿರುವುದಲ್ಲದೆ ಅನ್ಯರಿಗೆ ವೇದ್ಯವಾಗದು. ಅಸ್ತು !

ಪೂರ್ವದಲ್ಲಿ ಮೈಸೂರುದೇಶವನ್ನಾಳುತ್ತಿದ್ದ ಧರ್ಮಪ್ರಭುಶ್ರೀ ಮುಮ್ಮಡಿ ಕೃಷ್ಣರಾಜಒಡೆಯರ್‌ಬಹದ್ದೂರವರು ಶ್ರೀಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವೀ ಜಗದ್ಗುರುಪೀಠದಲ್ಲಿ ಸೂರ್ಯಚಂದ್ರರಿರುವವರೆಗೂ ತಮ್ಮ ಹೆಸರಿನಿಂದ ಮಾಹೇಶ್ವರರಿಗೆ ಅನ್ನದಾನವು ನೆರವೇರುತ್ತಿರಬೇಕೆಂದು ಶ್ರೀಶಾಲೀವಾಹನಶಕ ೧೭೬೭ನೆಯ ಪರಾಭವನಾಮ ಸಂ|| ಆಷಾಢ ಬಹುಳ ೨ ಶುಕ್ರವಾರ (ತಾ|| ೧೦-೭-೧೮೪೬ ನೆಯ ಇಸ್ವಿ) ದಿವಸ ತಾಮ್ರಪತ್ರದಲ್ಲಿ ಒಂದು ದಾನಶಾಸನವನ್ನು ಬರೆದುಕೊಟ್ಟಿದ್ದಾರೆ. ಆ ಧರ್ಮಪ್ರಭುಗಳವರ ಸತ್ಯಸಂಕಲ್ಪವನ್ನು ದಯಾಳುಗಳಾದ ಮೈಸೂರು ಗವರ್ನಮೆಂಟಿನವರು ಬಹುಕಾಲದಿಂದ ಇಂದಿನವರೆಗೂ ಅವಿಚ್ಛಿನ್ನವಾಗಿ ನಡೆಯಿಸಿಕೊಂಡು ಬಂದಿರುತ್ತಾರೆ. ಪೂರ್ವದ ಶ್ರೀಗಳವರು ಶಿವಾಧೀನರಾದಕೂಡಲೇ ಮೈಸೂರು ಗವರ್ನಮೆಂಟಿನವರು ತಾವು ಕಳುಹಿಸುತ್ತಿದ್ದ ಮಾಸವೃತ್ತಿಯನ್ನು ಒಮ್ಮಿಂದೊಮ್ಮೆ ನಿಲ್ಲಿಸಿಬಿಟ್ಟರು. ಪೂರ್ವದ ಶ್ರೀಗಳವರು ತಮ್ಮ ಉತ್ತರಾಧಿಕಾರವನ್ನು ಇಂಥವರಿಗೆ ಕೊಡುತ್ತೇವೆಂದು ಮೊದಲೇ ಮೈಸೂರುಸರಕಾರಕ್ಕೆ ತಿಳುಹಿಸದಿದ್ದುದೇ ಇದಕ್ಕೆ ಮೂಲಕಾರಣವಾಯಿತು. ಈ ವಿಷಯದಲ್ಲಿ



ಶ್ರೀಕಾಶೀಕ್ಷೇತ್ರವಿರಾಜಮಾನ ಜ್ಞಾನಸಿಂಹಾಸನಾಧೀಶ್ವರ
ಶ್ರೀಜಗದ್ಗುರು ಪಂಚಾಕ್ಷರಶಿವಾಚಾರ್ಯ ಮಹಾಸ್ವಾಮಿಗಳವರು.



ಶ್ರೀಜಗದ್ಗುರು ವಿಶ್ವಾರಾಧ್ಯಮಹಾಸಂಸ್ಥಾನದ ದರ್ಬಾರಹಾಲ್.



ಶ್ರೀಮದ್ಭೂಕೈಲಾಸ ಕಾಶೀಕ್ಷೇತ್ರದಲ್ಲಿ ರಾರಾಜಿಸುತ್ತಿರುವ
ಶ್ರೀಜಗದ್ಗುರುವಿಶ್ವಾರಾಧ್ಯ ಮೂಲಧರ್ಮಪೀಠ.

ಪಂಡಿತರು ಮೈಸೂರು ಗವರ್ನಮೆಂಟಿನಲ್ಲಿ ೨ ವರ್ಷಗಳವರೆಗೆ ಕರೆಸ್ಪಾಂಡೆನ್ಸ್ ನಡೆಯಿಸಿ, ಪೀಠಕ್ಕೆ ಪೂರ್ವದಂತೆ ಪುನಃ ಮಾಸವೃತ್ತಿಯು ದೊರೆಯುವಂತೆ ವ್ಯವಸ್ಥೆಮಾಡಿ, ಗುರುಕೃಪೆಗೆ ಪಾತ್ರರಾದರು.

ಪಂಡಿತರು ಕಾಶೀ ಜಗದ್ಗುರುಪೀಠದ ಕೈಲಾಸಮಂಟಪದಲ್ಲಿ ವಿರಾಜಿಸುತ್ತಿರುವ ಮೂಲವಿಶ್ವಾರಾಧ್ಯರ ಪೀಠವನ್ನು ಬಹುಸುಂದರವನ್ನಾಗಿಮಾಡಬೇಕೆಂದು ಯೋಚಿಸಿ, ಅದರಂತೆ ೧೯೩೩ ನೆಯ ಇಸ್ವಿಯಲ್ಲಿ ವಿದೇಶೀಯವಿವಿಧಚಿತ್ರಶಿಲಾವಿನ್ಯಾಸದಿಂದ ಮೂಲಪೀಠವನ್ನು ಮಹಾತೇಜೋವಿಶಿಷ್ಟವನ್ನಾಗಿಮಾಡಿ, ಗುರುಪೀಠದಲ್ಲಿ ತಮ್ಮ ನಾಮವು ಚಿರಕಾಲವಾಗಿ ಉಳಿಯಲೆಂಬ ಸದುದ್ದೇಶದಿಂದ ತಮ್ಮ ಹೆಸರಿನಿಂದ ಶಿಲಾಶಾಸನವನ್ನು ಕೆತ್ತಿಸಿ ಮೂಲಪೀಠದಲ್ಲಿಯೇ ವಿನ್ಯಾಸಮಾಡಿಸಿದರು. ಜಗತ್ಪ್ರಸಿದ್ಧವಾದ ತಮ್ಮ ಗುರುಪೀಠದಲ್ಲಿ ಚಿರಕಾಲಸ್ಮಾರಕವಾಗಿರುವೀ ಮಹಾಕಾರ್ಯವು ಪಂಡಿತರ ಪುಣ್ಯಪ್ರಭಾವದಿಂದಲೇ ನೆರವೇರಿತೆಂದು ಹೇಳಬಹುದಾಗಿದೆ. ಇದಕ್ಕೆಲ್ಲಾ ಪಂಡಿತರು ಪೂರ್ವಾಚಾರ್ಯರಲ್ಲಿಟ್ಟಿರುವ ನಿಸ್ಸೀಮಭಕ್ತಿಯೇ ಮುಖ್ಯಕಾರಣವಾಗಿರುವುದಲ್ಲದೆ ಬೇರೆಯಲ್ಲ. ಈ ರೀತಿಯಾಗಿ ಪಂಡಿತರು ತಮ್ಮ ಗುರುಪೀಠದ ಸೇವೆಯನ್ನುಮಾಡಿ, ಶ್ರೀಜಗದ್ಗುರು ವಿಶ್ವಾರಾಧ್ಯನ ಪೂರ್ಣಕೃಪೆಗೆ ಪಾತ್ರರಾದರು.

ಶ್ರೀಜಗದ್ಗುರು ಉಜ್ಜಯಿನೀಪೀಠದ ಸೇವೆ.

ಪಂಡಿತರು ಮೊದಲು ಕಾಶೀಕ್ಷೇತ್ರದಿಂದ ಬಂದ ಕೆಲವು ದಿವಸಗಳಲ್ಲಿಯೇ ಶ್ರೀಮದುಜ್ಜಯಿನೀಸದ್ಧರ್ಮಸಿಂಹಾಸನಾಧೀಶ್ವರ ಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ದರ್ಶನಕ್ಕಾಗಿ ಉಜ್ಜಯಿನಿಗೆ ಪ್ರಯಾಣಮಾಡಿದರು. ಈ ಜಗದ್ಗುರುಗಳವರು ಸಾಕ್ಷಾತ್ಪರ

ಶಿವನ ಅಪರಾವತಾರಿಗಳೆನ್ನುವುದು ಇಡೀಜಗತ್ತಿಗೆ ತಿಳಿದ ವಿಷಯ ವಾಗಿದೆ. ಮೂಲೆಗುಂಪಾಗಿದ್ದ ಪಂಚಪೀಠಗಳು ಈ ಗುರುಚಕ್ರವರ್ತಿ ಗಳ ಅನುಗ್ರಹಬಲದಿಂದಲೇ ಮುಂದೆಬಂದವು. ಈ ಮಹನೀಯರ ತಪೋಜ್ವಾಲೆಯೇ ನಿದ್ರಿಸುತ್ತಿದ್ದ ಗುರುವರ್ಗವನ್ನು ಜಾಗೃತಿಗೊಳಿ ಸಿತು. ಈ ಮಹಾತ್ಮರ ಅಮೃತಮಯಕೃಪಾಕಟಾಕ್ಷವೀಕ್ಷಣವೇ ಭಕ್ತಕೋಟಿಯನ್ನುದ್ಧರಿಸಿತು. ಈ ಚರಸಾರ್ವಭೌಮರ ಸದುಪದೇಶ ದಿಂದಲೇ ಪಂಡಿತಪಾಮರರೆಲ್ಲರೂ ಪ್ರಾಚೀನವೀರಶೈವಸಿದ್ಧಾಂತ ವನ್ನು ತಿಳಿಯಲು ಸಮರ್ಥರಾದರು. ಘೋರಾಪಾರನಿಸ್ಸಾರಸಂಸಾರಾಗ್ನಿ ಸಂತಪ್ತಜೀವಕೋಟಿಸಮುದ್ಧರಣದೀಕ್ಷಿತರಾದ ಇಂತಹ ಜಗದ್ಗುರು ಗಳವರಲ್ಲಿ ಪಂಡಿತರು ತಾವು ಕೈಕೊಂಡಿರುವ ಮಹಾಕಾರ್ಯಕ್ರಮ ವನ್ನೆಲ್ಲಾ ಅರಿಕೆಮಾಡಿಕೊಂಡರು. ಶ್ರೀಜಗದ್ಗುರುಗಳವರು ಪಂಡಿತರು ಕೈಕೊಂಡಿರುವ ಕಾರ್ಯವು ಶಾಸ್ತ್ರವಿಹಿತವಾದುದೆಂದು ಯೋಚಿಸಿ, ಪಂಡಿತರೇ! ನಿಮ್ಮ ಕಾರ್ಯವು ಶಿವಪ್ರೀತಿಕರವಾದುದೆಂದೂ, ಈ ಕಾರ್ಯವು ದಿಗ್ವಿಜಯವನ್ನು ಹೊಂದಿ ಸರ್ವತ್ರ ಜಯಭೇರಿಯನ್ನು ಹೊಡೆಯುವುದೆಂದೂ, ಮಹಾಕಾರ್ಯಗಳಲ್ಲಿ ಸ್ವಾಭಾವಿಕವಾಗಿ ಬರುವ ವಿಘ್ನಗಳಿಗೆ ಭಯಪಡದೆ ಅಸಾಧಾರಣವಾದ ಧೈರ್ಯದಿಂದ ಕಾರ್ಯ ವನ್ನು ಮಾಡಬೇಕೆಂದೂ ಆಶೀರ್ವದಿಸಿದರು. ಪಂಡಿತರು ಆ ಮಹಾ ತಪಸ್ವಿಗಳ ದಿವ್ಯಕೃಪಾಪೂರಿತಾಜ್ಞೆಯನ್ನು ಶಿರಸ್ಸಿನಲ್ಲಿ ಧರಿಸಿಕೊಂಡು, ಅದರಂತೆ ಕಾರ್ಯವನ್ನು ಮಾಡಲು ಪ್ರಾರಂಭಿಸಿದರು.

ಪಂಡಿತರು ೭—೮ ವರ್ಷಗಳ ವರೆಗೆ ಉಜ್ಜಯಿನೀಜಗದ್ಗುರು ಮಹಾಸನ್ನಿಧಿಯಲ್ಲಿಯೇ ವಾಸವಾಗಿದ್ದರು. ಪಂಡಿತರ ವಿಷಯದಲ್ಲಿ ಜಗದ್ಗುರುಗಳವರು ಅನಿತರಸಾಧಾರಣವಾದ ಪ್ರೀತಿಯನ್ನಿಟ್ಟಿದ್ದರು. ಪಂಡಿತರನ್ನು ತಮ್ಮ ಪ್ರಾಣದಂತೆ ಕಾಣುತ್ತಿದ್ದರು. ಪಂಡಿತರ

ವಾಕ್ಯವೇ ಅವರಿಗೆ ವೇದವಾಕ್ಯವಾಗಿದ್ದಿತು. ಪಂಡಿತರಾದರೂ ಶ್ರೀ ಜಗದ್ಗುರುಗಳವರನ್ನೇ ತಮ್ಮ ಗುರು-ತಂದೆ-ತಾಯಿ-ಬಂಧು-ಬಳಗ ವೆಂದು ಭಾವಿಸಿದ್ದರು. ಉಭಯರ ಶರೀರಗಳು ಭಿನ್ನಭಿನ್ನವಾಗಿದ್ದರೂ ಮನೋಭಾವವು ಏಕರೂಪವನ್ನು ಧರಿಸಿ ಸಮರಸವಾಗಿಹೋಗಿತ್ತು. ಆದುದರಿಂದಲೇ ಪಂಡಿತರು ಕೈಕೊಂಡ ಮಹಾಕಾರ್ಯವು ಅವ್ಯಾಹತ ವಾಗಿ ಸಾಗಿತು. ಶ್ರೀ ರಂಭಾಪುರೀ ಧರ್ಮಪೀಠವು ಅನಾಯಕವಾಗಿದ್ದ ಸಮಯದಲ್ಲಿ, ಶ್ರೀಮದುಜ್ಜಯಿನೀಜಗದ್ಗುರುಗಳವರು ಪಂಡಿತರ ಒತ್ತಾಯದಿಂದಲೇ ಮೈಸೂರುದೇಶಕ್ಕೆ ಪ್ರಯಾಣಮಾಡಿದರು. ಶ್ರೀಜಗದ್ಗುರುಗಳವರು ಮೈಸೂರುದೇಶವನ್ನು ಪ್ರವೇಶಮಾಡಿದ ಕೂಡಲೇ ವಿರೋಧಿಗಳು, ಶ್ರೀಜಗದ್ಗುರುರಂಭಾಪುರೀಪೀಠಾಧಿಕಾರದ ವಿಷಯದಲ್ಲಿ ಇಲ್ಲದ ಗೊಂದಲವನ್ನೆಬ್ಬಿಸಿ ಮೈಸೂರು ಸರಕಾರದಲ್ಲಿ ವ್ಯಾಜ್ಯವನ್ನು ಹೂಡಿದರು. ಆಗ್ಗೆ ಶ್ರೀಜಗದ್ಗುರುಗಳವರು ಪಂಡಿತರ ಅಭಿಪ್ರಾಯದ ಮೇರೆಗೆ ಶ್ರೀರಂಭಾಪುರೀಪೀಠದ ಅಧಿಕಾರವನ್ನು ನೆರವೇರಿಸದೆ, ತಮ್ಮ ಉಜ್ಜಯಿನೀಪೀಠಕ್ಕೆ ಎಂದೂ ಹೋಗುವುದಿಲ್ಲ ವೆಂದು ಭೀಷ್ಮಪ್ರತಿಜ್ಞೆಯನ್ನು ಮಾಡಿ, ಮೈಸೂರು ರಾಜ್ಯದಲ್ಲಿಯೇ ಸಂಚರಿಸಹತ್ತಿದರು. ಸಂಚಾರಸಮಯದಲ್ಲಿ ವಿರೋಧಿಗಳು ಸನ್ನಿಧಿ ಯವರಿಗೆ ನಾನಾವಿಧವಾದ ತೊಂದರೆಗಳನ್ನೊಡ್ಡುತ್ತಿದ್ದರು. ಆದಾಗ್ಯೂ ಆ ತೊಂದರೆಗಳೆಲ್ಲಾ ಆ ಮಹಿಮರ ತಪಃಪ್ರಭಾವದಿಂದ ತಮ್ಮಿಂದ ತಾವೇ ದೂರಾಗುತ್ತಿದ್ದವು. ಈ ಸಮಯದಲ್ಲಿ ಉಜ್ಜಯಿನೀ ಜಗದ್ಗುರುಪೀಠದ ಏಜಂಟರು ತಮ್ಮ ಪೀಠದ ಮಹಾಸ್ವಾಮಿಗಳವರ ಸಂಚಾರಕ್ಕಾಗಿ ಎಲ್ಲಾವಿಧವಾದ ಬಿರುದು ಮೊದಲಾದ ಗೌರವವು ದೊರೆಯಬೇಕೆಂದು, ಮೈಸೂರುಗವರ್ನಮೆಂಟಿನಲ್ಲಿ ಅರ್ಜಿಯನ್ನು ಹಾಕಿಕೊಂಡರು. ಇದನ್ನು ತಿಳಿದು ವಿರೋಧಿಗಳು ಕೂಡಲೆ ಇವರಿಗೆ

ರಹದಾರಿಯು ದೊರೆಯಕೂಡದೆಂದು ತಮಗೆ ಅನುಕೂಲರಾದವರಿಂದ ವಿರೋಧವಾಗಿ ಅರ್ಜಿಯನ್ನು ಹಾಕಿಸಿದರು. ಮೆ|| ಮುಜರಾಯಿ ಕಮಿಷನರ್ ಸಾಹೇಬರವರ ಕಚೇರಿಯಲ್ಲಿ ವಿಚಾರವು ನಡೆಯಿತು. ಪಂಡಿತರು ಈ ವಿಷಯದಲ್ಲಿ ಜಾಣ್ಮೆಯಿಂದ ಕೆಲಸಮಾಡಿ, ಉಜ್ಜಯಿನೀ ಪೀಠವಜಗದ್ಗುರುಗಳಿಗೆ ರಹದಾರಿಯು ಪ್ರಾಪ್ತವಾಗುವಂತೆಮಾಡಿದರು. ಪಂಡಿತರು ಕೈಕೊಂಡಿರುವ ಗುರುವರ್ಗವಿಜಯಕಾರ್ಯಕ್ಕೆ ಶ್ರೀಮದುಜ್ಜಯಿನೀಪೀಠಾಧೀಶ್ವರರಾದ ಶ್ರೀ ೧೦೦೮ ಜಗದ್ಗುರುಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಕೃಪೆಯೇ ಮೂಲಕಾರಣವು. ಪಂಡಿತರ ಹೃನ್ಮಂದಿರವಲ್ಲಿ ಆ ಗುರುಸಾರ್ವಭೌಮರ ಪೂಜ್ಯಪಾದ ಕಮಲಗಳು ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆಗಳಲ್ಲಿಯೂ ಪ್ರಕಾಶಿಸುತ್ತಿರುವುವು. ಆ ಗುರುಚಕ್ರವರ್ತಿಯ ಅನುಗ್ರಹವೇ ಗುರುವರ್ಗದ ನಿಧಿ!

ಪಂಡಿತರು ೧೯೨೬ನೆಯ ಇಸ್ವಿಯಲ್ಲಿ ಮಹಾರಾಷ್ಟ್ರದೇಶವಲ್ಲಿ ವಿರಾಜಿಸುತ್ತಿರುವ ಬಾರ್ಸಿ ಪಟ್ಟಣಕ್ಕೆ ಪ್ರಯಾಣಮಾಡಿದರು. ಆ ಸಮಯದಲ್ಲಿ ಅಲ್ಲಿಯ ವೀರಶೈವಪ್ರಮುಖರ ಪ್ರಾರ್ಥನೆಯಂತೆ ಪಂಡಿತರು ಶ್ರೀಪರಾಂಡಕರಸ್ವಾಮಿಗಳವರ ಮಠವಲ್ಲಿ ಒಂದು ಭಾಷಣವನ್ನು ಮಾಡಿದರು. ಆ ಭಾಷಣದ ಪ್ರಭಾವವೇ ಮಹಾರಾಷ್ಟ್ರದೇಶದಲ್ಲಿ ಜಗದಾಚಾರ್ಯರ ಸಂಚಾರಕ್ಕೆ ಮೂಲಕಾರಣವಾಯಿತು. ಮಹಾರಾಷ್ಟ್ರದೇಶದ ವೀರಶೈವರು ಬಹುಭಕ್ತಿಮಂತರು. ಅವರಲ್ಲಿರುವ ಭಕ್ತಿಯು ಅನ್ಯಾದೃಶವಾದುದು. ಇಂತಹ ಭಕ್ತಿಶೀಲರಿಗೆ ತಮ್ಮ ಮತಾಚಾರ್ಯರ ಸ್ವರೂಪವೇ ತಿಳಿಯದಂತಾಗಿತ್ತು. ತಾಯಿಯನ್ನು ಕಳೆದುಕೊಂಡ ಮಕ್ಕಳಂತೆ ಅವರು ಮತಾಚಾರ್ಯರನ್ನು ಸಂದರ್ಶಿಸದೆ ಬಹುವಾಗಿ ಕಳವಳಪಡುತ್ತಿದ್ದರು. ಕಂಡಕಂಡವರನ್ನೇ ದೊಡ್ಡಗುರುಗಳೆಂದು ಭಾವಿಸಿದ್ದರು. ಪಂಡಿತರ ಮಹೋಪದೇಶದಿಂದ ಆ ಭಾವನೆ



ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ
ಕೈ॥ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು

ಗಳೆಲ್ಲಾ ದೂರವಾದುವು. ಮಹಾರಾಷ್ಟ್ರದೇಶದ ಪ್ರಮುಖರು ತಮ್ಮ ದೇಶದಲ್ಲಿ ಮತಾಚಾರ್ಯರ ಸಂಚಾರವನ್ನು ಅವಶ್ಯವಾಗಿ ಮಾಡಿಸಬೇಕೆಂದು ಪಂಡಿತರನ್ನು ನಾನಾವಿಧವಾಗಿ ಪ್ರಾರ್ಥಿಸಿಕೊಂಡರು. ಪಂಡಿತರು ಅವರ ಪ್ರಾರ್ಥನೆಯನ್ನಂಗೀಕರಿಸಿ, ತಥಾಸ್ತು ! ಎಂದು ಅಪ್ಪಣೆಕೊಡಿಸಿದರು. ಪಂಡಿತರ ಉಪದೇಶಪ್ರಭಾವದಿಂದ ಮಹಾರಾಷ್ಟ್ರದೇಶದಲ್ಲಿ ಗುರುಭಕ್ತಿಯು ಸರ್ವತೋಮುಖವಾಗಿ ಹರಡಹತ್ತಿತು. ಕೆಲವುದಿವಸಗಳಾದ ಮೇಲೆ ಪಂಡಿತರು ತಮ್ಮ ಪ್ರಯತ್ನ ವಿಶೇಷದಿಂದ ಪರಮತಪೋನಿಧಿಗಳೂ, ಗುರುಕುಲಸಾರ್ವಭೌಮರೂ, ಕೈವಲ್ಯಕಲ್ಪವೃಕ್ಷರೂ, ಸಾಕ್ಷಾತ್ ಶಿವಸ್ವರೂಪಿಗಳೂ ಆದ ಶ್ರೀಮದುಜ್ಜಯಿನೀಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರುಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರು ಮಹಾರಾಷ್ಟ್ರದೇಶದಲ್ಲಿ ದಿಗ್ವಿಜಯಮಾಡುವಂತೆ ಏರ್ಪಡಿಸಿದರು.

ಬಾರ್ಶಿಪಟ್ಟಣದಲ್ಲಿರುವ ಮಹಾಶ್ರೀಮಂತರೂ ಗುರುಭಕ್ತಶಿಖಾಮಣಿಗಳೂ ಆದ ಮ|| ರಾ|| ಅಣ್ಣಾಸಾಹೇಬ ಕಥಲೆ ಈ ಮಹಾಶಯರು ಪಂಡಿತರ ಅಭಿಪ್ರಾಯವಂತೆ ಶ್ರೀಜಗದ್ಗುರುಗಳವರನ್ನು ಅಸಾಧಾರಣವೈಭವದಿಂದ ತಮ್ಮಲ್ಲಿಗೆ ಬಿಜಯಮಾಡಿಸಿಕೊಳ್ಳಲು ಸಿದ್ಧರಾಗಿ ಸಕಲ ಸಿದ್ಧತೆಗಳನ್ನು ಮಾಡಿದರು. ಇದಕ್ಕಾಗಿ ಪಂಡಿತರು ೧ ತಿಂಗಳು ಮೊದಲೇ ಬಾರ್ಶಿಗೆ ಪ್ರಯಾಣಮಾಡಿ ತಮ್ಮ ಸದುಪದೇಶಪ್ರಭಾವದಿಂದ, ಆ ಪಟ್ಟಣದಲ್ಲಿರುವ ಸರ್ವಜನಾಂಗದಲ್ಲಿಯೂ ನವಚೈತನ್ಯವನ್ನುಂಟುಮಾಡಿದ್ದರು. ಪಂಡಿತರ ಅಭಿಪ್ರಾಯದಂತೆ ಜಗದ್ಗುರುಗಳವರು (ತಾ|| ೨೫-೯-೧೯೩೨) ನೆಯ ದಿವಸ ಬಾರ್ಶಿಪಟ್ಟಣಕ್ಕೆ ಬಿಜಮಾಡಿದರು. ಅಡ್ಡಪಲ್ಲಕ್ಕಿ, ಪಂಚಕಲಶ, ನಂದಿಧ್ವಜ ಮೊದಲಾದ ೭೨ ಬಿರುದಾವಳಿಗಳೊಡನೆ ಮಹೋತ್ಸವವು ಅಗಣಿತ

ಜನಸ್ತೋಮದಲ್ಲಿ ಅಭೂತಪೂರ್ವವಾಗಿ ನೆರವೇರಿತು. ಉತ್ಸವದದಿವಸ ಬಾರ್ಸಿಪಟ್ಟಣವು ಇಂದ್ರನ ರಾಜಧಾನಿಯನ್ನು ತಿರಸ್ಕರಿಸುವಂತಿತ್ತು. ಸ್ಮಾರ್ತ-ವೈಷ್ಣವ- ಜೈನ - ವಿಶ್ವಕರ್ಮ - ಮಾರವಾಡಿ - ಮುಸಲ್ಮಾನ ಮೊದಲಾದ ಸಕಲಮತೀಯರೂ ಶ್ರೀಜಗದಾಚಾರ್ಯರ ವಿಷಯದಲ್ಲಿ ತೋರ್ಪಡಿಸಿದ ಭಕ್ತಿಭಾವವು ವರ್ಣನಾತೀತವಾಗಿತ್ತು. ಪಂಡಿತರು ಜಗದ್ಗುರುಗಳವರನ್ನು ಈ ರೀತಿಯಾಗಿ ಅದ್ಭುತವಿಜಯವೈಭವದೊಡನೆ ಮಹಾರಾಷ್ಟ್ರದೇಶದಲ್ಲಿ ಪ್ರವೇಶಮಾಡಿಸಿ, ಮಹಾರಾಷ್ಟ್ರದೇಶದ ವೀರ ಶೈವರ ಕೃತಜ್ಞತೆಗೆ ಪಾತ್ರರಾದರು. ಬಳಿಕ ಉಜ್ಜಯಿನೀ ಜಗದ್ಗುರು ಗಳವರು ಮಹಾರಾಷ್ಟ್ರದೇಶದ ನಾನಾಭಾಗಗಳಲ್ಲಿ ಸಂಚರಿಸಿ ಮಹಾ ರಾಷ್ಟ್ರದೇಶವನ್ನೆಲ್ಲಾ ಪುನೀತವನ್ನಾಗಿಮಾಡಿದರು. ಶ್ರೀಜಗದ್ಗುರುಗಳ ವರ ತಪಃಪ್ರಭಾವದಿಂದ ಆಚಾರ್ಯರ ಸ್ವರೂಪವು ಮಹಾರಾಷ್ಟ್ರದೇಶ ವನ್ನೆಲ್ಲ ವ್ಯಾಪಿಸಿ ಆ ದೇಶವನ್ನು ಗುರುಭಕ್ತಿಮಯವನ್ನಾಗಿ ಮಾಡಿತು. ಈ ರೀತಿಯಾಗಿ ಜಗದ್ಗುರುಗಳು ನಾನಾದೇಶಗಳಲ್ಲಿ ಸಂಚ ರಿಸಿ, ತಮ್ಮ ಪವಿತ್ರಪಾದವಿನ್ಯಾಸದಿಂದ ಆಯಾ ದೇಶಗಳನ್ನು ಪಾವನ ಗೊಳಿಸಿ, ಜಗದ್ವಂದ್ಯರಾದರು. ಇಂತಹ ಪವಿತ್ರಜಗದ್ಗುರುಮೂರ್ತಿಯು (ತಾ|| ೧೨-೧-೧೯೩೬) ಭಾನುವಾರ ದಿವಸ ವೀರಶೈವಸಮಾಜವನ್ನು ಕೈಬಿಟ್ಟು ಶಿವನಲ್ಲಿ ಸಮರಸಭಾವವನ್ನು ಹೊಂದಿತು. ಈ ವಿಷಯವು ಪಾರಮಾರ್ಥಿಕವಾಗಿ ಸಂತೋಷಪಡತಕ್ಕುದಾದರೂ, ಲೌಕಿಕರೀತಿ ಯಿಂದ ಸಮಸ್ತಗುರುಭಕ್ತರ ಹೃದಯವನ್ನು ಸಂತಾಪಗೊಳಿಸತಕ್ಕು ದಾಗಿದೆ.

ಶ್ರೀಜಗದ್ಗುರುಗಳವರು ಚಿತ್ರದುರ್ಗಡಿಸ್ಟ್ರಿಕ್ಟಿನಲ್ಲಿ ಗುರುಪೀಠದ ಕಾಣಿಕೆಗಾಗಿ ಸಂಚರಿಸುತ್ತ "ತುರುವನೂರು" ಎಂಬ ಗ್ರಾಮದಲ್ಲಿ ವಸತಿಮಾಡಿದ್ದರು. ಅಲ್ಲಿಯೇ ಶ್ರೀಜಗದ್ಗುರುಗಳವರಿಗೆ ಶೀತದಿಂದ

ಕಾಯಿಲೆಯು ಪ್ರಾಪ್ತವಾಯಿತು. ಆ ಸಮಯದಲ್ಲಿ ಪಂಡಿತರು ಮದ್ರಾಸಿನಲ್ಲಿದ್ದರು. ಶ್ರೀಸನ್ನಿಧಿಯವರ ಪ್ರೇಮಪೂರಿತವಾದ ಆಶೀರ್ವಾದಪತ್ರವು ಅಲ್ಲಿಗೆ ಹೋಯಿತು. ಕೂಡಲೇ ಪಂಡಿತರು ಮದ್ರಾಸಿನಿಂದ ಮೈಸೂರಿಗೆ ಬಂದು, ಆರೋಗ್ಯವಿಚಾರದಲ್ಲಿ ಸನ್ನಿಧಿಗೆ ಈ ಈ ರೀತಿಯಾಗಿರಬೇಕೆಂದು ಪತ್ರವನ್ನು ಬಿನ್ನವಿಸಿಕೊಂಡರು. ೨-೩ ದಿವಸಗಳಲ್ಲಿಯೇ ಸನ್ನಿಧಿಯವರಿಗೆ ಕಾಯಿಲೆಯು ಹೆಚ್ಚಾಗಿದೆಯೆಂದು ಟೇಲಿಗ್ರಾಂ ಬಂದಿತು. ಪಂಡಿತರು ಕೂಡಲೇ ರಾಜಧಾನಿಯಲ್ಲಿರುವ ಸುಪ್ರಸಿದ್ಧ ಡಾಕ್ಟರರನ್ನು ಕರೆದುಕೊಂಡು, ಸ್ಪೆಷಲ್‌ಕಾರಿನಿಂದ ೨೦೦ ಮೈಲು ದೂರದಲ್ಲಿ ಸನ್ನಿಧಿಯವರು ವಾಸಮಾಡಿದ ಸ್ಥಳಕ್ಕೆ ಹೋದರು. ಅಷ್ಟರಲ್ಲಿ ಶ್ರೀಮದ್ರಂಭಾಪುರೀ ಜಗದ್ಗುರುಗಳವರೂ ಸಹ ಅಲ್ಲಿಗೆ ಆಗಮಿಸಿದ್ದರು. ಡಾಕ್ಟರರೊಡನೆ ಸರ್ವವನ್ನೂ ಯೋಚಿಸಿದರು. ಡಾಕ್ಟರರು ಧೈರ್ಯವನ್ನು ಕೊಡದಿದ್ದುದರಿಂದ, ಶ್ರೀಸನ್ನಿಧಿಯವರನ್ನು ಉಜ್ಜಯಿನೀ ಧರ್ಮಪೀಠಕ್ಕೆ ಕರೆದುಕೊಂಡು ಹೋದುದಾಯಿತು. ಅಂದೇ ಜಗದ್ಗುರುಗಳವರು ತಮ್ಮ ಶಿಷ್ಯಕೋಟಿಯನ್ನೆಲ್ಲಾ ತ್ಯಜಿಸಿ, ಪರಶಿವನಲ್ಲಿ ಸಮರಸಭಾವವನ್ನು ಹೊಂದಿದರು. ಶ್ರೀ ಜಗದ್ಗುರುಗಳವರ ವಿಯೋಗದಿಂದ ಪಂಡಿತರ ವ್ಯಸನವು ಮೇರೆದಪ್ಪಿತು; ಅವರ ಕಣ್ಣುಗಳಿಂದ ಅವಿಚ್ಛಿನ್ನವಾಗಿ ಹರಿಯುತ್ತಿದ್ದ ಅಶ್ರುಧಾರೆಯು, ಅಲ್ಲಿ ನೆರೆದಿದ್ದ ಅಸಂಖ್ಯಜನರ ಹೃದಯವನ್ನು ತಲ್ಲಣಗೊಳಿಸಿತು. ಅಂದಿನ ದೃಶ್ಯವು ಕಲ್ಲುಹೃದಯವನ್ನೂ ಸಹ ಕರಗಿಸುವಂಥದಾಗಿದ್ದಿತು. ಇಂತಹ ಸಂತಾಪಮಯಸಮಯದಲ್ಲಿ ಪಂಡಿತರು ತಮ್ಮ ದುಃಖೋದ್ಗಾರವನ್ನು ಅಂತರಂಗದಲ್ಲಿಯೇ ತಡೆಯುತ್ತ, ಮುಂದಿನ ಪೀಠಾಭಿವೃದ್ಧಿಕಾರ್ಯದ ಕಡೆಗೆ ದೃಷ್ಟಿಯನ್ನಿಟ್ಟು, ಮರುದಿವಸ ಶ್ರೀಮದ್ರಂಭಾಪುರೀಜಗದ್ಗುರುಗಳವರ ಸನ್ನಿಧಿಯಲ್ಲಿ ಒಂದು ಸಭೆಯನ್ನು ಕೂಡಿಸಿ, ಅನಾಯಕ

ವಾಗಿದ್ದ ಧರ್ಮಪೀಠವು ಆದಷ್ಟು ಶೀಘ್ರವಾಗಿ ಸನಾಯಕವಾಗು ವಂತೆ ಮಾಡಬೇಕೆಂದು ಪೀಠಾಭಿಮಾನಿಗಳಲ್ಲಿ ತಿಳುಹಿಸಿದರು. ಅದಕ್ಕೆ ಸರ್ವರೂ ಸಂತೋಷದಿಂದ ಒಪ್ಪಿ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದರು. ಪಂಡಿತರೂ ರಂಭಾಪುರೀಜಗದ್ಗುರುಗಳೂ ಪೀಠದಲ್ಲಿಯೇ ಉಳಿದುಕೊಂಡರು. ಈ ಸಮಯದಲ್ಲಿ ಪೀಠವನ್ನು ಹಾಗೆಯೇ ಬಿಟ್ಟು ಹೋದರೆ, ದೊಡ್ಡ ಪೀಠವು ಕೆಟ್ಟುಹೋಗುವುದೆಂದು ಉಭಯರೂ ಯೋಚಿಸಿ, ಯಾರಾದರೊಬ್ಬ ಸಮರ್ಥರನ್ನು ಅಧಿಕಾರಿಗಳನ್ನಾಗಿ ಮಾಡಿಯೇ ಪ್ರಯಾಣಮಾಡಬೇಕೆಂದು ನಿಶ್ಚಯಿಸಿಕೊಂಡರು. ಅದರಂತೆ ದೇಶಮಧ್ಯದಲ್ಲಿ ಜಗದ್ಗುರುಪೀಠದಿಂದ ಶ್ರೀಮುಖಗಳನ್ನು ಕಳುಹಿಸಿ, ವಟುನಿಯಮನಕ್ಕಾಗಿ ಒಂದು ದೊಡ್ಡ ಸಭೆಯನ್ನು ಕೂಡಿಸಿದರು. ಆಗ್ಗೆ ವಟುಗಳನ್ನು ಆರಿಸುವುದರಲ್ಲಿ ಅನೇಕವಿಧವಾದ ತೊಂದರೆಗಳು ಸಂಭವಿಸಿದುವು. ಆದರೂ ಪಂಡಿತರು ಅವುಗಳಿಗೆಲ್ಲಾ ಗಮನ ಕೊಡದೆ, ತಮ್ಮ ಬುದ್ಧಿಪ್ರತಿಭೆಯಿಂದ ಆ ತೊಂದರೆಗಳನ್ನೆಲ್ಲಾ ಸ್ವಲ್ಪದರಲ್ಲಿಯೇ ದೂರಮಾಡಿ, ಸರ್ವರನ್ನೂ ಏಕಾಭಿಪ್ರಾಯವುಳ್ಳವರನ್ನಾಗಿ ಮಾಡಿದರು. ಅಂದಿನ ಮಹಾಸಭೆಯಲ್ಲಿ ಆನೆಸಿದ್ದಾಪುರಗ್ರಾಮ ಮಠಾಧ್ಯಕ್ಷರಾಗಿದ್ದ ಶ್ರೀತ್ರಿಲೋಚನಾಚಾರ್ಯರೆಂಬವರು ಉತ್ತರಾಧಿಕಾರಕ್ಕೋಸ್ಕರ ಸರ್ವಸಮ್ಮತಿಯಿಂದ ಆರಿಸಲ್ಪಟ್ಟರು. ಪಂಡಿತರು ಸಂಸ್ಥಾನದ ಸಮಸ್ತಸೂತ್ರಗಳನ್ನೆಲ್ಲಾ ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ೫-೬ ದಿವಸಗಳಲ್ಲಿಯೇ ಸಕಲಸಾಮಗ್ರಿಗಳನ್ನೂ ಸಿದ್ಧಪಡಿಸಿ, ಯುವನಾಮಸಂವತ್ಸರದ ಮಾಘ ಶು॥ ೧೦ (ತಾ॥ ೨-೨-೧೯೩೬) ಗುರುವಾರದಿವಸ ಪಟ್ಟಾಧಿಕಾರಮಹೋತ್ಸವವನ್ನು ಅಸಾಧಾರಣವೈಭವದಿಂದ ನೆರವೇರಿಸಿದರು. ಶ್ರೀರಂಭಾಪುರೀಜಗದ್ಗುರುಗಳವರು ಉತ್ತರಾಧಿಕಾರಿಗಳಿಗೆ ಸಕಲಸಂಸ್ಕಾರಗಳನ್ನೆಸಗಿ ಸುವರ್ಣಕಿರೀಟಧಾರಣವನ್ನು



ಶ್ರೀಜಗದ್ಗುರು ಉಜ್ಜಯಿನೀಧರ್ಮಪೀಠದ ಮಹಾದ್ವಾರ.




ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ
ಶ್ರೀಜಗದ್ಗುರು ಸಿದ್ಧೇಶ್ವರಶಿವಾಚಾರ್ಯಮಹಾಸ್ವಾಮಿಗಳವರು.

ಮಾಡಿ ಅವರಿಗೆ "**ಶ್ರೀಜಗದ್ಗುರು ಸಿದ್ಧೇಶ್ವರಶಿವಾಚಾರ್ಯರ್**" ಎಂಬ ಪವಿತ್ರಾಭಿಧಾನವನ್ನಿಟ್ಟರು. ಅಧಿಕಾರಸಮಯದಲ್ಲಿ ಭರತಖಂಡದ ನಾನಾಭಾಗಗಳಿಂದ ೨೫ ಸಾವಿರದವರೆಗೆ ಜನರು ಸಮ್ಮಿಲಿತರಾಗಿದ್ದರು. ಅಧಿಕಾರವ್ಯವಸ್ಥೆಗಾಗಿ ಬಳ್ಳಾರಿ ಡಿ|| ಕೂಡ್ಲಿಗಿ ತಾಲೂಕಿನ ಎಲ್ಲ ಸರಕಾರಿ ಅಧಿಕಾರಿಗಳೂ ಆಗಮಿಸಿದ್ದರು. ಎಲ್ಲಿ ನೋಡಿದೊಡಲ್ಲಿ ಆನಂದವೇ ಆನಂದವಾಗಿ ಹೋಗಿದ್ದಿತು. ಎತ್ತ ನೋಡಿದರೂ ಈ ವೈಭವಕ್ಕೆಲ್ಲಾ ಮೂಲಕಾರಣೀಭೂತರಾದ ಪಂಡಿತರ ಪವಿತ್ರನಾಮ ಸ್ಮರಣವೇ ಸ್ಮರಣವಾಗಿತ್ತು. ಪಂಡಿತರ ಪ್ರಯತ್ನವಿಶೇಷದಿಂದ ಶ್ರೀಜಗದ್ಗುರು ಪಟ್ಟಾಧಿಕಾರಮಹೋತ್ಸವವು ಅಭೂತಪೂರ್ವವಾಗಿ ನೇರವೇರಿ, ಶಿಷ್ಯಕೋಟಿಗೆಲ್ಲಾ ಪರಮಾನಂದವನ್ನುಂಟುಮಾಡಿತು. ಪಂಡಿತರು ಒಮ್ಮಿಂದೊಮ್ಮೆಲೆ ಅನಾಯಕವಾಗಿದ್ದ ಉಜ್ಜಯಿನೀ ಧರ್ಮಪೀಠವನ್ನು ಸನಾಯಕವನ್ನಾಗಿಮಾಡಿ ಶ್ರೀದಾರುಕನ ಪೂರ್ಣಾ ನುಗ್ರಹಕ್ಕೆ ಪಾತ್ರರಾದರು.

ಶ್ರೀಮದುಜ್ಜಯಿನೀಸದ್ಧರ್ಮಸಿಂಹಾಸನಾಧೀಶ್ವರ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಆಶ್ರಯದಲ್ಲಿ ೧೯೨೬ ನೆಯ ಇಸ್ವಿಯಲ್ಲಿ, ಪಂಡಿತರು ಉಜ್ಜಯಿನೀಕ್ಷೇತ್ರದಲ್ಲಿ ೫ ನೆಯ ಪಟ್ಟಚರಾಧಿಕಾರಿಗಳ ಸಮ್ಮೇಲನವನ್ನು ನೆರವೇರಿಸಿದರು. ಈ ಸಭೆಗೆ ೫೦ ಸಾವಿರದ ವರೆಗೆ ಜನರು ಸಮ್ಮಿಲಿತರಾಗಿದ್ದರು. ಸಭಾಕಾರ್ಯವು ಅತ್ಯಂತವೈಭವದಿಂದ ನೆರವೇರಿತು. ಆ ಸಮಯದಲ್ಲಿ ಪಂಡಿತರು, ಶ್ರೀಮಜ್ಜಗದ್ಗುರುಪಂಚಾಚಾರ್ಯರ ತತ್ತ್ವಗಳ ಪ್ರಸಾರಕ್ಕಾಗಿ ಪ್ರಿಂಟಿಂಗ್ ಪ್ರೆಸ್ಸಿನ ಮತ್ತು ವರ್ತಮಾನಪತ್ರಿಕೆಯ ಆವಶ್ಯಕತೆಯು ವಿಶೇಷವಾಗಿರುವುದರಿಂದ, ಈ ಮಹಾಕಾರ್ಯಕ್ಕೆ ಸರ್ವರೂ ಸಹಾಯ ಮಾಡಬೇಕೆಂದು ತಮ್ಮ ಅಮೃತಮಯವಾಣಿಯಿಂದ ಪರಿಣಾಮ

ಕಾರವಾದ ಭಾಷಣವನ್ನು ಮಾಡಿದರು. ತತ್‌ಕ್ಷಣವೇ ೨೫ ಸಾವಿರ ರೂಪಾಯಿಗಳ ವಾಗ್ದಾನವಾಯಿತು. ಆ ಮೇಲೆ ಪಂಡಿತರು ವಾಗ್ದಾನ ಮಾಡಿದವರ ಗ್ರಾಮಗಳಿಗೆಲ್ಲಾ ಸ್ವತಃ ಹೋಗಿ ಬಹುಕಷ್ಟಪಟ್ಟು, ಎಲ್ಲ ಹಣವನ್ನೂ ಒತ್ತಟ್ಟಿಗೆ ಶೇಖರಿಸಿದರು. ಅನಂತರ ಪ್ರಿಂಟಿಂಗ್ ಪ್ರೆಸ್ಸಿನ ಸ್ಥಾಪನೆಗೆ ಮೈಸೂರುರಾಜಧಾನಿಯೇ ಯೋಗ್ಯಸ್ಥಾನವೆಂದು ಯೋಚಿಸಿ, ಮತಸ್ಥಾಪನಾಚಾರ್ಯರ ಪವಿತ್ರಾಭಿಧಾನದಿಂದ ಮೈಸೂರು ರಾಜಧಾನಿಯಲ್ಲಿ ಪ್ರಭವನಾಮಸಂವತ್ಸರದ ವೈಶಾಖ ಶುದ್ಧ ೫ (ತಾ॥ ೧೬-೫-೧೯೨೭) ಶುಭದಿವಸ **"ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್"** ಎಂಬ ಹೆಸರಿನಿಂದ ಬಹುದೊಡ್ಡದಾದ ಮುದ್ರಣಾಲಯವನ್ನು ಸ್ಥಾಪಿಸಿದರು. ಈ ಶುಭದಿವಸವೇ ಪಂಡಿತರ ಪ್ರಯತ್ನ ವಿಶೇಷದಿಂದ ಗುರುವರ್ಗದ ಉದ್ಧಾರಕ್ಕಾಗಿ "**ಪಂಚಾಚಾರ್ಯಪ್ರಭಾ**" ಎಂಬ ವರ್ತಮಾನಪತ್ರವೂ ಸಹ ಪ್ರಾದುರ್ಭವಿಸಿತು.

ಅನಂತರ ಪಂಡಿತರು ವೀರಶೈವಮತದ ಪ್ರಾಚೀನ ಮತ್ತು ಅರ್ವಾಚೀನಗ್ರಂಥಗಳನ್ನು ಮುದ್ರಿಸಿ ವೀರಶೈವಜಗತ್ತಿಗೆಲ್ಲಾ ಮಹೋಪಕಾರವನ್ನು ಮಾಡಬೇಕೆಂದು ನೆನೆದು, ೧೯೨೯ ನೆಯ ಇಸ್ವಿಯಲ್ಲಿ "**ಶ್ರೀಕಾಶೀನಾಥ ಗ್ರಂಥಮಾಲಾ**" ಎಂಬ ಹೆಸರಿನಿಂದ ಗ್ರಂಥಮಾಲೆಯೊಂದನ್ನು ಏರ್ಪಡಿಸಿದರು. ಈ ಗ್ರಂಥಮಾಲೆಯಲ್ಲಿ ಇಂದಿನವರೆಗೆ ೩೦ ಮತಗ್ರಂಥಗಳು ಮುದ್ರಿತಗಳಾಗಿದ್ದು, ಇನ್ನೂ ಅನೇಕ ಮಹಾಮಹಾಮತಗ್ರಂಥಗಳು ಮುದ್ರಣವಾಗುತ್ತಿರುವುವು. ಶ್ರೀಕಾಶೀನಾಥಗ್ರಂಥಮಾಲೆಯಲ್ಲಿ "**ಶಿವಾದ್ವೈತಮಂಜರಿ**" ಎಂಬ ಮಹಾಗ್ರಂಥವು ಪ್ರಕಟವಾಗಿರುವುದು. ಇದರಲ್ಲಿ ೧೩೪೦ ಪುಟಗಳಿರುವುವು. ಇಂತಹ ದೊಡ್ಡಗ್ರಂಥವು ಕನ್ನಡಭಾಷೆಯಲ್ಲಿ ಈ ವರೆಗೆ ಎಲ್ಲಿಯೂ ಮುದ್ರಿತವಾಗಿಲ್ಲವೆಂದರೆ ಅತಿಶಯೋಕ್ತಿಯೆನಿಸಲಾರದು.



ಮೈಸೂರು ರಾಜಧಾನಿಯಲ್ಲಿರುವ
ಶ್ರೀ ಪಂಚಾಚಾರ್ಯ ವಿದ್ಯುನ್ಮುದ್ರಣಮಂದಿರ.

ಪಂಡಿತರು ಈ ಮಹಾಗ್ರಂಥಮುದ್ರಣಕ್ಕಾಗಿ ವಿಶೇಷದ್ರವ್ಯವನ್ನು ವ್ರಯಮಾಡಿರುವರು. ಶ್ರೀಮನ್ಮಹಾರಾಜಾಧಿರಾಜ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ಈ ಮಹಾಗ್ರಂಥದ ಯೋಗ್ಯತೆಯನ್ನು ಕಂಡು ಡೆಡಿಕೇಷನ್ನಿಗೆ ಅಪ್ಪಣೆಯನ್ನಿತ್ತುದಲ್ಲದೆ, ಈ ಮಹಾಗ್ರಂಥದಲ್ಲಿ ನಿಯೋಜಿಸುವುದಕ್ಕೋಸ್ಕರ ತಮ್ಮ ಭವ್ಯವಾದ ಭಾವಚಿತ್ರವನ್ನು ಸಹ ದಯಪಾಲಿಸಿ, ಪಂಡಿತರ ಮನಸ್ಸಿಗೆ ಪರಮಾನಂದವನ್ನುಂಟುಮಾಡಿದರು. ಇದೇ ರೀತಿಯಾಗಿ ಈ ಗ್ರಂಥಮಾಲೆಯಲ್ಲಿ ಅನೇಕಸರ್ವೋತ್ತಮಗ್ರಂಥಗಳು ಪಂಡಿತರ ಪ್ರಯತ್ನವಿಶೇಷದಿಂದ ಪ್ರಕಟವಾಗಿವೆ. ಪಂಡಿತರು ಈ ಗ್ರಂಥಪ್ರಸಾರಕಾರ್ಯಕ್ಕಾಗಿ ಕೆಲಜನ ಸ್ವಮತಪರಮತಪಂಡಿತರನ್ನಿಟ್ಟು, ಈ ಮಹಾಕಾರ್ಯವನ್ನು ಅವಿಚ್ಛಿನ್ನವಾಗಿ ನಡೆಯಿಸುತ್ತಿರುವರು. ಪಂಡಿತರು ಮೊದಲಿನಿಂದಲೂ ಧರ್ಮಸುಧಾರಣೆಗಾಗಿ ಅನೇಕ ಸಂಸ್ಕೃತ ಮತ್ತು ಕನ್ನಡಗ್ರಂಥಗಳನ್ನು ರಚಿಸಿರುವರಲ್ಲದೆ, ಈಗಲೂ ತಮಗೆ ದೊರೆತ ಸಮಯದಲ್ಲಿ ಗ್ರಂಥಗಳನ್ನು ರಚಿಸುತ್ತಿರುವರು. ಇವರು ವಿಶೇಷವಾಗಿ ಗ್ರಂಥಶೋಧನೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವರು. ಪಂಡಿತರು "**ಸಿದ್ಧಾಂತಶಿಖಾಮಣಿ**" ಎಂಬ ಗ್ರಂಥರತ್ನವನ್ನು ಚೆನ್ನಾಗಿ ಪರಿಶೋಧಿಸಿ, ಈ ಗ್ರಂಥರತ್ನಕ್ಕೆ ಸರ್ವೋತ್ತಮವಾದ ಕನ್ನಡಟೀಕೆಯನ್ನು ಬರೆದಿರುವರು. ಸದ್ಯಃ ಈ ಗ್ರಂಥವು ಮುದ್ರಣದಲ್ಲಿದ್ದು, ಇನ್ನು ಸ್ವಲ್ಪದಿವಸಗಳಲ್ಲಿಯೇ ಪ್ರಕಟವಾಗುವುದು. ಈ ರೀತಿಯಾಗಿ ಪಂಡಿತರು ತಮ್ಮ ಆಯುಸ್ಸನ್ನೆಲ್ಲಾ ಕೇವಲ ಧರ್ಮಸುಧಾರಣೆಗಾಗಿಯೇ ವೆಚ್ಚಮಾಡುತ್ತಿರುವರು.

ಪ್ರಾಚೀನಕಾಲದಲ್ಲಿ ವಿಶೇಷವೈಭವದಿಂದ ಮೆರೆದು ಚಕ್ರವರ್ತಿಗಳಿಂದಲೂ, ಮಹಾರಾಜಾಧಿರಾಜರಿಂದಲೂ ಪೂಜೆಗೊಂಡಿದ್ದ ಪಂಚಪೀಠಗಳು, ಕಾಲಮಹಿಮೆಯಿಂದ ಮೂಲೆಗುಂಪಾಗಿದ್ದುದನ್ನು ಕಂಡು

ಪಂಡಿತರು ಈ ಧರ್ಮಪೀಠಗಳ ವೈಭವಜ್ಯೋತಿಯು ದಶದಿಕ್ಕುಗಳನ್ನು ವ್ಯಾಪಿಸುವಂತೆ ಮಾಡಬೇಕೆಂದು ಸಂಕಲ್ಪಿಸಿ, ಈ ಕಾರ್ಯದಲ್ಲಿಯೇ ತಮ್ಮ ಶರೀರವನ್ನು ಸವಿಸಹತ್ತಿರುವರು. ಪಂಡಿತರು ಈ ವರೆಗೆ ಮಾಡಿದ ಪ್ರಯತ್ನವಿಶೇಷದಿಂದ ಆಚಾರ್ಯರ ಪವಿತ್ರಚರಿತ್ರಗಳು ಸರ್ವತ್ರ ಪ್ರಕಾಶಕ್ಕೆ ಬಂದವು. ಆಚಾರ್ಯರ ಸ್ತುತಿಗಳು ಪ್ರಪಂಚವನ್ನೆಲ್ಲ ವ್ಯಾಪಿಸಿದುವು. ಚಿಕ್ಕಚಿಕ್ಕ ಹಳ್ಳಿಗಳಲ್ಲಿಯೂ, ದೊಡ್ಡದೊಡ್ಡ ಪಟ್ಟಣಗಳಲ್ಲಿಯೂ ಆಚಾರ್ಯರ ಹೆಸರಿನಿಂದ ಭಜನಾಸಂಘಗಳೂ, ವಾಚನಾಲಯಗಳೂ, ಪಾಠಶಾಲೆಗಳೂ, ಗ್ರಂಥಮಾಲೆಗಳೂ ಸ್ಥಾಪಿಸಲ್ಪಟ್ಟವು. ಆಚಾರ್ಯರ ಭಾವಚಿತ್ರಗಳು ಪ್ರತಿಯೊಬ್ಬರ ಮನೆಯಲ್ಲಿಯೂ ವಿರಾಜಿಸಹತ್ತಿದವು. ಸೇತುಶೀತಾಚಲಪರ್ಯಂತವಾಗಿ ಸಕಲನಗರಗ್ರಾಮಗಳಲ್ಲಿಯೂ ಆಚಾರ್ಯರ ಜಯಂತಿಗಳು ಬಹು ಉತ್ಸಾಹದಿಂದ ನೆರವೇರಲು ಪ್ರಾರಂಭವಾದುವು. ಚಿಕ್ಕಮಕ್ಕಳ ನಾಲಗೆಯ ಮೇಲೂ ಸಹ ಆಚಾರ್ಯರ ಪವಿತ್ರನಾಮಗಳು ನರ್ತನಮಾಡಹತ್ತಿದವು. ಕುಳಿತರೂ, ನಿಂತರೂ, ಮಲಗಿದರೂ ಎತ್ತನೋಡಿದೊಡತ್ತ ಜಗತ್ತಿನಲ್ಲಿ ಆಚಾರ್ಯರ ನಾಮಸಂಕೀರ್ತನವೇ ಕೇಳಿಸಹತ್ತಿತು. ಆಚಾರ್ಯಪೀಠಗಳ ಪ್ರಾಚೀನತ್ವವು ಹೊರಹೊರಟು ಇಡೀ ಜಗತ್ತನ್ನೇ ದಂಗುಬಡಿಸಿತು. ಆಚಾರ್ಯಪೀಠಗಳಲ್ಲಿದ್ದ ಪ್ರಾಚೀನಶಾಸನಗಳು ಹೊರಬಿದ್ದವು. ಪಂಚಪೀಠಾಧಿಪತಿಗಳ ಸಂಚಾರವು ಜಗತ್ತಿನಲ್ಲಿ ಅತ್ಯಂತ ವೈಭವದೊಡನೆ ಸುಲಲಿತವಾಗಿ ಸಾಗಹತ್ತಿತು. ರಾಜಾಧಿರಾಜರೂ ಸಹ ಆಚಾರ್ಯಪೀಠಗಳನ್ನು ಸಂದರ್ಶಿಸಿ ಧನ್ಯರಾಗುವ ಪ್ರಸಂಗವು ಪ್ರಾಪ್ತವಾಯಿತು. ಪರಮತೀಯರೂ ಸಹ ಈ ಧರ್ಮಪೀಠಗಳಲ್ಲಿ ಭಕ್ತಿಯನ್ನಿಟ್ಟು ವರ್ತಿಸುವ ಸಮಯವೊದಗಿತು. ಇಷ್ಟಕ್ಕೆಲ್ಲಾ ಆಚಾರ್ಯರ ಅಪರಾವತಾರಿಗಳೆಂದು ಲೋಕವಿಖ್ಯಾತರಾಗಿರುವ

ಪಂಡಿತರ ಅವ್ಯಾಹತಪ್ರಯತ್ನವೇ ಮೂಲಕಾರಣವಾಗಿರುವುದೆಂಬ ಜಗತ್ಪ್ರಸಿದ್ಧ ವಿಷಯವನ್ನು ಬರೆಯಲು ಯಾವ ಗುರುಭಕ್ತನಿಗೆ ಸಂತೋಷವೆನಿಸಲಿಕ್ಕಿಲ್ಲ ?

ಇವೇ ಮೊದಲಾದ ಇನ್ನೂ ಅನೇಕಾನೇಕ ಮಹಾಕಾರ್ಯಗಳು ಪಂಡಿತರ ಜೀವಮಾನದಲ್ಲಿ ನೆರವೇರಿವೆ. ಅವುಗಳನ್ನೆಲ್ಲಾ ಇಲ್ಲಿ ವಿಸ್ತರಿಸುತ್ತ ಹೋದರೆ ಲೇಖವು ಬೆಳೆಯುತ್ತಹೋಗುವುದೆಂಬ ಭಾವನೆಯಿಂದಲೂ, ಪಂಡಿತರ ಸಂಪೂರ್ಣಜೀವನಚರಿತ್ರವು ಇನ್ನು ಕೆಲವು ದಿವಸಗಳಲ್ಲಿಯೇ ದೊಡ್ಡ ಗ್ರಂಥರೂಪವಾಗಿ ಮುದ್ರಿಸಲ್ಪಡುವುದ ರಿಂದಲೂ ಇಲ್ಲಿಗೆ ಈ ವಿಷಯವನ್ನು ವಿರಮಿಸುವುದಾಗುತ್ತದೆ.

ಇಲ್ಲಿಯವರೆಗೆ ನಾನು ಸಂಕ್ಷೇಪವಾಗಿ ವಿವರಿಸಿದ ಪಂಡಿತರ ಪವಿತ್ರ ಜೀವನಚರಿತ್ರವನ್ನು ಓದಿನೋಡಿ ವಾಚಕರು ಪರಮಾನಂದ ಭರಿತರಾಗಿರಬಹುದು; ಪಂಡಿತರ ಭಾಷಣಗಳನ್ನೆಲ್ಲಾ ಪೂರ್ತಿಯಾಗಿ ಓದಿದ ಮೇಲಂತೂ, ವಾಚಕರಿಗಾಗುವ ಆನಂದವನ್ನು ವರ್ಣಿಸಲು ಈ ಲೇಖನಿಯು ಸಮರ್ಥವಾಗಲಾರದು. ಲಿಂಗಧಾರಿಗಳಾದ ಪ್ರತಿ ಯೊಬ್ಬರೂ ಈ ಭಾಷಣಗಳನ್ನು ಸಮಗ್ರವಾಗಿ ಓದಿನೋಡಿ ಧನ್ಯ ರಾಗಬೇಕೆಂದಾಶಿಸುತ್ತೇನೆ.

ಗುರುಭಕ್ತಕೇಸರಿ.

ಹಮ್ಮಿಗಿ.

ವಿಷಯಾನುಕ್ರಮಣಿಕೆ.

೧ ನೆಯ ಭಾಗ

೫ ನೆಯ ಭಾಗ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಮೈಸೂರು ರಾಜಧಾನಿಯಲ್ಲಿ ವಿಭವಸಂವತ್ಸರದ ವೈಶಾಖ ಶು|| ೫ (ತಾ|| ೨-೪-೧೯೨೮) ದಿವಸ ನೆರವೇರಿದ

ಶ್ರೀಜಗದ್ಗುರುದಾರುಕಜಯಂತೀಮಹೋತ್ಸವ ಸಮಯದಲ್ಲಿ

ನಾಗನೂರು ಬೃಹನ್ಮಠಾಧ್ಯಕ್ಷರಾದ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ

ಭಾಷಣ

ಪಂಚಾನನತನೂದ್ಭೂತಾನ್ ಪಂಚಾಕ್ಷರಮನೂಪಮಾನ್ ।
ಪಂಚಸೂತ್ರಕೃತೋ ವಂದೇ ಪಂಚಾಚಾರ್ಯಾನ್ ಜಗದ್ಗುರೂನ್ ॥

ಸಭಿಕಮಹಾಶಯರೇ !

ವೀರಶೈವಮತಸ್ಥಾಪಕಶ್ರೀಮತ್ಪಂಚಾಚಾರ್ಯರಲ್ಲೊಬ್ಬರಾದ ಶ್ರೀಜಗದ್ಗುರುದಾರುಕಾಚಾರ್ಯರ ಜಯಂತೀಮಹೋತ್ಸವದಿಂದ ಪರಮಪವಿತ್ರವೆನಿಸಿದ ಈ ವಿಭವಸಂವತ್ಸರದ ವೈಶಾಖ ಶುದ್ಧ ೫ ಶುಭದಿವಸದಲ್ಲಿ ನೀವೆಲ್ಲರೂ ಅತ್ಯಂತಗುರುಭಕ್ತಿಯುತರಾಗಿ, ಗುರುಮಹತ್ತ್ವವನ್ನೂ, ಆ ಗುರುಪುಂಗವರಿಂದ ಸ್ಥಾಪಿಸಲ್ಪಟ್ಟ ವೀರಶೈವಮತದ ಪ್ರಾಶಸ್ತ್ಯವನ್ನೂ ತಿಳಿಯಬೇಕೆಂಬ ಕುತೂಹಲದಿಂದ ಇಲ್ಲಿ ಸಮ್ಮಿಲಿತರಾಗಿರುವದನ್ನು ನೋಡಿದರೆ ಅತ್ಯಂತಸಂತೋಷವೆನಿಸುತ್ತದೆ.

ನಿಮ್ಮೆಲ್ಲರ ಅಭಿಪ್ರಾಯದಂತೆ ಈ ಮತದ ಪ್ರಾಶಸ್ತ್ಯವನ್ನು ಸಂಕ್ಷೇಪ ವಾಗಿ ವಿವರಿಸುತ್ತೇನೆ. ನಾನು ಪ್ರತಿಪಾದಿಸುವ ಮಹತ್ತ್ವವಿಷಯ ಗಳನ್ನು ಸರ್ವರೂ ಶಾಂತಚಿತ್ತದಿಂದ ಕೇಳಿ ಧನ್ಯರಾಗಬೇಕೆಂದು ಇಚ್ಛಿಸುತ್ತೇನೆ.

ಪರಮಪವಿತ್ರವಾದ ವೀರಶೈವಮತವನ್ನು ಜಗದಾದಿಯಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರು ಸ್ಥಾಪಿಸಿರುವ ವಿಷಯವು ಶಿವಾ ಗಮಾದಿಗಳಲ್ಲಿ ಘಂಟಾಘೋಷವಾಗಿ ಹೇಳಲ್ಪಟ್ಟಿರುವುದು. ಈ ಪೂಜ್ಯ ಪಾದರು ಪರಮೇಶ್ವರನ ಅಪ್ಪಣೆಯ ಮೇರೆಗೆ ಅಖಿಲಭೂಮಂಡಲದಲ್ಲಿ ಶಿವಭಕ್ತಿಯನ್ನು ಪ್ರಚಾರಪಡಿಸುವುದಕ್ಕೋಸ್ಕರ, ಕೈಲಾಸದಿಂದ ದಿವ್ಯದೇಹಧಾರಿಗಳಾಗಿ ಈ ಭೂಮಂಡಲದಲ್ಲಿ ಅವತರಿಸಿದರು. ಬಳಿಕ ಈ ಭೂಮಂಡಲದ ಸಕಲಭಾಗಗಳಲ್ಲಿ ಗಗನಮಾರ್ಗದಿಂದ ಸಂಚರಿಸಿ, ನಾಸ್ತಿಕಮತಗಳನ್ನೆಲ್ಲ ಖಂಡಿಸಿ, ಶಿವನೇ ಸರ್ವೋತ್ತಮನೆಂದೂ, ಶಿವನಿಗಿಂತಲೂ ಶ್ರೇಷ್ಠವಾದ ವಸ್ತುವು ಈ ಜಗತ್ತಿನಲ್ಲಿ ಯಾವುದೂ ಇಲ್ಲವೆಂದೂ, ಈ ಅಗಾಧವಾದ ಪ್ರಪಂಚವು ಪರಶಿವನಿಂದಲೇ ಉತ್ಪನ್ನವಾಗಿರುವುದೆಂದೂ, ಪ್ರತಿಯೊಬ್ಬರೂ ಆ ಪರಶಿವನ ಪೂಜಾ ಧಾರಣಧ್ಯಾನಾದಿಗಳಲ್ಲಿಯೇ ಆಸಕ್ತರಾಗಿ ನಿತ್ಯವಾದ ಕೈವಲ್ಯ ಸುಖವನ್ನು ಅನುಭವಿಸಬೇಕೆಂದೂ ಬೋಧಿಸುತ್ತ, ಸರ್ವರ ಹೃದಯ ಭೂಮಿಯಲ್ಲಿ ಶಿವಭಕ್ತಿಬೀಜವನ್ನು ಬಿತ್ತಿದರು. ಈ ಮಹಾತ್ಮರ ಉಪದೇಶಪ್ರಭಾವದಿಂದ ಭರತಖಂಡದಲ್ಲಿ ಶಿವಭಕ್ತಿಯು ಸರ್ವತ್ರ ವ್ಯಾಪಿಸಿತು. ಭರತಖಂಡದಲ್ಲಿ ವಿಶೇಷವಾಗಿ ಶಿವಭಕ್ತಿಯನ್ನು ಪ್ರಚಾರಕ್ಕೆ ತಂದವರು ಈ ಪೂಜ್ಯಪಾದರೇ ಆಗಿರುತ್ತಾರಲ್ಲದೆ, ಬೇರೆ ಯವರು ಆಗಿರುವುದಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಈ ಅಭಿಪ್ರಾಯವನ್ನೇ ಅನೇಕಧರ್ಮಗ್ರಂಥಗಳು ಮುಕ್ತಕಂಠದಿಂದ

ಸಾರುತ್ತಿರುವವು. ಈ ಮಹಾತ್ಮರು ಈ ಭೂಮಂಡಲದಲ್ಲಿದ್ದ ಸಮಯದಲ್ಲಿ ಎಲ್ಲಿ ನೋಡಿದರೂ ಶಿವಭಕ್ತಿಯ ಜಯಜಯಕಾರವೇ! ಎಲ್ಲಿ ನೋಡಿದರೂ ಶಿವಲಿಂಗಗಳ ಸಂಸ್ಥಾಪನೆಯೇ! ಎಲ್ಲಿ ನೋಡಿದರೂ ಶಿವಪೂಜಾದಿಗಳ ವೈಭವವೇ! ಎಲ್ಲಿ ನೋಡಿದರೂ ಶಿವಮಂತ್ರಜಪಪ್ರಭಾವವೇ ಆಗಿಹೋಗಿದ್ದಿತು. ಇತ್ತೀಚೆಗೆ ಅನೇಕ ಮತಗಳು ಉತ್ಪನ್ನವಾಗಿ, ಶಿವಭಕ್ತಿಯು ಹ್ರಾಸವಾಗುತ್ತ ನಡೆದಿರುವುದೆಂದು ಹೇಳಲು ಬಹುವಿಷಾದವೆನಿಸುತ್ತದೆ. ಭರತಖಂಡದಲ್ಲಿರತಕ್ಕ ಪ್ರತಿಯೊಂದು ನಗರಗ್ರಾಮಗಳಲ್ಲಿಯೂ ಶಿವಮಂದಿರಗಳಿದ್ದಂತೆ, ಇನ್ನಾವ ದೇವತೆಗಳ ಮಂದಿರಗಳೂ ಇದ್ದುದು ಕಂಡುಬರುವುದಿಲ್ಲ. ನಾಲ್ಕುಮನೆಯ ಹಳ್ಳಿಯಲ್ಲಿ ನೋಡಿದರೂ ಶಿವಮಂದಿರಗಳೇ! ಪಟ್ಟಣಗಳಲ್ಲಿ ನೋಡಿದರೂ ಶಿವಮಂದಿರಗಳೇ! ಜನಸಂಚಾರಶೂನ್ಯವಾದ ಅರಣ್ಯಗಳಲ್ಲಿಯೂ ಶಿವಮಂದಿರಗಳೇ! ಗಿರಿಶಿಖರಗಳಲ್ಲಿಯೂ, ಗಹ್ವರಗಳಲ್ಲಿಯೂ ಶಿವಮಂದಿರಗಳೇ! ನದೀತೀರಗಳಲ್ಲಿಯೂ, ನದೀಸಂಗಮಗಳಲ್ಲಿಯೂ ಶಿವಮಂದಿರಗಳೇ! ಎಲ್ಲಿನೋಡಿದೊಡಲ್ಲಿ ಶಿವಮಂದಿರಗಳೇ ಶಿವಮಂದಿರಗಳು! ಆದುದರಿಂದಲೇ ಶ್ರುತಿಗಳು—"**ಧಿಗ್ಭಸ್ಮರಹಿತಂಫಾಲಂ ಧಿಗ್ಗ್ರಾಮಮಶಿವಾಲಯಂ**" ಅಂದರೆ ಭಸ್ಮವಿಲ್ಲದ ಹಣೆಗೂ, ಶಿವಾಲಯವಿಲ್ಲದ ಗ್ರಾಮಕ್ಕೂ ಧಿಕ್ಕಾರವಿರಲೆಂದು ಸಾರಿರುವವು. ಭರತಖಂಡದಲ್ಲಿ ಇಂದಿನವರೆಗೂ ಶಿವಕ್ಷೇತ್ರಗಳಿರುವಷ್ಟು ಇನ್ನಾವ ದೇವತಾಕ್ಷೇತ್ರಗಳೂ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪೂರ್ವಸಮುದ್ರದಿಂದ ಪಶ್ಚಿಮಸಮುದ್ರದವರೆಗಿರತಕ್ಕ ಭೂಮಿಯೆಲ್ಲಾ ಶಿವಮಯವಾಗಿ ಹೋಗಿದೆ. ರಾಮೇಶ್ವರ, ಕಾಶೀ, ಕೇದಾರ, ಶ್ರೀಶೈಲ ಮೊದಲಾದ ಕ್ಷೇತ್ರಗಳಲ್ಲಿ ದ್ವಾದಶಜ್ಯೋತಿರ್ಲಿಂಗಗಳು ಇಂದಿನವರೆಗೂ ಅತ್ಯಂತವೈಭವದಿಂದ ಮೆರೆಯುತ್ತಿರುವವು.

ಭರತಖಂಡದಲ್ಲಿರತಕ್ಕ ಕಾಶೀ-ಶ್ರೀಶೈಲಾದಿ ಸಮಸ್ತ ಸುಪ್ರಸಿದ್ಧ ಶಿವಕ್ಷೇತ್ರಗಳ ಸರ್ವಾಧಿಕಾರವು ಪೂರ್ವದಲ್ಲಿ ವೀರಶೈವಗುರುಪೀಠಗಳ ಸ್ವಾಧೀನದಲ್ಲಿಯೇ ಇದ್ದಿತೆಂದು ಶಾಸನಗಳಿಂದ ಗೊತ್ತಾಗುತ್ತದೆ. ಭರತಖಂಡದಲ್ಲೆಲ್ಲ ಅತ್ಯಂತಖ್ಯಾತಿಯನ್ನು ಹೊಂದಿರುವ ಕಲ್ಕತ್ತಾ ಪಟ್ಟಣದ '**ವಂಗವಾಸಿ**' ಎಂಬ ಹಿಂದೀ ಸಪ್ತಾಹಿಕಪತ್ರಿಕೆಯಲ್ಲಿ ಶಿವಭಕ್ತಿಪ್ರಭಾವದ ಬಗ್ಗೆ ೧೯೧೬ ನೆಯ ಇಸ್ವಿಯಲ್ಲಿ ಆ ಪತ್ರಿಕೆಯ ಸುಪ್ರಸಿದ್ಧಸಂಪಾದಕರು ಒಂದು ಲೇಖವನ್ನು ಪ್ರಕಟಿಸಿ, ಅದರಲ್ಲಿ— ಪೂರ್ವದಲ್ಲಿ ಭರತಖಂಡದೊಳಗೆ ೨೨ ಕೋಟಿಜನ ಶೈವರಿದ್ದರೆಂದೂ, ೩ ಕೋಟಿಜನ ವೀರಶೈವರಿದ್ದರೆಂದೂ, ಕಲಿಕಾಲಪ್ರಭಾವದಿಂದ ಶಿವ ಭಕ್ತಿಯು ಭರತಖಂಡದಲ್ಲಿ ನಷ್ಟವಾಗುತ್ತ ನಡೆದಿದೆ ಎಂದೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮಹಾಶಯರ ಲೇಖನವನ್ನು ಸ್ಮೃತಿಪಥಕ್ಕೆ ತಂದರೆ, ಪ್ರತಿಯೊಬ್ಬರ ಮನಸ್ಸು ವ್ಯಾಕುಲವಾಗಿ ಹೋಗುವಂತಿದೆ. ಇರಲಿ; ಪೂರ್ವದಲ್ಲಿ ಚೋಳ, ನೇಪಾಳ, ಕಾಶ್ಮೀರ, ಉಜ್ಜಯಿನೀ, ಕಾಶೀ ಮೊದಲಾದ ದೇಶಗಳ ಮಹಾರಾಜರು ಲಿಂಗಧಾರಿಗಳಾಗಿದ್ದರೆಂದು ಅನೇಕಾಧಾರಗಳಿಂದ ತಿಳಿದುಬರುತ್ತದೆ. ಆಗಿನ ಕಾಲದ ಮಹಾರಾಜರೇ ವೀರಶೈವಮತವನ್ನವಲಂಬಿಸಿರಲು, ಅವರ ರಾಜ್ಯದಲ್ಲಿ ಎಷ್ಟು ಜನ ವೀರಶೈವರು ವಾಸಮಾಡಿರಬಹುದೆಂಬ ವಿಷಯವನ್ನು ಸಭಿಕರೇ ಊಹಿಸಬಹುದಾಗಿದೆ. ನೇಪಾಳರಾಜ್ಯದಲ್ಲಿ ಈಗಲೂ ಎಷ್ಟೋಜನ ವೀರಶೈವರು ವಾಸವಾಗಿದ್ದಾರೆ. ಕಾಶ್ಮೀರ ದೇಶವಂತೂ ಪೂರ್ವದಲ್ಲಿ ವೀರಶೈವಮಯವಾಗಿದ್ದಿತು. ವೀರಶೈವಮತ ಗ್ರಂಥಗಳಲ್ಲಿ ರತ್ನದಂತೆ ರಾರಾಜಿಸುತ್ತಿರುವ "**ಶಿವಾದ್ವೈತಮಂಜರಿ**" ಎಂಬ ಗ್ರಂಥವನ್ನು ವಿರಚಿಸಿದ **ಸ್ವಪ್ರಭಾನಂದಶಿವಾಚಾರ್ಯರು** ಮತ್ತು ಇವರ ಗುರುಗಳಾಗಿದ್ದ **ನಾಥಾನಂದಶಿವಾಚಾರ್ಯರು**

ಇವರೇ ಮೊದಲಾದ ವೀರಶೈವಾಚಾರ್ಯರು ಕಾಶ್ಮೀರದೇಶೀಯರೇ ಆಗಿರುವರು. ಈಗಲೂ ಅಲ್ಲಿ ಅಸಂಖ್ಯಾಕಜನರು ಜಂಗಮರೆಂಬ ಹೆಸರಿನಿಂದ ವಾಸವಾಗಿದ್ದಾರೆ. ಆದರೆ ಅವರಲ್ಲಿ ಲಿಂಗಧಾರಣವು ಮಾತ್ರ ಕಂಡುಬರುವದಿಲ್ಲ. ಯಾವ ಕಾಲಕ್ಕೆ ಇವರು ಲಿಂಗಧಾರಣ ವನ್ನು ಬಿಟ್ಟಿರುವರೋ ತಿಳಿಯದಾಗಿದೆ. ಕಾಶ್ಮೀರದೇಶವು ಶಿವಭಕ್ತಿಯ ತವರುಮನೆಯಂತಿರುತ್ತದೆ. ಲೋಕಪ್ರಸಿದ್ಧರಾದ ವಸುಗುಪ್ತ, ಅಭಿ ನವಗುಪ್ತ, ಕ್ಷೇಮರಾಜ, ಸೋಮಾನಂದ, ಉತ್ಪಲ, ಮಮ್ಮಟ, ಕೈಯಟ, ಕಲ್ಲಟ, ರುದ್ರಟ ಮೊದಲಾದ ಮಾಹೇಶ್ವರರು ಈ ದೇಶ ದಲ್ಲಿಯೇ ಜನ್ಮವೆತ್ತಿದರು. ಈ ಮಹನೀಯರು ಬರೆದ ಅನೇಕ ಶೈವಗ್ರಂಥಗಳನ್ನು ಈಗಿನ ಕಾಶ್ಮೀರದೇಶದ ಪ್ರಭುಗಳು ಮುದ್ರಣ ಮಾಡಿಸಹತ್ತಿದ್ದಾರೆ. ಸದ್ಯಃ ಎಷ್ಟೋ ದೊಡ್ಡ ದೊಡ್ಡ ಗ್ರಂಥಗಳು ಮುದ್ರಿತವಾಗಿ ಸಿದ್ಧವಾಗಿವೆ. ಈ ಯಾವತ್ತೂ ವಿಷಯಗಳನ್ನು ವಿಚಾರಮಾಡಿನೋಡಿದರೆ, ಪೂರ್ವದಲ್ಲಿ ಭರತಖಂಡವು ಶಿವಮಯ ವಾಗಿತ್ತೆಂದೂ, ಶಿವಮಯವಾಗಲಿಕ್ಕೆ ಶ್ರೀಜಗದ್ಗುರುಪಂಚಾಚಾರ್ಯರು ಮಾಡಿದ ಶಿವಭಕ್ತಿಪ್ರಚಾರವೇ ಮೂಲಕಾರಣವೆಂದೂ ಕಂಡುಬರು ವುದು. ಈ ಮಹನೀಯರು ಬಹುಪುರಾತನಕಾಲದಲ್ಲಿ ಮಾಡಿದ ಶಿವಭಕ್ತಿಪ್ರಚಾರಸಂಬಂಧವು ಕೇವಲ ನಮ್ಮ ಭರತಖಂಡವನ್ನಲ್ಲದೆ, **ಯೂರೋಪ್, ಆಫ್ರಿಕಾ, ಅಮೇರಿಕಾ** ಖಂಡಗಳನ್ನೂ ಕೂಡ ವ್ಯಾಪಿಸಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಯೇಸುಕ್ರಿಸ್ತನ ಜನ್ಮಕ್ಕಿಂತಲೂ ಪೂರ್ವದಲ್ಲಿ ಪಾಶ್ಚಾತ್ಯದೇಶಗಳಲ್ಲಿ ಶಿವಭಕ್ತಿಯು ವಿಶೇಷವಾಗಿ ನೆಲೆಗೊಂಡಿತ್ತೆಂದು ಈಗಲೂ ಅಲ್ಲಿರತಕ್ಕ ಶಿವಾಲಯಗ ಳಿಂದ ಕಂಡುಬರುವುದು. ಪಾಶ್ಚಾತ್ಯದೇಶಗಳಲ್ಲಿ ಶಿವಾಲಯಗಳ ಸ್ಥಾಪನೆಯು ಎಲ್ಲಿ ಬಂದೀತು? ಎಂಬ ಸಂಶಯವು ಕೆಲವರಿಗೆ ಉತ್ಪನ್ನ

ವಾಗಬಹುದು. ನವಖಂಡಗಳನ್ನು ಸೃಷ್ಟಿಸಿದ ಆ ಪರಶಿವನ ಸಂಬಂಧವು ಸರ್ವಖಂಡಗಳಲ್ಲಿಯೂ ಅವಶ್ಯವಾಗಿ ಇರಬೇಕಲ್ಲವೇ? ಈ ವಿಷಯದಲ್ಲಿ ಕಾಶೀಕ್ಷೇತ್ರನಿವಾಸಿಗಳಾದ ಮಿ|| ಬಾಬೂ ಬೇಚೂಸಿಂಹ, ಎಂಬ ಶಿವಭಕ್ತಕ್ಷತ್ರಿಯಮಹಾಶಯರು, ಫ್ರೆಂಚ್‌ದೇಶದ **ಲುಯಿ** ಎಂಬ ಪ್ರಸಿದ್ಧಪುರುಷರು ಬರೆದಿರುವ ಗ್ರಂಥಾಧಾರದಿಂದ ಇಂಥ ಇಂಥ ಸ್ಥಾನಗಳಲ್ಲಿ ಶಿವಾಲಯಗಳಿರುವವೆಂದು, ತಾವು ಬರೆದಿರುವ "**ನಿರ್ಮಾಲ್ಯ ರತ್ನಾಕರ**"ವೆಂಬ ಗ್ರಂಥದ ಪ್ರಸ್ತಾವನೆಯಲ್ಲಿ ಬಹುವಿಶದವಾಗಿ ವರ್ಣಿಸಿರುವರು. ಅವುಗಳಲ್ಲಿ ಕೆಲವನ್ನು ಮಾತ್ರ ಸರ್ವರ ಅವಗಾಹನೆಗಾಗಿ ತಿಳುಹಿಸುತ್ತೇನೆ.

ಉತ್ತರಆಫ್ರಿಕಾಖಂಡಾಂತರ್ಗತವಾದ ಈಜಿಪ್ಟ್‌ದೇಶದಲ್ಲಿ **ಮೆಂಫಿಸ್** ಎಂಬ ಹೆಸರಿನ ಪುಣ್ಯಕ್ಷೇತ್ರವಿರುವುದು. ಆ ಕ್ಷೇತ್ರದಲ್ಲಿ ನಂದಿವಾಹನನೂ, ತ್ರಿಶೂಲ-ಸರ್ಪ-ವ್ಯಾಘ್ರಚರ್ಮಾಂಬರಧಾರಿಯೂ ಆದ ಪರಮೇಶ್ವರನ ವಿಗ್ರಹವೊಂದಿರುವುದು. ಆ ವಿಗ್ರಹವನ್ನು ಅಲ್ಲಿಯ ಜನರು ಬಿಲ್ವವೃಕ್ಷದ ದಳಗಳಂತೆ ಆಕಾರವುಳ್ಳ ದಳಗಳಿಂದ ಪ್ರತಿದಿನವೂ ಪೂಜಿಸುತ್ತಿರುವರಲ್ಲದೆ ಕ್ಷೀರದಿಂದ ಅಭಿಷೇಕವನ್ನೂ ಮಾಡುತ್ತಿರುವರು. ಆ ವಿಗ್ರಹವು ಕಪ್ಪು ಶಿಲೆಯಿಂದ ನಿರ್ಮಿಸಲ್ಪಟ್ಟಿರುವುದು. ಅಲ್ಲಿಯ ಜನರು ಆ ಶಿವವಿಗ್ರಹವನ್ನು **ಅಸಿರಿಸ್** ಎಂದೂ, ಆ ನಂದಿಯನ್ನು **ಏಪಿಸ್** ಎಂದೂ ಕರೆಯುವರು. ಅಲ್ಲದೆ ತುರ್ಕಸ್ಥಾನಕ್ಕೆ ಸೇರಿದ **ಬಾಬಿಲೋನ್** ಎಂಬ ಪಟ್ಟಣದಲ್ಲಿ ೧೨೦೦ ಘನಹಸ್ತ ಎತ್ತರವುಳ್ಳ ಒಂದು ಶಿವಲಿಂಗವಿರುವುದು. **ಹೆಡ್ರಾಪೋಲೀಸ್** ಪಟ್ಟಣದಲ್ಲಿ ಅತಿ ವಿಶಾಲವಾದ ಒಂದು ಶಿವಮಂದಿರವಿದ್ದು, ಅದರಲ್ಲಿ ೩೦೦ ಘನಹಸ್ತ ಎತ್ತರವಿರುವ ಶಿವಲಿಂಗವಿರುವುದು. ಮುಸಲ್ಮಾನರಿಗೆ ಪರಮಪವಿತ್ರ ಯಾತ್ರಾಸ್ಥಳವಾದ **ಮಕ್ಕಾ** ಕ್ಷೇತ್ರದಲ್ಲಿಯೂ ಸಹ, **ಮಕ್ಕೇಶ್ವರ**

ನಾಮಕವಾದ ಶಿವಲಿಂಗವಿರುವದು. ಆ ದೇಶದಲ್ಲಿರುವ ಮುಹಮ್ಮದೀಯರು ಆ ಲಿಂಗವನ್ನು "**ಅಸವದ್**" ಎಂಬ ಹೆಸರಿನಿಂದ ಕರೆಯುತ್ತಿರುವರು. ಇದಲ್ಲದೆ ಈ ಮಕ್ಕಾಕ್ಷೇತ್ರದಲ್ಲಿರುವ **ಜಮ್‌ಜಮ್** ಎಂಬ ಹೆಸರಿನ ಬಾವಿಯಲ್ಲಿ ಒಂದು ಶಿವಲಿಂಗವಿರುವುದು. ಆ ಶಿವಲಿಂಗವನ್ನು ಅಲ್ಲಿಯ ಜನರು ಖರ್ಜೂರವೃಕ್ಷದ ಪತ್ರಗಳಿಂದ ಪೂಜಿಸುವರು.* ದಕ್ಷಿಣ ಅಮೇರಿಕಾಖಂಡಕ್ಕೆ ಸೇರಿದ **ಬ್ರೈಜಿಲ್**‌ದೇಶದಲ್ಲಿ ಅತ್ಯಂತ ಪ್ರಾಚೀನವಾದ ಅನೇಕಶಿವಲಿಂಗಗಳೂ ವಿಘ್ನೇಶ್ವರನ ಮೂರ್ತಿಗಳೂ ಇರುವುವು. ಯೂರೋಪ್‌ಖಂಡಾಂತರ್ಗತ **ಗ್ರೀಸ್**‌ದೇಶದಲ್ಲಿ ಅನೇಕ ಶಿವಲಿಂಗಮೂರ್ತಿಗಳಿರುವವು. **ಕಾರಿಂಥ್** ಪಟ್ಟಣದಲ್ಲಿ **ಪಾರ್ವತೀ** ದೇವಿಯ ಮಂದಿರವಿರುವುದು. **ಇಟಲೀ**ದೇಶದಲ್ಲಿ ರೋಮನ್‌ಕ್ಯಾಥೋಲಿಕ್‌ಪಂಥದ ಕ್ರೈಸ್ತಮತಾವಲಂಬಿಗಳು ಇಂದಿನವರೆಗೂ ಶಿವಲಿಂಗಗಳನ್ನು ಪೂಜಿಸುತ್ತಿರುವರು. **ಸ್ಕಾಟ್ಲೆಂಡ್**‌ದೇಶದ **ಗ್ಲಾಸ್ಗೋ** ಪಟ್ಟಣದಲ್ಲಿ ಒಂದು ಶಿವಲಿಂಗಮೂರ್ತಿಯಿರುವದು. ಈ ಶಿವಲಿಂಗ ಮೂರ್ತಿಯು ಸುವರ್ಣಕವಚದಿಂದ ಆಚ್ಛಾದಿತವಾಗಿರುವುದು. ಅಲ್ಲಿಯ ಜನರು ಈ ಮೂರ್ತಿಯನ್ನು ಅತ್ಯಂತಭಕ್ತಿಯಿಂದ ಪೂಜಿಸುತ್ತಿರುವರು.

---

* ಮುಹಮ್ಮದಪೈಗಂಬರನಿಗಿಂತಲೂ ಪೂರ್ವದಲ್ಲಿ ಅರಬ್ಬಿಯರು "**ಲಾತ್**" ಎಂಬ ಹೆಸರಿನ ಲಿಂಗವನ್ನು ಪೂಜಿಸುತ್ತಿದ್ದರೆಂದೂ, ಈ ಲಿಂಗವು ೫೦ ಪುರುಷ ಪ್ರಮಾಣ ಎತ್ತರವಾಗಿದ್ದು ಒಂದೇ ಶಿಲೆಯಿಂದ ನಿರ್ಮಿತವಾಗಿತ್ತೆಂದೂ, ಈ ಮಹಾಲಿಂಗವು ಅನೇಕಕೋಟಿರೂಪಾಯಿ ಬೆಲೆಬಾಳುವ ಮಹಾಮಹಾರತ್ನಗಳಿಂದ ಅಲಂಕೃತವಾಗಿತ್ತೆಂದೂ, ಈ ಲಿಂಗದ ಅದ್ಭುತದೇವಾಲಯವು ೫೬ ಬಂಗಾರದ ಕಂಬಗಳಿಂದ ವಿರಾಜಿಸುತ್ತಿತ್ತೆಂದೂ, ಈ ರೀತಿಯಾಗಿ ಅಸಾಧಾರಣವೈಭವದಿಂದ ಕೂಡಿದ ದೇವಾಲಯವನ್ನು ಗಜನಿಮಹಮ್ಮದನು ಲೂಟಿಮಾಡಿ, ಶಿವಲಿಂಗವನ್ನು ಧ್ವಂಸಮಾಡಿದನೆಂದೂ **ಕರ್ನಲ್‌ಟಾಡ್**‌ರವರು (Tod's Rajasthan) ಎಂಬ ಪುಸ್ತಕದಲ್ಲಿ ಬರೆದಿರುತ್ತಾರೆ.

ಫ್ರೀಜಿಯರ್ದೇಶದಲ್ಲಿ **ಏಟಿಸ್** ಎಂಬ ಹೆಸರಿನ ಶಿವಲಿಂಗವಿರುವದು. **ನಿನಿವಾ** ಎಂಬ ಪಟ್ಟಣದಲ್ಲಿ **ಏಷೀರ್** ಎಂಬ ಹೆಸರಿನ ವಿಶಾಲವಾದ ಲಿಂಗಮೂರ್ತಿಯಿರುವದು. **ಯಹೂದೀ**ದೇಶದಲ್ಲಿ ಇಂದಿನವರೆಗೂ ಅನೇಕಾನೇಕಶಿವಲಿಂಗಮೂರ್ತಿಗಳು ಪರಿಶೋಭಿಸುತ್ತಿರುವವು. **ಅಫರೀದಿಸ್ಥಾನ್, ಚಿತ್ರಾಲ, ಕಾಬೂಲ್, ಬಲಖ್, ಬುಖಾರ** ಮೊದಲಾದದೇಶಗಳಲ್ಲಿ ಅನೇಕಶಿವಲಿಂಗಮೂರ್ತಿಗಳಿರುವವು. ಅಲ್ಲಿಯ ಜನರು ಈ ಲಿಂಗಮೂರ್ತಿಗಳನ್ನು **ಪಂಚಶೇರ** ಮತ್ತು **ಪಂಚವೀರ** ಎಂಬ ಹೆಸರಿನಿಂದ ಕರೆಯುತ್ತಿರುವರು.

ಈ ಯಾವತ್ತು ವಿಷಯಗಳನ್ನು ಪರ್ಯಾಲೋಚಿಸಿ ನೋಡಿದರೆ, ಪೂರ್ವಕಾಲದಲ್ಲಿ ಸಮಸ್ತಪ್ರಪಂಚದಲ್ಲೆಲ್ಲ ಶಿವಭಕ್ತಿಯು ವಿಶೇಷವಾಗಿ ಪ್ರಚಾರವಾಗಿತ್ತೆಂದೂ, ಈ ಅಖಂಡಪ್ರಚಾರಕ್ಕೆ ಸಾಕ್ಷಾದ್ಭಗವತ್ಸ್ವರೂಪರಾದ ಶ್ರೀಜಗದ್ಗುರುಪಂಚಾಚಾರ್ಯರೇ ಮೂಲಕಾರಣೀಭೂತರಾಗಿದ್ದರೆಂದೂ ನಿಸ್ಸಂಶಯವಾಗಿ ಹೇಳಬಹುದಾಗಿದೆ. ಆದುದರಿಂದಲೇ ಸುಪ್ರಭೋದಾಗಮದಲ್ಲಿ ಪರಶಿವನು ಪಾರ್ವತಿಯ ಮುಂದೆ—

ತಸ್ಮಾತ್ತಸ್ಮಾಚ್ಚ ಗಿರಿಜೇ ಪಂಚಾನನಸಮುದ್ಭವಾಃ ।
ಮದಾದಿಸರ್ವಲೋಕಾನಾಂ ಜಗದ್ಗುರುವರೋತ್ತಮಾಃ ॥

ಓ ಪಾರ್ವತಿಯೇ! ಶ್ರೀಮತ್ಪಂಚಾಚಾರ್ಯರು ನನ್ನ ಲೋಕವೇ ಮೊದಲ್ಗೊಂಡು ಹದಿನಾಲ್ಕು ಲೋಕಗಳಿಗೂ ಸಹ ಜಗದ್ಗುರುಗಳಾಗಿರುತ್ತಾರೆಂದು ಉಪದೇಶಿಸಿರುತ್ತಾನೆ. ಈ ಪ್ರಕಾರವಾಗಿ ಸಕಲಭುವನಗುರುತ್ವವನ್ನುಪಡೆದ ಶ್ರೀಜಗದ್ಗುರು ಪಂಚಾಚಾರ್ಯರು ಭೂಮಂಡಲದಲ್ಲೆಲ್ಲ ಸಂಚರಿಸಿ, ಶಿವಭಕ್ತಿಯನ್ನು ಸಂಪೂರ್ಣವಾಗಿ ನೆಲೆಗೊಳಿಸಿದರು. ಈ ಭಗವತ್ಪಾದರು ಪ್ರತಿಯೊಂದು ಯುಗದಲ್ಲಿಯೂ



ಶ್ರೀಜಗದ್ಗುರುಪಂಚಾಚಾರ್ಯರ
ಲಿಂಗಾವತಾರ.

ಅವತರಿಸಿ ಶಿವಸಿದ್ಧಾಂತವನ್ನು ಸ್ಥಾಪಿಸಿರುವರು.* ಈ ಮಹನೀಯರ ಕಾಲನಿರ್ಣಯವನ್ನು ಮಾಡಲು ಯಾರಿಗೂ ಸಾಧ್ಯವಿಲ್ಲ. ಏಕೆಂದರೆ—ವಿಷ್ಣುಬ್ರಹ್ಮಾದಿದೇವತೆಗಳಿಗೂ ಸಹ ಈ ಆಚಾರ್ಯರೇ ಲಿಂಗಧಾರಣ,

---

* ಜಗತ್ಪ್ರಸಿದ್ಧರಾದ **ಮಿ|| ಜೆ. ಎನ್. ಫಾರ್ಕುಹಾರ್** ಎಂ.ಎ., ಡಿ.ಲಿಟ್., ಎಂಬವರು ತಮ್ಮ **"ರಿಲಿಜೆಸ್ ಕ್ವೆಸ್ಟ್ ಆಫ್ ಇಂಡಿಯಾ"** ಎಂಬ ಗ್ರಂಥದಲ್ಲಿ—"ಪ್ರತಿಯುಗದಲ್ಲಿಯೂ ಶಿವನ ಮುಖಗಳಿಂದ ಅವತರಿಸಿದ **ಏಕೋರಾಮ, ಪಂಡಿತಾರಾಧ್ಯ, ರೇವಣಾರಾಧ್ಯ, ಮರುಲಾರಾಧ್ಯ ಮತ್ತು ವಿಶ್ವಾರಾಧ್ಯ**ರೆಂಬ ಐದು ಜನ ಆಚಾರ್ಯರಿಂದ ಈ ಮತವು ಸ್ಥಾಪಿಸಲ್ಪಟ್ಟಿತೆಂದೂ, ಇವರು ಬಹುಪುರಾತನಕಾಲದವರೆಂದೂ" ಬರೆದಿರುತ್ತಾರೆ. ಅವರು ಬರೆದಿರುವ ವಾಕ್ಯಗಳು ಈ ಕೆಳಗೆ ಉದಾಹರಿಸಲ್ಪಟ್ಟಿವೆ.

The tradition is that the sect was founded by five ascetics—**Ekorama**, **Panditaradhya**, **Revana**, **Marula**, and **Vishwaradhya**—who are said to have sprung from the heads of Shiva, incarnate age after age. These are regarded very ancient.

ಮದ್ರಾಸ್ ವಿಶ್ವವಿದ್ಯಾಲಯದ ಲೆಕ್ಚರರಾದ ಶ್ರೀವರ್ಮಾ ಬಿ. ಆರ್. ರಾಮಚಂದ್ರದೀಕ್ಷಿತರ್, ಎಂ.ಎ; ಎಂಬವರು "ಶಿವಾಂಕ" ದಲ್ಲಿ ಬರೆದಿರುವ **"ಶೈವಮತಪ್ರಾಚೀನತ್ವ"** ಎಂಬ ಲೇಖನದಲ್ಲಿ—"ಪ್ರಾಚೀನಗ್ರಂಥಗಳ ಮತ್ತು ಪ್ರಾಚೀನತತ್ತ್ವಗಳ ಶೋಧದಿಂದ ಶೈವಮತವು ಅತ್ಯಂತಪ್ರಾಚೀನವಾದುದೆಂದೂ, ಇತಿಹಾಸಜ್ಞರಿಗೆ ಈ ಮತದ ಉತ್ಪತ್ತಿಕಾಲವನ್ನು ಕಂಡುಹಿಡಿಯುವುದು ಅಸಾಧ್ಯವೆಂದೂ" ಬರೆದಿದ್ದಾರೆ. ಆ ವಾಕ್ಯಗಳು ಈ ಕೆಳಗೆ ಉದಾಹರಿಸಲ್ಪಟ್ಟಿವೆ.

प्राचीन ग्रन्थोंसे तथा पुरातत्त्व-सम्बन्धी खोजसे यह सिद्ध होता है कि शैवमतकी उत्पत्ति सुदूर अतीतकालमें हुई थी और प्राचीन भारतके इतिहासनिर्माताके लिये इसके प्रारम्भका पता लगाना अत्यन्त कठिन है।

ಜಗದ್ವಿಖ್ಯಾತರಾದ **ಸರ್. ಜಾನ್ ಮಾರ್ಶಲ್**ರವರು ಸಹ ಶೈವಮತವು ಅನಾದಿಯಾದುದೆಂದು ತಮ್ಮ ಗ್ರಂಥದಲ್ಲಿ ಬರೆದಿರುತ್ತಾರೆ.

ಪಂಚಾಕ್ಷರಮಂತ್ರೋಪದೇಶಾದಿಗಳನ್ನು ಮಾಡಿದರೆಂದು ಪಾಶುಪತ ತಂತ್ರಾದಿಗ್ರಂಥಗಳು ಮುಕ್ತಕಂಠದಿಂದ ಸಾರುತ್ತವೆ. ಇದರಮೇಲಿಂದ ಈ ಆಚಾರ್ಯರ ಕಾಲವು ವಿಷ್ಣುಬ್ರಹ್ಮಾದಿದೇವತೆಗಳ ಸಮವಾದು ದೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಮೋಕ್ಷದಾಯಕವಾದ ಲಿಂಗ ಧಾರಣಪದ್ಧತಿಯನ್ನು ಭೂಮಂಡಲದಲ್ಲಿ ಈ ಪೂಜ್ಯಪಾದರೇ ಸ್ಥಿರ ಗೊಳಿಸಿರುವರೆಂಬ ವಿಷಯವು ಸರ್ವರಿಗೂ ವೇದ್ಯವೇ ಇದೆ. ಲಿಂಗ ಧಾರಣವು ವೇದಗಳಲ್ಲಿ ಉಕ್ತವಾಗಿರುವದರಿಂದ ಈ ಲಿಂಗಧಾರಣಕ್ಕೆ ಕಾರಣೀಭೂತರಾದ ಶ್ರೀಮತ್ಪಂಚಾಚಾರ್ಯರ ಕಾಲವು ವೇದಕಾಲದಷ್ಟು ಪ್ರಾಚೀನವಾದುದೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಈ ಪೂಜ್ಯಪಾದರು ಉಳಿದ ಮತಾಚಾರ್ಯರಂತೆ ತಂದೆತಾಯಿಗಳ ಗರ್ಭ ದಿಂದ ಅವತರಿಸಿದವರಲ್ಲ! ಸಾಕ್ಷಾತ್ ಲಿಂಗಮುಖದಿಂದ ಅವತರಿಸಿದ ರೆಂದು ಶಿವಾಗಮಗಳು ಘಂಟಾಘೋಷವಾಗಿ ಸಾರುತ್ತವೆ. ಜಗದ್ಗುರು ರೇಣುಕಾರ್ಯರು ಕೊಲ್ಲಿಪಾಕಿ ಸೋಮೇಶ್ವರಲಿಂಗದಿಂದಲೂ, ಶ್ರೀಜಗ ದ್ಗುರುದಾರುಕಾಚಾರ್ಯರು ವಟವೃಕ್ಷಸಿದ್ಧೇಶ್ವರಲಿಂಗದಿಂದಲೂ, ಶ್ರೀಜಗದ್ಗುರು ಏಕೋರಾಮಾರಾಧ್ಯರು ದ್ರಾಕ್ಷಾರಾಮಕ್ಷೇತ್ರದ ರಾಮನಾಥಲಿಂಗದಿಂದಲೂ,ಶ್ರೀಜಗದ್ಗುರುಪಂಡಿತಾರಾಧ್ಯರು ಶ್ರೀಶೈಲ ಮಲ್ಲಿಕಾರ್ಜುನಲಿಂಗದಿಂದಲೂ, ಶ್ರೀಜಗದ್ಗುರುವಿಶ್ವಾರಾಧ್ಯರು ಕಾಶೀವಿಶ್ವನಾಥಲಿಂಗದಿಂದಲೂ ಅವತರಿಸಿದರು. ಈ ಮಹಾತ್ಮರು ತಮ್ಮ ಮಹಿಮಾಬಲದಿಂದ ಭರತಖಂಡದಲ್ಲೆಲ್ಲ ವೀರಶೈವಮತವನ್ನು ನೆಲೆಗೊಳಿಸಿ, ತಮ್ಮಿಂದ ಸ್ಥಾಪಿಸಲ್ಪಟ್ಟ ವೀರಶೈವಮತದ ರಕ್ಷಣಾದಿಗಳ ಬಗ್ಗೆ ಪಂಚಧರ್ಮಪೀಠಗಳನ್ನು ಸ್ಥಾಪಿಸಿದರು. ಈ ಧರ್ಮಪೀಠಗಳು ಮೈಸೂರುದೇಶದ ಕಡೂರು ಡಿ|| ಬಾಳೆಹೊನ್ನೂರಲ್ಲಿ ಒಂದು, ಬಳ್ಳಾರಿ ಡಿ|| ಉಜ್ಜಯಿನಿಯಲ್ಲೊಂದು, ಗಢವಾಲ ಡಿ|| ಹಿಮವತ್ಕೇ

ದಾರಕ್ಷೇತ್ರದಲ್ಲೊಂದು, ಕರ್ನೂಲ್ ಡಿ॥ ಶ್ರೀಶೈಲಕ್ಷೇತ್ರದಲ್ಲೊಂದು, ಕಾಶೀಕ್ಷೇತ್ರದಲ್ಲೊಂದು, ಹೀಗೆ ಐದು ಇರುತ್ತವೆ. ಪೂರ್ವಕಾಲದಲ್ಲಿ ಭರತಖಂಡದ ತುಂಬೆಲ್ಲ ವೀರಶೈವರು ವಾಸವಾಗಿದ್ದುದರಿಂದ ಅವರ ರಕ್ಷಣಶಿಕ್ಷಣಾದಿಗಳ ಬಗ್ಗೆ ಈ ಮಹನೀಯರು ಭರತಖಂಡದ ಮುಖ್ಯ ಮುಖ್ಯಸ್ಥಾನಗಳಲ್ಲಿ ಧರ್ಮಪೀಠಗಳನ್ನು ಸ್ಥಾಪಿಸಿದರು. ಈಗಿನ ಪರಿಸ್ಥಿತಿಯನ್ನು ವಿಚಾರಿಸಿನೋಡಿದರೆ ವೀರಶೈವಜನಾಂಗವು ಕರ್ಣಾಟಕ ದೇಶದಲ್ಲಿಯೂ, ಮಹಾರಾಷ್ಟ್ರದೇಶದಲ್ಲಿಯೂ, ಆಂಧ್ರದೇಶದಲ್ಲಿಯೂ ಸ್ವಲ್ಪಸ್ವಲ್ಪವಾಗಿ ಇರುವದಲ್ಲದೆ, ಕಾಶೀ, ಹಿಮಾಲಯ ಪ್ರಾಂತಗಳ ಕಡೆಗಂತೂ ಏಷ್ಟೂ ಇರುವದಿಲ್ಲ. ಪೂರ್ವಕಾಲದ ಸ್ಥಿತಿಯೂ ಸಹ ಹೀಗೆಯೇ ಇರಬಹುದೆಂದು ನಾವು ಒಂದು ಪಕ್ಷದಲ್ಲಿ ಊಹಿಸಿದ್ದಾದರೆ, ಅದು ಸರಿದೋರುವಂತಿಲ್ಲ. ಏಕೆಂದರೆ—ಪೂರ್ವಾಚಾರ್ಯರು ತಮ್ಮ ಧರ್ಮಪೀಠಗಳನ್ನು ಸ್ಥಾಪಿಸಬೇಕಾದರೆ, ತಮ್ಮ ಶಿಷ್ಯರು ವಿಶೇಷವಾಗಿ ವಾಸವಾಗಿರುವ ಪ್ರಾಂತಗಳಲ್ಲಿ ಸ್ಥಾಪಿಸಿದ್ದಾರೆಯೇ ಹೊರತು, ಅನ್ಯತ್ರ ಸ್ಥಾಪಿಸಲು ಕಾರಣವಿಲ್ಲ. **ಕಾಶೀ** ಮತ್ತು **ಕೇದಾರ** ಪೀಠಗಳ ಸ್ಥಿತಿಯನ್ನು ನೋಡಿದರೆ, ಪೂರ್ವಕಾಲದಲ್ಲಿ ಆ ಪ್ರಾಂತದಲ್ಲಿ ವೀರಶೈವರ ಜನಸಂಖ್ಯೆಯು ವಿಶೇಷವಾಗಿತ್ತೆಂದೂ, ಆದುದರಿಂದಲೇ ಆಯಾ ಸ್ಥಾನಗಳಲ್ಲಿ ಧರ್ಮಪೀಠಗಳು ಸ್ಥಾಪಿಸಲ್ಪಟ್ಟಿರುವವೆಂದೂ ತಿಳಿದು ಬರುತ್ತದೆ. ಪೂರ್ವಕಾಲದಲ್ಲಿ ನೇಪಾಳ, ಕಾಶ್ಮೀರ, ಬಂಗಾಳ ಮೊದಲಾದ ಪ್ರಾಂತಗಳಲ್ಲಿ ವೀರಶೈವರು ವಿಶೇಷವಾಗಿ ವಾಸಮಾಡಿ ದ್ದರೆಂದು ಕೆಲವು ದಾಖಲೆಗಳಿಂದ ವೇದ್ಯವಾಗುತ್ತದೆ. ಪ್ರಾಚೀನ ಕಾಲದಲ್ಲಿ ಅತ್ಯಂತಘನತೆಯನ್ನು ಹೊಂದಿದ್ದ ಈ ಪವಿತ್ರಮತವು ಅನ್ಯಧರ್ಮದ ರಾಜರ ವಿಶೇಷವಾದ ಉಪದ್ರವದಿಂದ ಕ್ಷೀಣಗತಿಯನ್ನು ಹೊಂದುತ್ತ, ಈಗೀಗಂತೂ ಅತ್ಯಂತಕ್ಷೀಣಾವಸ್ಥೆಗೆ ಬಂದಿರುವದನ್ನು

ನೋಡಿದರೆ ವಿಶೇಷವ್ಯಸನವೆನಿಸುತ್ತದೆ. ಹರಿ, ಬ್ರಹ್ಮ, ಇಂದ್ರ, ಲಕ್ಷ್ಮಿ, ಸರಸ್ವತಿ ಮೊದಲಾದ ದೇವತೆಗಳು ಸಹ ಲಿಂಗವನ್ನು ಧರಿಸಿದ್ದರೆಂದು ಅನೇಕಗ್ರಂಥಗಳು ಬೋಧಿಸುತ್ತವೆ. ಅಂದಮೇಲೆ ಪೂರ್ವಕಾಲದಲ್ಲಿ ಈ ಮತದ ವೈಭವವು ಎಷ್ಟಿರಬಹುದೆನ್ನುವದನ್ನು ಸಭಿಕರೇ ಊಹಿಸಬಹುದು.

ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು ತಾವು ಶಿವಭಕ್ತಿಯನ್ನು ತೋರ್ಪಡಿಸಿ, ತಮ್ಮ ಹೆಸರಿನಿಂದ "**ವ್ಯಾಸೇಶ್ವರ**" ಎಂಬುದೊಂದು ಶಿವಲಿಂಗಮೂರ್ತಿಯನ್ನು ಸ್ಥಾಪಿಸಿ, ತಾವು **ಘಂಟಾಕರ್ಣಶಿವಾಚಾರ್ಯರ** ಶಿಷ್ಯರಾಗಿ ಲಿಂಗಧಾರಣಮಹತ್ತ್ವವನ್ನು ನಾನಾರೀತಿಯಾಗಿ ಬೋಧಿಸಿದ್ದಲ್ಲದೆ—

ವಿಷ್ಣುಬ್ರಹ್ಮಾದಯೋ ದೇವಾ ಮುನಯೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥೯೬॥

(ಉ. ಭಾ. ಅಧ್ಯಾಯ ೨೧)

ಎಂದು ಲಿಂಗಪುರಾಣದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಭರತಖಂಡದಲ್ಲಿರತಕ್ಕ ಸಮಸ್ತಪ್ರಾಚೀನದೇವತಾಮೂರ್ತಿಗಳನ್ನು ಶೋಧಕದೃಷ್ಟಿಯಿಂದ ಪರಿಶೀಲಿಸಿದ್ದಾದರೆ, ಪ್ರತಿಯೊಂದು ದೇವತಾಮೂರ್ತಿಯ ಹಸ್ತದಲ್ಲಾಗಲಿ, ಮಸ್ತಕದಲ್ಲಾಗಲಿ ಲಿಂಗಧಾರಣವಿದ್ದುದು ಕಂಡುಬರುವುದು. ಭರತಖಂಡದಲ್ಲಿ ಅತ್ಯಂತಪ್ರಸಿದ್ಧವೆನಿಸಿದ ಪಂಢರಪುರದಲ್ಲಿರುವ **ವಿಠೋಬ** ನಾಮಕವಾದ ವಿಷ್ಣುಮೂರ್ತಿಯ ಮಸ್ತಕದಲ್ಲಿಯೂ, ಬಾರ್ಸಿಪಟ್ಟಣದಲ್ಲಿ ವಿರಾಜಿಸುತ್ತಿರುವ **ಭಗವಂತ**ನಾಮಕವಿಷ್ಣುಮೂರ್ತಿಯ ಮಸ್ತಕದಲ್ಲಿಯೂ, ಅನಂತಶಯನರಾಜಧಾನಿಯಲ್ಲಿರುವ **ಅನಂತಪದ್ಮನಾಭ**ಮೂರ್ತಿಯ ಹಸ್ತ

ದಲ್ಲಿಯೂ, ಬಳ್ಳಾರಿ ಡಿ|| ನರಸಿಂಹದೇವರ ಗುಡ್ಡದಲ್ಲಿ ಶೋಭಿಸುವ **ನೃಸಿಂಹ**ಮೂರ್ತಿಯ ಹಸ್ತದಲ್ಲಿಯೂ ಲಿಂಗಧಾರಣವಿರುವುದು ಲೋಕಪ್ರಸಿದ್ಧವೇ ಅದೆ.

ಲಕ್ಷ್ಮ್ಯಾದಿಶಕ್ತಯಸ್ಸರ್ವಾಃ ಶಿವಭಾವವಿಭಾವಿತಾಃ |
ಧಾರಯಂತ್ಯಲಿಕಾಗ್ರೇಷು ಶಿವಲಿಂಗಮಹರ್ನಿಶಂ ||೫೬||

(ಸಿ. ಶಿ. ಪರಿಚ್ಛೇದ ೬)

ಎಂಬ ಸಿದ್ಧಾಂತಶಿಖಾಮಣಿಯ ಪ್ರಮಾಣಾನುಸಾರವಾಗಿ ಲಕ್ಷ್ಮೀ ಮೊದಲಾದ ಸಮಸ್ತಶಕ್ತಿಗಳೂ ಸಹ ಲಿಂಗಧಾರಣಯುತೆಯರಾಗಿರುವರೆಂದು ಸ್ಪಷ್ಟವಾಗುತ್ತದೆ. ಈ ವಿಷಯದಲ್ಲಿ ಶಕ್ತಿಪೀಠಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಕೊಲ್ಲಾಪುರದ **ಮಹಾಲಕ್ಷ್ಮಿಯ** ಮಸ್ತಕದಲ್ಲಿಯೂ, ಕಾಶ್ಮೀರದೇಶದ **ಶಾರದಾದೇವಿಯ** ಮಸ್ತಕದಲ್ಲಿಯೂ, ತುಳಜಾಪುರ **ಭವಾನಿಯ** ಮಸ್ತಕದಲ್ಲಿಯೂ, ಕಾಂಚೀ **ಕಾಮಾಕ್ಷಿಯ** ಮಸ್ತಕದಲ್ಲಿಯೂ, ಕಾಶೀ **ವಿಶಾಲಾಕ್ಷಿಯ** ಮಸ್ತಕದಲ್ಲಿಯೂ ಈಗಲೂ ಪರಿಶೋಭಿಸುತ್ತಿರುವ ಲಿಂಗಧಾರಣವೇ ಬಲವಾದ ಸಾಕ್ಷಿಯಾಗಿದೆ. ಈ ಸಕಲಶಾಸ್ತ್ರೀಯಪ್ರಮಾಣಗಳಿಂದಲೂ, ಈ ಪ್ರಮಾಣಗಳಿಗನುಗುಣವಾಗಿ ಈಗಲೂ ಲೋಕದಲ್ಲಿ ಸರ್ವರ ಕಣ್ಣೆದುರಿಗೆ ಪ್ರತ್ಯಕ್ಷವಾಗಿ ತೋರುತ್ತಿರುವ ಚಿಹ್ನಗಳಿಂದಲೂ, ಶಿವಲಿಂಗಧಾರಣವು ದೇವಾನುದೇವತೆಗಳಿಗೂ ಸಹ ಮಾನ್ಯವಾದುದೆಂಬುದು ಸರ್ವರಿಗೂ ಸ್ಪಷ್ಟವಾಗಿ ಕಂಡುಬರುವದು.

ಈ ಪ್ರಪಂಚದಲ್ಲಿ ತಮ್ಮ ತಪಃಪ್ರಭಾವದಿಂದಲೂ, ಮಹಿಮಾಪ್ರಭಾವದಿಂದಲೂ, ಜ್ಞಾನಪ್ರಭಾವದಿಂದಲೂ, ವೈರಾಗ್ಯಪ್ರಭಾವದಿಂದಲೂ ಅಸಾಧಾರಣವಾದ ಕೀರ್ತಿಯನ್ನು ಸಂಪಾದಿಸಿಕೊಂಡು,

ಇಂದಿನವರೆಗೂ ಕೀರ್ತಿಕಾಯರಾಗಿ ಪ್ರಕಾಶಿಸುತ್ತಿರುವ **ಅಗಸ್ತ್ಯ, ಗೌತಮ, ದೂರ್ವಾಸ, ದಧೀಚಿ, ಸಾನಂದ, ವ್ಯಾಸ, ಕಶ್ಯಪ, ಉಪಮನ್ಯು, ಹರಕಂಠ** ಮೊದಲಾದ ಅಸಂಖ್ಯಜನ ಮಹರ್ಷಿಗಳೂ ಸಹ ಲಿಂಗಧಾರಣಮಹಿಮೆಯನ್ನರಿತು ಶ್ರೀಜಗದ್ಗುರುಪಂಚಾಚಾರ್ಯರ ಪಾದಾರವಿಂದಂಗಳನ್ನಾಶ್ರಯಿಸಿ, ಶಿವಲಿಂಗಧಾರಣವನ್ನು ಪಡೆದು, ಅವರಿಂದ ಲಿಂಗಾಂಗಸಾಮರಸ್ಯರೂಪವಾದ ಜ್ಞಾನವನ್ನು ಸಂಪಾದಿಸಿ ಕೊಂಡು ಮುಕ್ತರಾಗಿರುವ ವಿಷಯವು, **ಪಾಶುಪತತಂತ್ರ, ಕಾಶೀ ಖಂಡ, ಶ್ರೀಶೈಲಖಂಡ, ಸಿದ್ಧಾಂತಶಿಖಾಮಣಿ, ಶಂಕರಸಂಹಿತಾ** ಮೊದಲಾದ ಗ್ರಂಥಗಳಲ್ಲಿ ಚನ್ನಾಗಿ ವರ್ಣಿಸಲ್ಪಟ್ಟಿದೆ. ಸಪ್ತಸಮುದ್ರ ಗಳನ್ನೇ ಒಂದುಹನಿಯಂತೆ ಪಾನಮಾಡಿದವನೂ, ಲೋಕವಿಖ್ಯಾತ ನಾದ ನಹುಷಚಕ್ರವರ್ತಿಯನ್ನು ತನ್ನ ಶಾಪದ ಸಾಮರ್ಥ್ಯದಿಂದ ಸರ್ಪವನ್ನಾಗಿಮಾಡಿದವನೂ, ವಾತಾಪಿನಾಮಕನಾದ ರಾಕ್ಷಸನನ್ನು ತನ್ನ ಜಠರಾಗ್ನಿಯಿಂದ ಸುಟ್ಟು ಬೂದಿಮಾಡಿದವನೂ, ಅಸಾಧ್ಯವಾಗಿ ಬೆಳೆಯುತ್ತಿದ್ದ ವಿಂಧ್ಯಪರ್ವತವನ್ನು ಅಡ್ಡವಾಗಿ ಮಲಗಿಸಿದವನೂ, ಅಗಾಧಮಹಿಮಾನ್ವಿತನೂ ಆದ **ಅಗಸ್ತ್ಯ**ಮಹರ್ಷಿಯೂ, ತನ್ನ ಶಾಪದ ಸಾಮರ್ಥ್ಯದಿಂದ ಇಂದ್ರನ ಚತುರ್ದಶಸಂಪತ್ತುಗಳನ್ನು ಸಮುದ್ರದಪಾಲುಮಾಡಿ, ದೇವಾನುದೇವತೆಗಳನ್ನು ದಂಗುಬಡಿಸಿ, ಆ ಚತುರ್ದಶಸಂಪತ್ತುಗಳ ಪ್ರಾಪ್ತಿಗೋಸುಗ ಸಮುದ್ರಮಥನದಿಂದುಂ ಟಾದ ಮಹಾಹಾಲಾಹಲವಿಷಪಾನದಿಂದ ಪರಮೇಶ್ವರನನ್ನು ನೀಲಕಂಠ ನೆಂಬ ನಾಮದಿಂದ ಪ್ರಸಿದ್ಧಪಡಿಸಿದ **ದೂರ್ವಾಸ**ಮಹರ್ಷಿಯೂ, ಶಿವಪಂಚಾಕ್ಷರೀಮಂತ್ರದ ಜಪಪ್ರಭಾವದಿಂದ ಯಮಲೋಕವನ್ನೆಲ್ಲ ಹಾಳುಗೆಡವಿ, ಅಲ್ಲಿದ್ದ ಸಮಸ್ತನಾರಕಿಗಳನ್ನು ಶಿವಲೋಕಕ್ಕೊಯ್ದು ಮುಕ್ತರನ್ನಾಗಿಮಾಡಿ, ಅಸಾಧಾರಣಮಹಿಮಾಶಾಲಿಯೆಂದು ಕೀರ್ತಿ

ವೆತ್ತ **ಸಾನಂದ**ಮಹರ್ಷಿಯೂ, ನ್ಯಾಯಶಾಸ್ತ್ರವನ್ನು ರಚಿಸಿ ಲೋಕ ವಿಖ್ಯಾತನಾದ **ಗೌತಮ**ಮಹರ್ಷಿಯೂ, ಸಮಸ್ತಮಹರ್ಷಿಗಳಿಗೆ ಮಸ್ತಕಮಣಿಯಂತಿದ್ದ **ದಧೀಚಿ**ಮಹರ್ಷಿಯೂ ಇವರೇ ಮೊದಲಾದವರು ಲಿಂಗಧಾರಣಯುತರಾಗಬೇಕಾದರೆ ಶಿವಲಿಂಗಧಾರಣದ ಪವಿತ್ರತೆಯೂ, ಆ ಶಿವಲಿಂಗಧಾರಣವನ್ನು ನೆಲೆಗೊಳಿಸಿದ ಶ್ರೀಜಗದ್ಗುರು ಪಂಚಾಚಾರ್ಯರ ಮಹಿಮೆಯೂ ಎಷ್ಟರಮಟ್ಟಿಗಿರಬಹುದೆನ್ನುವದನ್ನು ಬೇರೆ ಒಡೆದುಹೇಳುವ ಕಾರಣವೇ ಇಲ್ಲ. ಲೋಕಪ್ರಸಿದ್ಧರಾದ ಈ ಮಹರ್ಷಿಗಳಲ್ಲದೆ **ನಲ, ಕಕುತ್ಸ, ಪುರೂರವ** ಮೊದಲಾದ ಚಕ್ರವರ್ತಿಗಳೂಸಹ ಶಿವಲಿಂಗಧಾರಣಸಂಪನ್ನರಾಗಿದ್ದರೆಂದೂ, ಆ ಕಾಲದಲ್ಲಿ ಭರತಖಂಡವೆಲ್ಲ ಶಿವಭಕ್ತಿಮಯವಾಗಿದ್ದಿತೆಂದೂ ಅನೇಕಗ್ರಂಥಗಳಿಂದ ತಿಳಿದುಬರುತ್ತದೆ. ಅಲ್ಲದೆ, ಈಗ್ಗೆ ೪-೫ ಸಾವಿರ ವರ್ಷಗಳ ಪೂರ್ವದಲ್ಲಿ ಭರತಖಂಡವನ್ನಾಳಿದ ಅನೇಕಜನಮಹಾರಾಜರು ಲಿಂಗಧಾರಣಸಂಪನ್ನರಾಗಿದ್ದರೆಂಬ ವಿಷಯವು, ಅನೇಕಶಿಲಾಶಾಸನ ತಾಮ್ರಶಾಸನಗಳಿಂದ ತಿಳಿದುಬರುತ್ತದೆ. ಇರಲಿ ; ಇನ್ನು ಈ ಮತದ ಪ್ರಾಚೀನತ್ವದ ವಿಷಯದಲ್ಲಿ ದೊರೆಯತಕ್ಕ ಶಾಸನಾದಿಗಳನ್ನು ವಿಮರ್ಶಿಸೋಣ !

ಈಗ್ಗೆ ೫ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಜನಮೇಜಯ** ಭೂಪಾಲನು ತನ್ನಕಾಲದಲ್ಲಿ ಶ್ರೀಜಗದ್ಗುರುಹಿಮವತ್ಕೇದಾರಪೀಠಾಧಿಪತಿಗಳಾಗಿದ್ದ **ಆನಂದಲಿಂಗಜಂಗಮ**ರೆಂಬ ಮಹಾಸ್ವಾಮಿಗಳವರಿಗೆ ಒಂದು ಅತಿಮಹತ್ತ್ವವಾದ ದಾನಶಾಸನವನ್ನು ಬರೆದುಕೊಟ್ಟಿದ್ದಾನೆ. ಆ ಸಂಪೂರ್ಣಶಾಸನವೇ ಈ ಕೆಳಗೆ ಉಲ್ಲೇಖಿಸಲ್ಪಟ್ಟಿರುವುದು.

ಸ್ವಸ್ತಿಶ್ರೀವಿಜಯಾಭ್ಯುದಯಯುಧಿಷ್ಠಿರಶಕೇ ಪ್ಲವಂಗಾಖ್ಯೇ ಏಕೋನನವತಿತಮವತ್ಸರೇ ಸಹಸಿ ಮಾಸಿ ಅಮಾವಾಸ್ಯಾಯಾಂ ಸೋಮವಾಸರೇ ಶ್ರೀಮನ್ಮಹಾರಾಜಾಧಿರಾಜಪರಮೇಶ್ವರವೈಯಾಘ್ರಪದಗೋತ್ರಜ

ಶ್ರೀಜನಮೇಜಯಭೂಪಾ ಇಂದ್ರಪ್ರಸ್ಥನಗರೀಸಿಂಹಾಸನಸ್ಥಾಃ ಸಕಲ ವರ್ಣಾಶ್ರಮಧರ್ಮಪ್ರತಿಪಾಲಕಾ ಉತ್ತರಹಿಮಾಲಯೇ ಶ್ರೀಕೇದಾರ ಕ್ಷೇತ್ರೇ ತತ್ರತ್ಯಮುನಿರುಷಾಮಠಸ್ಯ ಶ್ರೀಗೋಸ್ವಾಮಿ ಆನಂದಲಿಂಗ ಜಂಗಮಃ । ಶ್ರೀಮಚ್ಛಿಷ್ಯಜ್ಞಾನಲಿಂಗಜಂಗಮದ್ವಾರಾ ಆರಾಧಿತಶ್ರೀಕೇದಾರ ನಾಥಸ್ಯ ಪೂಜಾರ್ಥಂ ಚತುಸ್ಸೀಮಾಪರಿಮಿತಿಕ್ರಮಃ ॥ ಪೂರ್ವಭಾಗೇ ದಕ್ಷಿಣವಾಹಿನೀ ಮಂದಾಕಿನೀ, ಪಶ್ಚಿಮದಕ್ಷಿಣಭಾಗೇ ಕ್ಷೀರಗಂಗಾ, ಉತ್ತರಪಶ್ಚಿಮೇ ಮಧುಗಂಗಾ, ಪೂರ್ವೋತ್ತರಭಾಗೇ ಸ್ವರ್ಗದ್ವಾರನದೀ, ದಕ್ಷಿಣೇ ಸರಸ್ವತೀಮಂದಾಕಿನ್ಯೋಸ್ಸಂಗಮಃ । ಏತನ್ಮಧ್ಯೇ ಶ್ರೀಕೇದಾರ ಕ್ಷೇತ್ರಂ । ಭವಚ್ಛಿಷ್ಯಪರಂಪರಯಾ ಚಂದ್ರಾರ್ಕಪರ್ಯಂತಂ ನಿಧಿನಿಕ್ಷೇಪ ಜಲಪಾಷಾಣಾಗಾಮಿಸಿದ್ಧಸಾಧ್ಯತೇಜಸ್ಸ್ವಾಮ್ಯಸಹಿತಂ । ಸ್ವಬುದ್ಧ್ಯಾನು ಕೂಲ್ಯೇನಾಸ್ಮನ್ಮಾತೃಪಿತ್ರೂಣಾಂಶಿವಲೋಕಪ್ರಾಪ್ತ್ಯರ್ಥಂ ಶ್ರೀಕೇದಾರೇಶ್ವರ ಸನ್ನಿಧಾವುಪರಾಗಸಮಯೇ ಸಹಿರಣ್ಯಮಂದಾಕಿನೀಜಲಧಾರಾಪೂರ್ವಕಂ ಕ್ಷೇತ್ರಮಿದಂ ಹಸ್ತೇ ದತ್ತವಾನಸ್ಮಿ ॥ ಏತದ್ಧರ್ಮಸಾಧನಸ್ಯ ಸಾಕ್ಷಿಣಃ

ಆದಿತ್ಯಚಂದ್ರಾವನಿಲೋಽನಲಶ್ಚ ದ್ಯೌರ್ಭೂಮಿರಾಪೋ ಹೃದಯಂ ಯಮಶ್ಚ । ಅಹಶ್ಚ ರಾತ್ರಿಶ್ಚ ಉಭೇಚ ಸಂಧ್ಯೇ ಧರ್ಮಶ್ಚ ಜಾನಾತಿ ನರಸ್ಯ ವೃತ್ತಂ ॥ ದಾನಪಾಲನಯೋರ್ಮಧ್ಯೇ ದಾನಾಚ್ಛ್ರೇಯೋಽನುಪಾಲನಂ । ದಾನಾತ್ಸ್ವರ್ಗಮವಾಪ್ನೋತಿ ಪಾಲನಾದ್ದ್ವಿಗುಣಂ ಫಲಂ ॥ ಸ್ವದತ್ತಾ ಪುತ್ರಕಾಙ್ಕ್ಷೀಯಾ ಪಿತೃದತ್ತಾ ಸಹೋದರಾ । ಅನ್ಯದತ್ತಾತು ಜನನೀ ದತ್ತ ಭೂಮಿಂ ಪರಿತ್ಯಜೇತ್ ॥ ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇಚ್ಚ ಯಃ । ಷಷ್ಟಿವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ ॥

ಈ ಶಾಸನದ ಅಭಿಪ್ರಾಯವೇನೆಂದರೆ :—ಶ್ರೀಮನ್ಮಹಾ ರಾಜಾಧಿರಾಜ ಹಸ್ತಿನಾವತೀಸಿಂಹಾಸನಾಧೀಶ್ವರ ವರ್ಣಾಶ್ರಮ ಧರ್ಮಪ್ರತಿಪಾಲಕನಾದ ಜನಮೇಜಯಭೂಪಾಲನು ಯುಧಿಷ್ಠಿರ ಶಕ ೮೯ ನೆಯ ಪ್ಲವಂಗನಾಮಸಂವತ್ಸರದ ಮಾರ್ಗಶೀರ್ಷಮಾಸ ಅಮಾವಾಸ್ಯಾ ಸೋಮವಾರದಿವಸ, ಶ್ರೀಕೇದಾರಕ್ಷೇತ್ರನಿವಾಸಿಗಳಾದ

ಉಷಾಮಠಾಧೀಶಶ್ರೀಗೋಸ್ವಾಮಿ ಆನಂದಲಿಂಗಜಂಗಮರ ಶಿಷ್ಯರಾದ ಜ್ಞಾನಲಿಂಗಜಂಗಮರ ದ್ವಾರಾ ಆರಾಧಿತವಾದ ಶ್ರೀಕೇದಾರನಾಥನ ಪೂಜೆಗೋಸುಗವಾಗಿ ಮಂದಾಕಿನೀ, ಕ್ಷೀರಗಂಗಾ, ಮಧುಗಂಗಾ, ಸ್ವರ್ಗದ್ವಾರಗಂಗಾ, ಸರಸ್ವತೀಮಂದಾಕಿನೀನದಿಗಳ ಸಂಗಮ, ಇವುಗಳ ಮಧ್ಯದಲ್ಲಿರುವ ಶ್ರೀಕೇದಾರಕ್ಷೇತ್ರವನ್ನು ಸಿದ್ಧಸಾಧ್ಯತೇಜೋವಸ್ತು ಗಳ ಅಧಿಕಾರಸಹಿತವಾಗಿ ನಮ್ಮ ಮಾತಾಪಿತೃಗಳಿಗೆ ಶಿವಲೋಕ ಪ್ರಾಪ್ತಿಯಾಗುವುದಕ್ಕೋಸ್ಕರ ಶ್ರೀಕೇದಾರೇಶ್ವರನ ಸನ್ನಿಧಿ ಯೊಳು ಸೂರ್ಯಗ್ರಹಣಸಮಯದಲ್ಲಿ, ಹಿರಣ್ಯಸಹಿತಗಂಗೋದಕ ಧಾರಾಪೂರ್ವಕವಾಗಿ ತಮ್ಮ ಹಸ್ತದಲ್ಲಿ ಸಮರ್ಪಿಸಿದ್ದೇನೆ. ನಾನು ಮಾಡಿದ ಈ ದಾನಕ್ಕೆ ಸೂರ್ಯ, ಚಂದ್ರ, ವಾಯು, ಅಗ್ನಿ, ಆಕಾಶ, ಭೂಮಿ, ಜಲ, ಮನುಷ್ಯ, ಯಮ, ಹಗಲು, ರಾತ್ರಿ, ಎರಡು ಸಂಧ್ಯೆಗಳು, ಧರ್ಮ ಇವುಗಳೇ ಸಾಕ್ಷಿಗಳೆಂದು ಉಲ್ಲೇಖಮಾಡಿ, ನಾನು ಮಾಡಿದ ಈ ದಾನವನ್ನು ಯಾರೂ ಅಪಹರಿಸಕೂಡದೆಂದೂ, ಅಪಹರಿಸಿದ್ದಾದರೆ ಅವರು ಅರವತ್ತುಸಾವಿರವರ್ಷಗಳವರೆಗೆ ಕ್ರಿಮಿ ಗಳಾಗಿ ಜನ್ಮಿಸುವರೆಂದೂ, ಇತ್ಯಾದ್ಯಭಿಪ್ರಾಯಗರ್ಭಿತಶ್ಲೋಕಗಳನ್ನು ಅಂತ್ಯದಲ್ಲಿ ಉದಾಹರಿಸಿ, ಶಾಸನವನ್ನು ಪೂರ್ತಿಗೊಳಿಸಿದ್ದಾನೆ. ಜನಮೇಜಯಮಹಾರಾಜನು ಕಲಿಯುಗದ ಪ್ರಾರಂಭದಲ್ಲಿ ಭರತ ಖಂಡದಲ್ಲಿ ವಾಸವಾಗಿದ್ದನೆಂದು ಅನೇಕಚರಿತ್ರಗಳಿಂದ ತಿಳಿದು ಬರುತ್ತದೆ. ಈ ಶಾಸನದಲ್ಲಿ ಯುಧಿಷ್ಠಿರಶಕೆ* ೮೯ ನೆಯ ಪ್ಲವಂಗ

* ಪ್ರಾಚೀನತತ್ತ್ವಶೋಧದಲ್ಲಿ ಇಂಡಿಯಾದೇಶದಲ್ಲೆಲ್ಲ ಅತ್ಯಂತಪ್ರಸಿದ್ಧ ರಾಗಿರುವ ಪಂ|| ರಾಯಬಹದ್ದೂರ್ ಗೌರೀಶಂಕರ ಓಝಾ ಅವರು ತಮ್ಮಿಂದ ರಚಿಸಲ್ಪಟ್ಟಿರುವ "ಭಾರತೀಯಪ್ರಾಚೀನಲಿಪಿಮಾಲಾ" ನಾಮಕಗ್ರಂಥದಲ್ಲಿ— ಕಲಿಸಂವತ್ತಿಗೆ 'ಯುಧಿಷ್ಠಿರಸಂವತ್-ಭಾರತಯುದ್ಧಸಂವತ್' ಎಂಬ ಹೆಸರು ಗಳುಂಟೆಂದು ಸಪ್ರಮಾಣವಾಗಿ ಬರೆದಿದ್ದಾರೆ.


ನಾಮಸಂವತ್ಸರದಲ್ಲಿ ದಾನಮಾಡಿರುವುದಾಗಿ ಉಲ್ಲೇಖವಿರುವುದರಿಂದ, ಈ ಶಾಸನವು ಸುಮಾರು ೫ ಸಾವಿರವರ್ಷಗಳ ಕಾಲದ್ದೆಂದು ಸ್ಪಷ್ಟವಾಗಿ ತೋರುತ್ತದೆ. ಈ ತಾಮ್ರಶಾಸನದ ವಿಷಯವನ್ನು ಪರಿಶೀಲಿಸಿದರೆ, ಪೂರ್ವಕಾಲದಲ್ಲಿ ಈ ಪೀಠಾಚಾರ್ಯರ ವೈಭವವು ಎಷ್ಟರಮಟ್ಟಿಗಿರಬಹುದೆನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ಜನಮೇಜಯಭೂಪಾಲನು* ದಾನಮಾಡಿದ ಸಮಸ್ತಭೂಮಿಯು ಐದುಸಾವಿರವರ್ಷಗಳಿಂದ ಇಲ್ಲಿಯವರೆಗೂ ಈ ಪೀಠದವರ ಸ್ವಾಧೀನದಲ್ಲಿಯೇ ಇದ್ದಿತು. ಈ ಭೂಮಿಯಲ್ಲಿ ಒಂದುಸಾವಿರದವರೆಗೆ ಗ್ರಾಮಗಳಿದ್ದವು. ಈ ಸಕಲಗ್ರಾಮಗಳ ಸರ್ವಾಧಿಕಾರವನ್ನು ೫ ಸಾವಿರವರ್ಷಗಳಿಂದಲೂ ಈ ಪೀಠಾಧಿಪತಿಗಳೇ ಅನುಭವಿಸುತ್ತ ಬಂದಿದ್ದರು. ಈಗ್ಯೆ ೫೦–೬೦ ವರ್ಷಗಳ ಪೂರ್ವದಲ್ಲಿದ್ದ **ಶ್ರೀಗಣೇಶಲಿಂಗಜಂಗಮ** ಎಂಬ ಹೆಸರಿನ ಮಹಾಸ್ವಾಮಿಗಳವರ ಕಾಲದಲ್ಲಿ ಬ್ರಿಟಿಷ್ ಸರ್ಕಾರದವರು ಸರ್ವಗ್ರಾಮಗಳನ್ನೂ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, **೧೪೧** ಗ್ರಾಮಗಳನ್ನು ಮಾತ್ರ ಇವರ ಸ್ವಾಧೀನಕ್ಕೆ ಬಿಟ್ಟುಕೊಟ್ಟಿರುವುದಾಗಿ ತಿಳಿದುಬರುತ್ತದೆ. ಭರತಖಂಡದಲ್ಲಿ ಸುಪ್ರಸಿದ್ಧವಾಗಿರುವ ದ್ವಾದಶಜ್ಯೋತಿರ್ಲಿಂಗಗಳಲ್ಲಿ ಅಗ್ರಸ್ಥಾನವನ್ನು ಪಡೆದು, ಹಿಮವತ್ಪರ್ವತದ ಮಧ್ಯದಲ್ಲಿ ರಾರಾಜಿಸುತ್ತಿರುವ **ಶ್ರೀಕೇದಾರನಾಥ** ದೇವಾಲಯದ ಸರ್ವಾಧಿಕಾರವು ಅನಾದಿಕಾಲದಿಂದ ಇಂದಿನವರೆಗೂ ಈ ಪೀಠಾಧಿಪತಿಗಳ ಸ್ವಾಧೀನದಲ್ಲಿಯೇ ಇರುತ್ತದೆ. ಇದಲ್ಲದೆ ಹಿಮಾಲಯಪ್ರಾಂತದಲ್ಲಿ ಅತ್ಯಂತ ಪ್ರಸಿದ್ಧವಾಗಿರುವ **ಗುಪ್ತಕಾಶಿ, ಗೌರೀಕುಂಡ, ಮಧ್ಯಮೇಶ್ವರ,**

---

* ಅರ್ಜುನನ ಪುತ್ರನು ಅಭಿಮನ್ಯು ; ಅಭಿಮನ್ಯುವಿನ ಪುತ್ರನು ಪರೀಕ್ಷಿತನು; ಪರೀಕ್ಷಿತನ ಪುತ್ರನು ಜನಮೇಜಯನು. ಈ ಜನಮೇಜಯಮಹಾರಾಜನೇ ದಾನಶಾಸನವನ್ನು ಬರೆದುಕೊಟ್ಟಿರುವನು.



ಶ್ರೀಕೇದಾರಕ್ಷೇತ್ರ (ಹಿಮಾಲಯ) ದಲ್ಲಿ ಪರಿಶೋಭಿಸುತ್ತಿರುವ
ಶ್ರೀಜಗದ್ಗುರುವಿಕೋರಾಮಾರಾಧ್ಯರ ಧರ್ಮಪೀಠ.



ಹಿಮವತ್ಪರ್ವತದ ಮಧ್ಯದಲ್ಲಿ ರಾರಾಜಿಸುತ್ತಿರುವ
ಶ್ರೀಕೇದಾರನಾಥಸ್ವಾಮಿಯ ಮಂದಿರ.

ತ್ರಿಯುಗೀನಾರಾಯಣ, ನಾರಾಯಣತೀರ್ಥ, ಕಾಲೀಮಠ, ನಾಲೀಭಗವತೀ, ಮೈಖಂಡ, ಸೋಮದ್ವಾರ ಮೊದಲಾದ ೨೨ ಕ್ಷೇತ್ರಗಳ ಸರ್ವಾಧಿಪತ್ಯವು ಈ ಪೀಠಾಧಿಪತಿಗಳ ಅಧೀನದಲ್ಲಿಯೇ ಇರುವುದು. ಈ ಸಮಸ್ತಕ್ಷೇತ್ರಗಳು ಬಹುಪುರಾತನಕಾಲದವಾಗಿರುವುವು. ಇವುಗಳ ಮಹಿಮೆಯನ್ನು ವ್ಯಾಸಮಹರ್ಷಿಗಳು ಸ್ಕಂದಪುರಾಣಾಂತರ್ಗತ ವಾದ **ಕೇದಾರಖಂಡ**ದಲ್ಲಿ ವಿಶೇಷವಾಗಿ ಬಣ್ಣಿಸಿದ್ದಾರೆ. ಅನಿರುದ್ಧನ ಪತ್ನಿಯಾದ ಉಷಾದೇವಿಯು ಈಗುರುಸ್ಥಾನದಲ್ಲಿಯೇ ವಾಸವಾಗಿದ್ದು, ಈ ಮಠವನ್ನು ಕಟ್ಟಿಸಿಕೊಟ್ಟದ್ದರಿಂದ, ಈ ಮಠಕ್ಕೆ "**ಉಷಾಮಠ**" ವೆಂಬ ನಾಮವು ಅನಾದಿಕಾಲದಿಂದ ಪ್ರಸಿದ್ಧವಾಗಿದೆ. ಹಿಮಾಲಯ ಪ್ರಾಂತದಲ್ಲಿ ಸುಪ್ರಸಿದ್ಧರಾಗಿರುವ **ಟೆಹರಿ ಮಹಾರಾಜರವರು** ಈ ಪೀಠದ ಶಿಷ್ಯರಾಗಿದ್ದಾರೆ. ಅಲ್ಲದೆ **ಉದಯಪುರ, ಕಾಶ್ಮೀರ, ನೇಪಾಳ** ಮೊದಲಾದ ಹದಿಮೂರುಜನ ಉತ್ತರದೇಶದ ಮಹಾರಾಜರು, ಈ ಪೀಠಕ್ಕೆ ಪ್ರತಿವರ್ಷವೂ ತಪ್ಪದೆ ಕಾಣಿಕೆಯನ್ನು ಸಮರ್ಪಿಸು ತ್ತಿರುವರು. **ಬ್ರಿಟಿಷ್ ಸಾರ್ವಭೌಮರು** ಈ ಮಠದ ಯೋಗ್ಯತೆಯನ್ನು ಕಂಡು, ಈ ಮಠಾಧಿಪತಿಗಳು ಭರತಖಂಡದಲ್ಲೆಲ್ಲ ಬೇಕಾದಷ್ಟು ಬಂದೂಕುಗಳನ್ನೂ, ರಿವಾಲ್ವರುಗಳನ್ನೂ, ಕತ್ತಿಗಳನ್ನೂ ಉಪಯೋಗಿಸ ಬಹುದೆಂದೂ ಹಾಗೂ ಅಡ್ಡಪಲ್ಲಕ್ಕಿ, ಪಂಚಕಲಶ ಮೊದಲಾದ ೭೨ ಬಿರುದುಗಳನ್ನು ಉಪಯೋಗಿಸಬಹುದೆಂದೂ ಹುಕುಮನ್ನು ದಯಪಾಲಿಸಿರುವರಲ್ಲದೆ, "**ರಾವಲ್**" ಎಂಬ ಮಹಾಗೌರವಸೂಚಕ ವಾದ ಪ್ರಶಸ್ತಿಯನ್ನೂ ದಯಪಾಲಿಸಿರುವರು. ಇಂಥ ರಾಜಾಧಿರಾಜ ಮಾನ್ಯವಾದ ಪೀಠವು ಭರತಖಂಡದಲ್ಲಿ ಎಲ್ಲಿಯೂ ಇಲ್ಲವೆಂದುಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ರೀತಿಯಾಗಿರುವ ಕೇದಾರಪೀಠದ ಪ್ರಾಶಸ್ತ್ಯವನ್ನು ಕಂಡು ಯಾರಿಗೆ ಸಂತೋಷವೆನಿಸಲಿಕ್ಕಿಲ್ಲ? ಅಸ್ತು !

ಶ್ರೀಜಗದ್ಗುರು**ಕಾಶೀಸಿಂಹಾಸನ**ಮಠದಲ್ಲಿಯೂ ಸಹ ಅನೇಕ ಪ್ರಾಚೀನಶಾಸನಗಳು ದೊರೆಯುತ್ತವೆ. ಅವುಗಳಲ್ಲಿ **ಜಯನಂದದೇವ**ನೆಂಬ ಕಾಶೀಮಹಾರಾಜನು ಬರೆದುಕೊಟ್ಟಿರುವ ದಾನಶಾಸನವೇ ಮುಖ್ಯವಾಗಿದೆ. ಈ ಮಹಾರಾಜನು **ಕ್ರಿ. ಶ. ೬ನೆಯ** ಶತಮಾನದಲ್ಲಿದ್ದನು. ಆ ಕಾಲದಲ್ಲಿ ಶ್ರೀಜಗದ್ಗುರುವಿಶ್ವಾರಾಧ್ಯರ ಪೀಠಕ್ಕೆ ಅಧಿಕಾರಿಗಳಾಗಿದ್ದ **ಶ್ರೀಮಲ್ಲಿಕಾರ್ಜುನಶಿವಯೋಗಿ**ಗಳವರಿಗೆ ಈ ಮಹಾರಾಜನು ಮಠದ ಗೋವುಗಳು ಮೇಯುವದಕ್ಕಾಗಿ, ಕೆಲವು ಭೂಮಿಗಳನ್ನು ದಾನವಾಗಿ ಕೊಟ್ಟಿದ್ದಾನೆ. ಆ ಸ್ಥಾನವು **ಜಂಗಮಪುರ**ವೆಂಬ ಹೆಸರಿನಿಂದ ಪ್ರಸಿದ್ಧವದೆ.* ಈ ಭೂಮಿಯು **ವಿಕ್ರಮಾರ್ಕಸಂವತ್ ೬೩೧ ಕಾರ್ತಿಕ ಶುಕ್ಲಪಕ್ಷ ಏಕಾದಶಿಯ** ದಿವಸ ದಾನಮಾಡಲ್ಪಟ್ಟಿರುವುದಾಗಿ ಈ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ಶಾಸನವನ್ನು ಬರೆದುಕೊಟ್ಟು ಇಂದಿಗೆ **೧೩೪೪** ವರ್ಷಗಳಾದವು.

ನೇಪಾಳ ರಾಜ್ಯದಲ್ಲಿ ಕಾಶೀಪೀಠದ ಶಾಖಾಮಠವೊಂದು ಈಗಲೂ "**ಜಂಗಮವಾಡೀಮಠ**" ಎಂಬ ಹೆಸರಿನಿಂದ ವಿರಾಜಿಸುತ್ತಿರುವುದು. ಆ ಮಠವನ್ನು ನೇಪಾಳದ ಮಹಾರಾಜರವರು ಬಹುಕಾಲದಿಂದ ಈಹೊತ್ತಿನವರೆಗೆ ಕಾಪಾಡಿಕೊಂಡು ಬಂದಿರುತ್ತಾರೆ. ಪೂರ್ವಕಾಲದಲ್ಲಿ ನೇಪಾಳದೇಶವನ್ನಾಳುತ್ತಿದ್ದ **ವಿಶ್ವಮಲ್ಲನೃಪತಿ** ಎಂಬ ಮಹಾರಾಜನು ಮೇಲ್ಕಂಡ ಜಂಗಮವಾಡೀಮಠಕ್ಕೆ ಅನೇಕಜಹಗೀರು (ಉಂಬಳಿ)ಗಳನ್ನು ಹಾಕಿಕೊಟ್ಟು, ಸಂಸ್ಕೃತಭಾಷೆಯಿಂದ ಒಂದು ಶಿಲಾಶಾಸನವನ್ನು ಬರೆದುಕೊಟ್ಟಿದ್ದಾನೆ. ಆ ಶಾಸನದಲ್ಲಿ—

---

* ಈ ಜಂಗಮಪುರದ ಭೂಮಿಯಲ್ಲಿಯೇ ಪಂಡಿತ ಮದನಮೋಹನ ಮಾಲವೀಯರವರು ಜಗದ್ವಿಖ್ಯಾತವಾದ "ಹಿಂದೂವಿಶ್ವವಿದ್ಯಾಲಯ" ವನ್ನು ಸ್ಥಾಪಿಸಿದ್ದಾರೆ.

ಶ್ರೀವಿಶ್ವಮಲ್ಲನೃಪತೇರ್ಗಂಗಾದೇವೀ ಸುತೌ ಸುಷುವೇ ।
ತ್ರೈಲೋಕ್ಯಮಲ್ಲಭೂಪಸ್ತ್ರಿಭುವನಮಲ್ಲಶ್ಚ ಭೂಪಾಲೌ ॥


ಈ ಪ್ರಕಾರವಾಗಿ ಅನೇಕಶ್ಲೋಕಗಳಿಂದ ರಾಜನ ವಂಶವೂ, ಅವನ ಪರಾಕ್ರಮವೂ ವರ್ಣಿಸಲ್ಪಟ್ಟಿವೆ. ಮುಂದೆ—

ಶೈವಪ್ರೀತಿಮಿಮಾಂ ಚ ದೈವವಶತೋ ನಷ್ಟಾಂ ಪುನಃ ಸೃಷ್ಟವಾನ್ ।
ಸೃಷ್ಟಾಂ ಚಾಪಿ ಶಿವಾರ್ಪಿತಾಂ ಪ್ರತಿದಧೇ ಶೈವಾಗಮಾಚಾರತಃ ॥
ಶೈವಾಚಾರಕೃತಃ ಶಿವಾಗಮವಿಧೇಃ ಶೈವಾಃ ಶಿವಾಲಂಬನಾಃ
ಕಿಂ ವಾ ಸಂತಿ ನ ಸಂತಿ ಹಂತ ಜಗತಿ ಪ್ರಖ್ಯಾತಸತ್ಕೀರ್ತಯೇ ।
ಕಿಂತು ಕ್ಷಾಂತಿವಿವೇಕಶಾಂತಿಪರಮಾನಂದೈಕವೀರಪ್ರಭು
ರ್ವೇದಶ್ರೀಯುತಮಲ್ಲಿಕಾರ್ಜುನಯತಿಃ ಶೈವಶ್ಚ ತತ್ತ್ವಂ ಪರಂ ॥

ಎಂದು ಉಲ್ಲೇಖಿಸಲ್ಪಟ್ಟಿದೆ. ಈಶಾಸನದಿಂದತಿಳಿದುಬರುವುದೇನಂದರೆ— **ವಿಶ್ವಮಲ್ಲನೃಪತಿ** ಎಂಬ ಮಹಾರಾಜನಿಗೆ **ಗಂಗಾದೇವಿ**ಯೆಂಬ ಪತ್ನಿಯಿದ್ದಳೆಂದೂ, **ತ್ರೈಲೋಕ್ಯಮಲ್ಲ-ತ್ರಿಭುವನಮಲ್ಲ**ರೆಂಬ ಇಬ್ಬರು ಪುತ್ರರಿದ್ದರೆಂದೂ, ಈ ಮಹಾರಾಜನ ವಂಶದವರು ಬಹು ಕಾಲದಿಂದ ಶಿವಭಕ್ತಿಸಂಪನ್ನರಾಗಿ ರಾಜ್ಯವನ್ನು ಪರಿಪಾಲನಮಾಡುತ್ತಿದ್ದರೆಂದೂ, ಹೀಗಿರುವ ಸಮಯದಲ್ಲಿ ಈ ವಿಶ್ವಮಲ್ಲಭೂಪಾಲನು ದುರ್ದೈವವಶಾತ್ ಶಿವಭಕ್ತಿಯಿಂದ ದೂರನಾದನೆಂದೂ, ಶಿವಭಕ್ತಿ ದೂರನಾದ ಈ ಮಹಾರಾಜನನ್ನು **ಮಲ್ಲಿಕಾರ್ಜುನಸ್ವಾಮಿ**ಗಳೆಂಬವರು **ಶೈವಾಗಮ**ಪದ್ಧತಿಗನುಸಾರವಾಗಿ ಶಿವಭಕ್ತಿಸಂಪನ್ನನನ್ನಾಗಿಮಾಡಿದರೆಂದೂ, ಈ ಮಹಾಸ್ವಾಮಿಗಳವರು ಶಾಂತಿ, ದಾಂತಿ, ವಿವೇಕ, ವೈರಾಗ್ಯಾದಿಗಳಿಂದ ಯುಕ್ತರಾಗಿದ್ದರೆಂದೂ ಸ್ಪಷ್ಟವಾಗುತ್ತದೆ. ಈ ರೀತಿಯಾಗಿ ಈ ಶಿಲಾಶಾಸನದಲ್ಲಿ ಅನೇಕಸಂಸ್ಕೃತಶ್ಲೋಕಗಳು ಕೆತ್ತಲ್ಪಟ್ಟಿದ್ದು, ಮುಂದೆ ನೇಪಾಳೀಭಾಷೆಯಲ್ಲಿ ಕೆಲವು ಮಹತ್ತ್ವದ


ವಿಷಯಗಳು ಉಲ್ಲೇಖಿಸಲ್ಪಟ್ಟಿವೆ. ಈ ಮಹಾರಾಜನ ವಂಶದ ಮೂಲಪುರುಷನಾದ **ಜಯರುದ್ರಮಲ್ಲದೇವ**ನೆಂಬ ಮಹಾರಾಜನು ಈ **ಜಂಗಮವಾಡೀ** ಮಠಕ್ಕೆ ಅನೇಕದಾನಗಳನ್ನು ಮಾಡಿದ್ದರೂ, ಈ ಸಮಯದಲ್ಲಿ ನಾನು (**೨೦೦ ಮೂರೀಭೂಲಾ**) ಭೂಮಿಯನ್ನು ಭಕ್ತಿಪೂರ್ವಕವಾಗಿ ಸಮರ್ಪಿಸಿದ್ದೇನೆಂದು ಉಲ್ಲೇಖಿಸಿದ್ದಾನೆ. ಈ ದಾನಶಾಸನವು **ವಿಕ್ರಮಾರ್ಕಸಂವತ್ ೬೯೨ ಜ್ಯೇಷ್ಠ ಶು|| ೮** ದಿವಸ ಬರೆಯಲ್ಪಟ್ಟಿದೆ. ಈ ಹೊತ್ತಿಗೆ ಈ ಶಿಲಾಶಾಸನವನ್ನು ಬರೆದು ಕೊಟ್ಟು **೧೨೯೪** ವರ್ಷಗಳಾದವು. ಈ ಶಾಸನವು ಈಗಲೂ ನೇಪಾಳದೇಶದ **ಭಾತಗಾಂವ** ಎಂಬ ಗ್ರಾಮದಲ್ಲಿ ವಿರಾಜಿಸುತ್ತಿರುವದು. ಈ ಯಾವತ್ತು ಶಾಸನಗಳನ್ನು ವಿಚಾರಮಾಡಿನೋಡಿದರೆ ಪ್ರಾಚೀನರಾಜರೆಲ್ಲ ಶಿವಭಕ್ತಿಯಿಂದ ಕೂಡಿಕೊಂಡು, ಪೀಠಾಚಾರ್ಯರ ಶಿಷ್ಯರಾಗಿ ರಾಜ್ಯವನ್ನು ಪರಿಪಾಲಿಸುತ್ತಿದ್ದರೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದಲ್ಲದೆ **ರೀವಾ, ಮೈಹರ್, ಮೈಸೂರು** ಮೊದಲಾದ ಹಿಂದೂಮಹಾರಾಜರೂ ಸಹ ಕಾಶೀಪೀಠಕ್ಕೆ ದಾನಮಾಡಿ ದಾನ ಶಾಸನಗಳನ್ನು ಬರೆದುಕೊಟ್ಟಿದ್ದಾರೆ. ಈ ಹಿಂದೂಮಹಾರಾಜರಲ್ಲದೆ, **ಹುಮಾಯೂನ್, ಅಕ್ಬರ್, ಜಹಂಗೀರ್, ಷಹಜಹಾನ್, ಔರಂಗಜೇಬ್, ಮುಹಮ್ಮದ್‌ಷಾ** ಮೊದಲಾದ ಮೊಗಲ್‌ಚಕ್ರವರ್ತಿಗಳೂ ಸಹ ಪೀಠಾಚಾರ್ಯರಲ್ಲಿ ವಿಶೇಷಭಕ್ತಿಯನ್ನಿಟ್ಟು **ಕಾಶೀಪೀಠಕ್ಕೆ** ಅನೇಕಜಹಗೀರುಗಳನ್ನು ಹಾಕಿಕೊಟ್ಟಿದ್ದಾರೆ. ಈ ಚಕ್ರವರ್ತಿಗಳು ಬರೆದುಕೊಟ್ಟಿರುವ ಅನೇಕದಾನಶಾಸನಗಳು ಈಗಲೂ ಕಾಶೀಪೀಠದಲ್ಲಿ ವಿರಾಜಿಸುತ್ತಿರುವವು. ಹಿಂದೂಮತದ ಮಹಾವೈರಿಯಾದ **ಔರಂಗಜೇಬನು** ಕಾಶೀಪೀಠವನ್ನು ನಾಶಮಾಡಬೇಕೆಂದು ದಂಡೆತ್ತಿಬಂದಾಗ್ಗೆ, ಆ ಪೀಠದ ಪ್ರಭಾವದಿಂದ ಔರಂಗಜೇಬನಿಗೂ ಹಾಗೂ ಅವನ

ವಿಕ್ರಮಸಂವತ್ ೬೩೧ (ಕ್ರಿ.ಶ. ೫೭೪) ರಲ್ಲಿದ್ದ ಜಯನಂದದೇವನ ಶಾಸನ




ಕಾಶೀ ಶ್ರೀಮನ್ಮಹಾರಾಜಾಧಿರಾಜ ಜಯನಂದದೇವನ ದಾನಪತ್ರ.


(೧೩೬೪ ವರ್ಷಗಳ ಪೂರ್ವದಲ್ಲಿ ಜಯನಂದದೇವಮಹಾರಾಜನು ಬರೆದುಕೊಟ್ಟ ದಾನ ಮೂಲದಾನಶಾಸನವು ನಷ್ಟ! ಆಮಹಾರಾಜರ ಪ್ರತಿಲಿಪಿಯಿದ್ದುದರಿಂದ, ಅತ್ಯಂತಜೀರ್ಣವಾಗಿರುವ ಆ ಶಾಸನವನ್ನೇ ಶ್ರೀನಗರದ ಕಾಶೀ ಮಹಾರಾಜರು ತಾಮ್ರಪಟದಲ್ಲಿ ಕೆತ್ತಿಸಿ ತಮ್ಮ ಸಹಿ ಮಾಡಿರುವ ಶಾಸನ.)




ಹುಮಾಯೂನ್ ಚಕ್ರವರ್ತಿಯು ಕಾಶೀಪೀಠಕ್ಕೆ
ಬರೆದುಕೊಟ್ಟಿರುವ ದಾನಶಾಸನ.




ಅಕಬರ್, ಜಹಾಂಗೀರ್ ಮೊದಲಾದ ಚಕ್ರವರ್ತಿಗಳಿಂದ
ಅಂಗೀಕೃತವಾಗಿರುವ ಕಾಶೀಪೀಠದ ಶಾಸನ.




ಷಹಜಹಾನ್ ಚಕ್ರವರ್ತಿಯು ಕಾಶೀಪೀಠಕ್ಕೆ
ಬರೆದುಕೊಟ್ಟಿರುವ ಶಾಸನ.




ಔರಂಗಜೇಬ್ ಚಕ್ರವರ್ತಿಯು ಕಾಶೀಕ್ಷೇತ್ರಕ್ಕೆ
ಬರೆದುಕೊಟ್ಟಿರುವ ಶಾಸನ.



ಮೈಹರ ಮಹಾರಾಜರವರು ಕಾಶೀಪೀಠಕ್ಕೆ
ಬರೆದುಕೊಟ್ಟಿರುವ ಶಾಸನ.



ರೀವಾಸಂಸ್ಥಾನದ ಮಹಾರಾಜರವರು ಕಾಶೀಕ್ಷೇತ್ರಕ್ಕೆ
ಬರೆದು ಕೊಟ್ಟಿರುವ ದಾನಶಾಸನ.



ಮೈಸೂರುಶ್ರೀಮನ್ಮಹಾರಾಜಾಧಿರಾಜ ಮುಮ್ಮಡಿಶ್ರೀಕೃಷ್ಣರಾಜ ಒಡೆಯರ್ ಬಹದ್ದೂರವರು ಕಾಶೀಪೀಠಕ್ಕೆ ಬರೆದುಕೊಟ್ಟಿರುವ ತಾಮ್ರಶಾಸನ.

ದಂಡಿಗೂ ನಾನಾರೀತಿಯಾಗಿ ದುಃಖವು ಪ್ರಾಪ್ತವಾಗಲು, ಆಗ್ಗೆ ಔರಂಗಜೇಬನು ಗರ್ವದಿಂದ ದೂರನಾಗಿ, ಕಾಶೀಪೀಠಕ್ಕೆ ಉರ್ದು ಭಾಷೆಯಲ್ಲಿ ಒಂದು ಶಾಸನವನ್ನು ಬರೆದು, ಅದಕ್ಕೆ ತನ್ನ ರುಜುಮಾಡಿ ಕೊಟ್ಟಿದ್ದಾನೆ. ಔರಂಗಜೇಬನು ತನ್ನ ಶಾಸನದಲ್ಲಿ—

"ನಾನು ಜಂಗಮವಾಡೀಮಠಕ್ಕೆ ಹೋದಕೂಡಲೇ ಆ ಮಠದ ಮೂರ್ತಿಯು ನನ್ನ ಕಣ್ಣೆದುರಿಗೆ ಕಾಣಿಸಿಕೊಂಡಿತು. ಆ ಮೂರ್ತಿಯು ಕಪ್ಪಾಗಿಯೂ, ಪ್ರಲಯಾಗ್ನಿಯಂತೆ ಕೆಂಪುಕಣ್ಣುಗಳುಳ್ಳುದಾಗಿಯೂ, ಕುರಿಯ ಕೂದಲುಗಳಂತೆ ಮಸ್ತಕದಲ್ಲಿ ಉಂಗುರಗೂದಲುಗಳುಳ್ಳುದಾಗಿಯೂ, ಆಕಾರದಲ್ಲಿ ಚಿಕ್ಕದಾಗಿದ್ದರೂ ಭೂಮಿಗೂ ಆಕಾಶಕ್ಕೂ ಏಕಾಕಾರವಾಗಿ ನಿಂತಿರುವುದನ್ನು ಕಂಡು ಭಯಗೊಂಡು ಶರಣಾಗತನಾಗಿ ಭಕ್ತಿಯಿಂದ ಇಂತಿಷ್ಟು ದಾನಮಾಡಿರುವೆನು."

ಇತ್ಯಾದಿವಿಷಯಗಳನ್ನು ಉಲ್ಲೇಖಿಸಿದ್ದಾನೆ. ಅಸ್ತು !

ಇಲ್ಲಿಯುವರೆಗೆ ತೋರಿಸಿದ ಶಾಸನಗಳಿಂದ ಮೂಲಪೀಠಗಳ ಪ್ರಾಚೀನತ್ವವು ಸ್ಥಿರಪಟ್ಟಂತಾಯಿತು. ಈ ಮೂಲಪೀಠಗಳಿಗೆ ಸಂಬಂಧಿಸಿದ ಶಾಖಾಮಠಗಳ ವಿಷಯದಲ್ಲಿಯೂ ಸಹ ಅನೇಕಪ್ರಾಚೀನ ಶಾಸನಗಳು ದೊರೆಯುತ್ತವೆ. ಶಿಲಾಶಾಸನಶೋಧನದಲ್ಲಿ ಅತ್ಯಂತ ಪ್ರವೀಣರೆಂದು ಪ್ರಸಿದ್ಧರಾಗಿರುವ **ಮಿ|| ರೈಸ್ ಸಾಹೇಬರು** ತಾವು ಬರೆದಿರುವ (Mysore Inscriptions) ಎಂಬ ಪುಸ್ತಕದಲ್ಲಿ ಶಿವಮೊಗ್ಗಾ ಡಿ|| ಶಿಕಾರಿಪುರ ತಾಲೂಕಿಗೆ ಸೇರಿದ **ಬೆಳಗಾಂವಿ** ಎಂಬ ಗ್ರಾಮದಲ್ಲಿ ದೊರೆತ ಕೆಲವು ಶಾಸನಗಳನ್ನು ಉದಾಹರಿಸಿದ್ದಾರೆ. ಆ ಶಾಸನಗಳಲ್ಲಿ—ಬೆಳಗಾಂವಿಗ್ರಾಮದಲ್ಲಿ **೧. ಹಿರೇಮಠ, ೨. ಪಂಚಲಿಂಗನಮಠ, ೩. ತ್ರಿಪುರಾಂತಕನಮಠ, ೪. ವಾಮಶಕ್ತಿಮಠ, ೫. ಕೋಡಿಯಮಠ** ಎಂಬ ಹೆಸರಿನ ಐದು ಮಠಗಳಿದ್ದವೆಂದೂ,

ಕ್ರಿಸ್ತಶಕ **೧೦೩೪** ರಲ್ಲಿ ಮೊದಲನೆಯ ೩ ಮಠಗಳಿಗೆ ಅನುಕ್ರಮವಾಗಿ **೧. ಮೂಳಿಗಮಧುಕೇಶ್ವರಪಂಡಿತ, ೨. ಸರ್ವೇಶ್ವರಪಂಡಿತದೇವ, ೩. ಜ್ಞಾನಶಕ್ತಿದೇವ** ಎಂಬ ಹೆಸರಿನ ಮೂವರು ಗುರುವರ್ಗದ ಸ್ವಾಮಿಗಳು ಅಧಿಕಾರಿಗಳಾಗಿದ್ದರೆಂದೂ, ಮುಂದೆ ೧೧೧೨ ರಲ್ಲಿ ಇವೇ ಮಠಗಳಿಗೆ ಅನುಕ್ರಮವಾಗಿ **ಶಾಂತಿಶಿವಪಂಡಿತ, ಶಕ್ತಿಪಂಡಿತ, ಕ್ರಿಯಾಶಕ್ತಿಪಂಡಿತ**ರೆಂಬ ಸ್ವಾಮಿಗಳು ಅಧಿಕಾರಿಗಳಾಗಿದ್ದರೆಂದೂ ಉಲ್ಲೇಖಿಸಲ್ಪಟ್ಟಿದೆ. ೪ ನೆಯ ವಾಮಶಕ್ತಿಮಠದಲ್ಲಿ ಕ್ರಿಸ್ತಶಕ ೧೧೨೯ ರಲ್ಲಿ **ಸೋಮೇಶ್ವರಯ್ಯ** ಮತ್ತು **ವಿದ್ಯಾಭರಣಯ್ಯ** ಎಂಬ ಇಬ್ಬರು ಮಾಹೇಶ್ವರರಿದ್ದರೆಂದೂ, ೫ನೆಯ ಕೋಡಿಯಮಠದಲ್ಲಿ **ಶ್ರೀಕಂಠಶಿವಯೋಗಿ** ಎಂಬ ಸ್ವಾಮಿಗಳಿದ್ದರೆಂದೂ, ಇವರ ಕಂಠವು ಯಾವಾಗಲೂ ವೇದವಾಕ್ಯಗಳಿಂದ ಅಲಂಕೃತವಾಗಿರುತ್ತಿತ್ತೆಂದೂ, ಇವರು ತರ್ಕಶಾಸ್ತ್ರದಲ್ಲಿ ಘನವಾದ ಪಂಡಿತರಿದ್ದರೆಂದೂ, ಶಿವಧ್ಯಾನದಲ್ಲಿ ಮಗ್ನರೂ, ತಪಶ್ಚರ್ಯೆಯಲ್ಲಿ ಧೀರರೂ, ಅತ್ಯಂತಸದ್ಗುಣಿಗಳೂ ಆಗಿದ್ದರೆಂದೂ, ಇವರಿಗೆ **ಸೋಮೇಶ್ವರಯ್ಯ**ನೆಂಬ ಶಿಷ್ಯನಿದ್ದನೆಂದೂ, ಈ ಸೋಮೇಶ್ವರಯ್ಯನು ಯಮ-ನಿಯಮಾದಿಯೋಗಶಾಸ್ತ್ರಕ್ರಿಯೆಯಲ್ಲಿ ನಿಪುಣನಿದ್ದನೆಂದೂ, ಇವನಿಗೆ **ಮಲ್ಲಿಕಾರ್ಜುನಾಚಾರ್ಯ**ನೆಂಬ ಶಿಷ್ಯನಿದ್ದನೆಂದೂ, ಈ ಮಲ್ಲಿಕಾರ್ಜುನಾಚಾರ್ಯನೇ ತನ್ನ ಗುರುಗಳ ಸನ್ಮಾನಕ್ಕೋಸ್ಕರ ಕ್ರಿಸ್ತಶಕ ೧೧೧೨ ರಲ್ಲಿ ಈ ಶಾಸನವನ್ನು ಬರೆದುಕೊಟ್ಟಿರುವನೆಂದೂ ಉಲ್ಲೇಖಿಸಲ್ಪಟ್ಟಿದೆ. ಈ ಮಹನೀಯರ ಹೆಸರುಗಳನ್ನು ನೋಡಿದರೆ ಪೂರ್ವಕಾಲದಲ್ಲಿ ಗುರುವರ್ಗದಲ್ಲಿ ಎಂಥ ಎಂಥ ಪಂಡಿತರಿದ್ದರೆಂಬುದೂ, ಇವರ ಮಠಗಳು ಆ ಕಾಲದಲ್ಲಿ ಎಷ್ಟು ವೈಭವದಿಂದಿದ್ದವೆಂಬುದೂ ಈ ಶಾಸನಗಳ ಮೇಲಿಂದಲೇ ಸ್ಪಷ್ಟವಾಗಿ ತಿಳಿದುಬರುತ್ತದೆ.

ಅಲ್ಲದೆ ೧೮೭೫ ನೆಯ ಇಸವಿಯಲ್ಲಿ ಸಿದ್ಧವಾಗಿರುವ **ಬೊಂಬೈ ರಾಯಲ್ ಏಷಿಯಾಟಿಕ್ ಸೊಸೈಟಿ ಬ್ರಾಂಚಿನ** ೧೧ ನೆಯ ರಿಪೋರ್ಟಿನ ೨೨೭ ರಿಂದ ೨೭೭ ನೆಯ ಪುಟದವರೆಗೆ ಇರುವ ಅನೇಕ ಕನ್ನಡಲಿಪಿಯ ತಾಮ್ರಶಾಸನಗಳ ಸಮುದಾಯದಲ್ಲಿರುವ ಒಂದು ಶಾಸನದಲ್ಲಿ—**ಚಾವುಂಡರಾಜನ** ವಿಷಯವೂ, ಅವನ ಪತ್ನಿಯಾದ **ಮಹಾದೇವಿಯ** ವಿಷಯವೂ ಮತ್ತು **ಪೇರ್ಮಾಡಿ** ಎಂಬ ಹೆಸರಿನ ಸಿಂಧುವಂಶದ ರಾಜನ ವಿಷಯವೂ ಉಲ್ಲೇಖಿಸಲ್ಪಟ್ಟಿದ್ದು, ಇವರಿಗೆ "**ಶಿವಾಗಮಸಮಾಕರ್ಣನಕರ್ಣಪೂರರುಂ**" ಎಂಬ ವಿಶೇಷಣವು ಕೊಡಲ್ಪಟ್ಟಿದೆ. ಈ ಶಾಸನದಲ್ಲಿ, **ನೀಲಕಂಠಪಂಡಿತದೇವ** ಎಂಬ ಮಾಹೇಶ್ವರರಿಗೆ ಲಿಂಗಮುದ್ರಾಂಕಿತವಾದ ಭೂಮಿಯನ್ನು ದಾನಮಾಡಿರುವ ವಿಷಯವು ಪ್ರತಿಪಾದಿಸಲ್ಪಟ್ಟಿರುತ್ತದೆ. ಈ ತಾಮ್ರಶಾಸನದಲ್ಲಿ—

> ಸರ್ವಸಮಸ್ಯವಾಗಿ ಬಿಟ್ಟ ಭೂಮಿಯಸ್ಥಲಂ । ಮುದಮೊಳಲದಾರಿಯಂ ಬಡಗಣವಯಮಲದಿಂ । ತೆಂಕಣವಾಸಿಗಾವುಂಡನಬಳದಿಂ । ಉತ್ತರ ಮೂವತ್ತಾರಕ್ಕೆ ಲಿಂಗಮುಂ ತಪೋಧನರುಂ ಕವಿತೆಯುಂ ಬೆರಸುಮಾಡಿ ॥

ಎಂದು ಉಲ್ಲೇಖಿಸಿ, ನೀಲಕಂಠದೇವರೆಂಬ ಮಾಹೇಶ್ವರಪಂಡಿತರಿಗೆ ಭೂದಾನವನ್ನು ಮಾಡಿದ್ದಾರೆ. ದಾನವನ್ನುಮಾಡಿದ ಈ **ಪೇರ್ಮಾಡಿ** ರಾಜರು **ಕ್ರಿ. ಶ. ೯೫೦** ರಲ್ಲಿ ರಾಜ್ಯವಾಳುತ್ತಿದ್ದರೆಂದು ಆ ಶಾಸನದಿಂದಲೇ ವೇದ್ಯವಾಗುತ್ತದೆ. ನಾಲ್ಕನೆಯ ಶಾಸನದಲ್ಲಿ—

> "ಭಸ್ಮೋದ್ಧೂಳಿತಗಾತ್ರರುಂ, ಕೌಪೀನಾಜಿನರುಂ, ರುದ್ರಾಕ್ಷಮಾಲಾಧರರುಂ, ಪಾತುಲಾಗಮಸಮಯಸಮುದ್ಧಾರರುಂ, ಜಂಗಮಲಿಂಗಾವತಾರರುಂ"

ಎಂಬ ವಾಕ್ಯವು ಕೆತ್ತಲ್ಪಟ್ಟಿದ್ದು, **ಸರ್ವೇಶ್ವರ** ಎಂಬ ಹೆಸರಿನ ಮಾಹೇಶ್ವರಪಂಡಿತರಿಗೆ ಭೂದಾನಮಾಡಿದ ವಿಷಯವು ಉಲ್ಲೇಖಿಸ

ಲ್ಪಟ್ಟಿದೆ. ಇದೇ ರೀತಿಯಾಗಿ ಗುರುವರ್ಗದ ಮಠಗಳ ವಿಷಯದಲ್ಲಿ ಇನ್ನೂ ಅನೇಕಾನೇಕಶಾಸನಗಳು ಅಲ್ಲಲ್ಲಿ ಕಂಗೊಳಿಸುತ್ತಲಿವೆ. ಪೂರ್ವಕಾಲದಲ್ಲಿ ಗುರುವರ್ಗದ ಮಠಾಧಿಕಾರಿಗಳು ರಾಜಾಧಿರಾಜರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು, ಅವರಿಂದ ಗುರುಕಾಣಿಕೆಯನ್ನು ಸ್ವೀಕರಿಸುತ್ತ, ಅನಂತಾನಂತಭೂದಾನವನ್ನು ಪಡೆದು ಜಗದ್ವಂದ್ಯರಾಗಿ ಹೋಗಿರುವರು. ಇಂಥ ಪೂಜ್ಯಗುರುವರ್ಗಮಠಗಳ ಸ್ಥಿತಿಯು ಕಾಲ ವೈಚಿತ್ರ್ಯದಿಂದ ಸದ್ಯಃ ಹೀನಾವಸ್ಥೆಗೆ ಬಂದಿರುವುದನ್ನು ನೋಡಿದರೆ ಅತ್ಯಂತವ್ಯಸನವೆನಿಸುತ್ತದೆ. ಈ ಕಾಲದ ಗುರುವರ್ಗದ ಮಠಾಧಿ ಕಾರಿಗಳು ತಮ್ಮ ಗುರುತ್ವಕ್ಕನುಸಾರವಾಗಿ ಶಾಸ್ತ್ರಾಧ್ಯಯನವನ್ನು ಮಾಡದೆ, ಮನಬಂದಂತೆ ವರ್ತಿಸುವುದರಿಂದ ಶಿಷ್ಯರಲ್ಲಿದ್ದ ಭಕ್ತಿಯು ದಿನೇ ದಿನೇ ಹ್ರಾಸವಾಗುತ್ತ ನಡೆದು, ಈ ಮತದಲ್ಲಿ ಗುರುಭಕ್ತಿಯು ಲಯವಾಗಹತ್ತಿದೆ. ಆದುದರಿಂದ ಗುರುವರ್ಗದ ಮಠಾಧಿಕಾರಿಗಳು ಈ ವಿಷಯವನ್ನು ಪೂರ್ಣಗಮನಕ್ಕೆ ತಂದುಕೊಂಡು, ಧರ್ಮಶಾಸ್ತ್ರ ಪಾರಂಗತರಾಗಿ, ತಮ್ಮ ಪೂರ್ವಜರಂತೆ ತಾವೂ ಕೀರ್ತಿಶಾಲಿಗಳಾಗಿ, ಶಿಷ್ಯೋದ್ಧಾರಕಾರ್ಯದಲ್ಲಿ ತೊಡಗುವವರಾಗಲೆಂದು ಹಾರೈಸುತ್ತೇನೆ.

ಈ ಮತದ ಪ್ರಾಚೀನತ್ವವು ಇಲ್ಲಿಯವರೆಗೆ ಅನೇಕಾಧಾರ ಗಳಿಂದ ಸ್ಥಿರಗೊಳಿಸಲ್ಪಟ್ಟಿತು. ಇನ್ನು ಈ ಮತದ ತತ್ತ್ವವನ್ನು ಪ್ರತಿಪಾದಿಸತಕ್ಕ ಪ್ರಾಚೀನಗ್ರಂಥಗಳ ವಿಷಯವನ್ನು ಸಂಕ್ಷೇಪವಾಗಿ ವಿವರಿಸೋಣ! ಈ ಮತಾಚಾರ್ಯರು ಮತ್ತು ಈ ಮತದ ಅನೇಕಜನ ಪಂಡಿತರು ಅನೇಕಮಹತ್ತ್ವದ ಗ್ರಂಥಗಳನ್ನು ರಚಿಸಿದ್ದಾರೆ. ಆ ಗ್ರಂಥ ಗಳ ವಿಷಯವೇ ಈ ಮತದ ಜನರಿಗಾಗಲಿ, ಅನ್ಯಮತದವರಿಗಾಗಲಿ ತಿಳಿಯದಾಗಿದೆ. ಶ್ರೀಜಗದ್ಗುರುಪಂಚಾಚಾರ್ಯರು ಭೂಮಂಡಲದಲ್ಲಿ ವೀರಶೈವಮತವನ್ನು ಸ್ಥಾಪಿಸಿ, ಈ ಮತದ ಸಿದ್ಧಾಂತವು ಸರ್ವರಿಗೂ

ತಿಳಿಯಲೆಂಬುದ್ದೇಶದಿಂದ ಶಿವಸೂತ್ರ, ಬ್ರಹ್ಮಸೂತ್ರ, ಉಪನಿಷದಾದಿಗಳ ಮೇಲೆ ಭಾಷ್ಯಗಳನ್ನು ರಚಿಸಿದರು. ಈ ಭಾಷ್ಯಗಳು **ರೇಣುಕಭಾಷ್ಯ, ದಾರುಕಭಾಷ್ಯ, ಏಕೋರಾಮಭಾಷ್ಯ ಪಂಡಿತಭಾಷ್ಯ, ವಿಶ್ವಾರಾಧ್ಯಭಾಷ್ಯ** ಎಂಬ ಹೆಸರುಗಳಿಂದ ಪ್ರಸಿದ್ಧವಿರುವವು. ಈ ಪೂಜ್ಯಪಾದರು ಲೋಕೋತ್ತರವಾದ ಭಾಷ್ಯಗಳನ್ನು ರಚಿಸಿ, ಈ ಮತಕ್ಕೆ ವಿಶೇಷವಾದ ಗೌರವವನ್ನು ತಂದಿದ್ದರೂ, ಈ ಮತದ ದೈವದುರ್ವಿಲಾಸದಿಂದ ಇಲ್ಲಿಯವರೆಗೆ ಇವರು ರಚಿಸಿದ ಒಂದು ಭಾಷ್ಯವೂ ದೊರೆತಿರುವುದಿಲ್ಲವೆಂದು ಬಹುವಿಷಾದದಿಂದ ಹೇಳಬೇಕಾಗಿದೆ. ಮಹಾನಾರಾಯಣೋಪನಿಷತ್ತಿಗೆ ಭಾಷ್ಯವನ್ನು ಬರೆದಿರುವ ವೃಷಭಪಂಡಿತಾರಾಧ್ಯರೆಂಬ ಪ್ರಾಚೀನಪಂಡಿತರು, ೧೧ ನೆಯ ಅನುವಾಕದಲ್ಲಿರುವ "**ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಂ**" ಇತ್ಯಾದಿಮಂತ್ರಗಳಿಗೆ ಭಾಷ್ಯವನ್ನು ಬರೆಯುವ ಸಂದರ್ಭದಲ್ಲಿ—

ರೇವಣಸಿದ್ಧಮರುಲಸಿದ್ಧೈಕೋರಾಮಸಿದ್ಧಪಂಡಿತಾರಾಧ್ಯಾದಯಃ "ಸಹಸ್ರಶೀರ್ಷಂ ದೇವಮಿತ್ಯಾದಿಪರಶಿವಧರ್ಮಪ್ರತಿಪಾದಕವಾಕ್ಯಾನಾಂ ನಾರಾಯಣಾತ್ಮಕವಿಷ್ಣುಪ್ರತಿಪಾದಕತ್ವೇಽಪಿ ಏತದನುವಾಕಸ್ಯ ಶಿವಪರತ್ವೇ ನ ಕಶ್ಚಿದಪಿ ದೋಷಃ । ಶಿವಸ್ಯ ಶಕ್ತಿರ್ವಿನಿಯೋಗಕಾಲೇ ಚತುರ್ವಿಧಾಽಭೂಚ್ಛಿವಸತ್ತ್ರಸಾದಾತ್। ಭೋಗೇ ಭವಾನೀ ಪುರುಷೇಷು ವಿಷ್ಣುಃ ಕ್ರೋಧೇ ಚ ಕಾಲೀ ಸಮರೇ ಚ ದುರ್ಗಾ ॥ ಇತಿ ಶ್ರುತಾ................ಶಿವಸ್ಯ ಶಕ್ತತ್ವೇನ ವಿಷ್ಣೋಃ ಶಕ್ತಿತ್ವೇನ ಸ್ಪಷ್ಟಮುಪದಿಷ್ಟತ್ವಾತ್, ಶಕ್ತಿಶಕ್ತಿಮತೋರಭೇದನಿಯಮಾತ್, ಶಕ್ತಧರ್ಮಾಃ ಶಕ್ತಾ ಸಂಭವಂತೀತಿನ್ಯಾಯಾತ್, ...ಶಕ್ತಶಕ್ತಿತ್ವೇನ ತಯೋರಭೇದವ್ಯಪದೇಶಾಚ್ಚ" ಇತಿ ವದಂತಿ ॥

ಉದ್ಭಟಾರಾಧ್ಯವೇಮನಾರಾಧ್ಯವಿಶ್ವಾರಾಧ್ಯಾದಯಸ್ತು "ಅಸ್ಯಾಮುಪನಿಷದಿ ದಹರೋಪಾಸನಾವಿಷಯೇ ನಾರಾಯಣೋಪಾಸಕತ್ವಶಿವೋಪಾಸ್ಯತ್ವನಿರ್ಣಯೇ ಸಹಸ್ರಶೀರ್ಷಾನುವಾಕಗತಾನಿ 'ನಾರಾಯಣಪರಂಬ್ರಹ್ಮ

ತತ್ತ್ವಂ ನಾರಾಯಣಃ ಪರಃ' ಇತ್ಯಾದಿವಚನಾನಿ ವಿರುಧ್ಯೇರನ್ನಿತಿ ಮಾ ಶಂಕಿಷ್ಠಾಃ । ತದ್ಭಾವಭಾವನಾಪನ್ನಸ್ಯ ನಾರಾಯಣಸ್ಯಾನಿತರಸಾಧಾರಣಹೃದಯಾಂತರ್ವರ್ತಿಜ್ಯೋತಿರ್ಲಿಂಗಾನುಸಂಧಾನಸಾಮರ್ಥ್ಯಲಿಂಗೇನ 'ಮುಕ್ತಃ ಶಿವಸಮೋ ಭವೇದಿತಿ' ನ್ಯಾಯಾಚ್ಚ ತಥೈವ ಯೋಜಯಿತುಂ ಶಕ್ಯಂ" ಇತಿ ಪ್ರೋಚುಃ ॥

ಈ ರೀತಿಯಾಗಿ ವಾಕ್ಯಗಳನ್ನು ಬರೆದು ಶ್ರೀರೇಣುಕಾದಿ ಪಂಚಾಚಾರ್ಯರ ಭಾಷ್ಯಾಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇದನ್ನೇ ನೋಡಿ ನಾವು ಎಷ್ಟೋ ಸಂತೋಷಪಡಬೇಕಾಗಿದೆ. ಇದೇ ವೃಷಭಪಂಡಿತಾರಾಧ್ಯರು ತಮ್ಮಿಂದ ರಚಿಸಲ್ಪಟ್ಟಿರುವ ತೈತ್ತಿರೀಯ ಭಾಷ್ಯದ ಆರಂಭದಲ್ಲಿ—

ವೇದವ್ಯಾಸಂ ಸೂತ್ರಕಾರಂ ದೂರ್ವಾಸಂ ವೃತ್ತಿಕಾರಕಂ ।
ಭಾಷ್ಯಕೃತ್ಪಂಡಿತಾರಾಧ್ಯಂ ಪ್ರಪದ್ಯೇ ಪಾಶಮುಕ್ತಯೇ ॥

ಎಂಬೀ ಶ್ಲೋಕವನ್ನು ರಚಿಸಿ, ಬ್ರಹ್ಮಸೂತ್ರಗಳನ್ನು ರಚಿಸಿದ ವ್ಯಾಸರನ್ನೂ, ಈ ಸೂತ್ರಗಳಿಗೆ ಭಾಷ್ಯವನ್ನು ಬರೆದ **ಪಂಡಿತಾರಾಧ್ಯ**ರನ್ನೂ, ವೃತ್ತಿಯನ್ನು ಬರೆದ ದೂರ್ವಾಸಮಹರ್ಷಿಗಳನ್ನೂ ಪಾಶಬಂಧವಿಮೋಚನಕ್ಕಾಗಿ ಆಶ್ರಯಿಸುತ್ತೇನೆ; ಎಂದು ಮಂಗಲವನ್ನು ಮಾಡಿದ್ದಾರೆ. ಇದರಮೇಲಿಂದ ಪಂಡಿತಾರಾಧ್ಯರು ರಚಿಸಿದ ಭಾಷ್ಯವು ಸರ್ವೋತ್ತಮವಾಗಿರುವುದೆಂದು ವೇದ್ಯವಾಗುತ್ತದೆ.

ಈ ಪೂಜ್ಯಪಾದರು ರಚಿಸಿದ ಭಾಷ್ಯಗಳು ಸದ್ಯಃ ನಮ್ಮ ಸ್ವಾಧೀನದಲ್ಲಿ ಇಲ್ಲದಿದ್ದರೂ, ಅಲ್ಲಲ್ಲಿ ಕಂಗೊಳಿಸುವ ಪುಸ್ತಕಭಾಂಡಾಗಾರಗಳಲ್ಲಿ ದೊರೆಯುವುವಾಗಿ ತಿಳಿದುಬರುತ್ತದೆ. ಈ ಆಚಾರ್ಯರ ಭಾಷ್ಯಾದಿಗಳು ಆಂಧ್ರದೇಶನಿವಾಸಿಗಳಾದ ಆರಾಧ್ಯಬ್ರಾಹ್ಮಣರಲ್ಲಿ ವಿಶೇಷವಾಗಿರುತ್ತವೆ. ಸಿಕಂದರಾಬಾದದಲ್ಲಿರುವ ಮಾರ್ಕಂಡೇಯ

ಶಾಸ್ತ್ರಿಗಳವರಲ್ಲಿ " **ಶ್ರೀರೇಣುಕಭಾಷ್ಯ, ದಾರುಕದಿಗ್ವಿಜಯ** " ಎಂಬೀ ಎರಡು ಗ್ರಂಥಗಳು ದೊರೆಯುವುವೆಂದು ಅವರ ಪುಸ್ತಕ ಭಾಂಡಾಗಾರದ ಲಿಸ್ಟಿನಿಂದ ತಿಳಿದುಬರುತ್ತದೆ. ಅಲ್ಲದೆ **ಜರ್ಮನ್** ದೇಶದ ರಾಜಧಾನಿಯಾದ **ಬರ್ಲಿನ್** ಪಟ್ಟಣದಲ್ಲಿರುವ ಒಂದು ಲೈಬ್ರರಿಯಲ್ಲಿ **ಶ್ರೀರೇಣುಕಭಾಷ್ಯವು** ಇರುವುದೆಂದು ವದಂತಿಯುಂಟು. ಈ ಮಹಾಚಾರ್ಯರು ರಚಿಸಿದ ಭಾಷ್ಯಗಳು ಯಾವ ಕಾಲಕ್ಕೆ ನಮ್ಮ ಮತೀಯರ ಕೈಸೇರುವುವೋ, ಅಂದೇ ಈ ಮತದ ಸೌಭಾಗ್ಯವೆಂದು ಹೇಳಬೇಕಾಗುತ್ತದೆ.

ಶ್ರೀಪತಿಪಂಡಿತರು ಬ್ರಹ್ಮಸೂತ್ರಗಳ ಮೇಲೆ ರಚಿಸಿರುವ " **ಶ್ರೀಕರಭಾಷ್ಯ** " ವು ಸದ್ಯಃ ದೊರೆಯುತ್ತದೆ. ಶ್ರೀಪತಿಪಂಡಿತರು " **ಅಥಾತೋ ಬ್ರಹ್ಮಜಿಜ್ಞಾಸಾ** " ಎಂಬೀ ಸೂತ್ರಕ್ಕೆ ಭಾಷ್ಯವನ್ನು ಬರೆಯುವ ಸಂದರ್ಭದಲ್ಲಿ —

ಸಮನ್ವಯಸೂತ್ರೇ ಏಕೋರಾಮಸಿದ್ಧಭಗವತ್ಪಾದಾಚಾರ್ಯೈಃ
ಶ್ರೋತವ್ಯ ಇತ್ಯತ್ರ ಆತ್ಮಜ್ಞಾನವಿಧಿರ್ನಿರಾಕೃತಃ ॥

ಎಂದು ಉಲ್ಲೇಖಿಸಿ, ಶ್ರೀಜಗದ್ಗುರು ಏಕೋರಾಮಶಿವಾಚಾರ್ಯರಿಂದ ರಚಿಸಲ್ಪಟ್ಟಿರುವ " **ತತ್ತು ಸಮನ್ವಯಾತ್** " ಎಂಬ ಬ್ರಹ್ಮಸೂತ್ರ ಭಾಷ್ಯದ ಅಭಿಪ್ರಾಯವನ್ನು ತೋರಿಸಿರುವುದರಿಂದ, ಏಕೋರಾಮ ಭಗವತ್ಪಾದರು ಬ್ರಹ್ಮಸೂತ್ರಗಳ ಮೇಲೆ ಭಾಷ್ಯವನ್ನು ಬರೆದಿರುವರೆಂಬುದು ಸ್ಪಷ್ಟವಾಗುತ್ತದೆ.

ಈ ಮಹಾಚಾರ್ಯರಲ್ಲದೆ, ಇವರಿಂದ ಶಿವಜ್ಞಾನೋಪದೇಶವನ್ನು ಪಡೆದುಕೊಂಡ ಅಗಸ್ತ್ಯಾದಿಮಹರ್ಷಿಗಳೂ ಕೂಡ, ವೀರಶೈವ ಸಿದ್ಧಾಂತಪರವಾಗಿ ಸರ್ವೋತ್ತಮವಾದ ಗ್ರಂಥಗಳನ್ನು ರಚಿಸಿದ್ದಾರೆ.

ಶ್ರೀಜಗದ್ಗುರುರೇಣುಕಾಚಾರ್ಯರಿಂದ ಶಿವಸಿದ್ಧಾಂತಜ್ಞಾನವನ್ನು ಪಡೆದುಕೊಂಡ **ಅಗಸ್ತ್ಯ**ಮಹರ್ಷಿಗಳು ಬ್ರಹ್ಮಸೂತ್ರಗಳ ಮೇಲೆ ವೀರಶೈವಸಿದ್ಧಾಂತಪರವಾಗಿ **ವೃತ್ತಿ**ಯನ್ನು ಬರೆದಿರುವರೆಂಬುದು ಶ್ರೀಕರಭಾಷ್ಯದಿಂದ ತಿಳಿದುಬರುತ್ತದೆ. ಶ್ರೀಕರಭಾಷ್ಯವನ್ನು ರಚಿಸಿದ ಶ್ರೀಪತಿಪಂಡಿತರು ತಮ್ಮ ಭಾಷ್ಯದ ಆದಿಯಲ್ಲಿ—

ಅಗಸ್ತ್ಯಮುನಿಚಂದ್ರೇಣ ಕೃತಾಂ ವೈಯಾಸಿಕೀಂ ಶುಭಾಂ ।
ಸೂತ್ರವೃತ್ತಿಂ ಸಮಾಲೋಕ್ಯ ಕೃತಂ ಭಾಷ್ಯಂ ಶಿವಂಕರಂ ॥

ಅಂದರೆ ಅಗಸ್ತ್ಯಮಹರ್ಷಿಯಿಂದ ರಚಿಸಲ್ಪಟ್ಟ ಬ್ರಹ್ಮಸೂತ್ರ ವೃತ್ತಿಯನ್ನೇ ಮುಖ್ಯಾಧಾರವಾಗಿಟ್ಟುಕೊಂಡು, ಈ ಭಾಷ್ಯವನ್ನು ಬರೆದಿದ್ದೇನೆಂದು ಅಂದುಕೊಂಡಿದ್ದಾರೆ. ಅಗಸ್ತ್ಯಮಹರ್ಷಿಯಿಂದ ರಚಿಸಲ್ಪಟ್ಟ ಈ ಸೂತ್ರವೃತ್ತಿಯು ಸದ್ಯಃ ಕುಂಭಕೋಣದಲ್ಲಿ ಮುದ್ರಿತವಾಗಿದೆ. ಇದನ್ನು ನೋಡಿ ಸರ್ವರೂ ಸಂತೋಷಪಡಬೇಕಾಗಿದೆ. ಶ್ರೀಜಗದ್ಗುರುವಿಶ್ವಕರ್ಣಶಿವಾಚಾರ್ಯರಿಂದ ಶಿವಸಿದ್ಧಾಂತೋಪದೇಶ ವನ್ನು ಪಡೆದ ದೂರ್ವಾಸಮಹರ್ಷಿಯುರಚಿಸಿದ ವೃತ್ತಿಯು ಇಲ್ಲಿಯವರೆಗೆ ಎಲ್ಲಿಯೂ ಉಪಲಬ್ಧವಾಗಿಲ್ಲ. ಲೋಕೋತ್ತರಕೀರ್ತಿಶಾಲಿಯಾದ ಈ ಮಹರ್ಷಿಯು ರಚಿಸಿದ ಈ ವೃತ್ತಿಯು, ಅಸಾಧಾರಣಯೋಗ್ಯತೆ ಯುಳ್ಳದ್ದಿರಬಹುದೆಂದು ಊಹಿಸಬಹುದಾಗಿದೆ. ಈ **ದೂರ್ವಾಸ** ಮಹರ್ಷಿಯು ವೀರಶೈವಸಿದ್ಧಾಂತಪರವಾಗಿ **ಸೂತ್ರವೃತ್ತಿ**ಯನ್ನು ರಚಿಸಿದ್ದಲ್ಲದೆ, ಎಲ್ಲ ಉಪನಿಷತ್ತುಗಳಿಗೂ ಸಹ ವ್ಯಾಖ್ಯಾನವನ್ನು ಬರೆದಿರುವನೆಂದು ಕೆಲವು ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಸದಸದನುಗ್ರಹನಿಗ್ರಹವಿಗ್ರಹೋ.............................ಭಗವಾನ್ ।
ಸರ್ವಾಸಾಮುಪನಿಷದಾಂ ದುರ್ವಾಸಾ ಜಯತಿ ದೇಶಿಕಃ ಪ್ರಥಮಃ ॥

ಈ ಪ್ರಕಾರವಾಗಿ ಅನೇಕಜನಪ್ರಾಚೀನಕವಿಗಳು ಈ ಮಹರ್ಷಿಯನ್ನು ಕೊಂಡಾಡಿದ್ದಾರೆ. ಇದರಿಂದ ಸರ್ವರಿಗಿಂತಲೂ ಪೂರ್ವದಲ್ಲಿಯೇ ಈ ಮಹರ್ಷಿಯು ಸಮಸ್ತೋಪನಿಷತ್ತುಗಳಿಗೂ ವ್ಯಾಖ್ಯಾನವನ್ನು ಬರೆದಿದ್ದಾನೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಲೋಕವಿಖ್ಯಾತರಾದ **ನಂದಿಕೇಶ್ವರಶಿವಾಚಾರ್ಯರು,** ಪರಮಾತ್ಮನ ಡಮರುವಿನಿಂದ ಉತ್ಪನ್ನವಾದ **"ಅ-ಇ-ಉ-ಣ್"** ಮೊದಲಾದ ಹದಿನಾಲ್ಕು ಸೂತ್ರಗಳ ಮೇಲೆ **ಶಿವಾದ್ವೈತ**ಸಿದ್ಧಾಂತಪರವಾದ ವೃತ್ತಿಯನ್ನು ರಚಿಸಿದ್ದಾರೆ. ಇವರು ತಮ್ಮ ವೃತ್ತಿಯ ಆದಿಯಲ್ಲಿ—

ನೃತ್ತಾವಸಾನೇ ನಟರಾಜರಾಜೋ ನನಾದ ಢಕ್ಕಾಂ ನವಪಂಚವಾರಂ ।
ಉದ್ಧರ್ತುಕಾಮಃ ಸನಕಾದಿಸಿದ್ಧಾನೇತದ್ವಿಮರ್ಶೇ ಶಿವಸೂತ್ರಜಾಲಂ ॥

ಎಂದು ಹೇಳಿರುವುದರಿಂದ, ಈ ಹದಿನಾಲ್ಕು ಸೂತ್ರಗಳು ಕೇವಲ ಶಿವಾದ್ವೈತವನ್ನೇ ಬೋಧಿಸುವುವೆಂದೂ, ಸನಕಾದಿಮಹರ್ಷಿಗಳನ್ನು ಉದ್ಧರಿಸುವದಕ್ಕೋಸ್ಕರ ಶಿವನ ಡಮರುವಿನಿಂದ ಉತ್ಪನ್ನವಾದವೆಂದೂ ಸ್ಪಷ್ಟವಾಗಿ ತೋರಿಬರುತ್ತದೆ. ನಂದಿಕೇಶ್ವರಶಿವಾಚಾರ್ಯರು ರಚಿಸಿದ ಈ ಶಿವಾದ್ವೈತವೃತ್ತಿಗೆ **ಉಪಮನ್ಯುಶಿವಾಚಾರ್ಯರು** ಬಹು ಗಂಭೀರವಾದ ಟೀಕೆಯನ್ನು ಬರೆದಿದ್ದಾರೆ. ಈ ಗ್ರಂಥವು "**ನಂದಿಕೇಶ್ವರ ಕಾರಿಕಾ**" ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ.

ಈ ಗ್ರಂಥವು ಅತಿಚಿಕ್ಕದಾದರೂ ಇದರ ಯೋಗ್ಯತೆಯು ಬಹುದೊಡ್ಡದಾಗಿದೆ. ಈ ಗ್ರಂಥವನ್ನು ಕಾಶೀಕ್ಷೇತ್ರವಾಸಿಗಳಾದ ಪರಮತೀಯಪಂಡಿತರು ಈಗ್ಗೆ ೪೦-೫೦ ವರ್ಷಗಳ ಪೂರ್ವದಲ್ಲಿಯೇ ಮುದ್ರಣಮಾಡಿಸಿರುತ್ತಾರೆ. ಇವರಲ್ಲದೆ ಗುರುವಂಶೋದ್ಭವರಾದ ಅನೇಕಜನಪಂಡಿತರು ಪರವಾದಿಗಳೊಡನೆ ವಾದಮಾಡಿಯೂ, ಅನೇ

ಕರು ಸರ್ವಮಾನ್ಯವಾದ ಗ್ರಂಥಗಳನ್ನು ರಚಿಸಿಯೂ ಪ್ರಸಿದ್ಧರಾಗಿರುವರು. **ಪರಮತಕಾಲಾನಲಶಿವಾಚಾರ್ಯ, ಪರವಾದಿಭಯಂಕರಶಿವಾಚಾರ್ಯ**ರೆಂಬವರು ಶ್ರೀಶಂಕರಾಚಾರ್ಯರೊಡನೆ ವಾದಮಾಡಿದರೆಂಬವಿಷಯವು ಶಂಕರವಿಜಯಾದಿಗ್ರಂಥಗಳಿಂದ ತಿಳಿದುಬರುತ್ತದೆ. **ನೀಲಕಂಠಶಿವಾಚಾರ್ಯರು** ಬ್ರಹ್ಮಸೂತ್ರಗಳ ಮೇಲೆ ಭಾಷ್ಯವನ್ನು ಬರೆದಿರುವದು ಲೋಕಪ್ರಸಿದ್ಧವದೆ. **ಕಾಲಹಸ್ತಿಶಿವಾಚಾರ್ಯರು** ಉಪನಿಷತ್ತುಗಳ ಮೇಲೆ ಲಿಂಗಧಾರಣಪರವಾದ ಭಾಷ್ಯವನ್ನು ರಚಿಸಿದ್ದಾರೆಂಬ ವಿಷಯವು "ಲಿಂಗಧಾರಣಚಂದ್ರಿಕೆ" ಯಿಂದ ತಿಳಿದುಬರುತ್ತದೆ. ಇಲ್ಲಿಯವರೆಗೆ ಉದಾಹರಿಸಿದ ಸಕಲಗ್ರಂಥಗಳು ಶ್ರೀಜಗದಾಚಾರ್ಯರ ಆಶೀರ್ವಾದಬಲದಿಂದ ದೊರೆತದ್ದೇ ಆದರೆ, ಈ ಮತದ ವೈಭವವನ್ನು ಎಷ್ಟೆಂದುವರ್ಣಿಸಿದರೂ ತೀರದಾಗುತ್ತದೆ. ಈ ಪವಿತ್ರ ಮತವು ಪೂರ್ವದಂತೆ ಅತ್ಯಂತವೈಭವಸ್ಥಿತಿಗೆ ಬರಬೇಕಾದರೆ, ಆ ಮೂಲಾಚಾರ್ಯರ ಆಶೀರ್ವಾದವು ಪೂರ್ಣವಾಗಿರಬೇಕಲ್ಲದೆ ಬೇರೊಂದು ಮಾರ್ಗವೇ ಇಲ್ಲ.

ಇನ್ನುಮುಂದೆ ಈ ಮತಸ್ಥಾಪನಾಚಾರ್ಯರು ಭೂಮಂಡಲದಲ್ಲಿ ಅವತರಿಸಿ, ಯಾವ ಯಾವ ಲೀಲೆಗಳನ್ನು ಮಾಡಿದರೆಂಬ ವಿಷಯವನ್ನು ಸಂಕ್ಷೇಪವಾಗಿ ವಿವರಿಸೋಣ! ಪ್ರತಿಯೊಂದು ವೈದಿಕಮತದಲ್ಲಿಯೂ ಜನಿಸಿದ ಜನರು ತಮ್ಮ ತಮ್ಮ ಮತಸ್ಥಾಪನಾಚಾರ್ಯರ ಆದ್ಯಂತ ಚರಿತ್ರಗಳನ್ನು ಸಂಪೂರ್ಣವಾಗಿ ತಿಳಿದುಕೊಂಡು, ಆ ಮಹನೀಯರ ವಿಷಯದಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಾರೆ. ಆದರೆ ವೀರಶೈವಮತದಲ್ಲಿ ಉತ್ಪನ್ನರಾದ ಜನರಿಗೆ ಮತಾಚಾರ್ಯರ ಸ್ವರೂಪವೇ ಗೊತ್ತಿಲ್ಲದಾಗಿದೆ; ಅಂದಮೇಲೆ ಇವರಿಗೆ ತಮ್ಮ ಗುರುಗಳ ಮಹತ್ತ್ವವು ಹೇಗೆ ಗೊತ್ತಾಗಬೇಕು? ನಮ್ಮ ಮತ

ಸ್ಥಾಪನಾಚಾರ್ಯರು ಒಂದಲ್ಲ, ಎರಡಲ್ಲ, ಸಾವಿರಾರು ಅದ್ಭುತ ಲೀಲೆಗಳನ್ನು ಮಾಡಿ ಲೋಕವಂದ್ಯರಾಗಿ ಹೋಗಿದ್ದಾರೆ. ಶ್ರೀಜಗದ್ಗುರು ರೇಣುಕಾಚಾರ್ಯರು ಜಗತ್ಪ್ರಸಿದ್ಧನಾದ **ಅಗಸ್ತ್ಯ**ಮಹರ್ಷಿಗೆ ವೀರಶೈವಸಿದ್ಧಾಂತವನ್ನುಪದೇಶಿಸಿ, ಆ ಋಷಿಪುಂಗವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಲೋಕಚಕ್ರವರ್ತಿಯೆಂದೂ, ಚಿರಂಜೀವಿಯೆಂದೂ, ಪರಮಶಿವಭಕ್ತನೆಂದೂ ಪ್ರಸಿದ್ಧನಾದ **ವಿಭೀಷಣನ** ರಾಜಧಾನಿಯಾದ ಲಂಕಾಪುರಿಗೆ ದಯಮಾಡಿಸಿ, ಅವನಿಂದ ಪೂಜೆಯನ್ನು ಕೈಕೊಂಡು, ಅವನ ಭಕ್ತಿಭಾವಕ್ಕೆ ಮೆಚ್ಚಿ, ಬಹುಕಾಲದಿಂದ ನೆರವೇರದಿದ್ದ, ಏಕಕಾಲದಲ್ಲಿಯೇ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಬೇಕೆಂಬ ಅವನ ಸಂಕಲ್ಪವನ್ನು, ಅವನ ಪ್ರಾರ್ಥನೆಯಂತೆ ನೆರವೇರಿಸುವುದಕ್ಕೋಸ್ಕರ, ಏಕಕಾಲದಲ್ಲಿಯೇ ಮೂರುಕೋಟಿಗುರುರೂಪವನ್ನು ಧರಿಸಿ, ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ, ವಿಭೀಷಣನಿಗೆ ಶಿವಸಿದ್ಧಾಂತೋಪದೇಶವನ್ನು ಮಾಡಿ, ಅವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಉಜ್ಜಯಿನೀಪಟ್ಟಣವನ್ನಾಳುತ್ತಿದ್ದು ಶಕಪುರುಷನೆಂದು ಈಹೊತ್ತಿನವರೆಗೂ ಭರತಖಂಡದಲ್ಲಿ ಕೀರ್ತಿವೆತ್ತಿರುವ **ವಿಕ್ರಮಭೂಪಾಲನಿಗೆ** ಜಗದ್ವಿಜಯಕ್ಕಾಗಿ ಖಡ್ಗವನ್ನಾಶೀರ್ವದಿಸಿದುದಲ್ಲದೆ ಶಿವಸಿದ್ಧಾಂತವನ್ನುಪದೇಶಿಸಿ, ಅವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. **ಶ್ರೀಶಂಕರಾಚಾರ್ಯರ** ಪ್ರಾರ್ಥನಾನುಸಾರವಾಗಿ ಆ ಮಹಿಮರಿಗೆ ಸಕಲಸಿದ್ಧಿಪ್ರದವಾದ **ಚಂದ್ರಮೌಲೀಶ್ವರ**ನಾಮಕಶಿವಲಿಂಗವನ್ನು ಅನುಗ್ರಹಿಸಿದರು. ರಾಕ್ಷಸರೂಪದಿಂದ ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಭಸ್ಮಮಾಡಿ, ಜಗತ್ತಿಗೆಲ್ಲ ಕಲ್ಯಾಣವನ್ನುಂಟುಮಾಡಿದರು. ಜಗತ್ತಿನಲ್ಲಿರತಕ್ಕ ಕುಟಿಲ

ಸಿದ್ಧರಿಗೆಲ್ಲ ಒಡೆಯನಾಗಿ ಅತ್ಯಂತಗರ್ವದಿಂದ ಕೂಡಿದ್ದ ಕೊಲ್ಲಾ ಪುರದ **ಗೋರಕ್ಷನ** ಗರ್ವವನ್ನು ಹರಣಮಾಡಿ, ಶರಣಾಗತನಾದ ಆ ಗೋರಕ್ಷನಿಗೆ ಶಿವಸಿದ್ಧಾಂತವನ್ನುಪದೇಶಿಸಿ, ಅವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಕಾಂಚೀಕ್ಷೇತ್ರದಲ್ಲಿ ಮೆರೆಯುತ್ತಿರುವ **ವರದರಾಜ**ನಾಮಕವಾದ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ನಿಲ್ಲಿಸಿ, ಕಾಂಚೀ ನಗರಾಧಿಪತಿಯೂ ಪರಮವಿಷ್ಣುಭಕ್ತನೂ ಆದ **ಚೋಳ**ಭೂಪಾಲನಿಗೆ ಅವನ ಪ್ರಾರ್ಥನಾನುಸಾರವಾಗಿ ಶಿವಸಿದ್ಧಾಂತವನ್ನುಪದೇಶಿಸಿ, ಅವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಭರತಖಂಡವನ್ನು ಏಕಚ್ಛತ್ರಾಧಿಪತ್ಯದಿಂದ ಆಳುತ್ತಿದ್ದ **ನೀಲಗಲಚಕ್ರವರ್ತಿ** ಯೆಂಬ ಮಹಾರಾಜನ ಅಸಾಧಾರಣವಾದ ದಾತೃತ್ವಗುಣವನ್ನು ಪರೀಕ್ಷಿಸು ವುದಕ್ಕೋಸ್ಕರ, ಕೋಟ್ಯನುಕೋಟಿಪ್ರಮಥಸ್ವರೂಪವನ್ನು ಧರಿಸಿ, ಅಂತ್ಯದಲ್ಲಿ ಅಗ್ನಿಗಾಹುತಿಯಾದ ಆ ಮಹಾರಾಜನ ಭಕ್ತಿಭಾವಕ್ಕೆ ಮೆಚ್ಚಿ, ಅವನಿಗೆ ಶಿವಸಿದ್ಧಾಂತವನ್ನುಪದೇಶಿಸಿ, ಏಕಕಾಲದಲ್ಲಿಯೇ ಸತಿಪತಿಗಳಿಬ್ಬರಿಗೂ ಮೋಕ್ಷವನ್ನನುಗ್ರಹಿಸಿದರು. ಪರಮಾತ್ಮನ ಅಪ್ಪಣೆಯ ಮೇರೆಗೆ ತಾವು ಈ ಭೂಮಂಡಲದಲ್ಲಿ **೧೪೦೦** ವರ್ಷಗಳ ವರೆಗಿದ್ದು, ತಮ್ಮ ಮಹಿಮಾಪ್ರಭಾವದಿಂದ ಕಾಂಚೀ ಏಕಾಮ್ರೇಶ್ವರನ ದೇವಾಲಯದ ಭೂಗರ್ಭದಿಂದ ಒಂದು ತೇಜೋಮಯಮೂರ್ತಿ ಯನ್ನು ಅವತಾರಮಾಡಿಸಿ, ಆ ಮೂರ್ತಿಗೆ **ರುದ್ರಮುನಿಶಿವಾಚಾರ್ಯ** ನೆಂಬ ಅಭಿಧಾನವನ್ನಿಟ್ಟು, ಆ ಮಹಿಮನಿಗೆ ತಮ್ಮ ಉತ್ತರಾಧಿಕಾರ ವನ್ನನುಗ್ರಹಿಸಿ, ಅವರೊಡನೆ ಜಗತ್ತಿನಲ್ಲೆಲ್ಲ ಸಂಚರಿಸಿ, ಸರ್ವಾನುಭವ ವನ್ನು ಮಾಡಿಕೊಟ್ಟು ಅಂತ್ಯದಲ್ಲಿ ತಾವು ಅವತರಿಸಿದ ಕೊಲ್ಲಿಪಾಕಿಯ ಶ್ರೀಸೋಮನಾಥಲಿಂಗದಲ್ಲಿಯೇ ಅಡಗಿದರು.

ಶ್ರೀಜಗದ್ಗುರು ದಾರುಕಾಚಾರ್ಯರು ಲೋಕವಿಖ್ಯಾತನಾದ **ದಧೀಚಿ**ಮಹರ್ಷಿಯ ಪ್ರಾರ್ಥನೆಯಂತೆ ಶಿವಸಿದ್ಧಾಂತವನ್ನುಪದೇಶಿಸಿ, ಆ ಮಹರ್ಷಿಪುಂಗವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಕೊಲ್ಲಾಪುರದ **ಮಹಾಮಾಯೆಯ** ಗರ್ವವನ್ನು ಭಂಗಮಾಡಿ, ಆ ಮಹಾಮಾಯೆಯಿಂದ ಜಗತ್ತಿಗುಂಟಾಗಿದ್ದ ಕಷ್ಟಪರಂಪರೆಯನ್ನು ದೂರಮಾಡಿ, ಲೋಕಕ್ಕೆಲ್ಲ ಕಲ್ಯಾಣವನ್ನುಂಟುಮಾಡಿದರು. **ದೇವನಂದನ**ನೆಂಬ ಮಹಾರಾಜನ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ, ಅಂತ್ಯದಲ್ಲಿ ಅವನ ಭಕ್ತಿಭಾವಕ್ಕೆ ಮೆಚ್ಚಿ, ಅವನಿಗೆ ಶಿವಸಿದ್ಧಾಂತೋಪದೇಶವನ್ನು ಮಾಡಿ, ಮೋಕ್ಷಪದವಿಯನ್ನನು ಗ್ರಹಿಸಿದರು. ಇವೇ ಮೊದಲಾದ ಅದ್ಭುತಲೀಲೆಗಳನ್ನು ಮಾಡಿ **ಮಲ್ಲಿಕಾರ್ಜುನಶಿವಯೋಗಿ**ಗಳೆಂಬ ಮಹಿಮರಿಗೆ ತಮ್ಮ ಉತ್ತರಾಧಿಕಾರವನ್ನು ಅನುಗ್ರಹಿಸಿ, ಅಂತ್ಯದಲ್ಲಿ ತಾವು ಅವತರಿಸಿದ ವಟವೃಕ್ಷ ಸಿದ್ಧೇಶ್ವರಲಿಂಗದಲ್ಲಿಯೇ ದಿವ್ಯದೇಹಧಾರಿಗಳಾಗಿ ಅಡಗಿದರು.

ಶ್ರೀಜಗದ್ಗುರು ಘಂಟಾಕರ್ಣಶಿವಾಚಾರ್ಯರು ಲೋಕವಿಖ್ಯಾತನಾದ **ವ್ಯಾಸ**ಮಹರ್ಷಿಯ ಪ್ರಾರ್ಥನೆಯಂತೆ ಅವನಿಗೆ ಶಿವಸಿದ್ಧಾಂತವನ್ನುಪದೇಶಿಸಿ, ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. **ಗೌತಮೇಂದ್ರ ನೃಪಾಲ**ನಾಮಕನಾದ ಚಕ್ರವರ್ತಿಯನ್ನು ಪರಮಶಿವಭಕ್ತನನ್ನಾಗಿ ಮಾಡಿ, ಅವನಿಗೆ ಮೋಕ್ಷಪದವಿಯನ್ನನುಗ್ರಹಿಸಿದರು. ಇವೇ ಮೊದಲಾದ ಅನಂತಲೀಲೆಗಳನ್ನು ಮಾಡಿ ಅಂತ್ಯದಲ್ಲಿ ತಾವು ಅವತರಿಸಿದ ರಾಮನಾಥಲಿಂಗದಲ್ಲಿಯೇ ದಿವ್ಯದೇಹಧಾರಿಗಳಾಗಿ ಅಡಗಿದರು.

ಶ್ರೀಜಗದ್ಗುರುಪಂಡಿತಾರಾಧ್ಯರು ಜಗತ್ಪ್ರಸಿದ್ಧನಾದ **ಸಾನಂದ** ಮಹರ್ಷಿಯ ಪ್ರಾರ್ಥನೆಯಂತೆ ಅವನಿಗೆ ಶಿವಸಿದ್ಧಾಂತವನ್ನುಪದೇಶಿಸಿ, ಅವನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಇದಲ್ಲದೆ ತಮ್ಮ

ಮಹಿಮಾಬಲದಿಂದ ಅನೇಕಜನರಾಜಾಧಿರಾಜರನ್ನು ಶಿಷ್ಯರನ್ನಾಗಿ ಮಾಡಿಕೊಂಡು, ಹದಿನೆಂಟುಕುಲದವರಿಗೆ ಗುರುಗಳಾಗಿ, ಅಂತ್ಯದಲ್ಲಿ ತಾವು ಅವತರಿಸಿದ ಶ್ರೀಮಲ್ಲಿಕಾರ್ಜುನಲಿಂಗದಲ್ಲಿಯೇ ದಿವ್ಯದೇಹಧಾರಿಗಳಾಗಿ ಅಡಗಿದರು.

ಶ್ರೀಜಗದ್ಗುರುವಿಶ್ವಾರಾಧ್ಯರು ಲೋಕವಿಖ್ಯಾತನಾದ **ದೂರ್ವಾಸ** ಮಹರ್ಷಿಯ ಪ್ರಾರ್ಥನೆಯಂತೆ ಅವನಿಗೆ ಶಿವತತ್ತ್ವೋಪದೇಶವನ್ನು ಮಾಡಿ, ಆ ಮಹರ್ಷಿಯನ್ನು ತಮ್ಮ ಶಿಷ್ಯನನ್ನಾಗಿಮಾಡಿಕೊಂಡರು. ಅಲ್ಲದೆ ನೇಪಾಳ-ಕಾಶ್ಮೀರ ಮೊದಲಾದ ದೇಶಾಧಿಪತಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸಿ ಲೋಕವಂದ್ಯರಾಗಿ, ಅಂತ್ಯದಲ್ಲಿ ತಾವು ಅವತರಿಸಿದ ವಿಶ್ವನಾಥಲಿಂಗದಲ್ಲಿಯೇ ದಿವ್ಯದೇಹಧಾರಿಗಳಾಗಿ ಅಡಗಿದರು.

ಹೀಗೆ ಮತಸ್ಥಾಪನಾಚಾರ್ಯರು ಅನೇಕಾನೇಕಾದ್ಭುತಮಹಿಮೆಗಳನ್ನು ಮಾಡಿದ್ದರೂ, ವೀರಶೈವರು ಇವುಗಳೊಂದನ್ನೂ ಅರಿಯದೆ ಇರುವದನ್ನು ನೋಡಿದರೆ ಅತ್ಯಂತವ್ಯಸನವೆನಿಸುತ್ತದೆ. ಆದುದರಿಂದ ಪ್ರತಿಯೊಬ್ಬರೂ ಈ ಭಗವತ್ಪಾದರ ಚರಿತ್ರಗಳನ್ನು ಸಂಪೂರ್ಣವಾಗಿ ತಿಳಿದುಕೊಳ್ಳಬೇಕೆಂದೂ, ಈ ಮಹನೀಯರ ಜಯಂತಿಗಳನ್ನು ಆಯಾಯ ಶುಭದಿವಸಗಳಲ್ಲಿ ಅಂದರೆ ಶ್ರೀರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶು॥ ೧೩ ಯಲ್ಲಿಯೂ, ಶ್ರೀಏಕೋರಾಮಾರಾಧ್ಯರ ಜಯಂತಿಯನ್ನು ವೈಶಾಖ ಶು॥ ೩ ಯಲ್ಲಿಯೂ, ಶ್ರೀದಾರುಕಾಚಾರ್ಯರ ಜಯಂತಿಯನ್ನು ವೈಶಾಖ ಶು॥ ೫ ಯಲ್ಲಿಯೂ, ಶ್ರೀಪಂಡಿತಾರಾಧ್ಯರ ಹಾಗೂ ಶ್ರೀವಿಶ್ವಾರಾಧ್ಯರ ಜಯಂತಿಗಳನ್ನು ಮಹಾಶಿವರಾತ್ರಿಯಲ್ಲಿಯೂ ಅತ್ಯಂತವೈಭವದಿಂದ ನೆರವೇರಿಸಿ, ಶುದ್ಧವಂಶದವರೆಂಬ ಕೀರ್ತಿಯನ್ನು ಪಡೆದುಕೊಂಡು, ಗುರುಕೃಪೆಗೆ ಪಾತ್ರರಾಗಿ ಧನ್ಯರಾಗಬೇಕೆಂದು ಹಾರೈಸುತ್ತೇನೆ. ಶಿವಂಭೂಯಾತ್.

ಭಾಗ—೨

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಮೈಸೂರು ರಾಜಧಾನಿಯಲ್ಲಿ ಶುಕ್ಲಸಂವತ್ಸರ ವೈಶಾಖ ಶು|| ೫
(ತಾ|| ೧೩-೫-೧೯೨೯) ದಿವಸ ನೆರವೇರಿದ

ಶ್ರೀಜಗದ್ಗುರು ದಾರುಕಜಯಂತೀಮಹೋತ್ಸವ ಸಮಯದಲ್ಲಿ

ನಾಗನೂರು ಬೃಹನ್ಮಠಾಧ್ಯಕ್ಷರಾದ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ

ಭಾಷಣ.

ಪಂಚಾನನತನೂದ್ಭೂತಾನ್ ಪಂಚಾಕ್ಷರಮನೂಪಮಾನ್ ।
ಪಂಚಸೂತ್ರಕೃತೋ ವಂದೇ ಪಂಚಾಚಾರ್ಯಾನ್ ಜಗದ್ಗುರೂನ್॥

ಸಭಿಕಮಹಾಶಯರೇ !

ವಿಭವಸಂವತ್ಸರದ ವೈಶಾಖ ಶು|| ೫ ಶುಭದಿವಸ, ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರುದಾರುಕಾಚಾರ್ಯರ ಜಯಂತೀ ಮಹೋತ್ಸವವು ಈ ಸ್ಥಾನದಲ್ಲಿಯೇ ನಿಮ್ಮೆಲ್ಲರ ಭಕ್ತಿವಿಶೇಷದಿಂದ ಅತ್ಯಂತವೈಭವದೊಡನೆ ನೆರವೇರಿತು. ಇಂದಿನ ಶುಕ್ಲನಾಮಸಂವತ್ಸರ ವೈಶಾಖ ಶು|| ೫ ಈ ಶುಭದಿವಸದಲ್ಲಿಯಾದರೂ, ತಾವೆಲ್ಲರೂ ಈ ಜಗದಾಚಾರ್ಯರ ಜಯಂತೀಮಹೋತ್ಸವವನ್ನು ಅಸಾಧಾರಣವೈಭವ ದಿಂದ ನೆರವೇರಿಸಿ, ವೀರಶೈವಮತವಿಷಯಗಳನ್ನು ತಿಳಿದುಕೊಂಡು

ಧನ್ಯರಾಗಬೇಕೆಂಬ ಸದುದ್ದೇಶದಿಂದ, ಇಲ್ಲಿ ಸಮ್ಮಿಲಿತರಾಗಿರುವುದನ್ನು ನೋಡಿ ಪರಮಸಂತೋಷವೆನಿಸುತ್ತದೆ. ಈ ಸಭೆಯನ್ನು ಕೇವಲ ವೀರಶೈವರಲ್ಲದೆ ಸ್ಮಾರ್ತ, ವೈಷ್ಣವ, ಶ್ರೀವೈಷ್ಣವಾದಿಪರಮತೀಯ ಪ್ರಮುಖರೆಲ್ಲರೂ ಅಲಂಕರಿಸಿರುವದು ಅತ್ಯಂತಸಂತೋಷಪ್ರದ ವಿಷಯವಾಗಿದೆ. ಸಕಲಸಭಾಸದರ ಪ್ರಾರ್ಥನೆಯಂತೆ ಸದ್ಯಃ ವೀರಶೈವ ಮತದ ವಿಷಯವನ್ನೂ ಹಾಗೂ ಶಿವಸರ್ವೋತ್ತಮತ್ತ್ವವಿಷಯವನ್ನೂ ಕುರಿತು ಸಂಕ್ಷೇಪವಾಗಿ ಪ್ರತಿಪಾದಿಸುತ್ತೇನೆ. ನಾನು ಪ್ರತಿಪಾದಿಸುವ ಮಹತ್ತ್ವವಿಷಯಗಳನ್ನು ಸರ್ವರೂ ಶಾಂತಚಿತ್ತದಿಂದ ಕೇಳಬೇಕೆಂದು ಆಶಿಸುತ್ತೇನೆ.

ಮಾನವಪ್ರಾಣಿಯ ಉದ್ಧಾರಕ್ಕೋಸ್ಕರ ಪರಮದಯಾಳು ವಾದ ಶ್ರೀಪರಮೇಶ್ವರನಿಂದ ವೇದಾಗಮೋಪನಿಷತ್ತುಗಳು ನಿರ್ಮಿ ಸಲ್ಪಟ್ಟಿವೆ. ಈ ಗ್ರಂಥಗಳಲ್ಲಿರುವ ನಿಜವಾದ ತತ್ತ್ವಗಳನ್ನು ತಿಳಿದು ಯಾರು ವರ್ತಿಸುವರೋ, ಅವರಿಗೆ ನಿತ್ಯಸುಖವು ಪ್ರಾಪ್ತ ವಾಗುವದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಭರತಖಂಡದಲ್ಲಿ ವಾಸಿಸಿರುವ ಹಿಂದೂಮತೀಯರಿಗೆಲ್ಲ ಈ ಗ್ರಂಥಗಳೇ ಅತ್ಯಂತ ಪೂಜ್ಯಗಳಾಗಿರುತ್ತವೆ. ವೇದಾಗಮಾದಿಗಳಲ್ಲಿ ಬೋಧಿಸುವ ವಿಷಯ ಗಳನ್ನನುಸರಿಸಿ ವರ್ತಿಸುವವರು ಹಿಂದುಗಳೆಂದೂ, ವೇದಾಗಮಾದಿಗಳ ಅಭಿಪ್ರಾಯಕ್ಕೆ ವಿರೋಧಿಗಳಾಗಿ ವರ್ತಿಸುವವರು ಹಿಂದುಗಳಲ್ಲ ವೆಂದೂ ಶಾಸ್ತ್ರನಿಯಮವುಂಟು. ಹಿಂದೂಮತದಲ್ಲಿ ವರ್ಣಾಶ್ರಮ ಧರ್ಮನಿಬಂಧನವು ಮುಖ್ಯವಾದುದಾಗಿದೆ. ಈ ವರ್ಣಾಶ್ರಮ ಧರ್ಮನಿಬಂಧನವನ್ನು ಕುರಿತು, ಅನೇಕಾನೇಕಜನಮಹರ್ಷಿಗಳು ಸ್ಮೃತಿಗಳನ್ನೂ, ಪುರಾಣಗಳನ್ನೂ, ಗೀತಾದಿಗಳನ್ನೂ ಬರೆದಿರುವರು. ಮಹಾತ್ಮರಾದ ಆ ಮಹರ್ಷಿಗಳು ರಚಿಸಿರುವ ವರ್ಣಾಶ್ರಮ

ಧರ್ಮನಿಬಂಧನದಂತೆ ಇಂದಿನವರೆಗೂ ಹಿಂದೂಮತದಲ್ಲಿ ವರ್ಣಾಶ್ರಮಧರ್ಮಗಳ ಕಟ್ಟಳೆಯು ಅವಿಚ್ಛಿನವಾಗಿ ನಡೆದುಬಂದಿರುತ್ತದೆ. ಯಾರು ವರ್ಣಾಶ್ರಮಗಳ ತತ್ತ್ವಗಳನ್ನು ಮನ್ನಿಸಿ ಅದರಂತೆ ಆಚರಿಸುವರೋ ಅವರೇ ವೈದಿಕರೆಂದೂ, ಅದಕ್ಕೆ ವಿರುದ್ಧವಾಗಿ ಆಚರಿಸುವವರು ಅವೈದಿಕರೆಂದೂ ಧರ್ಮಶಾಸ್ತ್ರಗಳಲ್ಲಿ ನಿರ್ಣಯಿಸಲ್ಪಟ್ಟದೆ. ವೀರಶೈವಮತಕ್ಕೆ ವೇದಾಗಮಾದಿಗಳು ಪರಮಪ್ರಮಾಣೀಭೂತಗ್ರಂಥಗಳಾಗಿದ್ದರೂ, ಈ ಮತದಲ್ಲಿರತಕ್ಕ ಕೆಲವು ಜನ ವಿಚಾರಶೂನ್ಯರು, ವೀರಶೈವಮತವು ಅಪ್ರಾಕೃತವಾದುದರಿಂದ, ಈ ಮತದಲ್ಲಿ ವರ್ಣಾಶ್ರಮಧರ್ಮಗಳ ನಿಬಂಧನವೇ ಇಲ್ಲವೆಂದು ಕಂಠಶೋಷಣವನ್ನು ಮಾಡುತ್ತಿರುವರು; ಹೀಗೆ ಮಾಡುವದು ಅವರ ಅಜ್ಞಾನದ ಪ್ರಭಾವವಲ್ಲದೆ ಬೇರೊಂದಲ್ಲ. ಅನಾದಿಕಾಲದಿಂದ ವೀರಶೈವಮತದಲ್ಲಿ ಅನೇಕಾನೇಕಜನ ಆಚಾರ್ಯರೂ, ಪಂಡಿತರೂ, ಯೋಗಿಗಳೂ ಆಗಿಹೋಗಿದ್ದಾರೆ. ಅವರು ರಚಿಸಿದ ಭಾಷ್ಯಾದ್ಯದ್ಗ್ರಂಥಗಳಲ್ಲಿ ವರ್ಣಾಶ್ರಮಧರ್ಮವಿಚಾರವು ಬಹುವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವದು. ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಲೋಕಪ್ರಸಿದ್ಧನಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡುವ ಸಮಯದಲ್ಲಿ—

> ವರ್ಣಾಶ್ರಮಾದಿಧರ್ಮಾಣಾಂ ವ್ಯವಸ್ಥಾ ಹಿ ದ್ವಿಧಾ ಮತಾ ।
> ಏಕಾ ಶಿವೇನ ನಿರ್ದಿಷ್ಟಾ ಬ್ರಹ್ಮಣಾ ಕಥಿತಾ ಪರಾ ॥

ಬ್ರಹ್ಮನಿರ್ದಿಷ್ಟಚತುರ್ವರ್ಣಾಶ್ರಮಗಳಂತೆ, ಶಿವನಿರ್ದಿಷ್ಟಚತುರ್ವರ್ಣಾಶ್ರಮಗಳೂ ಉಂಟೆಂದು ಬೋಧಿಸಿದ್ದಾರೆ. ಅಲ್ಲದೆ, ಭಕ್ತಮಾರ್ಗಕ್ರಿಯಾಸ್ಥಲದಲ್ಲಿ—

ಸ್ವಮಾರ್ಗಾಚಾರನಿರತಾಃ ಸಜಾತೀಯಾ ದ್ವಿಜಾಸ್ತು ಯೇ ।
ತೇಷಾಂ ಗೃಹೇಷು ಭುಂಜೀತ ನೇತರೇಷಾಂ ಕದಾಚನ ॥

ವೀರಶೈವಮತೀಯರಾದ ತ್ರೈವರ್ಣಿಕಸಜಾತೀಯದ್ವಿಜರು ಸಜಾತೀಯದ್ವಿಜರಲ್ಲಿಯೇ ಭೋಜನಾದಿಗಳನ್ನು ಮಾಡಬೇಕೆಂದೂ, ಈ ಮತೀಯರಾದಾಗ್ಯೂ ಇತರದ್ವಿಜರಲ್ಲಿ ಭೋಜನಾದಿಗಳನ್ನು ಮಾಡಬಾರದೆಂದೂ ಅಪ್ಪಣೆಕೊಡಿಸಿದ್ದಾರೆ. ಇದರ ಮೇಲಿಂದ ವೀರಶೈವಮತಸ್ಥಾಪನಾಚಾರ್ಯರು ವರ್ಣಾಶ್ರಮಧರ್ಮನಿಬಂಧನೆಗಳನ್ನು ಎಷ್ಟು ಪ್ರಬಲವಾಗಿ ಸ್ಥಿರಗೊಳಿಸಿರುವರೆಂಬ ವಿಷಯವು ಸರ್ವರಿಗೂ ಸ್ಪಷ್ಟವಾಗಿ ತೋರಿಬರುತ್ತದೆ.

ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು ಸ್ಕಂದಪುರಾಣಾಂತರ್ಗತ ಶಂಕರಸಂಹಿತೆಯಲ್ಲಿ—

ವರ್ಣಾಶ್ರಮಸದಾಚಾರಾಃ ಶಿವೇನ ಕಥಿತಾಃ ಪುರಾ ।
ಯೇ ತಾನುಲ್ಲಂಘ್ಯ ವರ್ತಂತೇ ಶಿವಸ್ಯಾಜ್ಞಾಪಲಾಪಿನಃ ॥
ರಾಜಾಜ್ಞಾಭಂಗಕೃನ್ನ್ರೂಣಾಂ ಯಥಾ ದಂಡೋ ಭವಿಷ್ಯತಿ ।
ಶಿವಾಜ್ಞಾಭಂಗಕೃನ್ನ್ರೂಣಾಂ ದಂಡೋ ಹಿ ನರಕಸ್ತಥಾ ॥

ಈ ಪ್ರಕಾರವಾಗಿ ವರ್ಣಾಶ್ರಮಗಳು ಶಿವೋಕ್ತಗಳೆಂದೂ, ಅವುಗಳನ್ನು ಮೀರಿ ನಡೆಯುವವರು ನರಕಗಾಮಿಗಳಾಗುವರೆಂದೂ ಸ್ಪಷ್ಟವಾಗಿ ಬರೆದಿದ್ದಾರೆ. ಹಾಗೂ ವೀರಶೈವಧರ್ಮಶಿರೋಮಣಿಯಲ್ಲಿ—

ಶಿವೋಕ್ತಾಂ ಜಾತಿಮರ್ಯಾದಾಂ ಯೋಽತೀತ್ಯ ಭುವಿ ವರ್ತತೇ ।
ಸ ಚಂಡಾಲ ಇತಿ ಜ್ಞೇಯಃ ಸರ್ವಕರ್ಮಬಹಿಷ್ಕೃತಃ ॥

ಈ ಪ್ರಕಾರವಾಗಿ ಶಿವೋಕ್ತವಾದ ಜಾತಿಮರ್ಯಾದೆಯನ್ನು ಯಾವನು ಮೀರಿ ನಡೆಯುವನೋ ಅವನು ಚಂಡಾಲನೆಂದೂ, ಸರ್ವಕರ್ಮಬಹಿ

ಷ್ಕೃತನೆಂದೂ ಉಲ್ಲೇಖಿಸಲ್ಪಟ್ಟಿದೆ. ಇದೇರೀತಿಯಾಗಿ ಸಾವಿರಾರು ಧರ್ಮಗ್ರಂಥಗಳಲ್ಲಿ ವರ್ಣಾಶ್ರಮಧರ್ಮಗಳ ವಿಚಾರವು ಚಿಕ್ಕಬಾಲಕರಿಗೂ ಸಹ ತಿಳಿಯುವಂತೆ ಪ್ರತಿಪಾದಿಸಲ್ಪಟ್ಟಿದ್ದರೂ, ಈ ವಿಷಯವನ್ನು ವೀರಶೈವಮತದಲ್ಲಿರತಕ್ಕ ಕೆಲಜನ ಅವೈದಿಕರು ಅಪಲಪಿಸುತ್ತ, ಮನಸ್ಸಿಗೆ ಬಂದಂತೆ ವರ್ತಿಸಹತ್ತಿರುವದನ್ನು ನೋಡಿದರೆ ಬಹುವ್ಯಸನ ವೆನಿಸುತ್ತದೆ. ಈ ಕನ್ವರ್ಟರು (ಮಿಶ್ರರು) ಈ ರೀತಿಯಾಗಿ ವೀರಶೈವ ಮತದಲ್ಲಿ ವರ್ಣಾಶ್ರಮಧರ್ಮಗಳಿರುವುದಿಲ್ಲವೆಂದು ಅಪಲಪಿಸುತ್ತಿರುವು ದನ್ನು ನೋಡಿ, ಅನ್ಯಮತೀಯರು ಈ ವಿಷಯವು ನಿಜವಿರಬಹುದೆಂದು ಭಾವಿಸಿದ್ದಾರೆ. ಅವರು ಹಾಗೆ ಭಾವಿಸಿದ್ದಲ್ಲಿ, ಅದು ಕೇವಲ ತಪ್ಪು ತಿಳುವಳಿಕೆಯಾಗಿರುವುದು. ಶ್ರೀವೈಷ್ಣವಮತದಲ್ಲಿ ಯಾವರೀತಿಯಾಗಿ ಚತುರ್ವರ್ಣಾಶ್ರಮಧರ್ಮಗಳು ಸ್ಥಾಪಿಸಲ್ಪಟ್ಟಿರುವವೋ, ಅದರಂತೆಯೇ ಈ ಮತದಲ್ಲಿಯೂ ಕೂಡ ಅನಾದಿಕಾಲದಿಂದಲೂ ಚತುರ್ವರ್ಣಾಶ್ರಮ ಧರ್ಮಗಳು ಸ್ಥಾಪಿಸಲ್ಪಟ್ಟಿರುವವು. ಶ್ರೀವೈಷ್ಣವಸಂಪ್ರದಾಯಕ್ಕೂ ವೀರಶೈವಸಂಪ್ರದಾಯಕ್ಕೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಸಿದ್ಧಾಂತವಿಷಯವಾಗಲಿ, ಆಚಾರಾದಿವಿಷಯಗಳಾಗಲಿ ಎರಡೂ ಒಂದೇರೀತಿಯಾಗಿರುತ್ತವೆ. ದೇವತೋಪಾಸನಾವಿಷಯದಲ್ಲಿಯೂ ಹಾಗೂ ಕೆಲಕೆಲವು ಕರ್ಮಾದಿಗಳಲ್ಲಿಯೂ ಮಾತ್ರ ಅಲ್ಪಸ್ವಲ್ಪ ವ್ಯತ್ಯಾಸವಾಗುವುದುಂಟು. ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರು ಅನಾದಿಕಾಲದಲ್ಲಿ ಸ್ಥಾಪಿಸಿದ ಸಿದ್ಧಾಂತಾಚಾರಾದಿ ವಿಷಯಗಳನ್ನೇ ಅನುಸರಿಸಿ, ಶ್ರೀರಾಮಾನುಜಾಚಾರ್ಯರು ತಮ್ಮ ಸಿದ್ಧಾಂತವನ್ನು ಲೋಕದಲ್ಲಿ ಪ್ರಚಾರಪಡಿಸಿದರೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಒಟ್ಟಿಗೆ ಈ ಎರಡೂ ಮತಗಳಿಗೆ ನಾನಾರೀತಿಯಿಂದ ಸಂಬಂಧವಿರುತ್ತದೆ. ಅದು ಹೇಗೆಂದರೆ—

ಶ್ರೀಮತ್ಪಂಚಾಚಾರ್ಯರು ಶಿವಸೂತ್ರ–ಬ್ರಹ್ಮಸೂತ್ರಗಳ ಮೇಲೆ ಶಕ್ತಿವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿರುವಂತೆ, ರಾಮಾನುಜಾಚಾರ್ಯರಾದರೂ ಬ್ರಹ್ಮಸೂತ್ರಗಳಮೇಲೆ ವಿಶಿಷ್ಟಾದ್ವೈತಸಿದ್ಧಾಂತವನ್ನು ಸ್ಥಾಪಿಸಿರುವರು. ಪಂಚಾಚಾರ್ಯರು ಪರಬ್ರಹ್ಮವು ಶಕ್ತಿವಿಶಿಷ್ಟವಾಗಿರುವುದೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಚಿದಚಿದ್ವಿಶಿಷ್ಟವಾಗಿರುವುದೆಂದುಬೋಧಿಸಿದರು. ಪಂಚಾಚಾರ್ಯರು ಪಾರಮಾರ್ಥಿಕವಾಗಿ ಭೇದಾಭೇದವನ್ನು ಒಪ್ಪುವಂತೆ ರಾಮಾನುಜಾಚಾರ್ಯರಾದರೂ ಪಾರಮಾರ್ಥಿಕವಾಗಿ ಭೇದಾಭೇದವನ್ನುಒಪ್ಪಿರುವರು. ಪಂಚಾಚಾರ್ಯರು ಪ್ರತ್ಯಕ್ಷ-ಅನುಮಾನ-ಆಗಮಪ್ರಮಾಣಗಳನ್ನು ಅಂಗೀಕರಿಸಿರುವಂತೆ ರಾಮಾನುಜಾಚಾರ್ಯರಾದರೂ ಈ ಮೂರು ಪ್ರಮಾಣಗಳನ್ನೇ ಅಂಗೀಕರಿಸಿರುವರು. ಈ ಉಭಯಮತಾಚಾರ್ಯರು ಜಗತ್ಸತ್ಯತ್ವವನ್ನು ಒಪ್ಪಿಕೊಳ್ಳುವರು. ಅಧ್ಯಾಸವಾದವನ್ನು ಖಂಡಿಸುವರು. ಉಭಯರ ಸಿದ್ಧಾಂತವೂ ವಿಶಿಷ್ಟಾದ್ವೈತವಾಗಿದ್ದು, ಅಲ್ಪಸ್ವಲ್ಪವ್ಯತ್ಯಾಸವಾಗಿರುವುದು. ಪಂಚಾಚಾರ್ಯರು ಶಿವನೇ ಪರಬ್ರಹ್ಮವೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ವಿಷ್ಣುವೇ ಪರಬ್ರಹ್ಮವೆಂದು ಬೋಧಿಸಿದರು. ಪಂಚಾಚಾರ್ಯರು ಶಿವನಿಂದಲೇ ಸಕಲಚರಾಚರಾತ್ಮಕವಾದ ಜಗತ್ತು ನಿರ್ಮಿತವಾಯಿತೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ವಿಷ್ಣುವಿನಿಂದಲೇ ನಿರ್ಮಿತವಾಯಿತೆಂದು ಬೋಧಿಸಿದರು. ಪಂಚಾಚಾರ್ಯರು ಪಾರ್ವತೀಸಹಿತನಾದ ಪರಮೇಶ್ವರನನ್ನು ಪೂಜಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಲಕ್ಷ್ಮೀಸಹಿತನಾದ ನಾರಾಯಣನನ್ನು ಪೂಜಿಸಬೇಕೆಂದುಬೋಧಿಸಿದರು. ಪಂಚಾಚಾರ್ಯರು ಪರಶಿವರೂಪಿಯಾದ ಇಷ್ಟಲಿಂಗಮೂರ್ತಿಯನ್ನು ಕ್ಷಣಕಾಲದಲ್ಲಿಯಾದರೂ ಅಗಲಿಸದೆ ಸದಾ ಶರೀರದಲ್ಲಿ ಧಾರಣಮಾಡಿಕೊಂಡಿರಬೇಕೆಂದು ಬೋಧಿಸಿದರೆ, ಅದಕ್ಕೆ

ಬದಲಾಗಿ ರಾಮಾನುಜಾಚಾರ್ಯರು ವಿಷ್ಣುವಿನ ಆಯುಧರೂಪಗಳಾದ ಶಂಖಚಕ್ರಗಳನ್ನು ಶರೀರದಲ್ಲಿ ಎಡಬಿಡದೆ ಸದಾ ಧರಿಸಿಕೊಳ್ಳಬೇಕೆಂದು ತಪ್ತಮುದ್ರಾಂಕನಪದ್ಧತಿಯನ್ನು ನೆಲೆಗೊಳಿಸಿದರು. ಪಂಚಾಚಾರ್ಯರು ಗೋಮಯದಿಂದ ಸಿದ್ಧವಾದ ಭಸ್ಮವನ್ನು ತಿರ್ಯಕ್ತ್ರಿಪುಂಡ್ರವನ್ನಾಗಿ ಧರಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಮೃತ್ತಿಕೆಯಿಂದ ಸಿದ್ಧವಾದ ನಾಮವನ್ನು ಊರ್ಧ್ವತ್ರಿಪುಂಡ್ರವನ್ನಾಗಿ ಧರಿಸಬೇಕೆಂದು ಬೋಧಿಸಿದರು. ಪಂಚಾಚಾರ್ಯರು ರುದ್ರಾಕ್ಷಮಣಿಗಳನ್ನು ಧರಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ತುಲಸೀಮಣಿಗಳನ್ನು ಧರಿಸಬೇಕೆಂದು ಬೋಧಿಸಿದರು. ಪಂಚಾಚಾರ್ಯರು ಪೂಜೆಗಾಗಿ ಬಿಲ್ವಪತ್ರಗಳನ್ನು ಪ್ರಧಾನವನ್ನಾಗಿಟ್ಟುಕೊಂಡು ಧರಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ತುಲಸೀಪತ್ರಗಳನ್ನು ಧರಿಸಬೇಕೆಂದು ಬೋಧಿಸಿದರು. ಪಂಚಾಚಾರ್ಯರು ಶಿವಪಂಚಾಕ್ಷರೀಮಂತ್ರವನ್ನು ಜಪಿಸಬೇಕೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ನಾರಾಯಣಾಷ್ಟಾಕ್ಷರೀಮಂತ್ರವನ್ನು ಜಪಿಸಬೇಕೆಂದು ಬೋಧಿಸಿದರು. ಪಂಚಾಚಾರ್ಯರು ಜನಿಸಿದ ಶಿಶುವಿಗೆ ಶಿವನ ಸಂಬಂಧವಿರಬೇಕೆಂದೂ, ಅದಕ್ಕೆ ಲಿಂಗಧಾರಣ, ಪಂಚಾಕ್ಷರೀಮಂತ್ರೋಪದೇಶಾದಿಗಳನ್ನು ಮಾಡಬೇಕೆಂದೂ ಬೋಧಿಸಿದರೆ, ರಾಮಾನುಜಾಚಾರ್ಯರು ಶಿಶುವಿಗೆ ಶೀತಶಂಖಚಕ್ರಧಾರಣ, ನಾರಾಯಣಾಷ್ಟಾಕ್ಷರೀಮಂತ್ರೋಪದೇಶವನ್ನು ಮಾಡಬೇಕೆಂದು ಬೋಧಿಸಿದರು. ಪಂಚಾಚಾರ್ಯರು ೮ನೆಯ ವರ್ಷದಲ್ಲಿ ಜಾತಿಸಂಸ್ಕಾರರೂಪವಾದ ಉಪನಯನವನ್ನೂ, ಮತಸಂಸ್ಕಾರರೂಪವಾದ ದೀಕ್ಷೆಯನ್ನೂ ಬೋಧಿಸಿದಂತೆಯೇ, ರಾಮಾನುಜಾಚಾರ್ಯರಾದರೂ ಈ ಉಭಯಸಂಸ್ಕಾರಗಳನ್ನೂ ಬೋಧಿಸಿದರು. ಪಂಚಾಚಾರ್ಯರು ಶಿವದೀಕ್ಷಾಸಮಯದಲ್ಲಿ

ದ್ವಿಜರಿಗೆ "ಷಡಧ್ವಶುದ್ಧಿಸಂಸ್ಕಾರ" ವನ್ನು ಮಾಡಬೇಕೆಂದು ಬೋಧಿಸಿದಂತೆ, ರಾಮಾನುಜಾಚಾರ್ಯರಾದರೂ ವೈಷ್ಣವದೀಕ್ಷಾ ಸಮಯದಲ್ಲಿ ಷಡಧ್ವಶುದ್ಧಿಸಂಸ್ಕಾರವನ್ನು ಮಾಡಬೇಕೆಂದು ಬೋಧಿಸಿದರು. ಪಂಚಾಚಾರ್ಯರು ಬ್ರಾಹ್ಮಣಾದಿಚಂಡಾಲಪರ್ಯಂತವಾಗಿ ಸರ್ವರೂ ತಮ್ಮ ತಮ್ಮ ಜಾತಿಗಳಿಗನುಸಾರವಾಗಿ ಲಿಂಗಧಾರಣ-ಭಸ್ಮಧಾರಣ-ರುದ್ರಾಕ್ಷಧಾರಣಾದಿಗಳಿಂದ ಯುಕ್ತರಾಗಿ ವರ್ಣಾಶ್ರಮಧರ್ಮಗಳಂತೆ ವರ್ತಿಸಬೇಕೆಂದು ಬೋಧಿಸಿದಂತೆ, ರಾಮಾನುಜಾಚಾರ್ಯರಾದರೂ ಬ್ರಾಹ್ಮಣಾದಿಚಂಡಾಲಪರ್ಯಂತವಾಗಿ ಸರ್ವರೂ ಶಂಖ-ಚಕ್ರ-ಊರ್ಧ್ವಪುಂಡ್ರಾದಿಗಳಿಂದ ಯುಕ್ತರಾಗಿ ವರ್ಣಾಶ್ರಮಧರ್ಮಗಳಂತೆ ವರ್ತಿಸಬೇಕೆಂದು ಬೋಧಿಸಿದರು. ಪಂಚಾಚಾರ್ಯರು ತಮ್ಮ ಮತಕ್ಕೆ "ವೀರಶೈವ" ವೆಂಬ ನಾಮವನ್ನಿಟ್ಟರೆ, ರಾಮಾನುಜಾಚಾರ್ಯರು ತಮ್ಮ ಮತಕ್ಕೆ "ವೀರವೈಷ್ಣವ ಅಥವಾ ಶ್ರೀವೈಷ್ಣವ" ಎಂಬ ನಾಮವನ್ನಿಟ್ಟರು. ಪಂಚಾಚಾರ್ಯರು ಶಿವಾಗಮಗಳೇ ಪರಮಪ್ರಮಾಣೀಭೂತಗಳಾದ ಗ್ರಂಥಗಳೆಂದು ಬೋಧಿಸಿದರೆ, ರಾಮಾನುಜಾಚಾರ್ಯರು ಪಾಂಚರಾತ್ರಾಗಮಗಳೇ ಪರಮಪ್ರಮಾಣೀಭೂತ ಗ್ರಂಥಗಳೆಂದು ಬೋಧಿಸಿದರು. ಪಂಚಾಚಾರ್ಯರು ವಿಧವಾಸ್ತ್ರೀಯರು ಕೇಶಗಳನ್ನು ತೆಗೆಯಿಸಕೂಡದೆಂದೂ, ಒಪ್ಪತ್ತೇ ಭೋಜನವನ್ನು ಮಾಡಬೇಕೆಂದೂ, ಕಾಷಾಯವಸ್ತ್ರಗಳನ್ನು ಧರಿಸಬೇಕೆಂದೂ, ಪತಿವಿಯೋಗಾನಂತರ ಪರಶಿವನೇ ಪತಿಯೆಂದು ಭಾವಿಸಿ ವರ್ತಿಸಬೇಕೆಂದೂ ಬೋಧಿಸಿದಂತೆ, ರಾಮಾನುಜಾಚಾರ್ಯರಾದರೂ ವಿಧವಾಸ್ತ್ರೀಯರು ಕೇಶಗಳನ್ನು ತೆಗೆಯಿಸಕೂಡದೆಂದೂ, ಒಪ್ಪತ್ತೇ ಭೋಜನವನ್ನು ಮಾಡಬೇಕೆಂದೂ, ಕೆಂಪುಬಟ್ಟೆಗಳನ್ನು ಧರಿಸಬೇಕೆಂದೂ, ಪತಿವಿಯೋಗಾನಂತರ ನಾರಾಯಣನೇ ಪತಿಯೆಂದು ಭಾವಿಸಿ ವರ್ತಿಸ

ಬೇಕೆಂದೂ ಬೋಧಿಸಿದರು. ಪಂಚಾಚಾರ್ಯರು ಗುರುಮನೆತನದವರಿಗೆ (ಆಚಾರ್ಯಸಾಂಪ್ರದಾಯಿಕರಿಗೆ) ಮಹತ್ತ್ವವನ್ನು ಕೊಟ್ಟಿರುವಂತೆ, ರಾಮಾನುಜಾಚಾರ್ಯರಾದರೂ ಗುರುಮನೆತನದವರಿಗೆ ಮಹತ್ತ್ವವನ್ನು ಕೊಟ್ಟಿರುವರು. ವೀರಶೈವಮತದಲ್ಲಿ ಬ್ರಾಹ್ಮಣಪದವಾಚ್ಯರಾದವರಿಗೆ "ಅಯ್ಯನವರು" ಎಂದು ಕರೆದರೆ, ಶ್ರೀವೈಷ್ಣವಮತದಲ್ಲಿ "ಅಯ್ಯಂಗಾರ್" ಎಂದು ಕರೆಯುವರು. ಇವೇ ಮೊದಲಾದ ವಿಷಯಗಳನ್ನು ಪರ್ಯಾಲೋಚಿಸಿ ನೋಡಿದರೆ, ಪಂಚಾಚಾರ್ಯರು ಜಗತ್ತಿನಲ್ಲಿ ಶಿವಭಕ್ತಿಯನ್ನು ಪ್ರಸಾರಮಾಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಂತೆ, ರಾಮಾನುಜಾಚಾರ್ಯರೂ ಸಹ ಜಗತ್ತಿನಲ್ಲಿ ವಿಷ್ಣುಭಕ್ತಿಯನ್ನು ಪ್ರಚಾರಪಡಿಸಬೇಕೆಂಬ ಉದ್ದೇಶದಿಂದ ವೀರಶೈವ ಮತದ ಸಿದ್ಧಾಂತಾಚಾರಾದಿಗಳನ್ನೇ ರೂಪಾಂತರವನ್ನಾಗಿ ಮಾಡಿ, ತಮ್ಮ ಸಿದ್ಧಾಂತವನ್ನು ನೆಲೆಗೊಳಿಸಿದರೆಂದು ತೋರಿಬರುತ್ತದೆ. ಪಂಚಾಚಾರ್ಯರ ಸಿದ್ಧಾಂತವನ್ನು ನೋಡಿ ರಾಮಾನುಜಾಚಾರ್ಯರು ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದರೋ ಅಥವಾ ರಾಮಾನುಜಾಚಾರ್ಯರ ಸಿದ್ಧಾಂತವನ್ನು ನೋಡಿ ಪಂಚಾಚಾರ್ಯರು ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದರೋ ಎಂಬ ಸಂಶಯವು ಸಭಿಕರಿಗೆ ಪ್ರಾಪ್ತವಾಗಬಹುದು. ಈ ಸಂಶಯವು ದೂರವಾಗಬೇಕಾದರೆ, ಆಯಾ ಆಚಾರ್ಯರ ಕಾಲನಿರ್ಣಯವು ಮುಖ್ಯವಾಗಿ ಬೇಕಾಗುವುದು. ಸದ್ಯಃ ಆ ವಿಷಯವನ್ನೇ ವಿಮರ್ಶಿಸೋಣ !

ರಾಮಾನುಜಾಚಾರ್ಯರು ಕ್ರಿಸ್ತಶಕ ೧೦೧೭ ರಲ್ಲಿ ಜನ್ಮಧಾರಣಮಾಡಿದರೆಂದು ಅವರ ಜೀವನಚರಿತ್ರದ ಮೇಲಿಂದ ತಿಳಿದುಬರುತ್ತದೆ. ಅರ್ಥಾತ್ ಇಂದಿಗೆ ಅವರು ಜನ್ಮವೆತ್ತಿ ೯೧೨ ವರ್ಷಗಳಾದವೆಂದು ಸಿದ್ಧವಾಗುವದು. ಇವರ ಸಿದ್ಧಾಂತವನ್ನನುಸರಿಸಿಯೇ

ಶ್ರೀಮತ್ಪಂಚಾಚಾರ್ಯರು ತಮ್ಮ ಸಿದ್ಧಾಂತವನ್ನು ಪ್ರಚಾರಪಡಿಸಿದ ರೆಂದು ಹೇಳಿದ್ದಾದರೆ, ಆದಿಮತಸ್ಥಾಪಕರಾದ ಶ್ರೀಮತ್ಪಂಚಾಚಾರ್ಯರು ೯೦೦ ವರ್ಷಗಳಿಂದೀಚಿನವರೆಂದು ಹೇಳಬೇಕಾಗುವ ಪ್ರಸಂಗವು ಪ್ರಾಪ್ತವಾಗುವುದು. ಈ ಮಾತು ಗಗನಕುಸುಮಾಯಮಾನವಾದುದು. ಏಕೆಂದರೆ—ಶ್ರೀಮತ್ಪಂಚಾಚಾರ್ಯರು ಜಗದಾದಿಯಲ್ಲಿಯೇ ಪರಶಿವನ ಪಂಚಮುಖಗಳಿಂದುದ್ಭವಿಸಿ **ಕೃತ, ತ್ರೇತಾ, ದ್ವಾಪರ, ಕಲಿಯುಗ** ಗಳ ಆದಿಯಲ್ಲಿ, ಭೂಮಂಡಲದಲ್ಲಿ ಪ್ರಸಿದ್ಧಗಳಾದ **ಸೋಮೇಶ್ವರ, ಸಿದ್ಧೇಶ್ವರ, ರಾಮನಾಥ, ಮಲ್ಲಿಕಾರ್ಜುನ, ವಿಶ್ವನಾಥಲಿಂಗ** ಗಳಿಂದ ಅವತರಿಸಿ, ವೀರಶೈವಸಿದ್ಧಾಂತವನ್ನು ಸ್ಥಾಪಿಸಿ, ಜಗನ್ಮಾನ್ಯ ರಾಗಿ ಹೋದ ವಿಷಯವು ಶಿವಾಗಮಾದಿಗಳಲ್ಲಿ ಸ್ಪಷ್ಟವಾಗಿ ಉಲ್ಲೇ ಖಿಸಲ್ಪಟ್ಟಿರುವುದು. **ಸ್ವಯಂಭುವಾಗಮ**ದಲ್ಲಿ ಶ್ರೀಮತ್ಪಂಚಾಚಾರ್ಯರ ಉತ್ಪತ್ತಿಯ ಬಗ್ಗೆ ಪರಶಿವನು ಪಾರ್ವತಿಗೆ—

ಪ್ರವಕ್ಷ್ಯಾಮಿ ಭವಿತ್ವಾಂಶ್ಚ ಶ್ರುಣು ತಜ್ಜನನಕ್ರಮಂ ।
ಶ್ರೀಮದ್ರೇವಣಸಿದ್ಧಸ್ಯ ಕೊಲ್ಲಿಪಾಕಿಪುರೋತ್ತಮೇ ।
ಸೋಮೇಶಲಿಂಗಾಜ್ಜನನಮಾವಾಸಃ ಕದಳೀಪುರೇ ॥
ತದ್ವನ್ಮರುಲಸಿದ್ಧಸ್ಯ ವಟಕ್ಷೇತ್ರೇ ಮಹತ್ತರೇ ।
ಸಿದ್ಧೇಶಲಿಂಗಾಜ್ಜನನಂ ಸ್ಥಾನಮುಜ್ಜಯಿನೀಪುರೇ ॥
ಸುಧಾಕುಂಡಾಖ್ಯಸುಕ್ಷೇತ್ರೇ ಮಲ್ಲಿಕಾರ್ಜುನಲಿಂಗತಃ ।
ಜನನಂ ಪಂಡಿತಾರ್ಯಸ್ಯ ನಿವಾಸಃ ಶ್ರೀಗಿರೌ ಶಿವೇ ॥
ದ್ರಾಕ್ಷಾರಾಮಾಖ್ಯಸುಕ್ಷೇತ್ರೇ ರಾಮನಾಥಾಖ್ಯಲಿಂಗತಃ ।
ಏಕೋರಾಮಸ್ಯ ಜನನಮಾವಾಸಸ್ತು ಹಿಮಾಲಯೇ ॥
ಕಾಶ್ಯಾಂ ವಿಶ್ವೇಶಲಿಂಗಾಚ್ಚ ವಿಶ್ವಾರಾಧ್ಯಸ್ಯ ಸಂಭವಃ ।
ಸ್ಥಾನಂ ಶ್ರೀಕಾಶಿಕಾಕ್ಷೇತ್ರೇ ಶ್ರುಣು ಪಾರ್ವತಿ ಸಾದರಂ ॥
ಏತೇ ಯುಗಚತುಷ್ಕೇತು ಪಂಚಾರಾಧ್ಯಾ ಯಥಾವಿಧಿ ।
ಮಮ ಲಿಂಗಮುಖೋದ್ಭೂತಾ ಲೋಕವಿಶ್ರುತಕೀರ್ತಯಃ ॥

ಈ ರೀತಿಯಾಗಿ ನಾಲ್ಕು ಯುಗಗಳಲ್ಲಿಯೂ ಈ ಆಚಾರ್ಯರು ಅವತರಿಸಿದ ವಿಷಯವನ್ನು ಸ್ಪಷ್ಟವಾಗಿ ಉಪದೇಶಿಸಿರುತ್ತಾನೆ. ಇನ್ನೂ ಅನೇಕಶಿವಾಗಮಗಳ ವಾಕ್ಯಗಳನ್ನು ವಿಮರ್ಶಿಸಿದರೆ, ಇವರು ಕಾಲಾತೀತರೆಂದೂ, ನಿತ್ಯರೆಂದೂ ಸಿದ್ಧವಾಗುವದು. ಈ ಆಚಾರ್ಯರು **ರಂಭಾಪುರೀ, ಉಜ್ಜಯಿನೀ, ಹಿಮವತ್ಕೇದಾರ, ಶ್ರೀಶೈಲ, ಕಾಶೀ** ಈ ಪಂಚಪುಣ್ಯಕ್ಷೇತ್ರಗಳಲ್ಲಿ ಪಂಚಧರ್ಮಪೀಠಗಳನ್ನು ಜಗದಾದಿಯಲ್ಲಿಯೇ ಸ್ಥಾಪಿಸಿದ್ದು, ಈ ಪೀಠಗಳು ಅನಾದಿಕಾಲದಿಂದ ರಾಜಾಧಿರಾಜಮಾನ್ಯಗಳಾಗಿ, ಇಂದಿನವರೆಗೂ ಅತ್ಯಂತವೈಭವದಿಂದ ಮೆರೆಯುತ್ತಿರುವ ವಿಷಯವು ಜಗತ್ತಿಗೆಲ್ಲಾ ವೇದ್ಯವಾಗಿಯೇ ಇದೆ. ಈ ಪೀಠಗಳಿಗೆ ಪ್ರಾಚೀನರಾಜರು ಭಕ್ತಿಪೂರ್ವಕವಾಗಿ ಅನೇಕದಾನ ಶಾಸನಗಳನ್ನು ಬರೆದುಕೊಟ್ಟಿರುವರು. ಆ ಶಾಸನಗಳು ಈಗಲೂ ಮೇಲ್ಕಂಡ ಪೀಠಗಳಲ್ಲಿ ವಿರಾಜಿಸುತ್ತಿರುವವು. ಈಗ್ಗೆ 5000 ವರ್ಷಗಳ ಪೂರ್ವದಲ್ಲಿದ್ದ ಜನಮೇಜಯಭೂಪಾಲನು, ತನ್ನ ಸಮಕಾಲದಲ್ಲಿ ಹಿಮವತ್ಕೇದಾರಪೀಠಾಧಿಪತಿಗಳಾಗಿದ್ದ "**ಆನಂದಲಿಂಗಜಂಗಮ**"ರೆಂಬ ಮಹಾಸ್ವಾಮಿಗಳಿಗೆ ಮಂದಾಕಿನೀ, ಕ್ಷೀರಗಂಗಾ, ಮಧುಗಂಗಾ, ಸ್ವರ್ಗದ್ವಾರಗಂಗಾ, ಸರಸ್ವತೀಮಂದಾಕಿನೀನದಿಗಳ ಸಂಗಮ ಇವುಗಳ ಮಧ್ಯದಲ್ಲಿರುವ ಶ್ರೀಕೇದಾರಕ್ಷೇತ್ರವನ್ನು ಸಿದ್ಧಸಾಧ್ಯತೇಜೋವಸ್ತುಗಳ ಅಧಿಕಾರಸಹಿತವಾಗಿ, ತನ್ನ ಮಾತಾಪಿತೃಗಳಿಗೆ ಶಿವಲೋಕಪ್ರಾಪ್ತಿಯಾಗುವುದಕ್ಕೋಸ್ಕರ ಶ್ರೀಕೇದಾರೇಶ್ವರನ ಸನ್ನಿಧಿಯಲ್ಲಿ ಯುಧಿಷ್ಠಿರಶಕ ೮೯ ಪ್ಲವಂಗನಾಮಸಂವತ್ಸರ ಮಾರ್ಗಶೀರ್ಷಮಾಸ ಅಮಾವಾಸ್ಯಾ ಸೋಮವಾರ ಸೂರ್ಯಗ್ರಹಣಸಮಯದಲ್ಲಿ ಹಿರಣ್ಯೋದಕಸಹಿತವಾಗಿ ದಾನಮಾಡಿ, ಒಂದು ಶಾಸನವನ್ನು ಬರೆದುಕೊಟ್ಟಿರುವನು. ಈ ಶಾಸನವು ಈಗಲೂ ಕೇದಾರಪೀಠದಲ್ಲಿ ಪರಿಶೋಭಿಸುತ್ತಿರುವದು.

ಇದರಂತೆ ಕಾಶೀಪೀಠದಲ್ಲಿಯೂ ಸಹ ಅನೇಕಾನೇಕಪ್ರಾಚೀನದಾನ ಶಾಸನಗಳು ವಿರಾಜಿಸುತ್ತಿರುವವು. ಪೂರ್ವದಲ್ಲಿ ಕಾಶೀಪಟ್ಟಣವನ್ನಾಳುತ್ತಿದ್ದ **ಜಯನಂದದೇವ**ನೆಂಬ ಮಹಾರಾಜನು ವಿಕ್ರಮಾರ್ಕ ಸಂವತ್ ೬೩೧ ಕಾರ್ತಿಕ ಶು॥ ೧೧ ದಿವಸ ಕಾಶೀಮಠದ ಗೋವುಗಳು ಮೇಯುವವಕ್ಕಾಗಿ ಆ ಪೀಠಾಧಿಪತಿಗಳಾದ **ಶ್ರೀಮಲ್ಲಿಕಾರ್ಜುನ ಜಂಗಮ**ರೆಂಬ ಶಿವಯೋಗಿಗಳ ಪಾದಕಮಲದಲ್ಲಿ ಕೆಲವು ಭೂಮಿಗಳನ್ನು ದಾನಮಾಡಿ, ಒಂದು ಶಾಸನವನ್ನು ಬರೆದುಕೊಟ್ಟಿದ್ದಾನೆ. ಈ ಶಾಸನವನ್ನು ಬರೆದುಕೊಟ್ಟು ಇಂದಿಗೆ ೧೩೫೬ ವರ್ಷಗಳಾದವು. ಈ ಶಾಸನವು ಕಾಶೀಪೀಠದಲ್ಲಿ ಈಗಲೂ ಪರಿಶೋಭಿಸುತ್ತಲಿರುವುದು. ಇದಲ್ಲದೆ ಪೂರ್ವದಲ್ಲಿ ನೇಪಾಳದೇಶವನ್ನಾಳುತ್ತಿದ್ದ **ವಿಶ್ವಮಲ್ಲನೃಪತಿ** ಎಂಬ ಮಹಾರಾಜನು ನೇಪಾಳದೇಶದ ಭಾತಗಾಂವ್ ಎಂಬ ಗ್ರಾಮದಲ್ಲಿರುವ ಕಾಶೀಪೀಠದ ಶಾಖಾಮಠವಾದ ಜಂಗಮವಾಡೀಮಠಕ್ಕೆ ವಿಕ್ರಮಸಂವತ್ ೬೯೨ ಜ್ಯೇಷ್ಠಶುದ್ಧ ೮ ದಿವಸ ಅನೇಕಭೂಮಿಗಳನ್ನು ದಾನಮಾಡಿ, ಒಂದು ಸಂಸ್ಕೃತಶಿಲಾಶಾಸನವನ್ನುಬರೆದುಕೊಟ್ಟಿದ್ದಾನೆ. ಈ ಶಾಸನವು ಮೇಲ್ಕಂಡ ನೇಪಾಳದೇಶದ ಮಠದಲ್ಲಿ ಈಗಲೂ ಪ್ರಕಾಶಿಸುತ್ತಿರುವದು. ಈ ಶಾಸನವನ್ನು ಬರೆದುಕೊಟ್ಟು ಇಂದಿಗೆ ೧೨೯೫ ವರ್ಷಗಳಾದವು. ಕ್ರಿಸ್ತಶಕದ ೩ ನೆಯ ಶತಮಾನದಲ್ಲಿದ್ದ ಶೈವಶಿಖಾಮಣಿಗಳಾದ ಪಾಂಡ್ಯರಾಜರು ಉಜ್ಜಯಿನೀಪೀಠವನ್ನು ಕಟ್ಟಿಸಿ, ಒಂದು ಶಿಲಾಶಾಸನವನ್ನು ಬರೆದುಕೊಟ್ಟಿದ್ದಾರೆ. ಈ ಶಾಸನವು ಈಗಲೂ ಉಜ್ಜಯಿನೀಪೀಠದಲ್ಲಿ ಪ್ರಕಾಶಿಸುತ್ತಿರುವದು. ಇದೇ ರೀತಿಯಾಗಿ ಶ್ರೀಶೈಲ–ರಂಭಾಪುರೀ ಮೊದಲಾದ ಗುರುಪೀಠಗಳಲ್ಲಿಯೂ ಸಹ ಅತ್ಯಂತಪ್ರಾಚೀನಶಿಲಾಶಾಸನಗಳು ಅನೇಕವಾಗಿ ದೊರೆಯುತ್ತವೆ.

ಈ ಸಮಸ್ತವಿಷಯಗಳನ್ನು ಪರ್ಯಾಲೋಚಿಸಿದರೆ, ವೀರಶೈವ ಮತದ ಪೀಠಾಚಾರ್ಯರ ಕಾಲವು ರಾಮಾನುಜಾಚಾರ್ಯರ ಕಾಲಕ್ಕಿಂತಲೂ ಎಷ್ಟೋಸಾವಿರವರ್ಷ ಪೂರ್ವದ್ದೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದ ಶ್ರೀಮತ್ಪಂಚಾಚಾರ್ಯರ ಸಿದ್ಧಾಂತವನ್ನನುಸರಿಸಿ ರಾಮಾನುಜಾಚಾರ್ಯರು ತಮ್ಮ ಸಿದ್ಧಾಂತವನ್ನು ನೆಲೆಗೊಳಿಸಿದರೋ, ಅಥವಾ ರಾಮಾನುಜಾಚಾರ್ಯರ ಸಿದ್ಧಾಂತವನ್ನನುಸರಿಸಿ ಪಂಚಾಚಾರ್ಯರು ತಮ್ಮ ಸಿದ್ಧಾಂತವನ್ನು ನೆಲೆಗೊಳಿಸಿದರೋ ಎಂಬ ವಿಷಯವನ್ನು ಕುಶಲಮತಿಗಳಾದ ಸಭಿಕರೇ ಊಹಿಸಬಹುದಾಗಿದೆ.

ರಾಮಾನುಜಾಚಾರ್ಯರು ದ್ರಾವಿಡದೇಶಕ್ಕೆ ಸೇರಿದ ಶ್ರೀಪೆರಂಬೂದೂರು ಎಂಬ ಗ್ರಾಮದಲ್ಲಿ ಆಸೂರಿಕೇಶವಸೋಮಯಾಜಿ ಎಂಬವರ ಉದರದಿಂದ ಜನಿಸಿದರು. ಇವರು ಯಾದವಪ್ರಕಾಶರ ಶಿಷ್ಯರಾಗಿ ಅವರಲ್ಲಿ ವೇದಾಂತಶಾಸ್ತ್ರವನ್ನು ಅಭ್ಯಾಸಮಾಡಿ ಘನ ವಿದ್ವಾಂಸರಾಗಿ, ಲೋಕದಲ್ಲಿ ವಿಷ್ಣುಭಕ್ತಿಯನ್ನು ವಿಶೇಷವಾಗಿ ಪ್ರಚಾರಪಡಿಸಲುದ್ಯುಕ್ತರಾದರು. ರಾಮಾನುಜಾಚಾರ್ಯರ ಜನ್ಮಕ್ಕಿಂತ ಮೊದಲು ದ್ರಾವಿಡದೇಶದಲ್ಲಿ ಎಲ್ಲಿ ನೋಡಿದರೂ ಶಿವಭಕ್ತಿಯೇ ಪ್ರಕಾಶಮಾನವಾಗಿದ್ದಿತು. ಇವರು ಭೂತಪಿಶಾಚಾದಿಗಳಿಂದ ಪೀಡಿತರಾದ ಕೆಲವು ದೇಶದ ಮಹಾರಾಜರ ಪುತ್ರಿಯರನ್ನು ಉದ್ಧಾರಮಾಡಿದ್ದರಿಂದ, ಆಯಾ ರಾಜರು ಇವರಿಗೆ ಶಿಷ್ಯರಾಗಿ ಇವರ ಅಭಿಪ್ರಾಯಾನುಸಾರವಾಗಿ ಶ್ರೀವೈಷ್ಣವಮತವನ್ನಂಗೀಕರಿಸಿದರೆಂದು ಇವರ ಜೀವನ ಚರಿತ್ರದ ಮೇಲಿಂದ ತಿಳಿದುಬರುತ್ತದೆ. ಕೆಲವು ರಾಜರು ಶ್ರೀವೈಷ್ಣವ ಮತವನ್ನವಲಂಬಿಸಿದ ಮೇಲೆ, ರಾಮಾನುಜಾಚಾರ್ಯರು ಆ ರಾಜರ ಸಹಾಯದಿಂದಲೂ ಮತ್ತು ತಮ್ಮ ಬುದ್ಧಿಪ್ರಭಾವದಿಂದಲೂ ನಾನಾ ರೀತಿಯಾಗಿ ವಿಷ್ಣುಭಕ್ತಿಯನ್ನು ಪ್ರಚಾರಪಡಿಸುತ್ತ, ವೈಷ್ಣವಮತ

ವನ್ನು ವಿಶೇಷವಾಗಿ ಹಬ್ಬಿಸಲು ಪ್ರಾರಂಭಿಸಿದರು. ಆ ಕಾಲದಲ್ಲಿ ಅಸಂಖ್ಯಜನರು ಶ್ರೀವೈಷ್ಣವಮತವನ್ನವಲಂಬಿಸಿದರು. ಶಿವಭಕ್ತಿ ಮಯವಾಗಿದ್ದ ದ್ರಾವಿಡದೇಶದಲ್ಲಿ ವೈಷ್ಣವಮತವು ಹಬ್ಬಲಾರಂಭಿ ಸಿತು. ಪೂರ್ವದಲ್ಲಿ ದ್ರಾವಿಡದೇಶದಲ್ಲಿ ಶಿವಭಕ್ತಾಗ್ರಗಣ್ಯರಾದ ವೀರಶೈವರು ವಿಶೇಷವಾಗಿ ವಾಸವಾಗಿದ್ದರೆಂದೂ, ರಾಮಾನುಜಾ ಚಾರ್ಯರ ಪ್ರಾಬಲ್ಯದಿಂದ ವೀರಶೈವರ ಸಂಖ್ಯೆಯು ಕಡಿಮೆಯಾಗುತ್ತ ಅತ್ಯಂತಕ್ಷೀಣಾವಸ್ಥೆಗೆ ಬಂದಿತೆಂದೂ ತಿಳಿದುಬರುತ್ತದೆ. ರಾಮಾನು ಜಾಚಾರ್ಯರು ಕೆಲವುಜನ ರಾಜರ ಸಹಾಯವಿಶೇಷದಿಂದ ಕೆಲವು ಶೈವ ದೇವಾಲಯಗಳನ್ನು ತಮ್ಮ ಸ್ವಾಧೀನಮಾಡಿಕೊಂಡು, ಆ ಶೈವ ದೇವಾಲಯಗಳಲ್ಲಿ ವಿಷ್ಣುವಿಗ್ರಹಗಳನ್ನು ಸ್ಥಾಪಿಸಿದರೆಂದೂ, ಕೆಲವು ಶೈವವಿಗ್ರಹಗಳನ್ನೇ ವಿಷ್ಣುವಿಗ್ರಹಗಳನ್ನಾಗಿ ಮಾಡಿದರೆಂದೂ ಗ್ರಂಥಾಧಾರಗಳಿಂದಲೂ ಹಾಗೂ ಪ್ರತ್ಯಕ್ಷಾನುಭವದಿಂದಲೂ ತಿಳಿದು ಬರುತ್ತದೆ. ಈ ವಿಷಯದಲ್ಲಿ **ತಿರುಪತಿ**ಯಲ್ಲಿರತಕ್ಕ **ವೆಂಕಟರಮಣನ** ದೇವಸ್ಥಾನವೇ ಬಲವಾದ ಸಾಕ್ಷಿಯಾಗಿದೆ. ವೆಂಕಟರಮಣನ ವಿಗ್ರಹವು ವಿಷ್ಣುವಿಗ್ರಹವಲ್ಲವೆಂದೂ, ಆ ವಿಗ್ರಹವು **ವೀರಭದ್ರಸ್ವಾಮಿಯ** ವಿಗ್ರಹವೆಂದೂ, ವೀರಭದ್ರಸ್ವಾಮಿಯ ವಿಗ್ರಹವನ್ನೇ ರಾಮಾನುಜಾ ಚಾರ್ಯರು ವಿಷ್ಣುವಿಗ್ರಹನ್ನಾಗಿಮಾಡಿದರೆಂದೂ ಶ್ರೀಪತಿಪಂಡಿತರು ತಾವು ಬರೆದ **ಶ್ರೀಕರಭಾಷ್ಯ**ದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ. ಅದೇನೆಂದರೆ—

"ನನು ವೇಂಕಟೇಶ್ವರವಿಠಲೇಶ್ವರಸ್ಥಾನೇ ವಿಷ್ಣೋರೀಶ್ವರಶಬ್ದ ಶ್ರವಣಾತ್, ಪರಶುರಾಮಾವತಾರೇ ತಸ್ಯ ಬ್ರಾಹ್ಮಣಕುಲಸಂಭವಶ್ರವಣಾತ್, ಕಥಂ ಕ್ಷತ್ರಿಯತ್ವಮುಪದಿಶ್ಯತೇ ಇತಿಚೇನ್ನ । ವೇಂಕಟೇಶ್ವರಸ್ಯಾಭಾಸ ವಿಷ್ಣುತ್ವಂ ತದಂಗೇ ನಾಗಭೂಷಣಾದಿಧರ್ಮಾಣಾಂ ದ್ಯೋತನಾತ್, ಮೂಲ

ವಿಗ್ರಹೇ ಶಂಖಚಕ್ರಾದಿಲಾಂಛನಾನಾಮದರ್ಶನಾತ್ ವೀರೇಶ್ವರಸ್ಯ ರಾಮಾನುಜಕಲ್ಪಿತವೇಂಕಟೇಶ್ವರತ್ವಂ ರಜ್ಜುಸರ್ಪವದಾಭಾಸಮಾತ್ರಮೇವ। ಕಿಂಚ ತತ್ಪಾಣ್ಯಧೋದೇಶೇ ಶಿವಲಿಂಗದರ್ಶನಾದೀಶ್ವರಶಬ್ದೋ ವ್ಯವಹ್ರಿಯತೇ॥"

ಈ ಭಾಷ್ಯಪಂಕ್ತಿಗಳನ್ನು ವಿಚಾರಮಾಡಿದ್ದಾದರೆ, ತಿರುಪತಿ ಕ್ಷೇತ್ರದಲ್ಲಿರುವ ಮೂರ್ತಿಯು **ವೀರಭದ್ರಮೂರ್ತಿ**ಯೆಂದೂ, ಆ ಮೂರ್ತಿಗೆ ವಿಷ್ಣುವಿನ ಮುಖ್ಯಚಿಹ್ನಗಳಾದ ಶಂಖಚಕ್ರಾದಿಗಳಿರುವದಿಲ್ಲವೆಂದೂ, ಆ ಮೂರ್ತಿಯು **ಸರ್ಪಾಭರಣಭೂಷಿತ**ವಾಗಿರುವದೆಂದೂ, ಆ ಮೂರ್ತಿಯ ಹಸ್ತದ ಕೆಳಭಾಗದಲ್ಲಿ ಶಿವಲಿಂಗವಿರುವುದೆಂದೂ ಕಂಡುಬರುವುದು. ಈ ಭಾಷ್ಯಕಾರರ ಮಾತುಗಳು ಸತ್ಯವೋ ಅಥವಾ ಅಸತ್ಯವೋ ಎಂದು ವಿಚಾರಮಾಡುವುದು ಪ್ರಥಮಕರ್ತವ್ಯವಾಗಿದೆ. ತಿರುಪತಿಕ್ಷೇತ್ರವನ್ನು ನೋಡಿಬಂದ ಅನೇಕಜನರನ್ನು ವಿಚಾರಮಾಡಿದ್ದರಲ್ಲಿ, ಅಲ್ಲಿರುವ ವೆಂಕಟರಮಣಸ್ವಾಮಿಗೆ ಬಾಹುಗಳಲ್ಲಿ ಸರ್ಪವು ಸುತ್ತಿಕೊಂಡಿರುವುದು ನಿಜವೆಂದೂ, ಹಸ್ತಗಳಲ್ಲಿ ಶಿಲೆಯಿಂದ ನಿರ್ಮಿಸಿದ ಶಂಖಚಕ್ರಾದಿಗಳಿರದೆ ಲೋಹದಿಂದ ರಚಿಸಿದ ಶಂಖಚಕ್ರಗಳನ್ನಿಟ್ಟಿರುವರೆಂದೂ, ಪ್ರತಿವರ್ಷದಲ್ಲಿ ಧನುರ್ಮಾಸವು ಮುಗಿಯುವವರೆಗೂ ಕೇವಲ ಬಿಲ್ವಪತ್ರಗಳಿಂದಲೇ ಪೂಜೆಯು ನೆರವೇರುತ್ತಿರುವುದೆಂದೂ ಹೇಳುತ್ತಿರುವರು. ಇದರ ಮೇಲಿಂದ ಶ್ರೀಪತಿಪಂಡಿತರು ಪ್ರತ್ಯಕ್ಷವಾಗಿ ಆ ವಿಗ್ರಹದ ಸಕಲ ಸ್ವರೂಪವನ್ನು ತಿಳಿದುಕೊಂಡೇ ತಮ್ಮ ಭಾಷ್ಯದಲ್ಲಿ ಯಥಾರ್ಥ ವಿಷಯವನ್ನು ಬರೆದಿದ್ದಾರೆಂದು ಸ್ಪಷ್ಟವಾಗಿ ತೋರಿಬರುತ್ತದೆ. ಲೋಕದಲ್ಲಿ ಅನೇಕಾನೇಕ ವಿಷ್ಣುಮೂರ್ತಿಗಳಿರುತ್ತವೆ. ಯಾವ ವಿಷ್ಣುಮೂರ್ತಿಯಲ್ಲಾಗಲಿ ಸರ್ಪಾಭರಣವಿಶಿಷ್ಟತೆಯೂ, ಶಂಖಚಕ್ರಶೂನ್ಯತೆಯೂ ಕಂಡುಬರುವುದಿಲ್ಲ. ಆದರೆ ವೆಂಕಟರಮಣನಿಗೆ ಸರ್ಪಾಭರಣ

ವಿರುವದರಿಂದಲೂ, ಶಂಖಚಕ್ರಗಳಿಲ್ಲದಿರುವದರಿಂದಲೂ ಆ ಮೂರ್ತಿಗೆ ವೀರಭದ್ರಸ್ವಾಮಿಯ ಮೂರ್ತಿಯೆಂದೇ ಹೇಳಬೇಕಾಗುವದು.

ಇದೇ ರೀತಿಯಾಗಿ ರಾಮಾನುಜಾಚಾರ್ಯರ ಕಾಲದಲ್ಲಿ ಜನರು ಅಭಿಪ್ರಾಯಪಡುವಂತೆ, ಅನೇಕಾನೇಕವ್ಯತ್ಯಾಸಗಳಾಗಿರಬೇಕೆಂದು ಊಹಿಸಬಹುದಾಗಿದೆ. ಪೂರ್ವದಲ್ಲಿ ದ್ರಾವಿಡದೇಶವು ವೀರಶೈವರ ತವರುಮನೆಯಾಗಿದ್ದಿತು. ಆ ದೇಶದಲ್ಲಿ ಅನೇಕಾನೇಕಜನ ಉದ್ದಾಮ ಪಂಡಿತರು ಜನಿಸಿ ವೀರಶೈವಮತದ ವಿಷಯದಲ್ಲಿ ಅನಂತಾನಂತ ಗ್ರಂಥಗಳನ್ನು ರಚಿಸಿರುತ್ತಾರೆ. ವೀರಶೈವಮಯವಾಗಿದ್ದ ದ್ರಾವಿಡ ದೇಶದಲ್ಲಿ, ಸದ್ಯಃ ಎಲ್ಲಿಯೋ ಒಬ್ಬೊಬ್ಬ ವೀರಶೈವರು ವಾಸವಾಗಿರುವುದನ್ನು ನೋಡಿದರೆ ಅತ್ಯಂತ ವ್ಯಸನವೆನಿಸುತ್ತದೆ. ಭರತಖಂಡದಲ್ಲಿ ಸರ್ವತೋಮುಖವಾಗಿ ವ್ಯಾಪಿಸಿದ್ದ ವೀರಶೈವಮತವು, ಕೆಲಕೆಲ ರಾಜರ ಕಾಲದಲ್ಲಿಯೂ ಹೀಗೆಯೇ ಅಪಘಾತಕ್ಕೆ ಸಿಲುಕಿ, ಕ್ಷೀಣದಶೆಯನ್ನು ಹೊಂದುತ್ತ ಬಂದಿರುವದು. ಪರಮಾತ್ಮನು ಈ ಮತಕ್ಕೆ ಪೂರ್ವಕಾಲದಂತೆ ಸಮಸ್ತವೈಭವವನ್ನು ಕೊಟ್ಟು, ಈ ಮತವನ್ನು ಸರ್ವತೋಮುಖವಾಗಿ ಪ್ರಕಾಶಪಡಿಸುವಂತೆ ಅನುಗ್ರಹಿಸಲೆಂದೂ, ಈ ಮತದ ಸರ್ವೋತ್ತಮಸಿದ್ಧಾಂತವು ಸರ್ವತ್ರ ಬೆಳಗಲೆಂದೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇನೆ.

ಇಲ್ಲಿಯವರೆಗೆ ಶ್ರೀವೈಷ್ಣವಮತಕ್ಕೂ ವೀರಶೈವಮತಕ್ಕೂ ಇರತಕ್ಕ ತಾರತಮ್ಯವಿಷಯವೂ, ರಾಮಾನುಜಾಚಾರ್ಯರ ಕಾಲದಿಂದೀಚೆಗೆ ಶಿವಭಕ್ತಿಯು ಹ್ರಾಸವಾಗುತ್ತ ಬಂದಿತೆಂಬ ವಿಷಯವೂ ಸಪ್ರಮಾಣವಾಗಿ ಪ್ರತಿಪಾದಿಸಲ್ಪಟ್ಟಿತಷ್ಟೆ ! ಇನ್ನು ವೀರಶೈವರಿಗೆ ಮುಖ್ಯೋಪಾಸ್ಯನಾದ ಪರಶಿವನ ಸರ್ವೋತ್ತಮತ್ವವನ್ನು ಸಂಕ್ಷೇಪವಾಗಿ ವಿವರಿಸೋಣ !

"ಯದಾ ತಮಸ್ತನ್ನದಿವಾ ನರಾತ್ರಿರ್ನಸನ್ನ ಚಾಸಚ್ಛಿವ ಏವ ಕೇವಲಃ"
"ಏಕ ಏವ ರುದ್ರೋ ನ ದ್ವಿತೀಯಾಯ ತಸ್ಥೇ"
"ಉಮಾಸಹಾಯಂ ಪರಮೇಶ್ವರಂ ಪ್ರಭುಂ"

ಇತ್ಯಾದ್ಯನೇಕಶ್ರುತಿಗಳು ಶಿವನೇ ಅನಾದಿಮೂರ್ತಿಯೆಂದೂ, ಅವನೇ ಪರಬ್ರಹ್ಮವೆಂದೂ, ಶಕ್ತಿವಿಶಿಷ್ಟನೆಂದೂ ಮುಕ್ತಕಂಠದಿಂದ ಸಾರುತ್ತಲಿರುವವು. ಶಕ್ತಿವಿಶಿಷ್ಟವಾದ ಆ ಪರಶಿವಮೂರ್ತಿಯಿಂದಲೇ ಚರಾಚರಾತ್ಮಕವಾದೀ ಜಗತ್ತು ನಿರ್ಮಿತವಾಗಿರುವದೆಂದು ತ್ರಿಕಾಲಜ್ಞಾನಿಗಳಾದ ಅನೇಕಜನಮಹರ್ಷಿಗಳು ತಮ್ಮ ತಮ್ಮ ಗ್ರಂಥಗಳಲ್ಲಿ ಪ್ರತಿಪಾದಿಸಿರುತ್ತಾರೆ. ವಿಷ್ಣು, ಬ್ರಹ್ಮ, ಇಂದ್ರ, ಕುಬೇರ ಮೊದಲಾದ ದೇವತೆಗಳು ಆ ಪರಮಾತ್ಮನ ಉಪಾಸನೆಯಿಂದಲೇ ತಮಗೆ ಪ್ರಾಪ್ತವಾಗಿರುವ ಅಮೂಲ್ಯಸ್ಥಾನಗಳನ್ನು ಅಲಂಕರಿಸಿದರೆಂದು ವ್ಯಾಸಮಹರ್ಷಿಯು ತಾನು ರಚಿಸಿದ ಸ್ಕಾಂದಾದಿಪುರಾಣಗಳಲ್ಲಿ ಉಲ್ಲೇಖಿಸಿರುತ್ತಾನೆ. ಸಮಸ್ತದೇವತೆಗಳಿಗೆಲ್ಲ ಶಿವನೇ ಉಪಾಸ್ಯಮೂರ್ತಿಯಾಗಿರುವದರಿಂದ, ಆ ಶಿವನಿಗೆ **ಮಹಾದೇವ**ನೆಂಬ ನಾಮವು ಅನ್ವರ್ಥವಾಗಿ ಪ್ರಾಪ್ತವಾಗಿರುವದು. ಪೂರ್ವಕಾಲದಲ್ಲಿ ಭರತಖಂಡದಲ್ಲಿರತಕ್ಕ ಸಮಸ್ತಯೋಗಿಗಳೂ, ಚಕ್ರವರ್ತಿಗಳೂ, ಮಾನವರೂ ಶಿವನೇ ಸರ್ವೋತ್ತಮನೆಂದು ನಂಬಿ, ಆತನ ಸ್ವರೂಪವಾದ ಶಿವಲಿಂಗಮೂರ್ತಿಯನ್ನು ಪ್ರತಿಯೊಂದು ಸ್ಥಾನದಲ್ಲಿಯೂ ಸ್ಥಾಪಿಸಿ, ನಿಸ್ಸೀಮಭಕ್ತಿಯಿಂದ ಅವನ ಉಪಾಸನೆಯನ್ನು ಮಾಡಿ ಕೈವಲ್ಯಸುಖವನ್ನನುಭವಿಸಿದರು. ಪ್ರಾಚೀನಮಹರ್ಷಿಗಳು ಶಿವಲಿಂಗಮೂರ್ತಿಯನ್ನು ಸ್ಥಾಪಿಸಿ ಪೂಜಿಸಿದಂತೆ, ಇನ್ನಾವ ಮೂರ್ತಿಗಳನ್ನಾಗಲಿ ಸ್ಥಾಪಿಸಲಿಲ್ಲ ಮತ್ತು ಪೂಜಿಸಲಿಲ್ಲ. ಲೋಕವಿಖ್ಯಾತನಾದ ವ್ಯಾಸಮಹರ್ಷಿಯು ತಾನು ಆದಿಯಲ್ಲಿ ವಿಷ್ಣುಭಕ್ತನಾಗಿ, ವಿಷ್ಣುವೇ ದೇವೋತ್ತಮನೆಂದು ಸಾರುತ್ತ

ಕಾಶೀಕ್ಷೇತ್ರಕ್ಕೆ ಹೋಗಿ, ವಿಶ್ವನಾಥನ ದೇವಾಲಯದಲ್ಲಿಯೂ ಸಹ **“ನ ದೇವಃ ಕೇಶವಾತ್ಪರಃ”** ಎಂದು ವಿಷ್ಣುವಿನ ಆಧಿಕ್ಯವನ್ನು ಸಾರಲು, ಕೂಡಲೆ ವ್ಯಾಸನು ನಂದೀಶ್ವರನಿಂದ ಹಸ್ತಸ್ತಂಭನವನ್ನು ಹೊಂದಿ, ಅಸಾಧಾರಣವಾದ ದುಃಖಕ್ಕೀಡಾದನು. ಆಗ್ಗೆ ವಿಷ್ಣುವು ವ್ಯಾಸನ ಹೃದಯದಲ್ಲಿ ಬಂದು, ಈ ರೀತಿಯಾಗಿ ಬೋಧಿಸಿದನು—

ಏಕ ಏವಹಿ ವಿಶ್ವೇಶೋ ದ್ವಿತೀಯೋ ನಾಸ್ತಿ ಕಶ್ಚನ ॥೪೯॥

ತತ್ಪ್ರಸಾದಾದಹಂ ಚಕ್ರೀ ಲಕ್ಷ್ಮೀಶಸ್ತತ್ಪ್ರಭಾವತಃ ।
ತ್ರೈಲೋಕ್ಯರಕ್ಷಾಸಾಮರ್ಥ್ಯಂ ದತ್ತಂ ತೇನೈವ ಶಂಭುನಾ ॥೫೦॥

ತದ್ಭಕ್ತ್ಯಾ ಪರಮೈಶ್ವರ್ಯಂ ಮಯಾ ಲಬ್ಧಂ ವರಾತ್ತತಃ ।
ಇದಾನೀಂ ಸ್ತುಹಿ ತಂ ಶಂಭುಂ ಯದಿ ಮೇ ಶುಭಮಿಚ್ಛಸಿ ॥೫೧॥

ಕಾಶೀಖಂಡ ೯೫ ನೆಯ ಅಧ್ಯಾಯ.

ಎಲೈ ವ್ಯಾಸನೇ ! ಸಮಸ್ತದೇವತೆಗಳಲ್ಲಿ ವಿಶ್ವನಾಥನೇ ಮುಖ್ಯನಾಗಿದ್ದಾನೆ; ಅವನನ್ನು ಬಿಟ್ಟು ಎರಡನೆಯವನು ಯಾವನೂ ಮುಖ್ಯನಲ್ಲ; ಆ ವಿಶ್ವನಾಥನ ಪ್ರಸಾದದಿಂದಲೇ ನಾನು ಚಕ್ರ ಪಾಣಿಯೂ, ಲಕ್ಷ್ಮೀಪತಿಯೂ, ತ್ರೈಲೋಕ್ಯರಕ್ಷಕನೂ ಆಗಿದ್ದೇನೆ; ಅಲ್ಲದೆ ಆ ವಿಶ್ವನಾಥನಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಪರ ಮೈಶ್ವರ್ಯವನ್ನು ಪಡೆದಿದ್ದೇನೆ; ನೀನು ನನಗೆ ಶುಭವನ್ನು ಕೋರು ವವನಾದರೆ, ಕೂಡಲೆ ಆ ವಿಶ್ವನಾಥನನ್ನು ಸ್ತುತಿಸು. ಎಂದು ಆಜ್ಞೆ ಮಾಡಲು, ಆಗ್ಗೆ ವ್ಯಾಸನು ಗರ್ವದಿಂದ ದೂರನಾಗಿ ಶ್ರೀವಿಶ್ವನಾಥ ನನ್ನು ನಾನಾರೀತಿಯಾಗಿ ಸ್ತುತಿಸಲಾರಂಭಿಸಿದನು.

ಏಕೋ ರುದ್ರೋ ನ ದ್ವಿತೀಯಾಯ ತಸ್ಥೇ
ತದ್ಬ್ರಹ್ಮೈಕಂ ನೇಹ ನಾನಾಸ್ತಿ ಕಿಂಚಿತ್ ।

ಯದ್ಯಪ್ಯನ್ಯಃ ಕೋಽಪಿವಾ ಕುತ್ರಚಿದ್ವಾ
ವ್ಯಾಚಷ್ಟಾಂ ತದ್ಯಸ್ಯ ಶಕ್ತಿರ್ಮದಗ್ರೇ ||೫೬||

ಯಃ ಕ್ಷೀರಾಬ್ಧೇರ್ಮಂದರಾಘಾತಜಾತೋ
ಜ್ವಾಲಾಮಾಲಃ ಕಾಲಕೂಟೋಽತಿಭೀಮಃ ।
ತಂ ಸೋಢುಂ ವಾ ಕೋಽಪರೋಽಭೂನ್ಮಹೇಶಾ
ದ್ಯಜ್ಜ್ವಾಲಾಭಿಃ ಕೃಷ್ಣತಾಮಾಪ ವಿಷ್ಣುಃ ||೫೭||

ಯದ್ಬಾಣೋಽಭೂಚ್ಛ್ರೀಪತಿರ್ಯಸ್ಯ ಯಂತಾ
ಲೋಕೇಶೋ ಯತ್ಸ್ಯಂದನಂ ಭೂಃ ಸಮಸ್ತಾ ।
ವಾಹಾ ವೇದಾ ಯಸ್ಯ ವೈ ದೃಷ್ಟಿಪಾತಾ
ದ್ದಗ್ಧಾ ಗ್ರಾಮಾಸ್ತ್ರೈಪುರಾಸ್ತತ್ಸಮಃ ಕಃ ||೫೮||

ಯಃ ಕಂದರ್ಪೋ ವೀಕ್ಷ್ಯಮಾಣಃ ಸಮಾನಂ
ದೇವೈರನ್ಯೈರ್ಭಸ್ಮಜಾತಃ ಸ್ವಯಂ ಹಿ ।
ಪೌಷ್ಪೈರ್ಬಾಣೈಃ ಸರ್ವವಿಶ್ವೈಕಜೇತಾ
ಕೋ ವಾ ಸ್ತುತ್ಯಃ ಕಾಮಜೇತುಸ್ತತೋಽನ್ಯಃ ||೫೯||

ಯಂ ವೈ ವೇದೋ ವೇದ ನೋ ನೈವವಿಷ್ಣು
ರ್ನೋರ್ವಾ ವೇಧಾ ನೋ ಮನೋ ನೈವ ವಾಣೀ ।
ತಂ ದೇವೇಶಂ ಮಾದೃಶಃ ಕೋಽಲ್ಪಮೇಧಾ
ಯಾಥಾತ್ಮ್ಯದ್ವೈ ವೇತ್ತ್ಯಹೋ ವಿಶ್ವನಾಥಂ ||೬೦||

ಯಸ್ಮಿನ್ ಸರ್ವಂ ಯಸ್ತು ಸರ್ವತ್ರ ಸರ್ವೋ
ಯೋ ವೈ ಕರ್ತಾ ಯೋಽವಿತಾ ಯೋಽಪಹರ್ತಾ ।
ನೋ ಯಸ್ಯಾದಿರ್ಯಃ ಸಮಸ್ತಾದಿರೇಕೋ
ನೋ ಯಸ್ಯಾಂತೋ ಯೋಽಂತಕೃತ್ತಂ ನತೋಽಸ್ಮಿ ||೬೧||

ಯಸ್ಯೈಕಾಖ್ಯಾ ವಾಜಿಮೇಧೇನ ತುಲ್ಯಾ
ಯಸ್ಯಾನತ್ಯಾ ಚೈಕಯಾಽಲ್ಪೇಂದ್ರಲಕ್ಷ್ಮೀಃ ।

ಯಸ್ಯ ಸ್ತುತ್ಯಾ ಲಭ್ಯತೇ ಸತ್ಯಲೋಕೋ
ತಸ್ಯಾರ್ಚಾತೋ ಮೋಕ್ಷಲಕ್ಷ್ಮೀರದೂರಾ ॥೬೨॥

ನಾನ್ಯಂ ದೇವಂ ವೇದ್ಮ್ಯಹಂ ಶ್ರೀಮಹೇಶಾ
ನ್ನಾನ್ಯಂ ದೇವಂ ಸ್ತೌಮಿ ಶಂಭೋರ್ಋತೇಽಹಂ ।
ನಾನ್ಯಂ ದೇವಂ ವಾ ನಮಾಮಿ ತ್ರಿಣೇತ್ರಾತ್
ಸತ್ಯಂ ಸತ್ಯಂ ಸತ್ಯಮೇತನ್ಮೃಷಾ ನ ॥೬೩॥

ಕಾಶೀಖಂಡ ೯೫ ನೆಯ ಅಧ್ಯಾಯ.

ಈ ರೀತಿಯಾಗಿ ವ್ಯಾಸನು ಅನಿತರಸಾಧಾರಣವಾದ ಭಕ್ತಿ ವಿಶೇಷದಿಂದ ವಿಶ್ವನಾಥನನ್ನು ಭಜಿಸಲು, ಬಾಹುಬಂಧನದಿಂದ ಬಿಡುಗಡೆಯನ್ನು ಹೊಂದಿ, ಶಿವನಿಂದೆಯಿಂದ ತನಗೆ ಪ್ರಾಪ್ತವಾದ ದೋಷಪರಿಹಾರಕ್ಕೋಸ್ಕರ ಗಂಗಾನದಿಯ ತೀರದಲ್ಲಿ ಪರಿಶೋಭಿಸುತ್ತಿದ್ದ **ಘಂಟಾಕರ್ಣಶಿವಾಚಾರ್ಯರ** ಪುಣ್ಯಾಶ್ರಮದಲ್ಲಿ, ತನ್ನ ಹೆಸರಿನಿಂದ (**ವ್ಯಾಸೇಶ್ವರ** ಎಂಬ ಹೆಸರಿನಿಂದ) ಒಂದು ಶಿವಲಿಂಗವನ್ನು ಸ್ಥಾಪಿಸಿದನು. ಈ ವಿಷಯವು ಕಾಶೀಖಂಡದ ೯೫ ನೆಯ ಅಧ್ಯಾಯದಲ್ಲಿ—

ಪಾರಾಶರ್ಯಸ್ತದಾರಭ್ಯ ಶಂಭುಭಕ್ತಿಪರೋಽಭವತ್ ।
ಲಿಂಗಂ ವ್ಯಾಸೇಶ್ವರಂ ಸ್ಥಾಪ್ಯ ಘಂಟಾಕರ್ಣಹ್ರದಾಗ್ರತಃ ॥೬೮॥

ವಿಭೂತಿಭೂಷಣೋ ನಿತ್ಯಂ ನಿತ್ಯಂ ರುದ್ರಾಕ್ಷಭೂಷಣಃ ।
ರುದ್ರಸೂಕ್ತಪರೋ ನಿತ್ಯಂ ನಿತ್ಯಂ ಲಿಂಗಾರ್ಚಕೋಽಭವತ್ ॥೬೯॥

ಈ ರೀತಿಯಾಗಿ ಪ್ರತಿಪಾದಿಸಲ್ಪಟ್ಟಿರುತ್ತದೆ. ಈ ಶ್ಲೋಕಾರ್ಥವನ್ನು ವಿಚಾರಮಾಡಿ ನೋಡಿದರೆ, ವ್ಯಾಸಮಹರ್ಷಿಯು ಬಾಹುಬಂಧನದಿಂದ ಬಿಡುಗಡೆಯನ್ನು ಹೊಂದಿದನಂತರ ಮಹಾಶಿವಭಕ್ತನಾದನೆಂದು ಸ್ಪಷ್ಟವಾಗಿ ತೋರುತ್ತದೆ. ಲಿಂಗಸ್ಥಾಪನವನ್ನು ಮಾಡಿದಮೇಲೆ,

ವ್ಯಾಸಮಹರ್ಷಿಯು ವೀರಶೈವಮತಸ್ಥಾಪಕರಾದ **ಘಂಟಾಕರ್ಣ ಶಿವಾಚಾರ್ಯ**ರಿಂದ ಬ್ರಹ್ಮಜ್ಞಾನವನ್ನು ಪಡೆದುಕೊಂಡನೆಂದು ಕೆಲವು ಗ್ರಂಥಗಳಿಂದ ತಿಳಿದುಬರುತ್ತದೆ. ಈ ವಿಷಯವು ಪ್ರತ್ಯಕ್ಷಾನುಭವ ದಿಂದಲೂ ಹಾಗೂ ಐತಿಹಾಸಿಕದೃಷ್ಟಿಯಿಂದಲೂ ಸಾಧುವೆಂದು ಕಂಡುಬರುತ್ತದೆ. ಹೇಗೆಂದರೆ—ವ್ಯಾಸಕಾಶಿಯಲ್ಲಿರುವ ವ್ಯಾಸೇಶ್ವರ ಲಿಂಗಮೂರ್ತಿಯ ಸಮ್ಮುಖದಲ್ಲಿ ಅನಾದಿಕಾಲದಿಂದ ಈ ಹೊತ್ತಿನವರೆಗೂ ಜಟಾ, ಭಸ್ಮ, ರುದ್ರಾಕ್ಷ, ಲಿಂಗಧಾರಣಾದಿವೀರಶೈವಾಚಾರ್ಯ ಚಿಹ್ನಗಳಿಂದ ಯುಕ್ತವಾಗಿರುವ "**ಘಂಟಾಕರ್ಣ ಶಿವಾಚಾರ್ಯ**"ರ ಶಿಲಾವಿಗ್ರಹವು ಅಚ್ಚಳಿಯದಂತೆ ಶೋಭಿಸುತ್ತಿರುವದು. ಈ ಮೂರ್ತಿಗೆ ಆ ದೇಶದ ಜನರು ವೃದ್ಧಪರಂಪರೆಯಿಂದ "**ವ್ಯಾಸಜೀಕಾ ಗುರು**" ಎಂದು ಕರೆಯುತ್ತಿರುವರು. ಈ ವ್ಯಾಸೇಶ್ವರನ ಮುಂಭಾಗದಲ್ಲಿ ಘಂಟಾಕರ್ಣ ಶಿವಾಚಾರ್ಯರ ಪವಿತ್ರಾಭಿಧಾನದಿಂದ "**ಘಂಟಾಕರ್ಣ ತೀರ್ಥ**" ಎಂಬ ಕೊಳವು ಶೋಭಿಸುತ್ತಿರುವದು. ಇದನ್ನು ಅಲ್ಲಿಯ ಜನರು "**ಘಂಟಾಕರ್ಣತಲಾವ**" ಎಂಬ ಹೆಸರಿನಿಂದ ಕರೆಯುತ್ತಿರುವರು. ಈ ತೀರ್ಥದ ಮಾಹಾತ್ಮ್ಯವು ಕಾಶೀಖಂಡದ ಉತ್ತರ ಭಾಗದಲ್ಲಿ ವಿಶೇಷವಾಗಿ ವರ್ಣಿಸಲ್ಪಟ್ಟಿದೆ. ವ್ಯಾಸನು ತಾನು ರಚಿಸಿದ ಪುರಾಣಗಳಲ್ಲಿಯೇ ಈ ಸಮಸ್ತ ವಿಷಯಗಳನ್ನು ಬರೆದಿರುವುದನ್ನು ನೋಡಿದರೆ, ಈತನು ಅಂತ್ಯದಲ್ಲಿ ಪರಮಶಿವಭಕ್ತನಾಗಿ ಕೇದಾರಪೀಠದ ಮೂಲಾಚಾರ್ಯರಾದ ಶ್ರೀಘಂಟಾಕರ್ಣಶಿವಾಚಾರ್ಯರ ಶಿಷ್ಯನಾದನೆಂದು ಸ್ಪಷ್ಟವಾಗಿ ತೋರಿಬರುತ್ತದೆ. *

---

* ಶ್ರೀ ಕೇದಾರಪೀಠದಲ್ಲಿರುವ ಓಂಕಾರೇಶ್ವರಮಂದಿರದ ಹೊರಭಾಗದಲ್ಲಿ ವ್ಯಾಸಮಹರ್ಷಿಗಳ ಶಿಲಾವಿಗ್ರಹವು ಅನಾದಿಕಾಲದಿಂದ ಇಂದಿನವರೆಗೂ ವಿರಾಜಿಸುತ್ತಿರುವುದು.

ಇದಲ್ಲದೆ ಅಷ್ಟಸಿದ್ಧಿಗಳನ್ನು ಪಡೆದು ಮಹಾಮಹಿಮಾಶಾಲಿಯೆಂದು ಜಗತ್ಪ್ರಸಿದ್ಧನಾದ ಅಗಸ್ತ್ಯಮಹರ್ಷಿಯೂ ಸಹ ತನ್ನ ಹೆಸರಿನಿಂದ ಒಂದು ಶಿವಲಿಂಗವನ್ನು ಸ್ಥಾಪಿಸಿ, ಆ ಶಿವಲಿಂಗೋಪಾಸನೆಯಿಂದ ಸಪ್ತಸಮುದ್ರಪಾನ ಮೊದಲಾದ ಅತ್ಯದ್ಭುತ ಕಾರ್ಯಗಳನ್ನು ಮಾಡಿ ಲೋಕಮಾನ್ಯನಾದನು. ಆ ಮಹರ್ಷಿಯಿಂದ ಸ್ಥಾಪಿಸಲ್ಪಟ್ಟಲಿಂಗವು **ಅಗಸ್ತ್ಯೇಶ್ವರ** ಎಂಬ ಹೆಸರಿನಿಂದ ಈಗಲೂ ಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವದು. ಇದರಂತೆಯೇ ಗೌತಮ, ಕಶ್ಯಪ, ಕಪಿಲ, ಮಾರ್ಕಂಡೇಯ, ವಸಿಷ್ಠ, ವಿಶ್ವಾಮಿತ್ರ ಮೊದಲಾದ ಮಹರ್ಷಿಗಳೂ ಸಹ ತಮ್ಮತಮ್ಮ ಹೆಸರುಗಳಿಂದ ಶಿವಲಿಂಗಗಳನ್ನು ಸ್ಥಾಪಿಸಿ ನಿತ್ಯಸುಖವನ್ನು ಅನುಭವಿಸಿದರು. ಆ ಮಹರ್ಷಿಗಳು ಸ್ಥಾಪಿಸಿದ ಲಿಂಗಗಳು **ಗೌತಮೇಶ್ವರ, ಕಶ್ಯಪೇಶ್ವರ, ಕಪಿಲೇಶ್ವರ, ಮಾರ್ಕಂಡೇಯೇಶ್ವರ, ವಸಿಷ್ಠೇಶ್ವರ, ವಿಶ್ವಾಮಿತ್ರೇಶ್ವರ** ಮೊದಲಾದ ಪವಿತ್ರಾಭಿಧಾನಗಳಿಂದ ಈಗಲೂ ಕಾಶೀಕ್ಷೇತ್ರದಲ್ಲಿ ಪ್ರಕಾಶಿಸುತ್ತಿರುವವು. ಇದಲ್ಲದೆ ವಿಷ್ಣುವೂ ಸಹ ತಾನು ಧರಿಸಿದ ದಶಾವತಾರಗಳಲ್ಲಿಯೂ ಒಂದೊಂದು ಶಿವಲಿಂಗವನ್ನು ಸ್ಥಾಪಿಸಿ, ಪೂಜಿಸಿ ತನ್ನಿಷ್ಟಾರ್ಥವನ್ನು ಪಡೆದನೆಂದು, ಅನೇಕಾನೇಕಪುರಾಣಗಳಲ್ಲಿ ಉದ್ಘೋಷಿಸಲ್ಪಟ್ಟಿರುವದು. ರಾಮಾವತಾರದಲ್ಲಿ ಸ್ಥಾಪಿಸಿದ **ರಾಮೇಶ್ವರ**ಲಿಂಗದ ವಿಷಯವು ಸರ್ವರಿಗೂ ವಿದಿತವಾದುದೇ ಅದೆ. ಮತ್ಸ್ಯಾವತಾರದಲ್ಲಿ **ಮತ್ಸ್ಯೇಶ್ವರ** ಎಂಬ ಹೆಸರಿನ ಶಿವಲಿಂಗವನ್ನು ಸ್ಥಾಪಿಸಿದನು. ಈ ಲಿಂಗವು ಲಂಕಾಪಟ್ಟಣದಲ್ಲಿ ವಿರಾಜಿಸುತ್ತಿರುವದು. ಕೂರ್ಮಾವತಾರದಲ್ಲಿ **ಕೂರ್ಮೇಶ್ವರ** ಎಂಬ ಹೆಸರಿನ ಶಿವಲಿಂಗವನ್ನು ಸ್ಥಾಪಿಸಿದನು. ಅಲ್ಲದೆ ಒಂದಾನೊಂದು ಸಮಯದಲ್ಲಿ ಶಿವನ ಪಾದಕಮಲಗಳನ್ನು ಸಹಸ್ರಕಮಲಗಳಿಂದ ಪೂಜಿಸುತ್ತಿರುವಾಗ,

ಶಿವನ ಮಾಯೆಯಿಂದ ಒಂದು ಕಮಲವು ಕಡಿಮೆಯಾಗಲು, ಆಗ್ಗೆ ವಿಷ್ಣುವು ತಾನು ಕೈಕೊಂಡ ಪೂಜಾಕಾರ್ಯವು ಸಮಾಪ್ತಿಯಾಗ ಲಿಲ್ಲವೆಂದು ಭಾವಿಸಿ, ಕೂಡಲೇ ತನ್ನ ನೇತ್ರಕಮಲವನ್ನೇ ಸಮರ್ಪಿಸಿ ಪೂಜೆಯನ್ನು ಸಮಾಪ್ತಿಗೊಳಿಸಿದನೆಂದೂ, ಆಗ್ಗೆ ಪರಮೇಶ್ವರನು ವಿಷ್ಣುವಿನ ಅಸಾಧಾರಣವಾದ ಭಕ್ತಿಗೆ ಮೆಚ್ಚಿ ತನ್ನಲ್ಲಿದ್ದ ಚಕ್ರವನ್ನು ಅನುಗ್ರಹಿಸಿದನೆಂದೂ, ಅಂದಿನಿಂದ ವಿಷ್ಣುವು "**ಚಕ್ರಪಾಣಿ**" ಎಂಬ ಹೆಸರಿನಿಂದ ಪ್ರಸಿದ್ಧನಾದನೆಂದೂ ವ್ಯಾಸೋಕ್ತಪುರಾಣಾದಿಗಳಲ್ಲಿ ಸುಪ್ರಸಿದ್ಧವೇ ಆದೆ. ಅಸ್ತು !

ಲೋಕವಿಖ್ಯಾತರಾದ **ಶ್ರೀ ಶಂಕರಾಚಾರ್ಯರು** ತಮ್ಮಿಂದ ರಚಿಸಲ್ಪಟ್ಟ **ಶಿವಾನಂದಲಹರೀ** ಎಂಬ ಗ್ರಂಥದಲ್ಲಿ—

ಸಹಸ್ರಂ ವರ್ತಂತೇ ಜಗತಿ ವಿಬುಧಾಃ ಕ್ಷುದ್ರಫಲದಾಃ
ನ ಮನ್ಯೇ ಸ್ವಪ್ನೇ ವಾ ತದನುಸರಣಂ ತತ್ಕೃತಫಲಂ ।
ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ
ಚಿರಂ ಯಾಚೇ ಶಂಭೋ ಶಿವ ತವ ಪದಾಂಭೋಜಭಜನಂ ॥

ಈ ರೀತಿಯಾಗಿ ಸ್ತುತಿಸಿದ್ದಾರೆ. ಈ ಶ್ಲೋಕಾಭಿಪ್ರಾಯವೇ ನೆಂದರೆ—

ಎಲೈ ಪರಮೇಶ್ವರನೇ! ಲೋಕದಲ್ಲಿ ಸಾವಿರಾರುಜನ ದೇವತೆಗಳಿದ್ದಾರೆ; ಅವರು ಅಲ್ಪಫಲವನ್ನು ಕೊಡತಕ್ಕವರಾದುದರಿಂದ, ನಾನು ಅವರ ಅನುಸರಣವನ್ನಾಗಲಿ ಅವರಿಂದ ಪ್ರಾಪ್ತವಾಗುವ ಫಲವನ್ನಾಗಲಿ ಸ್ವಪ್ನದಲ್ಲಿಯೂ ಸಹ ಸ್ಮರಿಸುವುದಿಲ್ಲ. ಒಂದಾನೊಂದು ಕಾಲದಲ್ಲಿ ವಿಷ್ಣುಬ್ರಹ್ಮರೀರ್ವರೂ ನಾನು ಹೆಚ್ಚು ತಾನು ಹೆಚ್ಚು ಎಂಬ ಹೆಮ್ಮೆಯಿಂದ ಕೂಡಿದವರಾಗಿ ಶಪಥಮಾಡಿಕೊಂಡು,

ಸಮೀಪದಲ್ಲಿದ್ದ ನಿನ್ನ ಪಾದಕಮಲಗಳನ್ನು ಕಾಣುವುದಕ್ಕೋಸ್ಕರ ವಿಷ್ಣುವು ವರಾಹರೂಪವನ್ನು ಧರಿಸಿ, ಸಹಸ್ರಾರುವರ್ಷಗಳ ವರೆಗೆ ಪಾತಾಳಲೋಕವನ್ನಗಿಯುತ್ತ ಹುಡುಕಿದರೂ ಸಹ ದೊರೆಯಲಿಲ್ಲ. ಅದರಂತೆಯೇ ನಿನ್ನ ಪವಿತ್ರಮಸ್ತಕವನ್ನು ಸಂದರ್ಶಿಸುವದಕ್ಕೋಸ್ಕರ, ಬ್ರಹ್ಮನು ಹಂಸಪಕ್ಷಿಯ ರೂಪವನ್ನು ಧರಿಸಿ, ಸಹಸ್ರಾರುವರ್ಷಗಳ ವರೆಗೆ ಹಾರುತ್ತ ಹುಡುಕಿದರೂ ದೊರೆಯಲಿಲ್ಲ. ಈ ರೀತಿಯಾಗಿ ಹರಿಬ್ರಹ್ಮಾದಿಗಳಿಗೂಕೂಡ ದೊರೆಯದಿದ್ದ ಆ ನಿನ್ನ ಪಾದಕಮಲಗಳ ಸ್ತೋತ್ರವನ್ನೇ ನಾನು ಯಾವಾಗಲೂ ಬೇಡುತ್ತೇನೆಂದು ಕೊಂಡಾಡಿದ್ದಾರೆ. ದೇವತೆಗಳಲ್ಲಿ ಯಾವ ಭೇದಭಾವವನ್ನೆಣಿಸದೆ, ಸರ್ವರನ್ನೂ ಸಮತ್ವದಿಂದ ಕಾಣಬೇಕೆಂದು ಸಿದ್ಧಾಂತಗೊಳಿಸಿರುವ ಶ್ರೀಶಂಕರಾಚಾರ್ಯರೇ ಈ ರೀತಿಯಾಗಿ ಅಸಾಧಾರಣವಾದ ಭಕ್ತಿಭಾವದಿಂದ ಶಿವನನ್ನು ಕೊಂಡಾಡಿರುವದನ್ನು ನೋಡಿದರೆ, ಶಿವಸರ್ವೋತ್ತಮತ್ವವಿಷಯವು ಎಷ್ಟರಮಟ್ಟಿಗಿರಬಹುದೆಂಬ ವಿಷಯವನ್ನು ಸಭಿಕರೇ ಯೋಚಿಸಬಹುದಾಗಿದೆ. “**ಆದಿತ್ಯಮಂಬಿಕಾಂ ವಿಷ್ಣುಂ ಗಣನಾಥಂ ಮಹೇಶ್ವರಂ**” ಸೂರ್ಯ, ಶಕ್ತಿ, ವಿಷ್ಣು, ಗಣಪತಿ, ಮಹೇಶ್ವರ ಈ ಪಂಚದೇವತೆಗಳನ್ನು ಒಂದೇಭಾವನೆಯಿಂದ ಪೂಜಿಸಬೇಕೆಂದು ಶ್ರೀಶಂಕರಾಚಾರ್ಯರು ಕರ್ಮಠರಾದ ಸ್ಮಾರ್ತರಲ್ಲಿ ನಿಬಂಧನವನ್ನುಮಾಡಿದ್ದರೂ ಸಹ, ತಮ್ಮ ಪೀಠದಲ್ಲಿ ಕೇವಲ “**ಚಂದ್ರಮೌಲೀಶ್ವರ**” ನಾಮಕವಾದ ಶಿವಲಿಂಗ ಮೂರ್ತಿಯ ಪೂಜೆಯನ್ನೇ ಪ್ರಾಧಾನ್ಯವಾಗಿಟ್ಟುಕೊಂಡಿದ್ದಾರೆನ್ನುವ ವಿಷಯವು ಸರ್ವರಿಗೂ ವೇದ್ಯವೇ ಅದೆ. ಶಂಕರಾಚಾರ್ಯರ ಪೀಠದಲ್ಲಿ ಬಹುಕಾಲದಿಂದ ಈ ಹೊತ್ತಿನವರೆಗೂ ಚಂದ್ರಮೌಲೀಶ್ವರಲಿಂಗದ ಪೂಜೆಯು ಅವಿಚ್ಛಿನ್ನವಾಗಿ ನಡೆದುಬಂದಿರುವಂತೆ, ವಿಷ್ಣುಮೂರ್ತಿಯ ಪೂಜೆಯು ನಡೆದುಬಂದಿರುವದಿಲ್ಲವೆಂಬ ವಿಷಯವು ಸುಪ್ರಸಿದ್ಧವೇ


ಅದೆ. ಶ್ರೀಶಂಕರಾಚಾರ್ಯರು ಶ್ರೀಜಗದ್ಗುರುರೇಣುಕಾಚಾರ್ಯರಿಂದ ಚಂದ್ರಮೌಲೀಶ್ವರಲಿಂಗವನ್ನು ಪಡೆದುಕೊಂಡಮೇಲೆ, ವಿಶೇಷವಾಗಿ ಶೈವತತ್ತ್ವವನ್ನವಲಂಬಿಸಿದರಲ್ಲದೆ ಇನ್ನಾವ ತತ್ತ್ವವನ್ನೂ ಅವಲಂಬಿಸಲಿಲ್ಲ. ಆ ಪೀಠದಲ್ಲಾಗಲಿ ಅಥವಾ ಆ ಮಠೀಯರಲ್ಲಾಗಲಿ ಇಂದಿನವರೆಗೂ ಭಸ್ಮರುದ್ರಾಕ್ಷಧಾರಣಾದಿಶಿವಚಿಹ್ನಗಳೇ ತೋರುತ್ತಿರುವವಲ್ಲದೆ, ಇನ್ನಾವ ದೇವತೆಗಳ ಚಿಹ್ನಗಳೂ ತೋರುತ್ತಿರುವುದು ಕಂಡುಬರುವದಿಲ್ಲ. ಇದಕ್ಕೆಲ್ಲ ಶ್ರೀರೇಣುಕಾಚಾರ್ಯರು ಶ್ರೀಚಂದ್ರಮೌಲೀಶ್ವರಲಿಂಗವನ್ನನುಗ್ರಹಿಸಿ, ಆ ಶಿವಲಿಂಗಮೂರ್ತಿಯಲ್ಲಿ ಬಲವಾದಭಕ್ತಿಯು ನೆಲೆಗೊಳ್ಳುವಂತೆ ಉಪದೇಶಮಾಡಿರುವದೇ ಮೂಲಕಾರಣವೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಈ ವಿಷಯದಲ್ಲಿ ಕೆಲವರು ಶ್ರೀಶಂಕರಾಚಾರ್ಯರಿಗೂ ಹಾಗೂ ಶ್ರೀರೇಣುಕಾಚಾರ್ಯರಿಗೂ ಯಾವಸಂಬಂಧವೂ ಇಲ್ಲವೆಂದೂ, ಶ್ರೀಚಂದ್ರಮೌಲೀಶ್ವರಲಿಂಗವು ಶ್ರೀರೇಣುಕಾಚಾರ್ಯರಿಂದ ಕೊಡಲ್ಪಟ್ಟಿರುವದಿಲ್ಲವೆಂದೂ, ಇದು ನಂಬಲಿಕ್ಕೆ ಅರ್ಹವಾದುದಲ್ಲವೆಂದೂ ಅಂದುಕೊಳ್ಳುತ್ತಿರುವರು. ಇದು ಅವರ ಭ್ರಮೆಯಲ್ಲದೆ ಯಥಾರ್ಥವಲ್ಲ; ಏಕೆಂದರೆ—

ಸಿದ್ಧನಾಥಶಿವಾಚಾರ್ಯನಿಂದ ರಚಿಸಲ್ಪಟ್ಟ ರೇಣುಕವಿಜಯದಲ್ಲಿ ಶ್ರೀಚಂದ್ರಮೌಲೀಶ್ವರಲಿಂಗಪ್ರದಾನವಿಷಯವು ವಿಶದವಾಗಿ ಬರೆಯಲ್ಪಟ್ಟಿರುವದು. ಹಾಗೂ ಈ ವಿಷಯವು **ಶಿವತತ್ತ್ವರತ್ನಾಕರ, ವೇದಾಂತಸಾರವೀರಶೈವಚಿಂತಾಮಣಿ** ಮೊದಲಾದ ಗ್ರಂಥಗಳಲ್ಲಿಯೂ ಸಹ ಪ್ರತಿಪಾದಿಸಲ್ಪಟ್ಟಿರುವದು. ಅಲ್ಲದೆ ಈಗ್ಗೆ ನೂರಾರು ವರ್ಷಗಳ ಪೂರ್ವದಲ್ಲಿ **ಶ್ರೀಶೃಂಗೇರಿಮಠಕ್ಕೆ** ಅಧಿಪತಿಗಳಾಗಿದ್ದ **ಸಚ್ಚಿದಾನಂದಭಾರತೀಸ್ವಾಮಿಗಳೆಂಬ** ಮಹನೀಯರು ಆ ಕಾಲದಲ್ಲಿ ತಮ್ಮ ಆಸ್ಥಾನವಿದ್ವಾಂಸರಾಗಿದ್ದ **ಕಾಶೀಲಕ್ಷ್ಮಣಶಾಸ್ತ್ರಿಗಳೆಂಬ**

ಕವಿಪುಂಗವರಿಂದ ಆದ್ಯಶಂಕರಾಚಾರ್ಯರಾದಿಯಾಗಿ ಸಲಕಸ್ವಾಮಿಗಳವರ ಚರಿತ್ರವನ್ನು "**ಗುರುವಂಶಕಾವ್ಯ**" ಎಂಬ ಹೆಸರಿನಿಂದ ಸಂಸ್ಕೃತ ಭಾಷೆಯಲ್ಲಿ ಪದ್ಯರೂಪವಾಗಿ ಬರೆಯಿಸಿದ್ದಾರೆ. ಈ ಗ್ರಂಥವು **ಶೃಂಗೇರಿ ಮಠದ ಲೈಬ್ರರಿ**ಯಲ್ಲಿ ದೊರೆತಿದ್ದು, ಮೈಸೂರು ಶ್ರೀಮನ್ಮಹಾರಾಜರವರ ಆಸ್ಥಾನಧರ್ಮಾಧಿಕಾರಿಗಳಾದ ವಿದ್ಯಾವಿಶಾರದ ವೇ॥ ಕುಣಿಗಲ ರಾಮಶಾಸ್ತ್ರಿಗಳವರಿಂದ ಪರಿಶೋಧಿತವಾಗಿ, ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ ಶ್ರೀರಂಗದಲ್ಲಿರುವ ವಾಣೀವಿಲಾಸಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದ ಮೂರನೆಯ ಸರ್ಗದಲ್ಲಿ—

ಶ್ರೀಶಂಕರಾಚಾರ್ಯರು ಭರತಖಂಡವನ್ನೆಲ್ಲ ಸಂಚರಿಸಿ ಕಾಶ್ಮೀರದೇಶಕ್ಕೆ ಹೋಗಿ, ಅಲ್ಲಿದ್ದ ಶಾರದಾದೇವಿಯನ್ನು ತಂದು ಶೃಂಗೇರಿಯಲ್ಲಿ ಸ್ಥಾಪಿಸಿದರೆಂದೂ, ಅನಂತರ ತಾವು ಕಾಂಚೀ ಕ್ಷೇತ್ರಕ್ಕೆ ಹೊರಡಲು ಸಿದ್ಧರಾಗಿ ಸುರೇಶ್ವರಾಚಾರ್ಯನೆಂಬ ತಮ್ಮ ಪ್ರಥಮಶಿಷ್ಯನಿಗೆ ಶೃಂಗೇರಿಮಠದ ಪಟ್ಟವನ್ನು ಕಟ್ಟಿದರೆಂದೂ, ಆಮೇಲೆ ಸುರೇಶ್ವರಾಚಾರ್ಯನಿಗೆ "ಎಲೈ ಸುರೇಶ್ವರಾಚಾರ್ಯನೇ! ನೀನು **ಶ್ರೀರೇಣುಕಾಚಾರ್ಯರು** ನನಗೆ ಈ ಮೊದಲು ಅನುಗ್ರಹಿಸಿರುವ **ಶ್ರೀಚಂದ್ರಮೌಳೀಶ್ವರಲಿಂಗ**ವನ್ನೂ ಹಾಗೂ **ರತ್ನಗರ್ಭ ಗಣಪತಿ**ಯನ್ನೂ ಪೂಜಿಸು" ಎಂದು ಆಜ್ಞೆಯನ್ನು ಮಾಡಿ ಕಾಂಚೀಕ್ಷೇತ್ರಕ್ಕೆ ತೆರಳಿದರೆಂದೂ ಇತ್ಯಾದಿ ವಿಷಯವು ಬರೆಯಲ್ಪಟ್ಟಿರುತ್ತದೆ. ಆ ಗ್ರಂಥದಲ್ಲಿರುವ ಶ್ಲೋಕಗಳು ಈ ಮುಂದೆ ಉದಾಹರಿಸಲ್ಪಟ್ಟಿವೆ.

ಶ್ರೀಚಂದ್ರಮೌಳೀಶ್ವರಲಿಂಗಮಸ್ಮೈ ಸದ್ರತ್ನಗರ್ಭಂ ಗಣನಾಯಕಂ ಚ ।
ಸ ವಿಶ್ವರೂಪಾಯ ಸುಸಿದ್ಧದತ್ತಂ ದತ್ವಾ ನ್ಯಗಾದೀಚ್ಚಿರಮರ್ಚಯೇತಿ॥೩೩॥



ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ
ಲಿಂಗವನ್ನು ಅನುಗ್ರಹಿಸುವರು.

ಸುರೇಶ್ವರಾಚಾರ್ಯ ಸರಸ್ವತೀಂ ತ್ವಂ ಸಂಪೂಜಯನ್ನಾಸ್ಸ್ವ ಚಿರಾದಿಹೇತಿ ।
ದತ್ವಾಽಭ್ಯನುಜ್ಞಾಂ ವಿನತಾಯ ತಸ್ಮೈ ಶಿಷ್ಯೈಸ್ಸಮಸ್ತೈಸ್ಸ ಜಗಾಮ ಕಾಂಚೀಂ ॥೩೪॥

ಮೇಲಿನ ಪದ್ಯದಲ್ಲಿರತಕ್ಕ "**ಸುಸಿದ್ಧದತ್ತಂ**" ಎಂಬ ಪದಕ್ಕೆ—

"ಸುಸಿದ್ಧೇನ ರೇವಣಸಿದ್ಧಮಹಾಯೋಗಿನಾ ದತ್ತಂ ಶ್ರೀಚಂದ್ರಮೌಲೀಶ್ವರಲಿಂಗಂ ಸದ್ರತ್ನಗರ್ಭಂ ಸದ್ರತ್ನಂ ಮಾಣಿಕ್ಯಂ ಗರ್ಭೇ ಯಸ್ಯ ಸಃ ತಥೋಕ್ತಸ್ತಂ ಗಣನಾಯಕಂ ಚ"

ಎಂದು ಈ ಗ್ರಂಥವನ್ನು ರಚಿಸಿದ ಕವಿಗಳೇ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ. ಅಲ್ಲದೆ ಈ ಚಂದ್ರಮೌಲೀಶ್ವರ ಲಿಂಗದ ವಿಷಯವು ಇದೇ ಕಾವ್ಯದ ಆರನೆಯ ಸರ್ಗದಲ್ಲಿಯೂ ಬಂದಿರುವದು. ಈ ಗ್ರಂಥಕರ್ತರು ಗ್ರಂಥಾದಿಯಲ್ಲಿ—

ಪ್ರಾಯೇಣಾನ್ವಯಮಾರ್ಗೇಣ ವ್ಯಾಖ್ಯಾಯತ ಇಯಂ ಕೃತಿಃ ।
ಪ್ರಾಚಾಮಸಮ್ಮತಂ ನೈವ ಲಿಖ್ಯತೇಽತ್ರ ನ ಚಾಧಿಕಂ ॥

ಎಂದು ಪ್ರತಿಜ್ಞೆಯನ್ನು ಮಾಡಿ, ಪ್ರಾಚೀನಗ್ರಂಥಗಳಿಗೆ ಸಮ್ಮತವಾದ ವಿಷಯವನ್ನೇ ಬರೆಯುತ್ತೇನೆಂದು ಅಂದುಕೊಂಡಿರುವುದರಿಂದ, ಶ್ರೀಶಂಕರಾಚಾರ್ಯರ ವಿಷಯಕವಾಗಿದ್ದ ಪ್ರಾಚೀನಗ್ರಂಥಗಳಲ್ಲಿ ಚಂದ್ರಮೌಲೀಶ್ವರಲಿಂಗಪ್ರದಾನವಿಷಯವು ವಿಶದವಾಗಿ ಬರೆಯಲ್ಪಟ್ಟಿರಬಹುದೆಂದು ತೋರಿಬರುತ್ತದೆ. ಶಂಕರಾಚಾರ್ಯರ ವಿಷಯದಲ್ಲಿ "**ಬೃಹಚ್ಛಂಕರವಿಜಯ**" ಎಂಬ ಗ್ರಂಥವು ಪ್ರಾಚೀನಪಂಡಿತರಿಂದ ಬರೆಯಲ್ಪಟ್ಟಿರುವದೆಂದೂ, ಆ ಗ್ರಂಥದಲ್ಲಿ ರೇವಣಸಿದ್ಧ ಮತ್ತು ಶಂಕರಾಚಾರ್ಯರ ಸಂವಾದರೂಪವಾದ "**ಸಿದ್ಧಶಂಕರಸಂವಾದ**"ವೆಂಬುದೊಂದು ಭಾಗವುಂಟೆಂದೂ ವದಂತಿಯುಂಟು. ಇರಲಿ;

ಮದ್ರಾಸ್ ಗೌರ್ನಮೆಂಟ್ ಸೀನಿಯರ್ ಟ್ರಾನ್ಸ್‌ಲೇಟರರಾದ ಮ|| ರಾ|| ಬಿ. ರಾಮರಾವ್ ಎಂ. ಎ., ಎಲ್‌ಎಲ್. ಬಿ., ಇವರು ಮತ್ತು ಮದ್ರಾಸ್ ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿಯ ಅ|| ಲೈಬ್ರರಿಯನ್ನರಾದ ಮ|| ರಾ|| ವಿದ್ವಾನ್ ಪಿ. ಸುಂದರಶಾಸ್ತ್ರಿಯರ್ ಇವರು **"ಶಿವತತ್ತ್ವರತ್ನಾಕರ"** ವೆಂಬ ಉದ್ಗ್ರಂಥವನ್ನು ದೇವನಾಗರೀಲಿಪಿಯಲ್ಲಿ ಮುದ್ರಣಮಾಡಿಸಿ, ಮೈಸೂರು ಶ್ರೀಮನ್ಮಹಾರಾಜರವರ ಸನ್ನಿಧಿಗೆ ಸಮರ್ಪಿಸಿದ್ದಾರೆ. ಈ ಗ್ರಂಥದ ನಾಲ್ಕನೆಯ ಕಲ್ಲೋಲದ ಹನ್ನೆರಡನೆಯ ತರಂಗದಲ್ಲಿ ವಿದ್ಯಾರಣ್ಯರ ವಿಷಯವನ್ನು ಬರೆಯುವಾಗ್ಗೆ—

ತತಃ ಸ ರೇವಣಾಸಿದ್ಧಸಂಪ್ರದಾಯಪ್ರವರ್ತಿನಾಂ ।
ಶಂಕರಾಚಾರ್ಯವರ್ಯಾಣಾಂ ಪಾರಂಪರ್ಯಕ್ರಮಾಗತಂ ॥೯॥

ಸನ್ಯಾಸಿನಮುಪಾಶ್ರಿತ್ಯ ವಿನಯಾವನತೋऽಧಿಕಂ ।
ವೃತ್ತಾಂತಮಖಿಲಂ ತಸ್ಮೈ ಯತಯೇ ಸ್ವಂ ವ್ಯಜಿಜ್ಞಪತ್ ॥೧೦॥ ಎಂದೂ,

ರೇವಣಾಸಿದ್ಧಸಂಪ್ರಾಪ್ತಂ ಚಂದ್ರಮೌಲೀಶಮಪ್ಯದಾತ್ ।
ಆಖ್ಯಚ್ಚಾನೇನ ಲಿಂಗೇನ ತವಾಭೀಷ್ಟಾಪ್ತಿರಿತ್ಯಪಿ ॥

ಎಂದೂ ಬರೆಯಲ್ಪಟ್ಟಿದೆ. ಈ ೧೨ ನೆಯ ತರಂಗದಿಂದ ತಿಳಿದು ಬರುವದೇನಂದರೆ—ಶಿವಧರ್ಮನೆಂಬ ಬ್ರಾಹ್ಮಣನು ಬಡತನದ ವ್ಯಸನದಿಂದ **ರೇವಣಸಿದ್ಧಸಾಂಪ್ರದಾಯಿಕರಾದ ಶ್ರೀಶಂಕರಾಚಾರ್ಯರ ಪೀಠಕ್ಕೆ** ಅಧಿಪತಿಗಳಾಗಿದ್ದ ವಿದ್ಯಾಶಂಕರತೀರ್ಥ ಸ್ವಾಮಿಗಳವರಲ್ಲಿ ಬಂದು ತನ್ನ ನಿಜಸ್ಥಿತಿಯನ್ನು ಹೇಳಿಕೊಂಡನೆಂದೂ, ಶ್ರೀಸ್ವಾಮಿಗಳವರು ಅವನಿಗೆ ಶ್ರೀಚಕ್ರವನ್ನಾಶೀರ್ವದಿಸಿ ಆದನ್ನು ಪೂಜಿಸಲು ಅಪ್ಪಣೆಯನ್ನು ಮಾಡಿದರೆಂದೂ, ಆ ಶ್ರೀಚಕ್ರ

ಪೂಜೆಯ ಸಾಮರ್ಥ್ಯದಿಂದಲೇ ಅವನು ಮಹಾಜ್ಞಾನಿಯಾಗಿ ಆ ಸ್ವಾಮಿಗಳವರಿಂದಲೇ ಸನ್ಯಾಸದೀಕ್ಷೆಯನ್ನು ಪಡೆದುಕೊಂಡು **ವಿದ್ಯಾರಣ್ಯ**ನೆಂಬ ನಾಮಧೇಯದಿಂದ ಪ್ರಸಿದ್ಧನಾದನೆಂದೂ, ಶ್ರೀ ಸ್ವಾಮಿಗಳವರು ತಮ್ಮ ಶಿಷ್ಯರಾದ ಆ ವಿದ್ಯಾರಣ್ಯರಿಗೆ, ಆದಿಯಲ್ಲಿ ಶ್ರೀರೇಣುಕಾಚಾರ್ಯರಿಂದ ಶ್ರೀಶಂಕರಾಚಾರ್ಯರಿಗೆ ಪ್ರಾಪ್ತವಾಗಿದ್ದ ಗುರುಪರಂಪರೆಯಿಂದ ಬಂದ **ಶ್ರೀಚಂದ್ರಮೌಳೀಶ್ವರಲಿಂಗ**ವನ್ನು ಕೊಟ್ಟು, "ನೀನು ಈ ಲಿಂಗವನ್ನು ಪೂಜಿಸು, ಇದರಿಂದ ನಿನ್ನ ಮನೋಭೀಷ್ಟವು ಪೂರ್ತಿಯಾಗುವದು." ಎಂದು ಆಜ್ಞೆಯನ್ನಿತ್ತ ರೆಂದೂ ತಿಳಿದುಬರುತ್ತದೆ.

ಮೇಲ್ಕಂಡ ಶಿವತತ್ತ್ವರತ್ನಾಕರ ಗ್ರಂಥಕ್ಕೆ ಇಂಡಿಯಾ ಗೌರ್ನಮೆಂಟಿನ ಪ್ರಾಚೀನಶಾಸನಶೋಧಕರಾದ ರಾವ್‌ಬಹದ್ದೂರ್ ಎಚ್. ಕೃಷ್ಣಶಾಸ್ತ್ರಿಯರ್, ಬಿ. ಎ., ಎಂಬವರು ಆಂಗ್ಲಭಾಷೆ ಯಲ್ಲಿ ಬಹುವಿಶಾಲವಾದ ಪ್ರಸ್ತಾವನೆಯನ್ನು ಬರೆದಿರುತ್ತಾರೆ. ಅವರು ತಮ್ಮ ಪ್ರಸ್ತಾವನೆಯ ಒಂದು ಕಡೆಯಲ್ಲಿ ಈ ರೀತಿಯಾಗಿ ಬರೆದಿದ್ದಾರೆ—

One very interesting point which must be particularly drawn attention to in the story of Vidyaranya as given in the 12th Taranga of the 4th Kallola, is the "**ರೇವಣಸಿದ್ಧಸಂಪ್ರದಾಯ**" which the Acharyas of the Sankaracharya line that initiated our **ವಿದ್ಯಾರಣ್ಯ** were then practising at Sringeri. The **ಲಿಂಗ** of **ಚಂದ್ರಮೌಳೀಶ್ವರ** which is still worshipped as the chief deity by the

Acharyas of **ಶೃಂಗೇರಿಮಠ,** is also said to have been presented to **ವಿದ್ಯಾರಣ್ಯ** by his direct guru. **ರೇವಣಸಿದ್ಧ,** we know, is a well known Saiva teacher, whom the Veerasaivas still claim as one of their earliest Acharyas. The Keladi chiefs who were mostly followers of the Veera-saiva religion, were devout adherents of the **ಶೃಂಗೇರಿ ಶಂಕರಾಚಾರ್ಯರಮಠ,** perhaps also for the same reason, viz., that the Shankaracharyas were followers of the **ರೇವಣಸಿದ್ಧಸಂಪ್ರದಾಯ.** This explains perhaps why in the **ಅದ್ವೈತಮಠ** of **ಶೃಂಗೇರಿ** there is still a greater bias towards Saivism and Saiva worship than towards Vaishnavism and Krishna worship, though the founder, the great Shankaracharya was no respector of creeds nor of any distinction between **ಶಿವ** and **ವಿಷ್ಣು.**"

" ಅಂದರೆ ಈ ಗ್ರಂಥದ 4 ನೆಯ ಕಲ್ಲೋಲದ 12 ನೆಯ ತರಂಗದಲ್ಲಿರುವ ವಿದ್ಯಾರಣ್ಯರ ಚರಿತ್ರದಲ್ಲಿ, ವಿದ್ಯಾರಣ್ಯರಿಗೆ ಸನ್ಯಾಸವನ್ನಿತ್ತ ಶಂಕರಾಚಾರ್ಯರ ಪೀಠಾಧಿಪತಿಗಳಾಗಿದ್ದ ಆಚಾರ್ಯರು ರೇವಣಸಿದ್ಧಸಂಪ್ರದಾಯವನ್ನು ಅನುಸರಿಸುತ್ತಿದ್ದರೆಂಬ ವಿಷಯವು ಸರ್ವರಿಂದಲೂ ಅತ್ಯವಶ್ಯಕವಾಗಿ ನೋಡಲ್ಪಡತಕ್ಕದ್ದಾಗಿದೆ. ಶೃಂಗೇರಿಮಠದಲ್ಲಿ ಇಂದಿನವರೆಗೂ ಆ ಪೀಠದ ಆಚಾರ್ಯರಿಂದ ಮುಖ್ಯೋಪಾಸ್ಯದೇವರಾಗಿ ಪೂಜಿಸಲ್ಪಡುತ್ತಿರುವ ಶ್ರೀಚಂದ್ರ

ಮೌಳೀಶ್ವರಲಿಂಗವು ವಿದ್ಯಾರಣ್ಯರಿಗೆ ಅವರ ಗುರುಗಳಿಂದ ಕೊಡಲ್ಪಟ್ಟಿತೆಂದು ಹೇಳಿದೆ. ಶ್ರೀರೇವಣಸಿದ್ಧರು ಪ್ರಸಿದ್ಧರಾದ ಶೈವಸಿದ್ಧಾಂತ ಸ್ಥಾಪಕರಾಗಿದ್ದಾರೆ. ಅವರನ್ನು ವೀರಶೈವರು ತಮ್ಮ ಮತದ ಅತ್ಯಂತ ಪ್ರಾಚೀನಾಚಾರ್ಯರಲ್ಲೊಬ್ಬರನ್ನಾಗಿ ಹೇಳುತ್ತಾರೆ. ಶಂಕರಾಚಾರ್ಯರು ರೇವಣಸಿದ್ಧಸಂಪ್ರದಾಯಕ್ಕೆ ಸೇರಿದವರಾದುದರಿಂದಲೇ ವೀರಶೈವ ಮತಾನುಯಾಯಿಗಳಾದ ಕೆಳದಿರಾಜರು ಶೃಂಗೇರಿ ಶಂಕರಾಚಾರ್ಯರ ಮಠಕ್ಕೆ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತಿದ್ದರು. ಶಂಕರಾಚಾರ್ಯರು ಶಿವವಿಷ್ಣುದೇವತೆಗಳಲ್ಲಿ ಭೇದವನ್ನೆಣಿಸದಿದ್ದರೂ, ಇಂದಿಗೂ ಸಹ ಅದ್ವೈತಮತಕ್ಕೆ ಸೇರಿದ ಆ ಮಠದಲ್ಲಿ ವೈಷ್ಣವಮತ, ಕೃಷ್ಣಪೂಜೆ ಇವುಗಳಿಗಿಂತ, ಶೈವಮತ, ಶಿವಲಿಂಗಪೂಜೆ ಇವುಗಳಿಗೇ ಹೆಚ್ಚು ಆಧಿಕ್ಯವಿರುವದು ಈ ಕಾರಣದಿಂದಲೇ ಎಂದು ಕಂಡುಬರುತ್ತದೆ. "

ಈ ಶಿವತತ್ತ್ವರತ್ನಾಕರದ ಪ್ರಾಶಸ್ತ್ಯವನ್ನು ಕುರಿತು— **ಜರ್ಮನ್** ದೇಶದ **ಕೆಇಲ್ ಯೂನಿವರ್ಸಿಟಿಯ** ಸಂಸ್ಕೃತ ಪ್ರೊಫೆಸರರಾದ **ಡಾ|| ಎಫ್. ಓ. ಷಾಡರ್** ಎಂಬ ಘನವಿದ್ವಾಂಸರು "This is undoubtedly an important work and would be the more interesting for me as I intend writing a book on "Veerasaiva matam" ಅಂದರೆ "ಈ ಗ್ರಂಥವು ಅತ್ಯಂತ ಅಮೂಲ್ಯವಾದುದು; ನಾನು ವೀರಶೈವಮತವನ್ನು ಕುರಿತು ಬರೆಯಬೇಕೆಂದಿರುವ ಗ್ರಂಥಕ್ಕೆ ಇದರಿಂದ ಬಹಳ ಸಹಾಯವುಂಟಾಯಿತು." ಎಂದು ಬರೆದಿದ್ದಾರೆ.

ಈ ಶಿವತತ್ತ್ವರತ್ನಾಕರ ಗ್ರಂಥಕಾರನು ಶ್ರೀರೇಣುಕಾಚಾರ್ಯರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನನುಗ್ರಹಿಸಿದ

ವಿಷಯವನ್ನು, **ವಿದ್ಯಾರಣ್ಯರಿಂದ** ವಿರಚಿತವಾದ “**ಪಿತಾಮಹ ಸಂಹಿತೆ**” ಮತ್ತು **ಭಾರತೀಕೃಷ್ಣಯತಿಯಿಂದ** ವಿರಚಿತವಾದ “**ವಿದ್ಯಾರಣ್ಯಕೃತಿ**” ಎಂಬೀ ಗ್ರಂಥಗಳ ಆಧಾರದ ಮೇಲಿಂದ ಬರೆದಿರುವೆನೆಂದು ಚತುರ್ಥಕಲ್ಲೋಲದ ಅಂತ್ಯದಲ್ಲಿ—

ವಿದ್ಯಾರಣ್ಯಕೃತಿಂ ಚೈವ ಪಿತಾಮಹಸುಸಂಹಿತಾಂ ।
ವಿಲೋಕ್ಯಾಽಯಂ ವಿರಚಿತಃ ಕಲ್ಲೋಲೋಽಭೂಚ್ಚತುರ್ಥಕಃ ॥

ಎಂದು ಬರೆದಿದ್ದಾನೆ. ಇದರ ಮೇಲಿಂದ ವಿದ್ಯಾರಣ್ಯರು ಬರೆದ ಪಿತಾಮಹಸಂಹಿತೆಯಲ್ಲಿಯೂ ಮತ್ತು *ಭಾರತೀಕೃಷ್ಣಯತಿಯು ಬರೆದ ವಿದ್ಯಾರಣ್ಯಕೃತಿಯಲ್ಲಿಯೂ ಚಂದ್ರಮೌಲೀಶ್ವರಲಿಂಗಪ್ರದಾನ ವಿಷಯವು ವಿಶದವಾಗಿ ಬರೆಯಲ್ಪಟ್ಟಿರುವದೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಮೈಸೂರು ಗವರ್ನಮೆಂಟಿನವರಿಂದ ಮುದ್ರಿಸಲ್ಪಟ್ಟಿರುವ “**ಕೆಳದಿನೃಪವಿಜಯ**”ವೆಂಬ ಗ್ರಂಥದಲ್ಲಿಯೂ ಸಹ ಶ್ರೀಚಂದ್ರ ಮೌಲೀಶ್ವರಲಿಂಗಪ್ರದಾನವಿಷಯವು ಬರೆಯಲ್ಪಟ್ಟಿರುವದು.

ಈ “**ಕೆಳದಿನೃಪವಿಜಯ**” ಎಂಬ ಗ್ರಂಥವನ್ನು ಹರಿತಸ ಗೋತ್ರೋದ್ಭವನಾದ **ಲಿಂಗಣ್ಣ**ನೆಂಬ ಸ್ಮಾರ್ತಬ್ರಾಹ್ಮಣನು ಬರೆದಿರುವನು. ಆದರೆ ಇವನು ಈ ಗ್ರಂಥದಲ್ಲಿ ಶ್ರೀಚಂದ್ರಮೌಲೀಶ್ವರ ಲಿಂಗವನ್ನು ಶ್ರೀರೇವಣಸಿದ್ಧಶಿವಾಚಾರ್ಯರು ಆದ್ಯಶಂಕರಾಚಾರ್ಯರಿಗೆ ಅನುಗ್ರಹಿಸಿದರೆಂಬ ವಿಷಯವನ್ನು ಬರೆಯದೆ, ವಿದ್ಯಾರಣ್ಯರಿಗೆ

---

* ವಿದ್ಯಾರಣ್ಯರಿಗೆ “ಭೋಗನಾಥ” ನೆಂಬ ಸಹೋದರನಿದ್ದನೆಂದೂ, ಈತನು ಸನ್ಯಾಸಾಶ್ರಮವನ್ನು ಸ್ವೀಕರಿಸಿದಮೇಲೆ “ಭಾರತೀಕೃಷ್ಣಯತಿ” ಎಂಬ ಹೆಸರಿನಿಂದ ಪ್ರಸಿದ್ಧನಾದನೆಂದೂ ತಿಳಿದುಬರುತ್ತದೆ.

ಅನುಗ್ರಹಿಸಿದರೆಂದು ಬರೆದಿದ್ದಾನೆ. ಈ ವಿಷಯದಲ್ಲಿ ಕೆಳದಿನೃಪ ವಿಜಯದ ೧೬ನೆಯ ಪುಟದಲ್ಲಿ ಈ ಕೆಳಗೆ ಕಂಡಂತೆ ಉಲ್ಲೇಖವಿದೆ—

"ಆ ವಿದ್ಯಾರಣ್ಯರ್ ಸ್ವಸ್ತಿಶ್ರೀವಿಜಯಾಭ್ಯುದಯ ಶಾಲಿವಾಹನಶಕ ೧೨೫೮ ನೆಯ ಸಂವತ್ಸರದಲ್ಲಿ ವಿದ್ಯಾನಗರೀರತ್ನಸಿಂಹಾಸನದಲ್ಲಿ ಹರಿಹರ ರಾಯಂಗೆ ಪಟ್ಟವಂ ಕಟ್ಟಿ ನಿಲಿಸಿದರ್; ಹೀಗಿರಲಾಗಿ ಕೆಲವು ದಿವಸದ ಮೇಲೆ ರೇವಣಸಿದ್ಧನೆಂಬೊಬ್ಬ ಜಂಗಮಸ್ವರೂಪಗಣಾಧೀಶ್ವರಂ, ಒಂದು ದಿವ್ಯ ಲಿಂಗಮಂ ವಿದ್ಯಾರಣ್ಯರ ವಶಕ್ಕೆ ತಂದುಕೊಟ್ಟು, ಈ ಲಿಂಗಂ ಶ್ರೀಚಂದ್ರ ಮೌಲೀಶ್ವರಂ, ಈ ಲಿಂಗಮಂ ನಿತ್ಯಂ ಪೂಜೆಗೈವುದೆಂದುಸಿರ್ದಂತರ್ಧಾನನಾಗಿ ಪೋಗಲೊಡನಾ ವಿದ್ಯಾರಣ್ಯರ್ ಶೃಂಗಪುರಕ್ಕೈತಂದು ಶೃಂಗೇರಿಮೂಲಸಂಸ್ಥಾನ ಮಠದಲ್ಲಿ ಆ ಚಂದ್ರಮೌಲೀಶ್ವರನ ಪೂಜೆಯಂ ಮಾಡಿಕೊಂಡಿರ್ದು, ಶಿಷ್ಯ ಪರಂಪರೆಯಲ್ಲಿಯುಂ ನಡೆಕೊಂಡು ಬಾಹಂತು ಕಟ್ಟಳೆಯಂಮಾಡಿಸಿದರ್."

ಈ ಕವಿಯು ಕಾಲಮಾನವನ್ನೂ ಮತ್ತು ನಿಜಸ್ಥಿತಿಯನ್ನೂ ವಿಮರ್ಶಿಸದೆ ಹೀಗೆ ಬರೆದಿರುವದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಇದರಂತೆಯೇ ಈ ಕವಿಯು ಈ ಗ್ರಂಥದ ೧೪ ನೆಯ ಪುಟದಲ್ಲಿ ಶೃಂಗೇರಿಮಠದ ಗುರುಪರಂಪರೆಯನ್ನು ಬರೆಯುವಾಗ, ಆದ್ಯ ಶಂಕರಾಚಾರ್ಯರಿಗೆ ವಿದ್ಯಾಶಂಕರಸ್ವಾಮಿಗಳು ಶಿಷ್ಯರಾದರೆಂದೂ, ಅವರಿಗೆ ವಿದ್ಯಾರಣ್ಯರು ಶಿಷ್ಯರಾದರೆಂದೂ ಬರೆದಿದ್ದಾನೆ. ಈತನ ಬರವಣಿಗೆಯನ್ನೇ ನಂಬಿದ್ದಾದರೆ, ಆದ್ಯಶಂಕರಾಚಾರ್ಯರು ಈಗ್ಯೆ ೬ ಅಥವಾ ೭ ನೂರು ವರ್ಷಗಳ ಪೂರ್ವದಲ್ಲಿದ್ದರೆಂದು ಹೇಳಬೇಕಾಗುವ ಪ್ರಸಂಗವು ಪ್ರಾಪ್ತವಾಗುವದು. ಹೀಗೆ ಬರೆದಿರುವದು ಕೇವಲ ಹಾಸ್ಯಾಸ್ಪದವಾದ ವಿಷಯವಾಗಿದೆ. ಆದ್ಯಶಂಕರಾಚಾರ್ಯರ ಪೀಠಕ್ಕೆ ಅನುಕ್ರಮವಾಗಿ ಸುರೇಶ್ವರಾಚಾರ್ಯ, ನಿತ್ಯಬೋಧಘನಾಚಾರ್ಯ, ಜ್ಞಾನಘನಾಚಾರ್ಯ, ಜ್ಞಾನೋತ್ತಮಶಿವಾಚಾರ್ಯ, ಜ್ಞಾನಗಿರಿ

ಆಚಾರ್ಯ, ಸಿಂಹಗಿರಿ ಆಚಾರ್ಯ, ಈಶ್ವರತೀರ್ಥ, ನರಸಿಂಹ ತೀರ್ಥ, ವಿದ್ಯಾಶಂಕರತೀರ್ಥ, ಭಾರತೀಕೃಷ್ಣತೀರ್ಥ ಇಷ್ಟು ಜನರು ಪೀಠಾಧಿಪತಿಗಳಾದರೆಂದೂ, ಸುರೇಶ್ವರಾಚಾರ್ಯರೆಂಬವರು ೮೦೦ ವರ್ಷಗಳವರೆಗೆ ಜೀವಿತರಾಗಿದ್ದರೆಂದೂ, ಆದ್ಯ ಶಂಕರಾ ಚಾರ್ಯರು ವಿಕ್ರಮಸಂವತ್ ೧೪ ಈಶ್ವರನಾಮಸಂವತ್ಸರ ವೈಶಾಖ ಶು|| ೩ ದಿವಸ ಸನ್ಯಾಸವನ್ನು ಸ್ವೀಕರಿಸಿದರೆಂದೂ, ವಿಜಯನಾಮ ಸಂವತ್ಸರ ಚೈತ್ರ ಶು|| ೧೫ ದಿವಸ ಸುರೇಶ್ವರಾಚಾರ್ಯರಿಗೆ ಶೃಂಗೇರಿ ಮಠದ ಪಟ್ಟವನ್ನು ಕಟ್ಟಿದರೆಂದೂ, ವಿಕ್ರಮಸಂವತ್ ೪೬ ಸೌಮ್ಯ ನಾಮಸಂವತ್ಸರ ಜ್ಯೇಷ್ಠ ಶು|| ೧೨ ದಿವಸ ಪರಲೋಕವಾಸಿಗಳಾದ ರೆಂದೂ ಮದ್ರಾಸ ನಿವಾಸಿಗಳಾದ ಶ್ರೀಮಾನ್ ಬಿ. ಸೂರ್ಯನಾರಾ ಯಣರಾವ್, ಬಿ.ಎ., ಎಂ.ಆರ್.ಎ.ಎಸ್. ಇವರಿಂದ ವಿರಚಿತ ವಾದ ವಿಜಯನಗರಚರಿತ್ರದಲ್ಲಿ ಉಲ್ಲೇಖಿಸಿದ ಶೃಂಗೇರಿ ಮಠದ ವಂಶಾವಳಿಯಿಂದ ತಿಳಿದುಬರುತ್ತದೆ. ಇದರ ಮೇಲಿಂದ ನೋಡುತ್ತಿರ ಲಿಕ್ಕಾಗಿ, ಶಂಕರಾಚಾರ್ಯರು ಈಗ್ಗೆ ೧೯೭೨ ವರ್ಷಗಳ ಪೂರ್ವದಲ್ಲಿ ಜನ್ಮವನ್ನು ತಾಳಿದರೆಂದು ಸ್ಪಷ್ಟವಾಗುತ್ತದೆ. ಹೀಗಿದ್ದು ಈ ಕವಿಯು ಆದ್ಯಶಂಕರಾಚಾರ್ಯರಿಗೂ ವಿದ್ಯಾರಣ್ಯರಿಗೂ ೪೦-೫೦ ವರ್ಷಗಳ ಅಂತರವನ್ನು ತೋರಿಸಿರುವುದನ್ನು ನೋಡಿದರೆ, ಈತನು ಯಾವ ವಿಷಯಗಳನ್ನೂ ಸರಿಯಾಗಿ ವಿಮರ್ಶಿಸಿ ಬರೆದಿರುವದಿಲ್ಲವೆಂದು ಸ್ಪಷ್ಟ ವಾಗಿ ತೋರುತ್ತದೆ. ಇದರಂತೆಯೇ ಈತನು ಬರೆದ ಚಂದ್ರಮೌಲೀಶ್ವರ ಲಿಂಗಪ್ರದಾನವಿಷಯವಾದರೂ ಕೇವಲ ಅಸಮಂಜಸವಾಗಿದೆ. ಸ್ಮಾರ್ತ ಮತ್ತು ವೀರಶೈವಮತದ ಅನೇಕ ಜನ ಪ್ರಾಚೀನಪಂಡಿತರು, ಶ್ರೀರೇಣುಕಾಚಾರ್ಯರು ಚಂದ್ರಮೌಲೀಶ್ವರಲಿಂಗವನ್ನು ಆದ್ಯಶಂಕರಾ ಚಾರ್ಯರಿಗೆ ಅನುಗ್ರಹಿಸಿದರೆಂದು ಸ್ಪಷ್ಟವಾಗಿ ತಮ್ಮ ತಮ್ಮ ಗ್ರಂಥ

ಗಳಲ್ಲಿ ಉಲ್ಲೇಖಿಸಿರಲು, ಈತನು ಅವರೆಲ್ಲರ ಅಭಿಪ್ರಾಯಕ್ಕೆ ವಿರುದ್ಧವಾಗಿ ಬರೆದಿರುವದು ಕೇವಲ ಅಪ್ರಮಾಣವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಈತನು ಶ್ರೀರೇಣುಕಾಚಾರ್ಯರು ವಿದ್ಯಾರಣ್ಯರಿಗೆ ಚಂದ್ರಮೌಲೀಶ್ವರಲಿಂಗವನ್ನು ಅನುಗ್ರಹಿಸಿದರೆಂಬ ವಿಷಯವನ್ನು ಭ್ರಮೆಯಿಂದ ಬರೆದಿದ್ದಾನಲ್ಲದೆ ಬೇರೊಂದಿಲ್ಲ. ಇದರ ನಿಜಸ್ಥಿತಿಯೇನೆಂದರೆ—

ಬಲ್ಲಾಳರಾಜನು ಯುದ್ಧದಲ್ಲಿ ಅಣ್ಣತಮ್ಮಂದಿರಾದ **ಹರಿಹರ** ಮತ್ತು **ಬುಕ್ಕ** ಇವರೀರ್ವರನ್ನು ಸೋಲಿಸಿದನೆಂದೂ, ಆಗ್ಗೆ ಅವರೀರ್ವರೂ ಚಿಂತಾಕ್ರಾಂತರಾಗಿ ಅರಣ್ಯವನ್ನು ಸೇರಿದರೆಂದೂ, ಚಿಂತಾವಿಶೇಷದಿಂದ ಹರಿಹರನು ಬುಕ್ಕನ ತೊಡೆಯಮೇಲೆ ತಲೆಯನ್ನಿಟ್ಟುಕೊಂಡು ಮಲಗಿದನೆಂದೂ, ಆ ಸಮಯದಲ್ಲಿ **ಶ್ರೀರೇವಣಸಿದ್ಧಶಿವಾಚಾರ್ಯರು** ಹರಿಹರನ ಸ್ವಪ್ನದಲ್ಲಿ ಬಂದು, ಎಲೈ ರಾಜನೇ! ವಿದ್ಯಾರಣ್ಯನ ದಯೆಯಿಂದ ನಿನಗೆ ರಾಜ್ಯಸಂಪತ್ತು ದೊರಕಿ ಕಲ್ಯಾಣವಾಗುವದೆಂದೂ, ಇದಕ್ಕಾಗಿ ನೀನು ಲೋಕವಿಖ್ಯಾತವಾದ **ಶ್ರೀಚಂದ್ರಮೌಲೀಶ್ವರಲಿಂಗದ** ದರ್ಶನವನ್ನು ಮಾಡಿಕೊಳ್ಳಬೇಕೆಂದೂ, ಆಮೇಲೆ ನಿನ್ನ ರಾಜಸಿಂಹಾಸನವನ್ನು ನಿನ್ನ ವಂಶದವರು ಆರೋಹಣಮಾಡಿ ಬಹುಕಾಲದವರೆಗೆ ಉತ್ತಮರೀತಿಯಿಂದ ರಾಜ್ಯಪರಿಪಾಲನಮಾಡುವರೆಂದು ಸ್ವಪ್ನದಲ್ಲಿ ಹೇಳಿ ಅಂತರ್ಧಾನನಾದರೆಂದೂ **ಶೃಂಗೇರಿ**ಪೀಠಾಧಿಪತಿಗಳು ಬರೆಯಿಸಿದ **"ಗುರುವಂಶಕಾವ್ಯ"** ದ ೫ ಮತ್ತು ೬ ನೆಯ ಸರ್ಗಗಳಲ್ಲಿರತಕ್ಕ ಪದ್ಯಗಳಿಂದ ವೇದ್ಯವಾಗುತ್ತದೆ. ಆ ಪದ್ಯಗಳಾವುವೆಂದರೆ—

ಬಲ್ಲಾಳಕ್ಷಿತಿಪಾಲಕೇನ ವಿಜಿತಾ ಯುದ್ಧೇನ ಮಧ್ಯೇ ಮಹಾ
ವಲ್ಲೀಭೃದ್ವಿಪಿನಸ್ಯ ಚಕ್ರತುರಿಮಾ ಶ್ರಾಂತ್ಯೋಪದೇಶಂ ಚಿರಂ ।

ನಿದ್ರಾಣಃ ಸಹಜಾಂಕಗೋ ಹರಿಹರಕ್ಷೋಣೀಭೃದೇಷ ಕ್ಷಣಂ
ಭದ್ರಂ ರೇವಣಸಿದ್ಧಯೋಗ್ಯಧಿಗಮಃ ಸ್ವಪ್ನಂ ತದಾಪ್ನೋತ್ತರಾಂ ॥೫೯॥

ಗು. ಕಾ. ೫ ನೆಯ ಸರ್ಗ.

ಸ್ವಸ್ತಿ ಶ್ರೀಮನ್ನೃಪ ತವ ಭವೇದ್ವೀರಸಿಂಹಾಸನಶ್ರೀಃ
ವಿದ್ಯಾರಣ್ಯಪ್ರಚುರಕೃಪಯಾ ಸರ್ವಸಂರಕ್ಷಣಾಯ ।
ವಿಶ್ವೋತ್ತುಂಗಂ ವಿಬುಧ ಕಲಯೇಶ್ಚಂದ್ರಮೌಲೀಶಲಿಂಗಂ
ಭಾವಿಕ್ಷ್ಮೇಶಾಸ್ತ್ರಗುಣಗಣಿತೈಕಾದಶಾಥ ತ್ವದಾದ್ಯಾಃ ॥೧॥

ಅಗ್ರೇ ಭಾವೀ ತ್ರಿಭುವನನುತೋ ವೀರಪೂರ್ವೋ ವಸಂತಃ
ಸರ್ವಾಮುರ್ವೀಂ ಸುಚಿರಮವಿತಾ ಧಾರ್ಮಿಕಃ ಸರ್ವಥೇತಿ ।
ಉಕ್ತ್ವಾ ಸ್ವಪ್ನೇ ಹರಿಹರನೃಪಂ ರೇವಣಾಸಿದ್ಧಯೋಗೀ
ಅಂತರ್ಧಾನಂ ಸಮಭಜದಥ ಪ್ರಾಬುಧತ್ಸೋಪಿ ಭೂಪಃ ॥೨॥

ಗು. ಕಾ. ೬ ನೆಯ ಸರ್ಗ.

ಈ ಗುರುವಂಶಕಾವ್ಯದಲ್ಲಿ ಬರೆಯಲ್ಪಟ್ಟ ವಿಷಯವೇ ಸಾಧುವಿರುತ್ತದೆ. ಶ್ರೀರೇಣುಕಾಚಾರ್ಯರು ಚಿಂತಾಕ್ರಾಂತನಾಗಿದ್ದ ಪರಮ ಶಿವಭಕ್ತನಾದ ಹರಿಹರರಾಜನ ಸ್ವಪ್ನದಲ್ಲಿ ಬಂದು, ಮುಂದೆ ಆಗುವ ಶುಭವಿಷಯಗಳನ್ನು ತಿಳುಹಿಸಿ, ಅಂತರ್ಧಾನರಾದರೆಂಬ ವಿಷಯವು ಸರ್ವರಿಂದಲೂ ಒಪ್ಪಲ್ಪಡತಕ್ಕದ್ದಾಗಿದೆ. ಶಿವಲೋಕದಲ್ಲಿ ರಾರಾಜಿಸುತ್ತಿದ್ದ ಶ್ರೀರೇಣುಕಾಚಾರ್ಯರು ಹರಿಹರರಾಜನ ಉದ್ಧಾರಕ್ಕೋಸ್ಕರ ಸ್ವಪ್ನದಲ್ಲಿ ಬಂದು ಹೇಳಿದ ವಿಷಯವನ್ನೇ ಕೆಳದಿನೃಪವಿಜಯಕಾರನು ತಿಳಿಯದೆ, ಶ್ರೀರೇವಣಸಿದ್ಧರು ವಿದ್ಯಾರಣ್ಯರಿಗೆ ಸ್ವತಃ ಶ್ರೀಚಂದ್ರಮೌಲೀಶ್ವರಲಿಂಗವನ್ನನುಗ್ರಹಿಸಿದರೆಂಬ ವಿಷಯವನ್ನು ಭ್ರಮಾತ್ಮಕ ಬುದ್ಧಿಯಿಂದ ಬರೆದಿದ್ದಾನೆಂಬುದೇ ಸಿದ್ಧಾಂತವು.

ಇತ್ಯಾದಿವಿಷಯಗಳನ್ನು ಪರ್ಯಾಲೋಚಿಸಿನೋಡಿದರೆ ಶ್ರೀಶಂಕರಾಚಾರ್ಯರಿಗೆ ಶ್ರೀರೇಣುಕಾಚಾರ್ಯರು ಶ್ರೀಚಂದ್ರ ಮೌಲೀಶ್ವರಲಿಂಗವನ್ನು ಅನುಗ್ರಹಿಸಿದರೆಂಬ ವಿಷಯವು ಸ್ಪಷ್ಟವಾಗಿ ತೋರಿಬರುತ್ತದೆ. ಶ್ರೀಶಂಕರಾಚಾರ್ಯರ ಕಾಲಮಾನದ ವಿಷಯದಲ್ಲಿ ಸದ್ಯಃ ಮತಭೇದವುಂಟಾಗಿದೆ. ಕೆಲವರು ಶಂಕರಾಚಾರ್ಯರು ಈಗ್ಗೆ ೨೦೦೦ ವರ್ಷಗಳ ಪೂರ್ವದಲ್ಲಿದ್ದರೆಂದೂ, ಇನ್ನು ಕೆಲವರು ಈಗ್ಗೆ ೧೪೦೦ ವರ್ಷಗಳ ಪೂರ್ವದಲ್ಲಿದ್ದರೆಂದೂ ಅಭಿಪ್ರಾಯಪಡುತ್ತಾರೆ. ಬಹುಕಾಲದಿಂದ ಗುರುಪರಂಪರಾದ್ವಾರಾ ಬಂದಿರುವ ಶೃಂಗೇರಿಮಠದ ವಂಶಾವಳಿಯಿಂದಲೂ, ಕೆಲವು ಗ್ರಂಥಾಧಾರಗಳಿಂದಲೂ ಅವರು ಈಗ್ಗೆ ೨೦೦೦ ವರ್ಷಗಳ ಪೂರ್ವದಲ್ಲಿ ಅವತರಿಸಿರಬಹುದೆಂದು ತೋರಿ ಬರುತ್ತದೆ. ಈ ಕಾಲವು ಶ್ರೀರೇಣುಕಾಚಾರ್ಯರ ಅಸ್ತಿತ್ವದ ಕಾಲವಾಗಿರುತ್ತದೆ. ಶ್ರೀರೇಣುಕಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಈ ಭೂಮಂಡಲದಲ್ಲಿ ೧೪೦೦ ವರ್ಷಗಳವರೆಗೆ ವಾಸವಾಗಿದ್ದರೆಂಬುದನ್ನು ಅವರ ವಿಷಯದಲ್ಲಿದ್ದ ಸಮಸ್ತಚರಿತ್ರಗ್ರಂಥಗಳು ಮುಕ್ತಕಂಠದಿಂದ ಸಾರುತ್ತವೆ. ಶ್ರೀರೇಣುಕಾಚಾರ್ಯರು ಈಗ್ಗೆ ಸುಮಾರು ೩೩೦೦ ವರ್ಷಗಳ ಪೂರ್ವದಲ್ಲಿ ಅವತರಿಸಿರಬಹುದೆಂದು ಸಿದ್ಧವಾಗುತ್ತದೆ. ಆದುದರಿಂದ ಕಾಲಮಾನದ ವಿಷಯದಲ್ಲಿ ಯಾವರೀತಿಯಿಂದಲೂ ಶಂಕೆಯು ಬರಲು ಅವಕಾಶವಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಇಲ್ಲಿಯವರೆಗೆ ಶ್ರೀಶಂಕರಾಚಾರ್ಯರ ವಿಷಯವನ್ನು ಆಮೂಲಾಗ್ರವಾಗಿ ವಿಚಾರಮಾಡಿನೋಡಿದರೆ, ಇವರು ಶ್ರೀರೇಣುಕಾಚಾರ್ಯರ ಸದುಪದೇಶದಂತೆ ಪರಮಶಿವೋಪಾಸಕರಾಗಿ ಮೆರೆದವರೆಂದು ನಿಃಸಂಶಯವಾಗಿ ಹೇಳಬಹುದಾಗಿದೆ. ಅಸ್ತು !

ಪೂರ್ವಕಾಲದ ಮಹರ್ಷಿಗಳೂ ಮತ್ತು ಮಹಾಚಾರ್ಯರೂ ಶಿವಲಿಂಗಗಳನ್ನು ಪೂಜಿಸಿ ನಿತ್ಯಸುಖಿಗಳಾದಂತೆ ವಿಷ್ಣು, ಬ್ರಹ್ಮ, ಇಂದ್ರ, ಚಂದ್ರ ಮೊದಲಾದ ದೇವತೆಗಳೂಸಹ ಶಿವನನ್ನು ಪೂಜಿಸಿ, ಧರಿಸಿ ನಿತ್ಯಸುಖಿಗಳಾಗಿರುವರು. ಈ ದೇವತೆಗಳು ಶಿವಲಿಂಗಗಳನ್ನು ಪೂಜಿಸಿದ್ದಲ್ಲದೆ, ಶಿವನ ಸಂಬಂಧವು ಸದಾ ತಮ್ಮ ಶರೀರದಲ್ಲಿರಬೇಕೆಂದು ಭಾವಿಸಿ, ಆ ಶಿವಲಿಂಗಮೂರ್ತಿಯನ್ನು ಶರೀರದಲ್ಲಿ ಧಾರಣಮಾಡಿ ಕೊಂಡಿರುವರೆಂದು ಧರ್ಮಶಾಸ್ತ್ರಗಳು ಸಾರುತ್ತವೆ. ಈ ವಿಷಯದಲ್ಲಿ—

ವಿಷ್ಣು ಬ್ರಹ್ಮಾದಯೋ ದೇವಾ ಮುನಯೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥

ಇತ್ಯಾದಿಶ್ಲೋಕಗಳೇ ಬಲವಾದ ಪ್ರಮಾಣಗಳಾಗಿವೆ. ಈ ಶ್ಲೋಕಗಳ ಅಭಿಪ್ರಾಯವನ್ನು ವಿಚಾರಮಾಡಿನೋಡಿದರೆ ಇದು ನಿಜ ವೆಂದೇ ಕಂಡುಬರುವುದು. ಈ ವಿಷಯದಲ್ಲಿ ಜಗತ್ಪ್ರಸಿದ್ಧವಾದ ಪಂಢರ ಪುರದ **ವಿಠೋಬ** ನಾಮಕವಾದ ವಿಷ್ಣುಮೂರ್ತಿಯ ಮಸ್ತಕದಲ್ಲಿಯೂ, ಬಾರ್ಸಿಪಟ್ಟಣದಲ್ಲಿರುವ **ಭಗವಂತ** ನಾಮಕವಾದ ವಿಷ್ಣುಮೂರ್ತಿಯ ಮಸ್ತಕದಲ್ಲಿಯೂ ಮತ್ತು ತಿರುವಾಂಕೂರು ಸಂಸ್ಥಾನಕ್ಕೆ ಮುಖ್ಯ ರಾಜಧಾನಿಯಾಗಿರುವ **ಅನಂತಶಯನ** ಪಟ್ಟಣದಲ್ಲಿ, ಅಲ್ಲಿಯ ಮಹಾರಾಜರ ಕುಲದೇವರಾಗಿ ಮೆರೆಯುತ್ತಿರುವ **'ಅನಂತಪದ್ಮನಾಭ'** ಎಂಬ ಹೆಸರಿನ ಸುಪ್ರಸಿದ್ಧ ವಿಷ್ಣುಮೂರ್ತಿಯ ಹಸ್ತದಲ್ಲಿಯೂ ಇರುವ ಶಿವಲಿಂಗಧಾರಣವೇ ಬಲವಾದ ಸಾಕ್ಷಿಯಾಗಿದೆ. ಈ ವಿಷಯವನ್ನು—

ಅನಂತಪದ್ಮನಾಭಸ್ಯ ಹಸ್ತೇ ಲಿಂಗಸ್ಯ ಧಾರಣಂ ।
ಪಾಂಡುರಂಗೇ ತಥಾ ವಿಷ್ಣೋಃ ಶೀರ್ಷೇ ಲಿಂಗಸ್ಯ ಧಾರಣಂ ॥

ಇತ್ಯಾದಿಪುರಾಣೋಕ್ತಿಗಳು ಘಂಟಾಘೋಷವಾಗಿ ಸಾರುತ್ತಿರುವುವು.

ಶಿವಾಜಿ ಮಹಾರಾಜನ ಗುರುಗಳಾದ **ತುಕಾರಾಮರ**ವರು ತಮ್ಮ ಅಭಂಗಗ್ರಂಥದಲ್ಲಿ "**ವಿಠೋಬಾಚೆ ಮಸ್ತಕೀ ಲಿಂಗಧಾರಣ**" ಎಂದು ಸಾರಿರುವರು. ಅಲ್ಲದೆ ಲೋಕವಿಖ್ಯಾತರಾದ ಶ್ರೀಪತಿಪಂಡಿತರು ಶ್ರೀಕರಭಾಷ್ಯದಲ್ಲಿ—"**ವಿಠಲೇಶ್ವರಸ್ಯ ವಿಷ್ಣೋಃ ಶಿರಸಿ ಶಿವಲಿಂಗ ಧಾರಣದರ್ಶನಾತ್** ||" ಎಂದು ಉಲ್ಲೇಖಿಸಿರುವರು. ಪಂಢರಪುರ ದಲ್ಲಿರುವ ವಿಠೋಬಮೂರ್ತಿಯೂ, ಬಾರ್ಸಿನಗರದಲ್ಲಿರುವ ಭಗವಂತನ ಮೂರ್ತಿಯೂ ಮತ್ತು ಅನಂತಶಯನದಲ್ಲಿರುವ ಅನಂತಪದ್ಮನಾಭ ಮೂರ್ತಿಯೂ ಬಹುಪ್ರಾಚೀನಕಾಲದಲ್ಲಿ ಸ್ಥಾಪಿತಗಳಾಗಿವೆ. ಇದರಂತೆ ಪೂರ್ವಕಾಲದಲ್ಲಿ ಸ್ಥಾಪಿತಗಳಾದ ಸಮಸ್ತದೇವತೆಗಳ ಮಸ್ತಕದಲ್ಲಿ ಶಿವಲಿಂಗಧಾರಣವಿರತಕ್ಕವಿಷಯವು **ಸೊಂಡೂರುಕುಮಾರಸ್ವಾಮಿ, ತುಳಜಾಪುರದ ಭವಾನಿ, ಗುಡ್ಡಾಪುರದ ದಾನಮ್ಮ** ಮೊದಲಾದ ದೇವತೆಗಳಿಂದ ವ್ಯಕ್ತವಾಗುವದು. ಈ ಸಕಲವಿಷಯಗಳನ್ನು ಪರ್ಯಾಲೋಚಿಸಿ ನೋಡಿದರೆ, ಶಿವನೇ ಸರ್ವೋತ್ತಮನೆಂದೂ, ಆ ಶಿವನ ಪೂಜಾಧಾರಣಾದಿಗಳಿಂದಲೇ ಸಕಲಸಿದ್ಧಿಗಳು ದೊರೆಯುವ ವೆಂದೂ ಸ್ಪಷ್ಟವಾಗುವದು.

ಭರತಖಂಡದಲ್ಲಿ ವಾಸಮಾಡತಕ್ಕವರೆಲ್ಲರೂ ಜಗದಾದಿಯಿಂದ ಪರಶಿವಮೂರ್ತಿಯನ್ನೇ ಪೂಜಿಸುತ್ತಿದ್ದರೆಂಬ ವಿಷಯವು ಅನೇಕಾಧಾರ ಗಳಿಂದ ಸಿದ್ಧವಾಗುವದು. ಆದರೆ ಇತ್ತೀಚೆಗೆ ಕೆಲಕೆಲವರಲ್ಲಿ ಮತಭೇದ ವುಂಟಾಗಿ ನಾನಾವಿಧದೇವತೆಗಳನ್ನು ಪೂಜಿಸಲಿಕ್ಕೆ ಉಪಕ್ರಮಿಸಿದರು. ಅಂದಿನಿಂದ ಭರತಖಂಡದಲ್ಲಿ ಶಿವಭಕ್ತಿಯು ಮೊದಲಿಗಿಂತಲೂ ಸ್ವಲ್ಪಸ್ವಲ್ಪವಾಗಿ ಕಡಿಮೆಯಾಗುತ್ತ ಬಂದಿತು. ಆದರೆ ಅನ್ಯಮತೀ ಯರಲ್ಲಿ ಶಿವಭಕ್ತಿಯು ಹ್ರಾಸವಾಗುತ್ತ ಬಂದರೂ, ವೀರಶೈವ ರಲ್ಲಿ ಮಾತ್ರ ಅನಾದಿಕಾಲದಿಂದ ಇಂದಿನವರೆಗೆ ಅಚ್ಚಳಿಯದಂತೆ

ಬಂದಿರುವದು ಸಂತೋಷಪ್ರದವಾದ ವಿಷಯವಾಗಿದೆ. ವೀರಶೈವರು ಶಿವೇತರದೇವತೆಗಳನ್ನು ಕನಸುಮನಸಿನಲ್ಲಿಯೂ ಸಹ ಸ್ಮರಿಸುವದಿಲ್ಲ. ಈ ರೀತಿಯಾಗಿ ಶಿವನ ವಿಷಯದಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸಬೇಕೆನ್ನುವದೇ ಇವರ ಸಿದ್ಧಾಂತವಾಗಿದೆ. ಪೂರ್ವಕಾಲದಲ್ಲಿ ವೀರಶೈವಮತದಲ್ಲಿ ಜನ್ಮವೆತ್ತಿದ ಕೆಲವು ಜನ ಮಹಾತ್ಮರು ಶಿವನ ವಿಷಯದಲ್ಲಿ ತಮ್ಮ ಭಕ್ತಿಯನ್ನು ಎಲ್ಲಿಯವರೆಗೆ ತೋರ್ಪಡಿಸಿರುವರೆಂಬ ವಿಷಯವನ್ನು ಪರಿಶೀಲಿಸಿದರೆ ಅತ್ಯಂತಾಶ್ಚರ್ಯವೆನಿಸುತ್ತದೆ. ಈ ವಿಷಯದಲ್ಲಿ ಒಂದು ಅತ್ಯದ್ಭುತವಾದ ಚರಿತ್ರವಿರುವದು ; ಅದೇನೆಂದರೆ—

ಈಗ್ಗೆ೧೭೦೦ ವರ್ಷಗಳ ಪೂರ್ವದಲ್ಲಿ **ಹರದತ್ತಾಚಾರ್ಯ**ನೆಂಬ ಲೋಕವಿಖ್ಯಾತಪಂಡಿತನು **ಕಾಳಹಸ್ತಿ**ಕ್ಷೇತ್ರದಲ್ಲಿ ವಾಸಿಸುತ್ತಿದ್ದನು. ಈತನು ಅಸಾಧಾರಣಶಿವಭಕ್ತಿಸಂಪನ್ನನೂ, ಶಿವಾದ್ವೈತಸಿದ್ಧಾಂತಪಾರಾವಾರಪಾರದೃಶ್ವನೂ, ಪಂಚಾಚಾರಪರಾಯಣನೂ ಆಗಿ, ಶಿವಸರ್ವೋತ್ತಮತ್ವವನ್ನೇ ಜಗತ್ತಿನಲ್ಲಿರತಕ್ಕ ಮಾನವರಿಗೆ ಉಪದೇಶಿಸುತ್ತ ಆ ವಿಷಯವನ್ನು ನೆಲೆಗೊಳಿಸುತ್ತಿರಲು, ಅನ್ಯಮತೀಯರು ಈತನ ಅಸಾಧಾರಣವಾದ ಶಿವಭಕ್ತಿನಿಷ್ಠೆಯನ್ನು ಕಂಡು ಸಹಿಸಲಾರದೆ ವಾದಮಾಡಲಾರಂಭಿಸಿದರು. ಆಗ್ಗೆ ಹರದತ್ತಾಚಾರ್ಯನು ವೇದೋಪನಿಷದಾಗಮಪುರಾಣೇತಿಹಾಸಾದಿ ಪ್ರಬಲಪ್ರಮಾಣಗಳೊಡನೆ, ಈ ಬ್ರಹ್ಮಾಂಡಮಂಡಲದಲ್ಲಿ ಶಿವನೊರ್ವನೇ ಪೂಜ್ಯನೆಂದೂ, ಮಿಕ್ಕ ವಿಷ್ಣುಬ್ರಹ್ಮಾದಿದೇವತೆಗಳೆಲ್ಲರೂ ಪೂಜಕರೆಂದೂ ಸಿದ್ಧಾಂತಗೊಳಿಸಿದನು. ಆಗ್ಗೆ ಪರವಾದಿಗಳು ಕುಂಠಿತಕಂಠರಾಗಿ, ಹರದತ್ತಾಚಾರ್ಯನನ್ನು ಕುರಿತು —ಎಲೈ ಹರದತ್ತಾಚಾರ್ಯನೇ ! ನಿನ್ನೀ ವಾಗಾಡಂಬರಕ್ಕೆ ನಾವು ಮರುಳಾಗುವದಿಲ್ಲ ; ಹಾಗೆ ನಿಮ್ಮ

ಪರಶಿವನೇ ದೇವತಾಸಾರ್ವಭೌಮನೂ ಪರಮಪೂಜ್ಯನೂ ಆಗಿದ್ದ ಪಕ್ಷದಲ್ಲಿ, ಈ ವಿಷಯದಲ್ಲಿ ನಿನ್ನ ಮಹತ್ತ್ವಸ್ಥಿತಿಯನ್ನು ತೋರಿಸು; ಅಂದರೆ ನಾವು ನಂಬುತ್ತೇವೆ, ಇಲ್ಲವಾದರೆ ನಂಬುವದಿಲ್ಲವೆಂದು ಹೇಳಲು, ಹರದತ್ತಾಚಾರ್ಯನು ಪರವಾದಿಗಳಾಡಿದ ಈ ಮಾತುಗಳನ್ನು ಕೇಳಿ ಒಡಂಬಟ್ಟು, ಆಕ್ಷಣದಲ್ಲಿಯೇ ಉಕ್ಕಿನಿಂದ ನಿರ್ಮಿತವಾದ ಐದು ಮೆಟ್ಟಲುಗಳುಳ್ಳ ಏಣಿಯನ್ನು ತರಿಸಿ, ಆ ಏಣಿಯನ್ನು ಬೆಂಕಿಯಿಂದ ಚನ್ನಾಗಿ ಕೆಂಪಾಗುವಂತೆ ಕಾಯಿಸಿ, ಗೋಡೆಗೆ ಇಟ್ಟು, ವೀರಭಕ್ತಿಯೊಡನೆ ಆ ಏಣಿಯ ಒಂದೊಂದು ಕಾಲಿನಮೇಲೆ ನಿಂತು, ಶಿವಾಧಿಕ್ಯವನ್ನು ಶ್ಲೋಕರೂಪವಾಗಿ ಸಾರಿದನು. ಐದು ಮೆಟ್ಟಲುಗಳ ಮೇಲೆ ನಿಂತು ಸಾರಿದ ಆ ಐದು ಶ್ಲೋಕಗಳು ಆವುವೆಂದರೆ—

> ಗಾಯತ್ರ್ಯಾ ಬೋಧಿತತ್ವಾದಪಿ ನಮಕಮುಖ್ಯೈ ರಾಘವಸ್ಥಾಪಿತತ್ವಾ ।
> ಚ್ಚೌರೇಃ ಕೈಲಾಸಯಾತ್ರಾಕ್ರಮಮುದಿತತಯಾಽಭೀಷ್ಟಸಂತಾನದಾನಾತ್॥
> ನೇತ್ರೇಣ ಸ್ವೇನ ಸಾಕಂ ದಶಶತಕಮಲೈರ್ವಿಷ್ಣುನಾ ಪೂಜಿತತ್ವಾ ।
> ತ್ತಸ್ಮೈ ಚಕ್ರಪ್ರದಾನಾದಪಿಚ ಪಶುಪತಿಸ್ಸರ್ವದೇವಪ್ರಕೃಷ್ಟಃ ॥೧॥

ಎಂಬೀ ಶ್ಲೋಕವನ್ನು ಹೇಳಿ, ಆ ಏಣಿಯ ಮೊದಲನೆಯ ಕಾಲಿನ ಮೇಲೆ ಹತ್ತಿ ನಿಂತನು. ಅನಂತರ—

> ಕಂದರ್ಪಧ್ವಂಸಕತ್ವಾದ್ಗರಲಕಬಲನಾತ್ಕಾಲಗರ್ವಾಪಹತ್ವಾ ।
> ದ್ದೈತೇಯಾವಾಸಭೂತತ್ರಿಪುರವಿದಲನಾದ್ದಕ್ಷಯಾಗೇ ಜಯಿತ್ವಾತ್ ॥
> ಪಾರ್ಥಾಯ ಸ್ವಾಸ್ತ್ರದಾನಾನ್ನರಹರಿವಿಜಯಾನ್ಮಾಧವಸ್ತ್ರೀಶರೀರೇ ।
> ಶಾಸ್ತುಸ್ಸಂಪಾದಕತ್ವಾದಪಿಚ ಪಶುಪತಿಸ್ಸರ್ವದೇವಪ್ರಕೃಷ್ಟಃ ॥೨॥

ಎಂಬೀ ಶ್ಲೋಕವನ್ನು ಹೇಳಿ, ಎರಡನೆಯ ಕಾಲಿನಮೇಲೆ ಹತ್ತಿನಿಂತನು. ಅನಂತರ —

ಭೂಮಾ ಲೋಕೈರನೇಕೈಸ್ಸತತವಿರಚಿತಾರಾಧನತ್ವಾದಮಿಾಷಾ ।
ಮುಷ್ಟೈಶ್ವರ್ಯಪ್ರದಾನಾದ್ದಶವಿಧವಪುಷಾ ಕೇಶವೇನಾರ್ಚಿತತ್ವಾತ್ ॥
ಹಂಸಕ್ರೋಡಾಂಗಧಾರಿದ್ರುಹಿಣಮುರಹರಾದೃಷ್ಟಶೀರ್ಷಾಂಘ್ರಿಕತ್ವಾ ।
ಜ್ಜನ್ಮಧ್ವಂಸಾದ್ಯಭಾವಾದಪಿಚ ಪಶುಪತಿಸ್ಸರ್ವದೇವಪ್ರಕೃಷ್ಟಃ ॥೩॥

ಎಂಬೀ ಶ್ಲೋಕವನ್ನು ಹೇಳಿ, ಮೂರನೆಯ ಕಾಲಿನಮೇಲೆ ಹತ್ತಿ ನಿಂತನು. ಅನಂತರ—

ವಾರಾಣಸ್ಯಾಂ ಚ ಪಾರಾಶರಿನಿಯಮಿಭುಜಸ್ತಂಭಕತ್ವಾತ್ಪುರಾಣಾಂ ।
ಪ್ರಧ್ವಂಸೇ ಕೇಶವೇನ ಶ್ರಿತವೃಷವಪುಷಾ ಧಾರಿತಕ್ಷ್ಮಾರಥತ್ವಾತ್ ॥
ಅಸ್ತೋಕಬ್ರಹ್ಮಶೀರ್ಷಾಸ್ಥ್ಯುಪಕಲಿತಗಲಾಲಂಕ್ರಿಯಾಭೂಷಿತತ್ವಾ ।
ದ್ಧಾತೃತ್ವಾತ್ ಜ್ಞಾನಮುಕ್ತ್ಯೋರಪಿಚ ಪಶುಪತಿಸ್ಸರ್ವದೇವಪ್ರಕೃಷ್ಟಃ ॥೪॥

ಎಂಬೀ ಶ್ಲೋಕವನ್ನು ಹೇಳಿ, ನಾಲ್ಕನೆಯ ಕಾಲಿನಮೇಲೆ ಹತ್ತಿ ನಿಂತನು. ಅನಂತರ—

ವೈಶಿಷ್ಟ್ಯೈದ್ಯೋನಿಪೀಠಾಯಿತನರಕರಿಪುಶ್ಲಿಷ್ಟಭಾವೇನ ಶಂಭೋಃ ।
ಸ್ವಸ್ಯೈವಾರ್ಥಪ್ರತೀಕಾಯಿತಹರಿವಪುಷಾಲಿಂಗಿತತ್ವೇನ ಯದ್ವಾ ॥
ಅಪ್ರಾಧಾನ್ಯಾದ್ವಿಶಿಷ್ಟದ್ವಯಸಮುಧಿಗಮೇ ಕೇಶವಸ್ಯೇಶನಿಂದಾ ।
ಯುಕ್ತೇರ್ದೋಷಾವಹತ್ವಾದಪಿಚ ಪಶುಪತಿಸ್ಸರ್ವದೇವಪ್ರಕೃಷ್ಟಃ ॥೫॥

ಎಂಬೀ ಶ್ಲೋಕವನ್ನು ಹೇಳಿ, ಐದನೆಯ ಕಾಲಿನ ಮೇಲೆ ಹತ್ತಿ ನಿಂತನು. ಆಗ ಆ ಪರವಾದಿಗಳೆಲ್ಲರೂ ಭಯಭಕ್ತಿಯುಕ್ತರಾಗಿ ಶರಣಾಗತರಾದರು.

ಈ ಪ್ರಕಾರವಾಗಿ ವೀರಭಕ್ತಿಯಿಂದೊಡಗೂಡಿ ಸಾರಿದ ಈ ಐದು ಶ್ಲೋಕಗಳಲ್ಲಿ ಶಿವಾಧಿಕ್ಯವು ತುಂಬಿತುಳುಕುತ್ತಿರುವದು. ಈ ಶ್ಲೋಕಗಳಲ್ಲಿರತಕ್ಕ ಒಂದೊಂದು ಮಾತುಗಳಿಗೆ ಎಷ್ಟು ಬೆಲೆಯನ್ನು ಕೊಟ್ಟರೂ ತೀರದಾಗಿದೆ. ಈ ಶ್ಲೋಕಗಳು ಪ್ರತಿಯೊಬ್ಬ ವೀರಶೈವನ

ಹೃತ್ಕಮಲದಲ್ಲಿ ವಾಸಮಾಡಬೇಕಾಗಿವೆ. ಈ ಐದು ಶ್ಲೋಕಗಳೇ "**ಪಂಚಶ್ಲೋಕೀ**" ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವವು. ಈ ಪಂಚಶ್ಲೋಕಿಗೆ ಈಗ್ಗೆ ಎರಡುನೂರು ವರ್ಷಗಳ ಪೂರ್ವದಲ್ಲಿ ಕೆಳದಿ ಸಂಸ್ಥಾನವನ್ನಾಳುತ್ತಿದ್ದ ಪಂಡಿತಾಗ್ರೇಸರನೆಂದು ಪ್ರಸಿದ್ಧನಾಗಿದ್ದ ಬಸವಭೂಪಾಲನು "**ಶೈವಸಂಜೀವಿನೀ**" ಎಂಬ ಹೆಸರಿನಿಂದ ಸಂಸ್ಕೃತಭಾಷೆಯಲ್ಲಿ ಮಹತ್ತರವಾದ ವ್ಯಾಖ್ಯಾನವನ್ನು ಬರೆದಿರುವನು. ಈ ವ್ಯಾಖ್ಯಾನದ ಯೋಗ್ಯತೆಯು ಅತಿಮಹತ್ತ್ವವುಳ್ಳದಾಗಿರುವುದು. ಅಸ್ತು !

ಹರದತ್ತಾಚಾರ್ಯನು ಯಾವ ರೀತಿಯಾಗಿ ಶಿವನ ವಿಷಯದಲ್ಲಿ ತನ್ನ ನೈಜವಾದ ವೀರಭಕ್ತಿಯನ್ನು ತೋರಿಸಿ ಶಿವಾಧಿಕ್ಯವನ್ನು ನೆಲೆಗೊಳಿಸಿ ಜಗದ್ವಂದ್ಯನಾದನೋ, ಆದರಂತೆಯೇ **ಉದ್ಭಟಾರಾಧ್ಯ, ವೇಮನಾರಾಧ್ಯ, ಚಂಡಭೈರವಾರಾಧ್ಯ, ವಜ್ರನಖಾರಾಧ್ಯ, ಭವಾನೀಶಂಕರಾರಾಧ್ಯ, ಪರಮಶಿವಾರಾಧ್ಯ, ಪರಮಾನಂದಾರಾಧ್ಯ, ನಂದಿಕೇಶ್ವರಾರಾಧ್ಯ, ಶ್ರೀಪತಿಪಂಡಿತಾರಾಧ್ಯ, ಮಂಚನಪಂಡಿತಾರಾಧ್ಯ, ಮಲ್ಲಿಕಾರ್ಜುನಪಂಡಿತಾರಾಧ್ಯ ಜ್ಯೋತಿರ್ನಾಥ, ಘಂಟಾನಾಥ, ಭೀಮನಾಥ** ಮೊದಲಾದ ವೀರಮಾಹೇಶ್ವರರು ಶಿವಭಕ್ತಿಯ ಮಹತ್ತ್ವವನ್ನು ತಮ್ಮ ಕಾಲದಲ್ಲಿ ನೆಲೆಗೊಳಿಸಿ ಜಗದ್ವಂದ್ಯರಾದರು. ಆದರೆ ಈಗಿನ ಕಾಲದಲ್ಲಿ ಆ ದೇವೋತ್ತಮನ ವಿಷಯದಲ್ಲಿ ಭಕ್ತಿಯು ದಿನೇದಿನೇ ಹ್ರಾಸವಾಗುತ್ತ ನಡೆದು ನಾಸ್ತಿಕಪಥವು ಹೆಚ್ಚುತ್ತಿರುವುದನ್ನು ನೋಡಿದರೆ ಪರಮ ವ್ಯಸನವೆನಿಸುತ್ತದೆ. ಇದು ಕಾಲಮಹಿಮೆಯೆಂದೇ ಹೇಳಬೇಕಾಗಿದೆ. ಆದುದರಿಂದ ಸಕಲಸನಾತನಮತಾನುಯಾಯಿಗಳೂ ಈ ವಿಷಯವನ್ನು

ಪರ್ಯಾಲೋಚಿಸಿ, ದೇವತಾಸಾರ್ವಭೌಮನಾದ ಆ ಪರಶಿವಮೂರ್ತಿಯಲ್ಲಿ ಅನುಪಮವಾದ ಭಕ್ತಿಯನ್ನಿಟ್ಟು ಧನ್ಯರಾಗಬೇಕೆಂದು ಹಾರೈಸುತ್ತೇನೆ.

ಇಲ್ಲಿಯವರೆಗೆ ನಾನು ಪ್ರತಿಪಾದಿಸಿದ ಸಮಸ್ತವಿಷಯಗಳನ್ನು ತಾವೆಲ್ಲರೂ ಶಾಂತಚಿತ್ತದಿಂದಾಲಿಸಿದುದನ್ನು ಕಂಡು ಅತ್ಯಾನಂದವೆನಿಸುತ್ತದೆ. ಯಾವ ಮಹಾತ್ಮನ ಜಯಂತೀನಿಮಿತ್ತವಾಗಿ ತಾವೆಲ್ಲರೂ ಇಲ್ಲಿ ಸಮ್ಮಿಲಿತರಾಗಿರುವಿರೋ, ಆ ಶ್ರೀಜಗದ್ಗುರುದಾರುಕಾಚಾರ್ಯನ ಪವಿತ್ರಾಭಿಧಾನವನ್ನು ಸ್ಮರಿಸಿ, ನನ್ನೀ ಭಾಷಣವನ್ನು ಸಮಾಪ್ತಿಗೊಳಿಸುತ್ತೇನೆ.

ಶಿವಂ ಭೂಯಾತ್ ! ಶಿವಂ ಭೂಯಾತ್ !!

ಭಾಗ–೩

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಮೈಸೂರುರಾಜಧಾನಿಯಲ್ಲಿ ಪ್ರಮೋದಸಂವತ್ಸರ ವೈಶಾಖ ಶು|| ೫
(ತಾ|| ೩-೫-೧೯೩೦) ದಿವಸ ನೆರವೇರಿದ

ಶ್ರೀಜಗದ್ಗುರು ದಾರುಕಜಯಂತೀಮಹೋತ್ಸವ ಸಮಯದಲ್ಲಿ

ನಾಗನೂರುಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ

ಭಾಷಣ.

ಪಂಚಾನನತನೂದ್ಭೂತಾನ್ ಪಂಚಾಕ್ಷರಮನೂಪಮಾನ್ ।
ಪಂಚಸೂತ್ರಕೃತೋ ವಂದೇ ಪಂಚಾಚಾರ್ಯಾನ್ ಜಗದ್ಗುರೂನ್ ॥

ಸಭಾಸದರೇ! ಪ್ರಮೋದನಾಮಸಂವತ್ಸರ ವೈಶಾಖ ಶು|| ೫ ಶುಭದಿವಸದಲ್ಲಿ ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರುದಾರುಕಾಚಾರ್ಯರ ಜಯಂತೀಮಹೋತ್ಸವನಿಮಿತ್ತವಾಗಿ ತಾವುಗಳೆಲ್ಲರೂ ಅತ್ಯಂತಭಕ್ತಿಯಿಂದ ಇಲ್ಲಿ ಸಮ್ಮಿಲಿತರಾಗಿರುವುದನ್ನು ಕಂಡು ಪರಮಾನಂದವೆನಿಸುತ್ತದೆ. ತಮ್ಮೆಲ್ಲರ ಕೋರಿಕೆಯಂತೆ ಈ ದಿವಸ ಸನಾತನವಾದ ವೀರಶೈವಮತದ ವಿಷಯವು ಯಾವ ಯಾವ ಪ್ರಾಚೀನ ಗ್ರಂಥಗಳಲ್ಲುಕ್ತವಾಗಿದೆಯೆಂಬ ವಿಷಯವಾಗಿ ಸಂಭಾಷಿಸುತ್ತೇನೆ. ನಾನು ಪ್ರತಿಪಾದಿಸುವ ಶಾಸ್ತ್ರೀಯವಿಷಯಗಳನ್ನು ಸರ್ವರೂ ಶಾಂತಚಿತ್ತದಿಂದ ಶ್ರವಣಮಾಡಬೇಕೆಂದಾಶಿಸುತ್ತೇನೆ.

ಪರಮಪವಿತ್ರವಾದೀ ವೀರಶೈವಮತವು ಅನಾದಿಯಾದುದು. ಈ ಮತವು ಜಗದಾದಿಯಲ್ಲಿ ಜಗನ್ನಿಯಾಮಕನಾದ ಪರಮೇಶ್ವರನ ಸದ್ಯೋಜಾತ—ವಾಮದೇವ—ಅಘೋರ—ತತ್ಪುರುಷ—ಈಶಾನಗಳೆಂಬ ಪಂಚಮುಖಗಳಿಂದ ಅವತರಿಸಿದ ರೇಣುಕ—ದಾರುಕ—ಘಂಟಾಕರ್ಣ-ಧೇನುಕರ್ಣ—ವಿಶ್ವಕರ್ಣರೆಂಬ ಮಹಾಚಾರ್ಯರಿಂದ ಸ್ಥಾಪಿಸಲ್ಪಟ್ಟಿತು. ಚರಾಚರಾತ್ಮಕವಾದೀ ಜಗತ್ತು ಉತ್ಪನ್ನವಾಗಿ ಇಷ್ಟೇ ವರ್ಷಗಳಾದುವೆಂದು ನಿರ್ಣಯಿಸಲು ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಈ ಪವಿತ್ರ ಮತವು ಉತ್ಪನ್ನವಾಗಿ ಇಷ್ಟೇ ವರ್ಷಗಳಾದುವೆಂದು ನಿರ್ಣಯಿಸಲು ಯಾರಿಗೂ ಸಾಧ್ಯವಿಲ್ಲ. ಹೀಗಿದ್ದರೂ ಭ್ರಾಂತರಾದ ಕೆಲಜನರು ಈ ಸನಾತನಮತದ ರಹಸ್ಯವನ್ನರಿಯದೆ ಇದು ಅರ್ವಾಚೀನಮತವೆಂದು ಭ್ರಮಿಸಿ ನುಡಿಯುತ್ತಿರುವರು; ಇದು ಅವರ ವಿಚಾರಶೂನ್ಯತೆಯ ಪರಿಣಾಮವಲ್ಲದೆ ಬೇರೊಂದಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ. ಸನಾತನಮತಗಳ ಸನಾತನತ್ವವನ್ನು ಕಂಡುಹಿಡಿಯಬೇಕಾದರೆ ಈಶ್ವರಪ್ರೋಕ್ತವಾದ ನಿಗಮಾಗಮಗಳೂ, ವೇದಶಾಖಾರೂಪವಾದ ಉಪನಿಷತ್ತುಗಳೂ, ತಟ್ಟೀಕಾರೂಪವಾದ ಪುರಾಣಗಳೂ ಮುಖ್ಯಸಾಧನಗಳಾಗಿವೆ. ಈ ಸಾಧನಗಳನ್ನು ಬಿಟ್ಟು ಸನಾತನತ್ವವನ್ನು ಸ್ಥಿರಗೊಳಿಸುವ ಸಾಧನಗಳು ಮತ್ತಾವುವೂ ಇಲ್ಲೆಂಬುದು ಪ್ರತಿಯೊಬ್ಬರಿಗೂ ತಿಳಿದ ವಿಷಯವಾಗಿದೆ. ಆದುದರಿಂದ ವೇದಾಗಮೋಪನಿಷತ್ಪುರಾಣಾದಿಗಳಲ್ಲಿ ವಿಸ್ತರವಾಗಿ ಪ್ರತಿಪಾದಿಸಲ್ಪಟ್ಟಿರುವ ಈ ಮತದ ರಹಸ್ಯವನ್ನು ಪ್ರತಿಪಾದಿಸಲಿಚ್ಛಿಸುತ್ತೇನೆ.

ಈ ಪವಿತ್ರಮತದ ಮುಖ್ಯಚಿಹ್ನವೆಂದರೆ ಲಿಂಗಧಾರಣ. ಈ ಲಿಂಗಧಾರಣವಿಷಯವು ಋಗಾದಿವೇದಗಳಲ್ಲಿಯೂ, ಈಶಾದ್ಯುಪ

ನಿಷತ್ತುಗಳಲ್ಲಿಯೂ, ಕಾಮಿಕಾದ್ಯಾಗಮಗಳಲ್ಲಿಯೂ, ವ್ಯಾಸೋಕ್ತ ಪುರಾಣಗಳಲ್ಲಿಯೂ ಘಂಟಾಘೋಷವಾಗಿ ಹೇಳಲ್ಪಟ್ಟಿರುವುದು. ಇದೇ ವಿಷಯವನ್ನು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರುರೇಣುಕಾ ಚಾರ್ಯರು, ಅಗಸ್ತ್ಯಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಸಮಯದಲ್ಲಿ—

ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ |
ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ||೩೬||

ಎಂದು ಸಿದ್ಧಾಂತಶಿಖಾಮಣಿಯ ಲಿಂಗಧಾರಣಸ್ಥಲದಲ್ಲಿ ಅಪ್ಪಣೆ ಕೊಡಿಸಿರುವರು. ರೇಣುಕಭಗವತ್ಪಾದರು ಅಪ್ಪಣೆಕೊಡಿಸಿರುವ ಈ ಮಹಾವಾಕ್ಯವನ್ನೇ ಮೂಲಾಧಾರವಾಗಿಟ್ಟುಕೊಂಡು ಈ ವಿಷಯವನ್ನು ವಿವರಿಸಲಾಗುವುದು.

ಋಗ್ವೇದದಲ್ಲಿ—

ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ಪ್ರಭುರ್ಗಾತ್ರಾಣಿ ಪರ್ಯೇಷಿ ವಿಶ್ವತಃ | ಅತಪ್ತತನೂರ್ನ ತದಾಮೋಽಅಶ್ನುತೇ ||

(ಅಷ್ಟಕ ೭. ಅಧ್ಯಾಯ ೩. ವರ್ಗ ೮)

ಈ ಮಂತ್ರವು ಉಕ್ತವಾಗಿದೆ. ಈ ಮಂತ್ರವು ಕೇವಲ ಲಿಂಗಧಾರಣವನ್ನೇ ಬೋಧಿಸುತ್ತದೆ.

ಲಿಂಗಧಾರಣಚಂದ್ರಿಕಾಕಾರರಾದ **ಶ್ರೀನಂದಿಕೇಶ್ವರಶಿವಾಚಾರ್ಯರು** ಈ ಋಗ್ವೇದಮಂತ್ರಕ್ಕೆ—

"ಹೇ ಬ್ರಹ್ಮಣಸ್ಪತೇ—ಲಿಂಗರೂಪಶರೀರಾವಚ್ಛೇದೇನ ಶರೀರಿ ಭಾವೇನಾಧಿಷ್ಠಿತ ಪರಮಶಿವ, ತೇ—ತವ, ತತ್—ಬ್ರಹ್ಮಪದವಾಚ್ಯ

ಲಿಂಗರೂಪಂ ಶರೀರಂ, ಪವಿತ್ರಂ—ಉಕ್ತರೀತ್ಯಾ ಶುಚ್ಯಶುಚಿಕಾಲೇಽಪಿ ಧರ್ತುಂ ಯೋಗ್ಯಂ, ವಿತತಂ—ಇಷ್ಟಾದಿಭೇದೇನ ಭಕ್ತಶರೀರಾದಿ ಭೇದೇನ ವಾ ಬಹುವಿಧಂ, ಪ್ರಭುಃ—ನಿಗ್ರಹಾನುಗ್ರಹಸಮರ್ಥಸ್ತ್ವಂ, ವಿಶ್ವತಃ—ಸಮಸ್ತಾನಿ (ಸಾರ್ವವಿಭಕ್ತಿಕಸ್ತಸಿಲ್) ಗಾತ್ರಾಣಿ—ಭಕ್ತಶರೀರಾಣಿ, ಪರ್ಯೇಷಿ—ವ್ಯಾಪ್ನೋಷಿ, ಧಾರ್ಯಮಾಣಸ್ಸನ್ ಲಿಂಗರೂಪಶರೀರದ್ವಾರಾ ಭಕ್ತಾಂಗಸಂಯುಕ್ತೋಽಸೀತ್ಯರ್ಥಃ. ಅತಪ್ತ ತನೂಃ— ತಪ್ತಾ ವೇಧಾ-ಮನು-ಕ್ರಿಯಾದೀಕ್ಷಾತ್ರಯೇಣ ನಿರ್ದಗ್ಧ ಪಾಪಪಂಜರಾ ತನೂರ್ಯಸ್ಯ ಸಾ ನ ಭವತೀತ್ಯತಪ್ತತನೂಃ, ದೀಕ್ಷಾ ತ್ರಯರಹಿತಃ, ಆಮಃ—ಅಪರಿಪಕ್ವಾಂತಃಕರಣಸ್ಸನ್, ತತ್—ಪರಶಿವ ಸ್ವರೂಪಂ ನಾಶ್ನುತೇ." (ಲಿಂ. ಚಂ. ಪುಟ ೧೨೫-೧೨೬)

ಈ ಪ್ರಕಾರವಾಗಿ ವ್ಯಾಖ್ಯಾನಮಾಡಿರುವರು.

ಈ ವೇದಮಂತ್ರದ ಅಭಿಪ್ರಾಯವನ್ನು ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳು ತಮ್ಮಿಂದ ರಚಿಸಲ್ಪಟ್ಟ **"ಲಿಂಗಪುರಾಣ"** ದ ಉತ್ತರಭಾಗದ ೨೧ ನೆಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಿರುವರು. ಈಪುರಾಣವು ಕಾಂಚೀಪುರನಿವಾಸಿಗಳೂ, ಅಷ್ಟಾದಶಪುರಾಣೋದ್ಧಾರಕ ಬಿರುದಾಂಕಿತರೂ ಆದ ಪೂವ್ವಾಡ ವೆಂಕಟರಾಯರೆಂಬ ಮಹೋದಯ ರಿಂದ, ಕ್ರಿ. ಶ. ೧೮೭೯ ನೆಯ ಇಸ್ವಿಯಲ್ಲಿ ಮುದ್ರಿಸಲ್ಪಟ್ಟಿದೆ. ಅಲ್ಲಿ ಹೇಳಲ್ಪಟ್ಟಿರುವ ಶ್ಲೋಕಗಳ ನಿಜಾರ್ಥವನ್ನು ಸರ್ವರೂ ಪರಿಶೀಲಿಸಬೇಕು.

ಬ್ರಹ್ಮೇತಿ ಲಿಂಗಮಾಖ್ಯಾತಂ ಬ್ರಹ್ಮಣಃ ಪತಿರೀಶ್ವರಃ ॥೯೮॥

ಪವಿತ್ರಂ ತದ್ಧಿ ವಿಖ್ಯಾತಂ ತತ್ಸಂಪರ್ಕಾತ್ತನೂಃ ಶುಚಿಃ ।
ಋಗಿತ್ಯಾಹ ಪವಿತ್ರಂ ತೇ ವಿತತಂ ಬ್ರಹ್ಮಣಸ್ಪತೇ ॥೯೯॥

ತಸ್ಮಾತ್ಪವಿತ್ರಂ ತಲ್ಲಿಂಗಂ ಧಾರ್ಯಂ ಶೈವಮನಾಮಯಂ ।
ಅತಪ್ತತನುರಜ್ಞೋ ವೈ ಹ್ಯಘೀ ಸಂಸಾರಲಕ್ಷಣಃ ॥೧೦೦॥

ದೀಕ್ಷಯಾ ರಹಿತಃ ಸಾಕ್ಷಾನ್ನಾಪ್ನುಯಾಲ್ಲಿಂಗಮುತ್ತಮಂ ।
ಯಃ ಕರೋತಿ ತಪಃ ಪೂರ್ವಂ ಸ ತಪ್ತತನುರುಚ್ಯತೇ ॥೧೦೧॥

ಪರಿಪಕ್ವೋ ವಿಮೋಕ್ಷಾಯ ಸೋಽಶ್ನುತೇ ಲಿಂಗಧಾರಣಂ ।
ನ ಕರೋತಿ ತಪಃ ಪೂರ್ವಂ ಸೋಽತಪ್ತತನುರುಚ್ಯತೇ ॥೧೦೨॥

(ಲಿಂ. ಪು. ಉ. ಭಾ. ಅ. ೨೧)

ಬ್ರಹ್ಮವೇ ಶಿವಲಿಂಗವೆಂದೂ, ಪವಿತ್ರವಾದ ಶಿವಲಿಂಗಧಾರಣದಿಂದ ಶರೀರವು ಪವಿತ್ರವಾಗುವುದೆಂದೂ, ಆದುದರಿಂದ ಪುನೀತವಾದ ಶಿವಲಿಂಗವನ್ನು ಧರಿಸಿಕೊಳ್ಳಬೇಕೆಂದೂ, ವೇಧಾ–ಮನು–ಕ್ರಿಯಾರೂಪತ್ರಿವಿಧದೀಕ್ಷೆಯಿಂದ ತಪ್ತನಾಗದಿದ್ದವನು ಅಜ್ಞನೂ ಪಾಪಿಯೂ ಸಂಸಾರಿಯೂ ಆಗುವನೆಂದೂ, ಆದುದರಿಂದಲೇ ದೀಕ್ಷೆಯನ್ನು ಹೊಂದಬೇಕೆಂದೂ, ದೀಕ್ಷಾರಹಿತನು ಶಿವಲಿಂಗವನ್ನು ಧರಿಸಲು ಯೋಗ್ಯನಲ್ಲವೆಂದೂ, ಪೂರ್ವದಲ್ಲಿ ಯಾವನು ಶಿವನಿಗೋಸುಗ ತಪಸ್ಸನ್ನಾಚರಿಸಿರುವನೋ ಅವನು 'ತಪ್ತತನು' ಎಂದು ಹೇಳಿಸಿಕೊಳ್ಳುವನೆಂದೂ, ತಪಸ್ಸನ್ನಾಚರಿಸದಿದ್ದವನು 'ಅತಪ್ತತನು' ಎಂದು ಹೇಳಿಸಿಕೊಳ್ಳುವನೆಂದೂ, ಪರಿಪಕ್ವಾಂತಃಕರಣನು ಮುಕ್ತಿಗೋಸುಗ ಲಿಂಗಧಾರಣವನ್ನು ಹೊಂದುವನೆಂದೂ ವ್ಯಾಸಮಹರ್ಷಿಗಳು ಮುಕ್ತಕಂಠದಿಂದ ಸಾರಿದ್ದಾರೆ.

ಋಗ್ವೇದದಲ್ಲಿ—

ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ ।
ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನಃ ।

ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮತ್ ।
ಇದಂ ತವ ಪ್ರಸರ್ಪಣಂ ಸುಬಂಧವೇಹಿ ನಿರಿಹಿ ॥

(ಅಷ್ಟಕ ೮. ಅಧ್ಯಾಯ ೧. ವರ್ಗ ೨೫.)

ಈ ಮಂತ್ರವು ಉಕ್ತವಾಗಿದೆ. ಈ ಮಂತ್ರವಾದರೂ ಕೇವಲ ಲಿಂಗಧಾರಣವನ್ನೇ ಬೋಧಿಸುತ್ತದೆ. ಈ ಮಂತ್ರಾರ್ಥವು **ಲಿಂಗಧಾರಣಚಂದ್ರಿಕೆ** ಎಂಬ ಉದ್ಗ್ರಂಥದಲ್ಲಿ ವಿಶದೀಕರಿಸಲ್ಪಟ್ಟಿರುತ್ತದೆ. ಭರತಖಂಡದಲ್ಲೆಲ್ಲ ಅದ್ವಿತೀಯಪಂಡಿತರೆಂದು ಸಮಸ್ತ ಪ್ರಪಂಚದ ಜನರಿಂದ ಹೊಗಳಿಸಿಕೊಳ್ಳಲ್ಪಟ್ಟವರೂ, ಷಟ್‌ಶಾಸ್ತ್ರ ಪಾರಾವಾರಪಾರಂಗತರೂ, ಸ್ಮಾರ್ತಮತೀಯರೂ ಆಗಿದ್ದ ಶ್ರೀಕಾಶೀ ಕ್ಷೇತ್ರನಿವಾಸಿ ಕೈ॥ **ಮಹಾಮಹೋಪಾಧ್ಯಾಯ ಶ್ರೀಶಿವಕುಮಾರ ಮಿಶ್ರರವರು** ಈ ಉದ್ಗ್ರಂಥಕ್ಕೆ ಸಂಸ್ಕೃತಭಾಷೆಯಿಂದ ಘನತರವಾದ ವ್ಯಾಖ್ಯಾನವನ್ನು ಬರೆದು, ಲಿಂಗಧಾರಣದ ಸನಾತನತ್ವವನ್ನು ಸ್ಥಿರಗೊಳಿಸಿರುವರು. ಈ ಪಂಡಿತಪ್ರಕಾಂಡರ ಟೀಕೆಯಿಂದೊಡಗೂಡಿದ ಈ ಗ್ರಂಥವು ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀಮಜ್ಜಗದ್ಗುರು ವಿಶ್ವಾರಾಧ್ಯಪೀಠಾಧೀಶ್ವರರಿಂದ ೧೯೦೫ ನೆಯ ಇಸ್ವಿಯಲ್ಲಿ ಮುದ್ರಿಸಲ್ಪಟ್ಟಿದೆ. ಈ ಪಂಡಿತೋತ್ತಮರು ಋಗ್ವೇದೋಕ್ತವಾದೀ ಮಂತ್ರಕ್ಕೆ ಲಿಂಗಧಾರಣಪರವಾಗಿ ವ್ಯಾಖ್ಯಾನವನ್ನು ಬರೆದಿರುವರು. ಅವರ ವ್ಯಾಖ್ಯಾನದಲ್ಲಿ ರಾರಾಜಿಸುವ ನಿಜಾರ್ಥವನ್ನು ಸರ್ವರೂ ವಿವೇಚನ ದೃಷ್ಟಿಯಿಂದ ಅವಲೋಕಿಸಬೇಕು. ಅವರು ಬರೆದಿರುವ ಮಂತ್ರಾರ್ಥ ವಿವರವು ಈ ಪ್ರಕಾರವಾಗಿರುವುದು.

“ ಅಯಂ ಭಗವಾನ್—ಲಿಂಗರೂಪಸದಾಶಿವಃ, ಮೇ ಹಸ್ತಃ—ಮಮ ಹಸ್ತಗತ ಇತ್ಯರ್ಥಃ । ಅಯಮೇವ ಸದಾಶಿವಃ, ಮೇ ಭಗವತ್ತರಃ—ಮಮ ಸರ್ವೈಶ್ವರ್ಯವತ್ತರಃ, ಅಯಂ ಮೇ ವಿಶ್ವಭೇಷಜಃ—

ವಿಶ್ವೇಷಾಂ ರೋಗಾಣಾಂ ನಿವರ್ತಕೌಷಧಸ್ವರೂಪಃ, ಅಯಂ ಶಿವಾಭಿಮರ್ಶನಃ–ಸರ್ವೇಷಾಂ ಕಲ್ಯಾಣಾನಾಂ ಪ್ರಾಪಕಃ, ಅಯಂ ಮಾತಾ—ಮಾತೃವತ್ ವಾತ್ಸಲ್ಯವಾನ್, ಅಯಂ ಪಿತಾ—ಪಿತೃವದ್ರಕ್ಷಕಃ, ಅಯಂ ಜೀವಾತುಃ—ಜೀವನಸಾಧನಭೂತಃ, ಹೇ ಸುಬಂಧೋ—ನಿರುಪಾಧಿಕವಿಶ್ವಸುಹೃತ್, ಏಹಿ—ಆಗಚ್ಛ, ಇದಂ—ಮದ್ಧಸ್ತಗತಂ ಲಿಂಗಂ, ತವ ಪ್ರಸರ್ಪಣಂ—ವಿಹಾರಸ್ಥಾನಂ, ನಿರಿಹಿ—ನಿರ್ಗಮಚೇಷ್ಟಾರಹಿತಸ್ಸನ್ ಅಸ್ಮಿನ್ ಶಿವಲಿಂಗೇ ತಿಷ್ಠೇತ್ಯರ್ಥಃ ॥"

(ಲಿಂ. ಚಂ. ವ್ಯಾ. ಪುಟ ೧೫೬)

ಈ ಮಂತ್ರದ ಅರ್ಥವು ಕನ್ನಡದಲ್ಲಿ ಈ ಪ್ರಕಾರವಾಗಿ ಆಗುವುದು.

ಅಯಂ ಭಗವಾನ್—ಲಿಂಗರೂಪನಾದ ಈ ಪರಶಿವನು, ಮೇ—ನನ್ನ, ಹಸ್ತಃ—ಹಸ್ತಗತನು, (ಕರಪೀಠವನ್ನಲಂಕರಿಸಿದವನು) ಅಯಂ—ಈ ಪರಶಿವನು, ಮೇ—ನನಗೆ, ಭಗವತ್ತರಃ—ಸಕಲೈಶ್ವರ್ಯಸ್ವರೂಪನು, ಅಯಂ—ಇವನು, ಮೇ ವಿಶ್ವಭೇಷಜಃ—ನನ್ನ ಸಮಸ್ತರೋಗಗಳನ್ನು ಹೋಗಲಾಡಿಸಲು ದಿವ್ಯೌಷಧಸ್ವರೂಪನು, ಅಯಂ ಶಿವಾಭಿಮರ್ಶನಃ—ಇವನು ಸಮಸ್ತಕಲ್ಯಾಣಗಳನ್ನು ಕೊಡುವವನು. ಅಯಂ ಮಾತಾ—ಇವನು ತಾಯಿಯಂತೆ ಪ್ರೀತಿಸುವವನಾಗಿಯೂ, ಅಯಂ ಪಿತಾ—ಇವನು ತಂದೆಯಂತೆ ರಕ್ಷಿಸುವವನಾಗಿಯೂ, ಅಯಂ ಜೀವಾತುಃ—ಇವನು ಜೀವನಸಾಧನಭೂತನಾಗಿಯೂ, ಆಗಮತ್–ಪ್ರಾಪ್ತನಾಗಿರುವನು. ಸುಬಂಧೋ–ಎಲೈ ವಿಶ್ವಬಂಧುವೇ! ಏಹಿ—ಬಾ, ತವ ಪ್ರಸರ್ಪಣಂ—ನಿನಗೆ ವಿಹಾರಸ್ಥಾನವಾದ, ಇದಂ—ಈ ನನ್ನ ಕರಪೀಠವನ್ನಲಂಕರಿಸಿರುವ ಶಿವಲಿಂಗವನ್ನು, ನಿರಿಹಿ—ಬಿಟ್ಟುಹೋಗಬೇಡ. (ಯಾವಾಗಲೂ ಈ ಶಿವಲಿಂಗದಲ್ಲಿಯೇ ವಾಸವಾಗಿರು.)

ಯಜುರ್ವೇದದಲ್ಲಿ—

ಯಾ ತೇ ರುದ್ರ ಶಿವಾ ತನೂರಘೋರಾಽಪಾಪಕಾಶಿನೀ ।
ತಯಾನಸ್ತನುವಾ ಶಂತಮಯಾ ಗಿರಿಶಂತಾಭಿಚಾಕಶೀಹಿ ॥

(ತೈತ್ತಿರೀಯಸಂಹಿತಾ—ಕಾಂಡ ೪. ಪ್ರಪಾಠಕ ೫. ಅನುವಾಕ ೧.)

ಈ ಮಂತ್ರವು ಉಕ್ತವಾಗಿದೆ. ಈ ಮಂತ್ರದಲ್ಲಿಯೂ ಲಿಂಗಧಾರಣವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಈ ಮಂತ್ರದ ವಿಷಯವನ್ನು ಭಗವತ್ಪಾದ ರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯ ಲಿಂಗಧಾರಣಸ್ಥಲದಲ್ಲಿ—

ಅಘೋರಾಽಪಾಪಕಾಶೀತಿ ಯಾ ತೇ ರುದ್ರ ಶಿವಾ ತನೂಃ ।
ಯಜುಷಾ ಗೀಯತೇ ಯಸ್ಮಾತ್ತಸ್ಮಾಚ್ಛೈವೋಽಘವರ್ಜಿತಃ ॥

ಈ ರೀತಿಯಾಗಿ ಅಪ್ಪಣೆಕೊಡಿಸಿ, ಲಿಂಗಧಾರಣವನ್ನು ಬೋಧಿಸಿರುವರು.

ಯಜುರ್ವೇದಾಂತರ್ಗತಶ್ರೀರುದ್ರಕ್ಕೆ ಕರ್ಣಾಟಕಭಾಷೆಯಿಂದ ಬಹುಮನೋಹರವಾದ ವ್ಯಾಖ್ಯಾನವನ್ನು ಬರೆದಿರುವ **ಸೋಸಲೆಯ ಶ್ರೀರೇವಣಾರಾಧ್ಯರು** ತಮ್ಮ ವ್ಯಾಖ್ಯಾನದಲ್ಲಿ—

"ಭೋ ರುದ್ರ—ಎಲೈ ಪರಮೇಶ್ವರನೆ! ತೇ—ನಿನ್ನ, ಅಪಾಪಕಾಶಿನೀ—ಮನೋವಾಕ್ಕಾಯಂಗಳಲ್ಲಿ ಪುಟ್ಟಿದ ಬಹುವಿಧಪಾಪಂಗಳನ್ನು ಪ್ರಕಾಶಪಡಿಸದೆ ಸಂಹರಿಸುತ್ತಿರ್ದ, ಅಘೋರಾ—ಭಯಂಕರವಲ್ಲದೆ ಶಾಂತರೂಪವಾಗಿರ್ದ, ಯಾ ತನೂಃ—'ಲಿಂಗಂ ತು ಶಿವಯೋರ್ದೇಹಸ್ತಾಭ್ಯಾಂ ಯಸ್ಮಾದಧಿಷ್ಠಿತಃ' ಎಂದು ವಾಯವೀಯಸಂಹಿತಾ ವಾಕ್ಯವುಂಟಾಗಿ ಆವುದಾನೊಂದು ಇಷ್ಟಪ್ರಾಣಲಿಂಗರೂಪವಾದ ದೇಹವು, ಶಿವಾ—ಮಾಂಗಲ್ಯವುಳ್ಳುದೋ, ಶಂತಮಯಾ—ಭಕ್ತರಿಗೆ

ಮಹಾಭೋಗಮೋಕ್ಷರೂಪವಾದ ಸುಖವನ್ನು ಕೊಡಲೋಸುಗವಾಗಿ ಅತ್ಯಂತಸುಖಸ್ವರೂಪವಾಗಿರ್ದ, ತಯಾ ತನುವಾ—ಆ ಇಷ್ಟಪ್ರಾಣ ಲಿಂಗರೂಪವಾದ ಶರೀರದಿಂದೆ, ಭೋ ಗಿರಿಶಂತ—ವಾಗ್ಜಪ್ರಣವಪೀಠ ದಲ್ಲಿಯೂ ಅನಾಹತಪ್ರಣವಪೀಠದಲ್ಲಿಯೂ ನಿರತಿಶಯಸುಖವನ್ನು ಪಸರಿಸುತ್ತಿರ್ದ ಎಲೈ ಪರಮೇಶ್ವರನೇ! ತ್ವಂ—ನೀನು, ನಃ—'ಇಷ್ಟ ಮೂರ್ಜಂ ತಪಸಾನುಯಚ್ಛತೇ ಪ್ರಾಣೇಷ್ವಂತರ್ಮನಸೋ ಲಿಂಗ ಮಾಹುಃ' ಎಂದು ಅಥರ್ವಶಿರೋಮಂತ್ರಮುಂಟಾಗಿ, 'ಇಷ್ಟಲಿಂಗಂ ಪ್ರಾಣಲಿಂಗಮೇಕೀಕೃತ್ಯಾರ್ಚನಂ ಪರಂ' ಎಂದು ವಾತುಲೋತ್ತರ ತಂತ್ರಮುಂಟಾಗಿ ದೇಶಿಕೋಪದೇಶದಿಂದೆ ಶಿಕ್ಷಿತರಾದ ನಮ್ಮ ಕರ ಕಮಲದಲ್ಲಿಯೂ ಹೃದಯಕಮಲದಲ್ಲಿಯೂ, ಅಭಿಚಾಕಶೀಹಿ—ಅಭಿ ಮುಖವಾಗಿ ಪ್ರಕಾಶಿಸು."

ಈರೀತಿಯಾಗಿ ಈ ಮಂತ್ರಾರ್ಥವನ್ನು ವಿವರಿಸಿರುವರು.

ಯಜುರ್ವೇದದಲ್ಲಿ—

ನಿಧನಪತಯೇ ನಮಃ—ನಿಧನಪತಾಂತಿಕಾಯ ನಮಃ। ಊರ್ಧ್ವಾಯ ನಮಃ—ಊರ್ಧ್ವಲಿಂಗಾಯ ನಮಃ। ಹಿರ ಣ್ಯಾಯ ನಮಃ—ಹಿರಣ್ಯಲಿಂಗಾಯ ನಮಃ। ಸುವರ್ಣಾಯ ನಮಃ—ಸುವರ್ಣಲಿಂಗಾಯ ನಮಃ। ದಿವ್ಯಾಯ ನಮಃ— ದಿವ್ಯಲಿಂಗಾಯ ನಮಃ। ಭವಾಯ ನಮಃ—ಭವಲಿಂಗಾಯ ನಮಃ। ಶರ್ವಾಯ ನಮಃ—ಶರ್ವಲಿಂಗಾಯ ನಮಃ। ಶಿವಾಯ ನಮಃ—ಶಿವಲಿಂಗಾಯ ನಮಃ। ಜ್ವಲಾಯ ನಮಃ ಜ್ವಲಲಿಂಗಾಯ ನಮಃ। ಆತ್ಮಾಯ ನಮಃ—ಆತ್ಮಲಿಂಗಾಯ ನಮಃ। ಪರಮಾಯ ನಮಃ—ಪರಮಲಿಂಗಾಯ ನಮಃ।

ಏತತ್ಸೋಽಮಸ್ಯ ಸೂರ್ಯಸ್ಯ ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ ||

(ತೈತ್ತಿರೀಯಾರಣ್ಯಕ—ಪ್ರಪಾಠಕ ೧೦. ಅನುವಾಕ ೧೬)

ಈ ಮಂತ್ರವು ಉಕ್ತವಾಗಿದೆ. ಈ ಮಂತ್ರದಲ್ಲಿ ಲಿಂಗಧಾರಣವು ಅತ್ಯುತ್ತಮರೀತಿಯಿಂದ ಪ್ರತಿಪಾದಿಸಲ್ಪಟ್ಟಿರುತ್ತದೆ.

"ಸೂರ್ಯಸ್ಯ—ಸೂರ್ಯಮಂಡಲಾಂತರ್ವರ್ತಿಯಾದ, ಸೋಮಸ್ಯ—ಉಮಾಸಹಿತನಾದ ಪರಶಿವನ, ಪವಿತ್ರಂ—ಪರಮಪವಿತ್ರವಾದ, ಸರ್ವಲಿಂಗಂ—ಮೇಲೆ ತೋರಿಸಲ್ಪಟ್ಟಿರುವ ದಶವಿಧಲಿಂಗಾತ್ಮಕವಾದ, ಏತತ್ ಪಾಣಿಮಂತ್ರಂ—ಈ ಕರಕಮಲದಲ್ಲಿ ರಾರಾಜಿಸುವ ಶಿವಲಿಂಗವನ್ನು, ಸ್ಥಾಪಯತಿ—ಶ್ರೀಗುರುವು ಶಿವದೀಕ್ಷಾಸಮಯದಲ್ಲಿ ಸ್ಥಾಪಿಸುತ್ತಾನೆ."

ಎಂದು ಈ ಮಂತ್ರದ ಅರ್ಥವಾಗುತ್ತದೆ. ಈ ಮಂತ್ರಾರ್ಥವನ್ನು ಲಿಂಗಧಾರಣಚಂದ್ರಿಕಾಕಾರರಾದ ಶ್ರೀನಂದಿಕೇಶ್ವರಶಿವಾಚಾರ್ಯರೂ, ಲಿಂಗಧಾರಣದೀಪಿಕಾಕಾರರಾದ ಶ್ರೀಭವಾನೀಶಂಕರಾರಾಧ್ಯರೂ ತಮ್ಮ ತಮ್ಮ ಗ್ರಂಥಗಳಲ್ಲಿ ಬಹುವಿಶದವಾಗಿ ಪ್ರತಿಪಾದಿಸಿರುತ್ತಾರೆ. ಅಭಿಲಾಷಿಗಳು ಶಂಕಾಸಮಾಧಾನಪೂರ್ವಕವಾಗಿ ಪ್ರತಿಪಾದಿಸಲ್ಪಟ್ಟಿರುವ ಈ ಅಮೂಲ್ಯವಿಷಯವನ್ನು ಮುದ್ರಿತವಾಗಿರುವ ಆಯಾ ಗ್ರಂಥಗಳಲ್ಲಿ ನೋಡಿಕೊಳ್ಳಬಹುದು.

ಈ ಮಂತ್ರಾರ್ಥವು ಲಿಂಗಪುರಾಣದ ೨೧ ನೆಯ ಅಧ್ಯಾಯದಲ್ಲಿ ವ್ಯಾಸಮಹರ್ಷಿಗಳಿಂದ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು.

ಯಜುರಪ್ಯಾಹ ಸರ್ವಂ ವೈ ಲಿಂಗಂ ಸ್ಥಾಪಯತೀತಿ ಚ ||೧೦೩||

ತಸ್ಮಾದ್ಧಾರ್ಯಂ ಮಹಾಲಿಂಗಂ ಪಾಣಿಮಂತ್ರೇತಿ ಮಂತ್ರತಃ ।
ಪಾಣೌ ಲಿಂಗಂ ವಿನಿಕ್ಷಿಪ್ಯ ದೀಕ್ಷಾಕಾಲೇ ಗುರುಃ ಶಿವಂ ॥೧೦೪॥

ಯೇನ ಸ್ತುವತಿ ತನ್ಮಂತ್ರಂ ಪಾಣಿಮಂತ್ರಂ ವದಂತಿ ಹಿ ।
ಪವಿತ್ರತ್ವಾನ್ಮಹೇಶಸ್ಯ ಶಿವಸ್ಯ ಪ್ರತಿಪಾದನಾತ್ ॥೧೦೫॥

ಪವಿತ್ರಕರಣಾತ್ಪುಂಸಾಂ ಪವಿತ್ರಮಿತಿ ಕಥ್ಯತೇ ।
ಅತಃ ಸರ್ವೇಷು ಕಾಲೇಷು ಧಾರಯೇಲ್ಲಿಂಗಮುತ್ತಮಂ ॥೧೦೬॥

ಗಚ್ಛಂಸ್ತಿಷ್ಠನ್ ಸ್ವಪನ್ ಜಾಗ್ರದುನ್ಮಿಷನ್ನಿಮಿಷನ್ನಪಿ ।
ಶುಚಿರ್ವಾಪ್ಯಶುಚಿರ್ವಾಪಿ ಲಿಂಗಂ ಸರ್ವತ್ರ ಧಾರಯೇತ್ ॥೧೦೭॥

ಲಿಂಗಧಾರೀ ಸದಾ ಶುದ್ಧೋ ನಿಜಲಿಂಗಂ ಮನೋಹರಂ ।
ಅರ್ಚಯನ್ ಗಂಧಪುಷ್ಪಾದ್ಯೈಃ ಕರಪೀಠೇ ಸಮಾಹಿತಃ ॥೧೦೮॥

(ಲಿಂ. ಪು. ಉ. ಭಾ. ಅ. ೨೧)

"ಸರ್ವಲಿಂಗಂ ಸ್ಥಾಪಯತಿ" ಎಂಬ ಯಜುರ್ವೇದಮಂತ್ರವು ಲಿಂಗಧಾರಣವನ್ನು ಬೋಧಿಸುತ್ತಿರುವುದರಿಂದ ಶಿವಲಿಂಗವನ್ನು ಧರಿಸಬೇಕೆಂದೂ, ಶಿವದೀಕ್ಷಾಸಮಯದಲ್ಲಿ ಶ್ರೀಗುರುವು ಶಿಷ್ಯನ ಹಸ್ತದಲ್ಲಿ ಶಿವಲಿಂಗವನ್ನಿಟ್ಟು ಇದರ ರಹಸ್ಯವನ್ನು ತಿಳುಹಿಸುವುದರಿಂದ ಇದು "ಪಾಣಿಮಂತ್ರ"ವೆಂದೆನಿಸಿಕೊಳ್ಳುವುದೆಂದೂ, ಇದು ಪವಿತ್ರವಾದ ಶಿವತತ್ತ್ವವನ್ನು ಪ್ರತಿಪಾದಿಸುತ್ತಿರುವುದರಿಂದ ಪವಿತ್ರವೆನಿಸಿಕೊಳ್ಳುವುದೆಂದೂ, ಆದುದರಿಂದ ಮೋಕ್ಷಾಪೇಕ್ಷಿಯು ಜಾಗ್ರತ್ಸ್ವಪ್ನಾದ್ಯವಸ್ಥೆಗಳಲ್ಲಿಯೂ ಶುಚ್ಯಶುಚ್ಯಾದಿಸರ್ವಕಾಲಗಳಲ್ಲಿಯೂ ಈ ಶಿವಲಿಂಗವನ್ನು ಒಂದು ನಿಮಿಷವೂ ಎಡಬಿಡದೆ ಧರಿಸಿ ಪೂಜಿಸಬೇಕೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಯಜುರ್ವೇದದಲ್ಲಿ—

ಯಶ್ಛಂದಸಾಮೃಷಭೋ ವಿಶ್ವರೂಪಃ । ಛಂದೋಭ್ಯೋಽಧ್ಯಮೃತಾತ್ ಸಂಬಭೂವ । ಸ ಮೇಂದ್ರೋ ಮೇಧಯಾ ಸ್ಪೃಣೋತು । ಅಮೃತಸ್ಯ ದೇವಧಾರಣೋ ಭೂಯಾಸಂ । ಶರೀರಂ ಮೇ ವಿಚರ್ಷಣಂ । ಜಿಹ್ವಾ ಮೇ ಮಧುಮತ್ತಮಾ । ಕರ್ಣಾಭ್ಯಾಂ ಭೂರಿ ವಿಶ್ರುವಂ । ಬ್ರಹ್ಮಣಃ ಕೋಶೋಽಸಿ ಮೇಧಯಾ ಪಿಹಿತಃ । ಶ್ರುತಂ ಮೇ ಗೋಪಾಯ ॥

(ತೈತ್ತಿರೀಯ ಪ್ರಥಮವಲ್ಲಿ. ಅನುವಾಕ ೪)

ಈ ಮಂತ್ರವು ಉಕ್ತವಾಗಿದೆ. ಈ ಮಂತ್ರಕ್ಕೆ ಕೈ॥ ಶಿವಕುಮಾರ ಮಿಶ್ರಪಂಡಿತರು ಲಿಂಗಧಾರಣಚಂದ್ರಿಕಾವ್ಯಾಖ್ಯಾನದಲ್ಲಿ (ಪುಟ ೧೦೬-೧೦೭) ವೇದವ್ಯಾಸಮಹರ್ಷಿಗಳ ಅಭಿಪ್ರಾಯಕ್ಕನುಸಾರವಾಗಿ ಅರ್ಥ ಮಾಡುತ್ತೇನೆಂದು ಅಂದುಕೊಂಡು, ಲಿಂಗಧಾರಣಪರವಾಗಿ ವ್ಯಾಖ್ಯಾನ ಮಾಡಿರುವರು. ಶ್ರೀ ನಂದಿಕೇಶ್ವರಶಿವಾಚಾರ್ಯರು ಈ ಮಂತ್ರವು ಕೇವಲ ಲಿಂಗಧಾರಣವನ್ನೇ ಬೋಧಿಸುವುದೆಂದು ಸಿದ್ಧಾಂತಗೊಳಿಸಿರುವರು.

ಯಜುರ್ವೇದದಲ್ಲಿ—

ನಮೋ ಬ್ರಹ್ಮಣೇ ಧಾರಣಂ ಮೇ ಅಸ್ತ್ವನಿರಾಕರಣಂ
ಧಾರಯಿತಾ ಭೂಯಾಸಂ ಕರ್ಣಯೋಃ ಶ್ರುತಂ
ಮಾಚ್ಯೋಢ್ವಂ ಮಮಾಮುಷ್ಯ ಓಂ ॥

(ತೈತ್ತಿರೀಯಾರಣ್ಯಕ —ಪ್ರಪಾಠಕ ೧೦. ಅನುವಾಕ ೯)

ಈ ಮಂತ್ರವು ಉಕ್ತವಾಗಿದೆ. ಈ ಮಂತ್ರವಾದರೂ ಕೇವಲ ಲಿಂಗಧಾರಣವನ್ನೇ ಬೋಧಿಸುತ್ತದೆ. ಇದೇ ರೀತಿಯಾಗಿ ಸಾವಿರಾರು ಶ್ರುತಿವಾಕ್ಯಗಳು ಲಿಂಗಧಾರಣವನ್ನು ಬೋಧಿಸುತ್ತಿರುವುವು.

ಈ ವಿಷಯದಲ್ಲಿ ಶ್ರೀಶಿವಪೂಜಾಶಿವಲಿಂಗಸ್ವಾಮಿಗಳೆಂಬ ಪ್ರಾಚೀನಪಂಡಿತರು " **ಶ್ರುತಿಸಾರಭಾಷ್ಯ** '' ಎಂಬ ಹೆಸರಿನಿಂದ ಒಂದು ಉದ್ಗ್ರಂಥವನ್ನೇ ರಚಿಸಿದ್ದಾರೆ. ನಿಜತತ್ತ್ವಕಾಂಕ್ಷಿಗಳು ಮುದ್ರಿತ ವಾದ ಆ ಗ್ರಂಥವನ್ನು ಸಂಪೂರ್ಣವಾಗಿ ಓದಿನೋಡಿ, ಲಿಂಗಧಾರಣದ ಸನಾತನತ್ವವನ್ನೂ ಪ್ರಾಶಸ್ತ್ಯವನ್ನೂ ತಿಳಿದುಕೊಳ್ಳಬಹುದು.

ಇಲ್ಲಿಯವರೆಗೆ ನಾನು ಪ್ರತಿಪಾದಿಸಿದ ವೇದೋಕ್ತವಾದ ಲಿಂಗ ಧಾರಣವನ್ನು ಕೇಳಿ ಸಭಿಕರು ಸಂತುಷ್ಟಚಿತ್ತರಾಗಿರಬಹುದೆಂದು ಭಾವಿಸುತ್ತೇನೆ. ಇನ್ನು ವೇದಶಾಖೆಗಳೆನಿಸಿರುವ ಉಪನಿಷತ್ತುಗಳಲ್ಲಿ ವರ್ಣಿತವಾದ ಲಿಂಗಧಾರಣವಿಷಯವನ್ನು ವಿಮರ್ಶಿಸುವೆನು.

ಉಪನಿಷತ್ತುಗಳು ವೇದಶಾಖೆಗಳ ಒಂದು ಭಾಗವೆನಿಸುವುವು. ವೃಕ್ಷದಲ್ಲಿ ಅನೇಕಶಾಖೆಗಳಿರುವಂತೆ, ಋಗಾದಿಚತುರ್ವೇದಗಳೆಂಬ ಮಹಾವೃಕ್ಷದಲ್ಲಿ ಅನೇಕಾನೇಕಶಾಖೆಗಳಿರುವುವು. ಇಂತಹ ಶಾಖೆಗಳ ಭಾಗಗಳೇ ಸಂಹಿತಾ-ಬ್ರಾಹ್ಮಣ-ಆರಣ್ಯಕ-ಉಪನಿಷತ್ ಇತ್ಯಾದಿ ನಾಮಗಳಿಂದ ವಿಂಗಡಿಸಲ್ಪಟ್ಟಿರುವುವು. ವೇದವು " ಋಕ್-ಯಜುಃ-ಸಾಮ-ಅಥರ್ವ " ಎಂದು ನಾಲ್ಕು ಭಾಗವಾಗಿರುವುದು. ಋಗ್ವೇದವು ೨೧ ಶಾಖೆಗಳಿಂದಲೂ, ಯಜುರ್ವೇದವು ೧೦೯ ಶಾಖೆಗಳಿಂದಲೂ, ಸಾಮವೇದವು ೧೦೦೦ ಶಾಖೆಗಳಿಂದಲೂ, ಅಥರ್ವವೇದವು ೫೦ ಶಾಖೆಗಳಿಂದಲೂ ಪರಿಶೋಭಿಸುತ್ತಿರುವುವು. ಈ ನಾಲ್ಕೂವೇದ ಗಳಿಗೆ ಒಟ್ಟು ೧೧೮೦ ಶಾಖೆಗಳಿರುತ್ತವೆ. ಇವೇ ಉಪನಿಷದಾದಿನಾಮ ಗಳಿಂದ ಜಗತ್ತಿನಲ್ಲಿ ಮೆರೆಯುತ್ತಲಿವೆ. ಚತುರ್ವೇದಗಳಲ್ಲಿರುವ ೧೧೮೦ ಶಾಖೆಗಳಲ್ಲಿ ಶಾಖೆಗೆ ಒಂದೊಂದರಂತೆ ೧೧೮೦ ಉಪನಿಷತ್ತುಗಳಿರು ವುವು. ಇಷ್ಟು ಉಪನಿಷತ್ತುಗಳಿದ್ದರೂ, ಈಗ ೧೦೮ ಉಪನಿಷತ್ತುಗಳು

ಮಾತ್ರ ದೊರೆತಿರುತ್ತವೆ. ಅವುಗಳನ್ನು ಒಟ್ಟುಗೂಡಿಸಿ ಮುಂಬಯಿ ನಗರದಲ್ಲಿರುವ ನಿರ್ಣಯಸಾಗರಮುದ್ರಣಾಲಯದ ಅಧಿಕಾರಿಗಳು "ಅಷ್ಟೋತ್ತರಶತೋಪನಿಷದಃ" ಎಂಬ ಹೆಸರಿನಿಂದ ಮುದ್ರಣಮಾಡಿ ಸಿರುವರು. ಇನ್ನೂ ಸಾವಿರಕ್ಕೆ ಮೇಲ್ಪಟ್ಟು ಉಪನಿಷತ್ತುಗಳು ದೊರೆತೇ ಇರುವುದಿಲ್ಲ. ಹಿಂದೂಮತಕ್ಕೆ ಪರಮಶತ್ರುಗಳಾಗಿದ್ದ ಔರಂಗಜೇಬ ಮೊದಲಾದ ಮೊಗಲ್‌ಚಕ್ರವರ್ತಿಗಳ ಆಳ್ವಿಕೆಯ ಕಾಲದಲ್ಲಿ ಇವು ನಾಶಮಾಡಲ್ಪಟ್ಟವೆಂದು ಪ್ರಾಮಾಣಿಕರು ನುಡಿಯುತ್ತಿರುವರು. ಇದು ಕಾಲಮಹಿಮೆಯೇ ಎಂದು ಹೇಳಬೇಕಾಗಿದೆ. ಕಾಲಾಯ ತಸ್ಮೈ ನಮಃ! ಹೀಗೆ ಸನಾತನಭಾರತಧರ್ಮವು ಪರರಾಜರ ದಬ್ಬಾಳಿಕೆಗೊಳಗಾಗಿ ನಾನಾರೀತಿಯಿಂದ ಸಂಕಟದಲ್ಲಿ ಬಿದ್ದು ಬೆಂಡಾಗಿಹೋಗಿರುವುದು. ಪರಮಪುನೀತವಾದೀ ಭಾರತಧರ್ಮಜ್ಯೋತಿಯನ್ನು ಜಗದೀಶ್ವರನೇ ಪ್ರಕಾಶಗೊಳಿಸಬೇಕಾಗಿದೆ. ಅಸ್ತು! ಪರರಾಜರು ಮತದ್ವೇಷದಿಂದ ಭಾರತಧರ್ಮಗ್ರಂಥಗಳನ್ನು ನಿರ್ನಾಮಮಾಡಿಬಿಡಬೇಕೆಂದು ಶಪಥ ಮಾಡಿ ಕಾರ್ಯವನ್ನು ಮಾಡಿದರೂ ಸಹ, ಆ ಜಗನ್ನಿಯಾಮಕನ ಕೃಪಾವಿಶೇಷದಿಂದ ಈಗಲೂ ಅಲ್ಲಲ್ಲಿ ಪ್ರಾಚೀನಗ್ರಂಥರತ್ನಗಳು ದೊರೆಯುತ್ತಿರುವುವು. ಇದು ಭಾರತೀಯರ ಸುದೈವವೆಂದೇ ಭಾವಿಸಬೇಕಾಗಿದೆ. ಭಾರತೀಯರಲ್ಲಿ ಶೈವ-ವೀರಶೈವ-ಸ್ಮಾರ್ತ-ವೈಷ್ಣವ-ಶ್ರೀವೈಷ್ಣವ ಮೊದಲಾದ ಅನೇಕಮತಗಳಿರುತ್ತವೆ. ಸ್ಮಾರ್ತ-ವೈಷ್ಣವಾದಿ ಮತೀಯರು ಅತ್ಯಂತಕಷ್ಟಪಟ್ಟು ಧನವ್ಯಯವನ್ನು ಮಾಡಿ, ತಮ್ಮ ತಮ್ಮ ಪ್ರಾಚೀನಮತಗ್ರಂಥಗಳನ್ನು ಸಂಗ್ರಹಿಸುತ್ತ, ಸರ್ವತೋಮುಖವಾಗಿ ವಿರಾಜಿಸಹತ್ತಿದ್ದಾರೆ. ವೀರಶೈವರುಮಾತ್ರ ಈ ತತ್ತ್ವಕ್ಕೆ ಶರಣುಹೊಡೆದು ಕೇವಲ ಉದರಪೋಷಣೋದ್ಯೋಗದಲ್ಲಿ ತೊಡಗಿರುವುದನ್ನು ನೋಡಿದರೆ ಪರಮವ್ಯಸನವೆನಿಸುತ್ತದೆ. ಇವರಾದರೂ

ಅನ್ಯಮತೀಯರಂತೆ ಕಷ್ಟಪಟ್ಟು ಗ್ರಂಥಶೋಧನಕಾರ್ಯವನ್ನು ಕೈಗೊಂಡರೆ, ಪ್ರಾಚೀನಗ್ರಂಥಗಳು ದೊರೆತೇ ದೊರೆಯುವುವೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಜಗದೀಶ್ವರನು ಇವರಲ್ಲಿ ಇಂತಹ ಸದ್ಬುದ್ಧಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ನಾನು ಕಾಶೀಕ್ಷೇತ್ರದಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದಾಗ ನಮ್ಮ ಮತಗ್ರಂಥಗಳನ್ನು ವಿಶೇಷವಾಗಿ ನೋಡುತ್ತಿದ್ದೆನು. ಆಗ ಆ ಗ್ರಂಥಗಳಲ್ಲಿ ಕೆಲವು ಶಿವತತ್ತ್ವಪ್ರತಿಪಾದಕೋಪನಿಷತ್ತುಗಳ ಹೆಸರುಗಳು ನನ್ನ ದೃಷ್ಟಿಗೆ ಬಿದ್ದುವು. ಸದ್ಯಃ ಮುದ್ರಿತವಾಗಿರುವ ಉಪನಿಷದ್ಗ್ರಂಥದಲ್ಲಿ ಈ ಹೆಸರುಗಳು ಕಂಡುಬರುವುದಿಲ್ಲ. ಕೇವಲ ಶಿವತತ್ತ್ವಪ್ರತಿಪಾದಕವಾದ ಈ ಉಪನಿಷತ್ತುಗಳು ಎಲ್ಲಿ ಸಿಗಬಹುದು? ಯಾವ ಕಾಲಕ್ಕೆ ಸಿಗಬಹುದು? ಈ ಜನ್ಮದಲ್ಲಿ ಈ ಉಪನಿಷತ್ತುಗಳನ್ನು ನೋಡಲು ಸಾಧ್ಯವಾಗಬಹುದೇ? ಎಂದು ನಾನು ಯಾವಾಗಲೂ ಆಲೋಚನಾಪರನಾಗಿಯೇ ಇದ್ದೆನು. ಈ ಯೋಚನೆಯಲ್ಲಿಯೇ ಕೆಲವು ವರ್ಷಗಳು ಕಳೆದುಹೋದವು. ನಾನು ಕಾಶೀಕ್ಷೇತ್ರವನ್ನು ಬಿಟ್ಟು ಸ್ವದೇಶಕ್ಕೆ ಬಂದ ಕೆಲವು ದಿವಸಗಳ ಮೇಲೆ, ಯಾವುದೋ ಒಂದು ಕಾರ್ಯನಿಮಿತ್ತವಾಗಿ ಮೈಸೂರುರಾಜಧಾನಿಗೆ ಬಂದೆನು. ಮೈಸೂರು ಗವರ್ನಮೆಂಟಿನವರಿಂದ ಸ್ಥಾಪಿಸಲ್ಪಟ್ಟಿರುವ ಜಗತ್ಪ್ರಸಿದ್ಧವಾದ "ಓರಿಯಂಟಲ್ ಲೈಬ್ರರಿ" ಗೆ ಹೋಗಿ ಕೈಬರವಣಿಗೆಯಿಂದ ಕೂಡಿದ ಪ್ರಾಚೀನಗ್ರಂಥಗಳ ಹೆಸರುಗಳನ್ನು ಬರೆದು ಮುದ್ರಿಸಿರುವ ಸೂಚೀಪುಸ್ತಕವನ್ನು ತೆಗೆದುಕೊಂಡು, ಒಂದು ಅಕ್ಷರವನ್ನೂ ಸಹ ಬಿಡದೆ ಓದಿನೋಡಿದೆನು. ಆಗ ಜಗದೀಶ್ವರನ ಕೃಪೆಯಾಯಿತು. ಉಪನಿಷದ್ಗ್ರಂಥಗಳ ಮಾಲಿಕೆಯಲ್ಲಿ ನಾನು ಮೊದಲು ನಮ್ಮ ಮತಗ್ರಂಥಗಳಲ್ಲಿ ನೋಡಿದ ಉಪನಿಷತ್ತುಗಳ ಹೆಸರುಗಳು ಕಂಡುಬಂದುವು. ಆಗ

ನನ್ನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಕೂಡಲೇ ಆ ಉಪನಿಷತ್ತುಗಳ ಕೈಬರಹದ ಪ್ರತಿಯನ್ನು ಪುಸ್ತಕಾಲಯಾಧಿಕಾರಿಗಳಿಂದ ತೆಗೆದುಕೊಂಡು ನೋಡಿ ಆನಂದತುಂದಿಲನಾಗಿ ಅವುಗಳನ್ನು ಬರೆದುಕೊಂಡೆನು. ಅವುಗಳಲ್ಲಿ—**ವೇದಾಂತಸಾರೋಪನಿಷತ್-ಭಕ್ತಿಯೋಗೋಪನಿಷತ್--ನಿರ್ಲೇಪೋಪನಿಷತ್--ಪಿಪ್ಪಲೋಪನಿಷತ್-ಪ್ರಸಾದಜಾಬಾಲೋಪನಿಷತ್-ಚಿದಂಬರೋಪನಿಷತ್-ಪ್ರಣವಶರೀರೋಪನಿಷತ್-ಶ್ರುತಿರಹಸ್ಯೋಪನಿಷತ್-ಸಿದ್ಧಾಂತಶಿಖೋಪನಿಷತ್** ಎಂಬ ಉಪನಿಷತ್ತುಗಳು ಮುಖ್ಯವಾಗಿದ್ದು, ಅವು ಕೇವಲ ಶಿವತತ್ತ್ವವನ್ನೇ ಬೀರುತ್ತಿರುವವು. ಅಲ್ಲದೆ ಮದ್ರಾಸ್ ಗವರ್ನಮೆಂಟ್ ಓರಿಯಂಟಲ್ ಲೈಬ್ರರಿಯಲ್ಲಿ "**ಲಿಂಗಧಾರಣೋಪನಿಷತ್**" ಎಂಬ ಉಪನಿಷತ್ತು ದೊರೆಯುವುದು. ಇದಲ್ಲದೆ ಯಜುರ್ವೇದಶಾಖೆಯಾಗಿರುವ "**ವೀರಲೈಂಗೋಪನಿಷತ್**" ಎಂಬ ಹೆಸರಿನ ಸರ್ವೋತ್ತಮವಾದ ಉಪನಿಷತ್ತು ಸಹ ದೊರೆತಿರುವುದು. ಇನ್ನೂ ಹೆಚ್ಚಿಗೆ ಶೋಧಿಸಿ ಶಿವತತ್ತ್ವಪ್ರತಿಪಾದಕವಾದ ಉಪನಿಷತ್ತುಗಳನ್ನೆಲ್ಲ ಒಟ್ಟುಗೂಡಿಸಿ, ಒಂದು ಗ್ರಂಥವನ್ನು ಮುದ್ರಣಮಾಡಿಸಬೇಕೆಂಬ ಸಂಕಲ್ಪವಿರುವುದು. ಈ ಮಹಾಸಂಕಲ್ಪವನ್ನು ಶ್ರೀಜಗದೀಶ್ವರನೇ ನೆರವೇರಿಸಬೇಕಾಗಿದೆ. ಹೆಚ್ಚಾಗಿ ಶೋಧಿಸುತ್ತ ಹೋದರೆ ಎಲ್ಲಿಯಾದರೂ ಇಂಥ ಅಮೂಲ್ಯ ಗ್ರಂಥಗಳು ಭಗವತ್ಕೃಪೆಯಿಂದ ದೊರೆಯುವುವೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಚತುರ್ವೇದಾಂತರ್ಗತವಾದ ರೇಣುಕಶಾಖಾ-ದಾರುಕಶಾಖಾ-ಘಂಟಾಕರ್ಣಶಾಖಾ—ಧೇನುಕರ್ಣಶಾಖಾ—ವಿಶ್ವಕರ್ಣ ಶಾಖಾದಿಗ್ರಂಥಗಳು ನಮ್ಮ ಮತದ ದುರದೃಷ್ಟದಿಂದ ಈ ವರೆಗೂ ದೊರೆತಿರುವುದಿಲ್ಲ. ಇವುಗಳ ಶೋಧನೆಯ ಬಗ್ಗೆ ಸರ್ವರೂ ಮನಮುಟ್ಟಿ ಕೆಲಸಮಾಡಬೇಕಾಗಿದೆ. ಈ ರೀತಿಯಾಗಿ ಕಾರ್ಯವನ್ನು ಮಾಡಿದ್ದಾದರೆ

ಇವುಗಳು ಇಂದಿಲ್ಲ-ನಾಳೆಯಾದರೂ ನಮ್ಮ ಹಸ್ತಗತವಾಗುವುವೆಂದು ನಿಸ್ಸಂಶಯುವಾಗಿ ಹೇಳಬಹುದು. ಇರಲಿ; ಸನಾತನಭಾರತಧರ್ಮವು ವೇದಗಳನ್ನು ಅವಲಂಬಿಸಿರುವುದರಿಂದ ಭಾರತೀಯರೆಲ್ಲರೂ ಒಂದಾಗಿ ವೇದಶಾಖೆಗಳೆನಿಸಿದ ಸಕಲೋಪನಿಷತ್ತುಗಳನ್ನೂ ಸಂಗ್ರಹಿಸಿ, ವೇದಪ್ರಾಣಪ್ರತಿಷ್ಠಾಪಕರೆಂಬ ಬಿರುದನ್ನು ಧರಿಸಿ ಮೆರೆಯಬೇಕೆಂದು ಹಾರೈಸುತ್ತೇನೆ. ಅಸ್ತು !

ಲೋಕೈಕಮಾನ್ಯವಾದ ಉಪನಿಷತ್ತುಗಳಲ್ಲಿ ಲಿಂಗಧಾರಣ ವಿಷಯವು ಯಾವರೀತಿಯಾಗಿ ಪ್ರತಿಪಾದಿಸಲ್ಪಟ್ಟಿರುವುದೆಂಬ ವಿಷಯುವನ್ನು ಆಯಾ ಉಪನಿಷನ್ಮಂತ್ರಗಳ ಉದಾಹರಣಪೂರ್ವಕವಾಗಿ ವಿಮರ್ಶಿಸುವೆನು.

ವೇದಾಂತಸಾರೋಪನಿಷತ್ತಿನಲ್ಲಿ—

ಅಥಾಶ್ವಲಾಯನೋ ಭಗವಂತಂ ಪರಮೇಷ್ಠಿನಂ ಪರಿಸಮೇತ್ಯೋವಾಚ ವಿಮುಕ್ತಿಂ ಸದ್ಯೋಮುಕ್ತಿಕರಂ ಬ್ರೂಹೀತಿ । ಸಹೋವಾಚ ಯಾಜ್ಞವಲ್ಕ್ಯಃ ಪರಮೇಷ್ಠೀ ಶಿವೋಽದ್ವೈತಶ್ಚತುರ್ಥಃ ಶಾಂತಃ ಸ ಏವ ಧ್ಯೇಯಃ ಸ ಏವ ಪೂಜ್ಯಃ । ತದ್ಧ್ಯಾನಪೂಜನಾದವಿಮುಕ್ತಾ ಭವಂತ್ಯಯಂ ವಿಶೇಷೋಽತ್ಯಾಶ್ರಮಿಣಃ । ಸಾಕ್ಷಾದಮೃತೀ ಭೂತ್ವಾ ಮೋಕ್ಷೀಭವತಿ । ನ ಕರ್ಮಣಾ ನ ಪ್ರಜಯಾ ಧನೇನ ಶಿವಂ ಪ್ರಪೂಜ್ಯ ಅಮೃತತ್ವಮಾಪ್ನುಯುಃ । ಪರೇಣ ಶುದ್ಧೇ ಹೃದಯಾಬ್ಜಮಧ್ಯೇ ಲಿಂಗಂ ಧೃತ್ವಾ ಜ್ಯೋತಿಷಿ ಸಂವಿಶಂತಿ ॥ ಅತ್ಯಾಶ್ರಮಸ್ಥಾಃ ಪರಿಮುಚ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ । ಲಿಂಗಸ್ವರೂಪಂ ಧೃತಲಿಂಗಭಾವಮಂತರ್ಬಹಿಃ

ಸ್ವಸ್ಯ ಚ ಸಾಮರಸ್ಯಂ । ಜ್ಞಾತ್ವಾ ದೇವಂ ಶುದ್ಧಭಾವೈರುಪಾಸ್ಯ ಮುಪಾಸ್ಯ ಧೀರಾಃ ಪರಿಮುಚ್ಯಂತಿ ಪಾಶಾತ್ ॥...................... ತದೇವಾಗ್ನಿಶ್ಚ ತದ್ವಾತಸ್ತತ್ಸೂರ್ಯಸ್ತದು ಚಂದ್ರಮಾಃ । ತದೇವ ಶುಕ್ರಸ್ಸರ್ವೇ ಚ ಬೃಹಸ್ಪತಿಮುಖಾಮರಾಃ ॥ ಪ್ರಾಪ್ಯೋಪಾಸ್ಯ ಶಿವಂ ಸಾಂಬಂ ಬ್ರಹ್ಮಸ್ವಹೃದಯಾಂಬುಜೇ। ಲಿಂಗಾಂಗಸಾಮ ರಸ್ಯಾಚ್ಚ ಶರೀರೇ ಲಿಂಗಧಾರಣಂ ॥ ನಿಯಮೇನೈವ ಕೃತ್ವಾ ತೇ ಮುಕ್ತಾಃ ಸಂಸಾರಸಾಗರಾತ್ । ವೇದಾಂತಸಾರಸರ್ವಸ್ವ ಮನೇನೈವ ವಶೀಕೃತಂ ॥

ಭಕ್ತಿಯೋಗೋಪನಿಷತ್ತಿನಲ್ಲಿ—

ಅಥ ಪರಮಶಿವಲಿಂಗಾಂಗಸಾಮರಸ್ಯಭಕ್ತಿಯೋಗಂ ವ್ಯಾಖ್ಯಾಸ್ಯಾಮಃ ।......................................ಬಹುಜನ್ಮಾಂತರೇಷು ಯೋಗಸಿದ್ಧಾನಾಂ ಪರಮಶಿವಲಿಂಗಾಂಗಸಾಮರಸ್ಯವಿವಿದಿ ಷೂಣಾಮಿಂದ್ರಿಯವ್ಯವಸ್ಥಾ ಸರ್ವವೇದಾಂತಸಿದ್ಧಾ । ಜನ್ಮಾಂ ತರಸಂಸ್ಕೃತಾನಾಮೇವ ತದಧಿಕಾರಾತ್ತತ್ರ ಭಕ್ತಿಯೋಗಃ । ಶಿವಃ ಪ್ರಾಣಃ ಶಿವಭಕ್ತಸ್ಯ ಸೇವಾ ಶಿವಪ್ರಸಂಗೇ ಮತಿರಸ್ಯ ಸರ್ವದಾ । ಶಿವಪ್ರಸಾದಸ್ಯ ಧೃತಿರ್ನಿರಂತರಂ ಶಿವಾದನ್ಯದ್ದ್ವೈವ ವಿಚಿಂತನಂ ನ ॥ ನ ಶೈವಮಂತ್ರಾದಪರೋಽಸ್ತಿ ಮಂತ್ರೋ ಭಸ್ಮಸ್ನಾನಂ ನಿತ್ಯತೃಪ್ತಿರ್ಹೃದಂತಃ । ರುದ್ರಾಕ್ಷಾಣಾಂ ಧಾರಣಂ ರುದ್ರಮಂತ್ರಃ ಪ್ರಕೀರ್ತನೀಯಶ್ಚಗುರೌ ಪ್ರಣಾಮಃ॥

ನಿರ್ಲೇಪೋಪನಿಷತ್ತಿನಲ್ಲಿ—

ಭಸ್ಮಾಲೇಪಃ ಸರ್ವಗಾತ್ರೇಷು ನಿತ್ಯಂ ರುದ್ರಾಕ್ಷಾಣಾಂ ಧಾರಣಂ ಲಿಂಗಪೂಜಾ । ಪಂಚಾಕ್ಷರ್ಯಾಶ್ಚ ಜಪಶ್ಚಿತ್ತವೃತ್ತ್ಯಾ

ರುದ್ರಾಧ್ಯಾಯಃ ಪಂಚಕೃತ್ಯಂ ನ ಚಾನ್ಯತ್ ॥ ಲಿಂಗಂ ಸತ್ಯಂ ನಿಷ್ಕಲಂ ಬ್ರಹ್ಮರೂಪಂ ಧಾರ್ಯಂ ಪೂಜ್ಯಂ ಹೃದಯೇ ಜ್ಯೋತಿರಾದ್ಯಂ । ಸತ್ತಾಮಾತ್ರಂ ವಾಙ್ಮನೋಽತೀತಮೇತತ್ ಪಂಚಾತ್ಮಕಂ ಭಾಸತೇ ಯೇನ ಮುಕ್ತಃ ॥

ಚಿದಂಬರೋಪನಿಷತ್ತಿನಲ್ಲಿ—

ಶಿವೇ ಭಕ್ತಿರ್ಜಾಯತೇ ಪುಣ್ಯಶೇಷಾತ್ ಭಕ್ತಿರ್ಮೂಲಂ ಸರ್ವಸಂಸಾರಮುಕ್ತೇಃ । ಗುರೂಪದೇಶಾದ್ವಿದಿತಾತ್ಮತತ್ತ್ವಾಃ ಶಿವಸ್ವರೂಪಂ ಪ್ರಭಜಂತಿ ಸಂತಃ ॥ ತತ್ಸಾಧನಾನೀಹ ಬಹೂನಿ ಸಂತಿ ತತ್ರಾದ್ಯಃ ಸ್ಯಾನ್ಮಂತ್ರರಾಜಃ ಪುರಾಣಃ । ಪಂಚಾಕ್ಷರಃ ಸರ್ವದೇವರ್ಷಿಸೇವ್ಯಸ್ತಸ್ಮಿಂಶ್ಚೈತಜ್ಜಗದಾಸ್ತೇ ವಿಲೀನಂ ॥

....

ಅಂತರ್ಲಿಂಗಂ ಜ್ಯೋತಿಷಾ ಸಂವಿಭಾತಂ ಬಾಹ್ಯಂ ಲಿಂಗಂ ಹೃದಯೇ ಸನ್ನಿವಿಷ್ಟಂ । ಶಂಭುಃ ಸಾಕ್ಷಾದದ್ವಯಾತ್ಮಾ ಸ ಏವ ರಹಸ್ಯಮೇತನ್ನ ವಿದಂತಿ ಲೋಕಾಃ ॥

ಸಿದ್ಧಾಂತಶಿಖೋಪನಿಷತ್ತಿನಲ್ಲಿ—

ಸದ್ಯೋಜಾತಾದ್ಬ್ರಾಹ್ಮಣಾಃ ಸಂಬಭೂವುಃ ವಾಮದೇವಾತ್ ಕ್ಷತ್ರಿಯಾ ವಿಶಶ್ಚಾಘೋರಾಚ್ಛೂದ್ರಾಸ್ತತ್ಪುರುಷಾತ್ ಶಿವಸ್ಯ ಪಂಚಾತ್ಮಕಸ್ಯ ಗಣಾ ಈಶಾನತಃ ಸ್ಯುಃ । ಅತ್ಯಾಶ್ರಮಿತ್ವಾದ್ಗಣವಂಶಜಾನಾಂ ಲಿಂಗಾಂಗಸಂಗಿನಾಂ ತತ್ರಾಜನ್ಮಾಂತ ದೀಕ್ಷಾ । ಯಥಾ ಗಂಗಾ ಶಿವಸಂಗಾತ್ತಥೈವ ನ ಸೂತಕಂ ನಾಪ್ಯಶುಚಿತ್ವಮೇಷಾಂ ॥ ಗಚ್ಛಂಸ್ತಿಷ್ಠನ್ನಿಮಿಷನ್ನುನ್ಮಿಷನ್ವಾ

ಸ್ವಪನ್ ಜಾಗ್ರಲ್ಲಿಂಗಧಾರೀ ಶುಚಿಃ ಸ್ಯಾತ್ । ಭುಂಜನ್ ಮೂತ್ರಪ್ರದ್ಯುತ್ಸೃಜನ್ವಾ ಕದಾಚಿನ್ನ ತತೋಚ್ಛಿಷ್ಟಂ ಭಜತೇ ಶುದ್ಧದೇಹೀ ॥ ಶೀರ್ಷೇ ಕಂಠೇ ವಕ್ಷಸಿ ಕಕ್ಷದೇಶೇ ಹಸ್ತೇ ಸರ್ವದಾ ಪ್ರಾಣಲಿಂಗಂ ಧಾರ್ಯಂ । ಯಥಾ ಸಂಪ್ರದಾಯಂ ಪುರಸ್ತಾದ್ಗುರೋರ್ವಿದಿತ್ವಾ ಹೃದಯಂ ಹಿ ಮುಖ್ಯಮುಕ್ತಂ ॥

ಲಿಂಗಧಾರಣೋಪನಿಷತ್ತಿನಲ್ಲಿ—

ಚತುರ್ವರ್ಣಾನಾಂ ಧಾರಣಂ ಕುರ್ಯಾತ್ । ಪಶು ಪಕ್ಷಿಮೃಗಕೀಟಕಾನಾಂ ಲಿಂಗಧಾರಣಮುಚ್ಯತೇ ।......ಪಿಂಡಾ ಜ್ಜನನಂ ತಜ್ಜನನಕಾಲೇ ಧಾರಣಮುಚ್ಯತೇ । ಸರ್ವಲಿಂಗಂ ಸ್ಥಾಪಯತಿ ಪಾಣಿಮಂತ್ರಂ ಪವಿತ್ರಂ, ಅಯಂ ಮೇ ಹಸ್ತೋ ಭಗವಾನಿತಿ ಧಾರಯೇತ್ ।..............................ಶ್ರೌತಾಶ್ರೌತೇಷು ಧಾರಣಂ। ವೇದೋಕ್ತವಿಧಿನಾ ಶ್ರೌತಂ। ಶ್ರುತಿರಹಿತಮಶ್ರೌತಂ। ಸರ್ವವರ್ಣೇಷು ಧಾರಣಂ । ಕೈವಲ್ಯಸಿದ್ಧಿರ್ಭವತಿ ॥

ಪ್ರಸಾದಜಾಬಾಲೋಪನಿಷತ್ತಿನಲ್ಲಿ—

ರುದ್ರಭುಕ್ತಂ ಭುಂಜೀತ ರುದ್ರಪೀತಂ ಪಿಬೇದ್ರುದ್ರಾ ಘ್ರಾತಂ ಜಿಘ್ರೇತ್ । ಯದ್ಯದ್ವಸ್ತು ಸಮರ್ಪಿತಂ ಲೈಂಗಂ ತತ್ತದೇವ ಭುಂಜೀತ ॥

ವೀರಲೈಂಗೋಪನಿಷತ್ತಿನಲ್ಲಿ—

ಆತ್ಮಲಿಂಗಂ ಯೋ ಧತ್ತೇ ಸೋಽಹಮೇವ। ತದಧೀಹಿ। ದ್ವಿವಿಧಂ ಲಿಂಗಂ ಇಷ್ಟಂ ಪ್ರಾಣಂಚ। ಯದಕ್ಷರಂ ಪರಂಬ್ರಹ್ಮ ತತ್ಸೂತ್ರಮಿತಿ ಧಾರಯೇತ್ । ಧಾರಣಾದಸ್ಯ ಸೂತ್ರಸ್ಯ

ನೋಚ್ಛಿಷ್ಟಂ ನಾಶುಚಿರ್ಭವೇತ್ ॥ ಪ್ರಾಣಲಿಂಗಮಶಿಷ್ಯಾಯ ನ ದಾತವ್ಯಂ ಕದಾಚನ । ಅಲಿಂಗಾನಾಮಸಾಯುಜ್ಯಮಲಿಂಗಾನಾಮದರ್ಶನಂ ॥ ಚತುರ್ವರ್ಣಾನಾಂ ಲಿಂಗಂ ಮನುತೇ । ಸ ಪಾತಕೇಭ್ಯಃ ಪೂತೋ ಭವತಿ ರುದ್ರಮಂತ್ರಜಾಪೀ ಭವತಿ । ಸ ಮುಕ್ತೋ ಭವತಿ।......................ಸದ್ಯೋಜಾತಮುಖಮಾಸೀತ್ ರೇಣುಕಾಚಾರ್ಯ ಆರಾಧ್ಯ ಉದ್ಭವತಿ । ವಾಮದೇವಮುಖಮಾಸೀತ್ ದಾರುಕಾಚಾರ್ಯ ಆರಾಧ್ಯ ಉದ್ಭವತಿ। ಅಘೋರಮುಖಮಾಸೀತ್ ಘಂಟಾಕರ್ಣಗಣೇಶ ಆರಾಧ್ಯ ಉದ್ಭವತಿ। ತತ್ಪುರುಷಮುಖಮಾಸೀತ್ ಧೇನುಕರ್ಣಗಣೇಶ ಆರಾಧ್ಯ ಉದ್ಭವತಿ । ಈಶಾನಮುಖಮಾಸೀತ್ ವಿಶ್ವಕರ್ಣಗಣೇಶ ಆರಾಧ್ಯ ಉದ್ಭವತಿ। ವೇದಾಗಮಸಂಪ್ರದಾಯಮಾಹೇಶ್ವರ ತತ್ತ್ವನಿತ್ಪಂಚಾಚಾರ್ಯೇಭ್ಯೋ ದೀಕ್ಷಿತೋ ಲಿಂಗಸ್ಪರ್ಶನಃ ಸ ಏವಾಹಂ ॥

ಇಲ್ಲಿಯವರೆಗೆ ನಾನು ಉದಾಹರಿಸಿದ ಉಪನಿಷದ್ವಾಕ್ಯಗಳಲ್ಲಿ ಲಿಂಗಧಾರಣವಿಷಯವೂ, ಲಿಂಗಾಂಗಸಾಮರಸ್ಯವಿಷಯವೂ, ಲಿಂಗಧಾರಣವೇ ಮೋಕ್ಷಮೂಲಭೂತವೆಂಬ ವಿಷಯವೂ, ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಉತ್ಪತ್ತಿವಿಷಯವೂ, ಈ ಪೂಜ್ಯಪಾದರಿಂದಲೇ ಬ್ರಹ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂಬ ವಿಷಯವೂ, ಪ್ರಸಾದವಿಷಯವೂ, ಭಸ್ಮಧಾರಣವಿಷಯವೂ, ರುದ್ರಾಕ್ಷಧಾರಣವಿಷಯವೂ, ಮಂತ್ರವಿಷಯವೂ, ಶಿವಸರ್ವೋತ್ತಮತ್ವವಿಷಯವೂ ಇವೇ ಮೊದಲಾದ ವೀರಶೈವಸಿದ್ಧಾಂತವಿಷಯಗಳು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿರುತ್ತವೆ. ವೀರಶೈವಧರ್ಮಗಳು

ವೇದಶಾಖೆಗಳಲ್ಲಿ ಈ ರೀತಿ ಸ್ಪಷ್ಟವಾಗಿ ಪ್ರತಿಪಾದಿಸುತ್ತಿರುವುದನ್ನು ನೋಡಿದರೆ ಯಾರಿಗೆತಾನೇ ಸಂತೋಷವೆನಿಸಲಿಕ್ಕಿಲ್ಲ ? ಈ ರಹಸ್ಯ ವನ್ನರಿಯದೆ ಕೆಲಜನ ವಿವೇಕಶೂನ್ಯರು ವೇದಗಳಲ್ಲಿ ವೀರಶೈವಮತ ವಿಷಯವೇ ಉಕ್ತವಾಗಿಲ್ಲವೆಂದು ನುಡಿಯುತ್ತಿರುವರು. ಇದು ಅವರ ಅಜ್ಞಾನಪ್ರಭಾವವಲ್ಲದೆ ಬೇರೊಂದಲ್ಲ. ಸಮಸ್ತನಿಗಮಾಗಮಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ಪಂಡಿತೋತ್ತಮರಾರೂ ಈ ರೀತಿ ಮಾತನಾಡಲಾರರು. ಆದರೆ ಈ ವಿಧವಾದ ಮಾತುಗಳು ಅರ್ಧಪಂಡಿತ ರೆನಿಸಿಕೊಂಡ ಅವೈದಿಕರ ಮುಖದಿಂದಲೇ ಹೊರಬೀಳತಕ್ಕವುಗಳಾಗಿವೆ.

ಇನ್ನು ಕೆಲಜನ ಬಸವಪಂಥಿಗಳಾದ ಶೂದ್ರರು ವೀರಶೈವ ಮತಸ್ಥಾಪಕರಾದ ಶ್ರೀಜಗದ್ಗುರುಪಂಚಾಚಾರ್ಯರ ವಿಷಯವು ವೇದಗಳಲ್ಲುಕ್ತವಾಗಿಲ್ಲವೆಂದು ಕೂಗುತ್ತಿರುವರು. ವೇದವಿರೋಧಿಗಳಾಗಿ ವರ್ತಿಸುವ ಈ ಸಂಕರಪಂಥಿಗಳಿಗೆ ವೇದರಹಸ್ಯವು ಹೇಗೆ ಗೊತ್ತಾ ದೀತು? ಅವೈದಿಕರಾದ ಬಸವಪಂಥಿಗಳು, ನಾನು ಈ ಮೊದಲು ಉದಾಹರಿಸಿರುವ ಯಜುರ್ವೇದಶಾಖೀಯವೀರಲೈಂಗೋಪನಿಷತ್ತನ್ನು ಪುನಃ ಪುನಃ ಅವಲೋಕಿಸಬೇಕೆಂದಾಶಿಸುತ್ತೇನೆ. ತ್ರಿಭುವನಗುರು ಗಳೆಂದು ಲೋಕವಿಖ್ಯಾತರಾಗಿ ಮೆರೆದಿರುವ ಪೂಜ್ಯಪಾದಪಂಚಾ ಚಾರ್ಯರ ವಿಷಯವು ವೇದಗಳಲ್ಲಿಯೂ, ಆಗಮಗಳಲ್ಲಿಯೂ ಘಂಟಾ ಘೋಷವಾಗಿ ಉಕ್ತವಾಗಿರುವುದು. ಈ ವಿಷಯವನ್ನು ಸಮಯ ವರಿತು ವಿಸ್ತರವಾಗಿ ಪ್ರಸ್ತಾಪಿಸುವುದಾಗುವುದು. ಅಸ್ತು !

ವೀರಶೈವಸಿದ್ಧಾಂತವಿಷಯವು ನಾನು ಉದಾಹರಿಸಿದ ಉಪ ನಿಷತ್ತುಗಳಲ್ಲಲ್ಲದೆ, ಈಶಾವಾಸ್ಯಾದಿದಶೋಪನಿಷತ್ತುಗಳಲ್ಲಿಯೂ ಉಕ್ತವಾಗಿರುವುದು. ಈ ಉಪನಿಷತ್ತುಗಳಿಗೆ ದೂರ್ವಾಸ, ಕಾಳಿಹಸ್ತ ದೀಕ್ಷಿತ, ವೃಷಭಪಂಡಿತಾರಾಧ್ಯರೇ ಮೊದಲಾದ ಅನೇಕಜನಪ್ರಾಚೀನಾ

ಚಾರ್ಯರು ವೀರಶೈವಸಿದ್ಧಾಂತಪರವಾಗಿ ಭಾಷ್ಯಗಳನ್ನು ರಚಿಸಿರುವರು. ಪಂಡಿತರಾದವರು ಅವರು ರಚಿಸಿರುವ ಗ್ರಂಥಗಳನ್ನು ಆಮೂಲಾಗ್ರವಾಗಿ ನೋಡಿದರೆ ಎಲ್ಲ ವಿಷಯವೂ ಸ್ಪಷ್ಟವಾಗುವುದು. ಇರಲಿ ;

ಇಲ್ಲಿಯವರೆಗೆ ವೇದೋಪನಿಷತ್ತುಗಳಲ್ಲಿ ವೀರಶೈವಮತ ವಿಷಯವು ಯಾವ ರೀತಿಯಾಗಿ ಪ್ರತಿಪಾದಿಸಲ್ಪಟ್ಟಿರುವುದೆಂಬುದನ್ನು ವಿಮರ್ಶಿಸಿದ್ದಾಯಿತು. ಇನ್ನು ಆಗಮುಗಳಲ್ಲಿ ವೀರಶೈವಮತವಿಷಯವು ಯಾವ ರೀತಿಯಾಗಿ ಉಕ್ತವಾಗಿದೆಂಬುದನ್ನು ವಿಮರ್ಶಿಸುವೆನು.

ಸೂಕ್ಷ್ಮಾಗಮದಲ್ಲಿ—

ಏಕಕಾಲಂ ದ್ವಿಕಾಲಂ ವಾ ತ್ರಿಕಾಲಂ ವಾಪಿ ಶಾಂಕರಿ ।
ಪೂಜಯೇನ್ನಿಯತಂ ಲಿಂಗಂ ಪ್ರಾಣಲಿಂಗಪರಾಯಣಃ ॥೬೧॥

ಏವಂ ಯಃ ಕುರುತೇ ಭಕ್ತ್ಯಾ ಪ್ರಾಣಲಿಂಗಾರ್ಚನಂ ಸದಾ ।
ವೀರಶೈವಃ ಸ ವಿಜ್ಞೇಯಃ ಸರ್ವಶೈವೋತ್ತಮೋತ್ತಮಃ ॥೬೨॥

(ಸೂಕ್ಷ್ಮ. ಪಟಲ. ೬)

ತಲ್ಲಿಂಗಂ ಸ್ಥಾಪಯೇಚ್ಛಿಷ್ಯೇ ಸಮ್ಯಗ್ಧ್ಯಾತ್ವೈಕಭಾವತಃ ।
ಧ್ಯಾತ್ರೇ ಶಿಷ್ಯಾಯ ತಲ್ಲಿಂಗಂ ಧಾರಯಿತ್ವಾ ನಿರೂಪಯೇತ್ ॥೪೮॥

ವೀರಮಾಹೇಶ್ವರಾಚಾರನಿಷ್ಠಾ ಪರಮದುರ್ಲಭಾ ।
ದತ್ತಂ ಲಿಂಗಮಿದಂ ವತ್ಸ ನ ಕದಾಚಿದ್ವಿಯೋಜಯ ॥೪೯॥

(ಸೂಕ್ಷ್ಮ. ಪಟಲ. ೫)

ವಾತುಲಾಗಮದಲ್ಲಿ—

ಮೂರ್ಧ್ನಿ ಕಂಠೇ ಭುಜೇ ಹಸ್ತೇ ಹೃತ್ಸ್ಥಲೇ ನಾಭಿಮಂಡಲೇ ।
ಏತೇಷಾಮೇಕದೇಶೇ ತು ಧಾರಯೇಚ್ಛಿವಲಿಂಗಕಂ ॥೩೨॥

(ವಾತುಲ. ಪಟಲ. ೧೦)

ಪಾರಮೇಶ್ವರಾಗಮದಲ್ಲಿ—

ನ ವೀರಶೈವಸದೃಶಂ ಮತಮಸ್ತಿ ಜಗತ್ತ್ರಯೇ ।
ಸರ್ವಭೋಗಪ್ರದಂ ಪುಣ್ಯಂ ಶಿವಸಾಯುಜ್ಯದಾಯಕಂ ॥೪೨॥

ಯಸ್ಯ ಭಸ್ಮ ಲಲಾಟೇಽಸ್ತಿ ಕಂಠೇ ಲಿಂಗಂ ಮದಾತ್ಮಕಂ ।
ರುದ್ರಾಕ್ಷಧಾರಣಂ ದೇಹೇ ಸೋಽಹಂ ದೇವಿ ನ ಸಂಶಯಃ ॥೪೮॥

(ಪಾರಮೇಶ್ವರ. ಪಟಲ. ೧)

ವೀರಾಗಮದಲ್ಲಿ—

ಗುರೋಶ್ಚ ಜಂಗಮಸ್ಯೈವ ಶಿವಲಿಂಗಸ್ಯ ಪೂಜನಂ ॥೨೩॥

ಏಷಾಂ ಪಾದೋದಕಂ ಚೈವ ಭುಕ್ತಶೇಷಾನ್ನಮೇವಚ ।
ಭಕ್ಷಯೇಚ್ಛಿವಭಕ್ತಸ್ತು ಪ್ರಸಾದೋ ಜನ್ಮಶುದ್ಧಿದಃ ॥೨೪॥

(ವೀರ. ಪಟಲ. ೩)

ಇವೇ ಮೊದಲಾದ ಸಮಸ್ತಶಿವಾಗಮಗಳಲ್ಲಿ ಲಿಂಗಧಾರಣ ಪೂರ್ವಕವಾದ ವೀರಶೈವಮತವಿಷಯವು ಬಹುವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದ ಧರ್ಮಕರ್ಮಾದಿವಿಷಯಗಳು ಶಿವಾಗಮಗಳಲ್ಲಿ ಸಮಗ್ರವಾಗಿ ಹೇಳಲ್ಪಟ್ಟಂತೆ ಇನ್ನಾವ ಗ್ರಂಥಗಳಲ್ಲಿಯೂ ಹೇಳಲ್ಪಟ್ಟಿಲ್ಲ. ಈ ಯಾವತ್ತು ಶಿವಾಗಮಗಳ ಹಸ್ತಲಿಖಿತಪ್ರತಿಗಳು ಮದ್ರಾಸ್, ತಂಜಾವೂರು ಮೊದಲಾದ ಪಟ್ಟಣಗಳಲ್ಲಿರುವ ಗವರ್ನಮೆಂಟ್ ಲೈಬ್ರರಿಗಳಲ್ಲಿಯೂ, ನೇಪಾಳ ಗವರ್ನಮೆಂಟ್ ಲೈಬ್ರರಿಯಲ್ಲಿಯೂ, ಲಂಡನ್ ಪಟ್ಟಣದಲ್ಲಿರುವ ಗವರ್ನಮೆಂಟ್ ಲೈಬ್ರರಿಯಲ್ಲಿಯೂ, ಜರ್ಮನ್‌ದೇಶದ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿರುವ ಗವರ್ನಮೆಂಟ್ ಲೈಬ್ರರಿಯಲ್ಲಿಯೂ ದೊರೆಯುತ್ತವೆ. ಧರ್ಮಾತ್ಮರು ಉದಾರಬುದ್ಧಿಯಿಂದ ಧನವ್ಯಯವನ್ನು ಮಾಡಿ ಈ

ಗ್ರಂಥಗಳನ್ನು ಬರೆಯಿಸಿ ಮುದ್ರಿಸಿ ಪ್ರಚಾರಪಡಿಸಿದರೆ, ಅವರ ಕೀರ್ತಿಯು ಆಚಂದ್ರಾರ್ಕವಾಗಿ ಉಳಿಯುವದರಲ್ಲಿ ಯಾವ ಸಂಶಯವೂ ಇಲ್ಲ. ಧರ್ಮೋದ್ಧಾರಕವಾದೀ ಮಹಾಕಾರ್ಯವನ್ನು ಧರ್ಮಾತ್ಮರು ನೆರವೇರಿಸಿ ಪರಶಿವಾನುಗ್ರಹಕ್ಕೆ ಪಾತ್ರರಾಗಬೇಕೆಂದು ಕೋರುತ್ತೇನೆ. ಶಿವಾಗಮಗಳಲ್ಲಿ ವೀರಶೈವಮತವಿಷಯವು ಬಹುವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವುದೆಂಬುದು ಸರ್ವರಿಗೂ ವೇದ್ಯವಾಗಿರುವುದರಿಂದ, ಇಲ್ಲಿಗೆ ಈ ವಿಷಯವನ್ನು ಸಂಕ್ಷೇಪಗೊಳಿಸುತ್ತೇನೆ.

ಇನ್ನು ಪುರಾಣಗಳಲ್ಲಿ ವೀರಶೈವಮತವಿಷಯವು ಯಾವ ರೀತಿಯಾಗಿ ಪ್ರತಿಪಾದಿಸಲ್ಪಟ್ಟಿರುವುದೆಂಬುದನ್ನು ವಿಮರ್ಶಿಸುವೆನು. ಲೋಕವಿಖ್ಯಾತರಾದ ವ್ಯಾಸಮಹರ್ಷಿಗಳಿಂದ ರಚಿಸಲ್ಪಟ್ಟಿರುವ ಪುರಾಣಗಳಲ್ಲಿ ವೀರಶೈವಮತದ ವಿಷಯವು ಹೇಳಲ್ಪಟ್ಟಿರುವುದಿಲ್ಲವೆಂದು ಕೆಲವರು ನುಡಿಯುತ್ತಿರುವರು; ಹೀಗೆ ನುಡಿಯುತ್ತಿರುವುದಕ್ಕೆ ಅವರ ಭ್ರಮೆಯೂ ಮತ್ತು ಪುರಾಣಗಳನ್ನು ಸಂಪೂರ್ಣವಾಗಿ ನೋಡದಿರುವಿಕೆಯೂ ಕಾರಣವಾಗಿವೆಯೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ವ್ಯಾಸಮಹರ್ಷಿಗಳಿಂದ ರಚಿಸಲ್ಪಟ್ಟಿರುವ ಪುರಾಣಗಳು ಮುಂಬಯಿ, ಪೂನಾ, ಕಲಕತ್ತಾ, ಕಾಂಚೀ ಮೊದಲಾದ ಪಟ್ಟಣಗಳಲ್ಲಿ ಮುದ್ರಿಸಲ್ಪಟ್ಟಿರುವವು. ಆದರೆ ಕೆಲವುಕಡೆಗೆ ಮುದ್ರಿಸಲ್ಪಟ್ಟಿರುವ ಪುರಾಣಗಳಲ್ಲಿ ವೀರಶೈವಮತವಿಷಯವು ತೆಗೆದುಹಾಕಲ್ಪಟ್ಟಿರುವುದು. ಇದಕ್ಕೆ ಮತವೈಷಮ್ಯವೇ ಕಾರಣವಾಗಿರಬಹುದೆಂದು ತೋರುತ್ತದೆ. ಆದಾಗ್ಯೂ ಕೆಲಜನ ನಿಷ್ಪಕ್ಷಪಾತಿಗಳು ಕೆಲವು ಪುರಾಣಗಳನ್ನು ಇದ್ದಕ್ಕಿದ್ದಹಾಗೆಯೇ ಮುದ್ರಿಸಿರುವರು. ಈ ಪುಣ್ಯಾತ್ಮರಿಗೆಲ್ಲ ಸರ್ವರೂ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಅಸ್ತು !

ಕಲಕತ್ತಾನಗರನಿವಾಸಿಗಳಾಗಿದ್ದ "ಅರುಣೋದಯರಾಯ" ಎಂಬ ಮಹೋದಯರು ೧೮೯೦ ನೆಯ ಇಸ್ವಿಯಲ್ಲಿ, ವಂಗವಾಸೀ ಮುದ್ರಣಾಲಯದಲ್ಲಿ "**ಶಿವಪುರಾಣ**" ವನ್ನು ಮುದ್ರಿಸಿರುತ್ತಾರೆ. ಈ ಪುರಾಣದ ಪ್ರತಿಯೊಂದು ಸಂಹಿತೆಯಲ್ಲಿಯೂ ವೀರಶೈವಮತ ವಿಷಯವು ಉಕ್ತವಾಗಿರುವುದು. ಅದನ್ನೇ ಸದ್ಯಃ ವಿಶದಪಡಿಸುತ್ತೇನೆ.

ಶಿವಪುರಾಣವಾಯವೀಯಸಂಹಿತೆಯಲ್ಲಿ—

ಪುರತಃ ಕಲ್ಪಿತೇ ವಾಽಥ ಮಂಡಲೇ ವರ್ಣಮಂಡಿತೇ ।
ಸ್ಥಾಪಯೇತ್ ಪಂಚಕಲಶಾನ್ ದಿಕ್ಷು ಮಧ್ಯೇ ಚ ದೇಶಿಕಃ ॥೧೬॥

ತೇಷು ಬ್ರಹ್ಮಾಣಿ ಮೂಲಾರ್ಣೈರ್ಬಿಂದುನಾದಸಮನ್ವಿತೈಃ ।
ನಮಾದ್ಯೈಶ್ಚ ಯಕಾರಾಂತೈಃ ಕಲ್ಪಯೇತ್ ಕಲ್ಪವಿತ್ತಮಃ ॥೧೭॥

(ವಾ. ಸಂ. ಉ. ಭಾಗ. ಅಧ್ಯಾಯ ೧೫)

ಶ್ರೀಗುರುವು ರಂಗವಲ್ಲ್ಯಾದಿಗಳಿಂದ ಅಲಂಕೃತವಾದ ವೇದಿಕೆಯ ಮೇಲೆ ಪಂಚಕಲಶಗಳನ್ನು ಸ್ಥಾಪಿಸಬೇಕೆಂದೂ, ಇವುಗಳಲ್ಲಿ ನಕಾರ, ಮಕಾರ, ಶಿಕಾರ, ವಾಕಾರ, ಯಕಾರಗಳೆಂಬ ಪಂಚ ಬೀಜಾಕ್ಷರಗಳನ್ನು ಸಂಬಂಧಿಸಬೇಕೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ದೀಕ್ಷಾ-ವಿವಾಹಾದಿಸಮಸ್ತಶುಭಕಾರ್ಯಗಳಲ್ಲಿ ಪಂಚಕಲಶಸ್ಥಾಪನೆಯ ಆವಶ್ಯಕತೆಯು ವೀರಶೈವರಿಗಲ್ಲದೆ, ಬೇರೊಬ್ಬರಿಗಿರುವುದಿಲ್ಲವೆಂಬ ವಿಷಯವು ಸರ್ವರಿಗೂ ವೇದ್ಯವಾದುದಾಗಿದೆ.

ಅಂತ ತೇ ಕಥಯಿಷ್ಯಾಮಿ ಸರ್ವಪಾಪವಿಶೋಧನಂ ।
ಸಂಸ್ಕಾರಂ ಪರಮಂ ಪುಣ್ಯಂ ಶಿವೇನ ಪರಿಭಾಷಿತಂ ॥೩॥

ಸಮ್ಯಕ್ಕೃತಾಧಿಕಾರಃ ಸ್ಯಾತ್ ಪೂಜಾದಿಷು ನರೋ ಯತಃ ।
ಸಂಸ್ಕಾರಃ ಕಥ್ಯತೇ ತೇನ ಷಡಧ್ವಪರಿಶೋಧನಂ ॥೪॥

ದೀಯತೇ ಯೇನ ವಿಜ್ಞಾನಂ ಕ್ಷೀಯತೇ ಪಾಶಬಂಧನಂ ।
ತಸ್ಮಾತ್ ಸಂಸ್ಕಾರ ಏವಾಯಂ ದೀಕ್ಷೇತ್ಯಪಿ ಚ ಕಥ್ಯತೇ ॥೫॥

ಶೂದ್ರಾಣಾಮಂತ್ಯಜಾತೀನಾಂ ಪತಿತಾನಾಂ ವಿಶೇಷತಃ ।
ತಥಾ ಸಂಕರಜಾತೀನಾಂ ನಾಧ್ವಶುದ್ಧಿರ್ವಿಧೀಯತೇ ॥೬೭॥

ತೇಽಪ್ಯಕೃತ್ರಿಮಭಾವಾಶ್ಚೇಚ್ಛಿವೇ ಪರಮಕಾರಣೇ ।
ಪಾದೋದಕಪ್ರದಾನಾದ್ಯೈಃ ಕುರ್ಯುಃ ಪಾಶವಿಶೋಧನಂ ॥೬೮॥

(ವಾ. ಸಂ. ಉ. ಭಾ. ಅಧ್ಯಾಯ ೧೩)

ಉಪಮನ್ಯುವು ಶ್ರೀಕೃಷ್ಣನಿಗೆ, ಸರ್ವಪಾಪನಾಶಕವೂ, ಶಿವನಿಂದುಕ್ತವೂ ಆಗಿರುವ ಸಂಸ್ಕಾರವನ್ನು ಹೇಳುವೆನೆಂದು ಪ್ರಾರಂಭಿಸಿ—ಮನುಷ್ಯನು ಪೂಜಾದಿಗಳಲ್ಲಿ ಅಧಿಕಾರಿಯಾದಮೇಲೆ ಅವನಿಗೆ "ಷಡಧ್ವಶುದ್ಧಿಸಂಸ್ಕಾರ" ವನ್ನು ಮಾಡಬೇಕೆಂದೂ, ಯಾವುದು ಜ್ಞಾನವನ್ನು ಅನುಗ್ರಹಿಸುವುದೋ, ಯಾವುದು ಪಾಶಬಂಧವನ್ನು ಲಯಗೊಳಿಸುವುದೋ ಆ ಸಂಸ್ಕಾರವೇ ದೀಕ್ಷಾಸಂಸ್ಕಾರವೆಂದು ಹೇಳಿಸಿಕೊಳ್ಳುವುದೆಂದೂ ಶಿವದೀಕ್ಷೆಯ ಮಹತ್ತ್ವವನ್ನು ಹೇಳಿ, ಮುಂದೆ—ಶೂದ್ರರಿಗೂ, ಅಂತ್ಯಜರಿಗೂ, ಪತಿತರಿಗೂ ಹಾಗೂ ಸಂಕರಜಾತಿಯವರಿಗೂ "ಷಡಧ್ವಶುದ್ಧಿಸಂಸ್ಕಾರ" ವನ್ನು ಮಾಡಬಾರದೆಂದೂ, ಅವರು ಪರಶಿವನಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟದ್ದೇ ಆದರೆ ಅವರಿಗೆ ಪಾದೋದಕಾದಿಗಳನ್ನು ಕೊಟ್ಟು ಅನುಗ್ರಹಿಸಬೇಕೆಂದೂ ಬೋಧಿಸಿ, ವೀರಶೈವದ್ವಿಜರಿಗುಕ್ತವಾಗಿರುವ ಷಡಧ್ವಶುದ್ಧಿಸಂಸ್ಕಾರದ ಪಾವಿತ್ರ್ಯವನ್ನು ತೋರ್ಪಡಿಸಿದ್ದಾನೆ. ಈ ಶ್ಲೋಕಗಳನ್ನೇ ಶ್ರೀ ನೀಲಕಂಠಶಿವಾಚಾರ್ಯರು ತಮ್ಮಿಂದ ರಚಿಸಲ್ಪಟ್ಟಿರುವ "ಕ್ರಿಯಾಸಾರ" ಗ್ರಂಥದಲ್ಲಿಯೂ ಉದಾಹರಿಸಿರುವರು.

ಸರ್ವಮಂತ್ರಾಧಿಕಶ್ಚಾಯಮೋಂಕಾರಾದ್ಯಃ ಷಡಕ್ಷರಃ ।
ಸರ್ವೇಷಾಂ ಶಿವಭಕ್ತಾನಾಮಶೇಷಾರ್ಥಪ್ರಸಾಧಕಃ ॥೪॥

(ವಾ. ಸಂ. ಉ. ಭಾ. ಅ. ೧೨)

ಸರ್ವಮಂತ್ರಗಳಲ್ಲಿಯೂ ಅಧಿಕವೆನಿಸಿಕೊಂಡಿರುವ "ಷಡಕ್ಷರ" ಮಂತ್ರವು ಶಿವಭಕ್ತರಿಗೆ ಸಕಲೇಷ್ಟಾರ್ಥಗಳನ್ನನುಗ್ರಹಿಸುವುದೆಂದು ಈ ಶ್ಲೋಕದಲ್ಲಿ ಹೇಳಲ್ಪಟ್ಟಿದೆ.

ಶಿವಪುರಾಣವಿದ್ಯೇಶ್ವರಸಂಹಿತೆಯಲ್ಲಿ—

ಶಿವಭಕ್ತೋ ವಸೇನ್ನಿತ್ಯಂ ಶಿವಲಿಂಗಂ ಸಮಾಶ್ರಿತಃ ।
ಸ್ಥಾಣುಲಿಂಗಾಶ್ರಯೇಣೈವ ಸ್ಥಾಣುರ್ಭವತಿ ಭೂಸುರಾಃ ॥೧೫೯॥

ಪೂಜಯಾ ಚರಲಿಂಗಸ್ಯ ಕ್ರಮಾನ್ಮುಕ್ತೋ ಭವೇದ್ಧ್ರುವಂ ॥೧೬೦॥

(ವಿ. ಸಂ. ಅಧ್ಯಾಯ ೧೬)

ಶಿವಭಕ್ತನು ಯಾವಾಗಲೂ ಶಿವಲಿಂಗವನ್ನು ಧರಿಸಿಕೊಂಡೇ ಇರಬೇಕೆಂದೂ, ಸದಾ ಶಿವಲಿಂಗವನ್ನಾಶ್ರಯಿಸುವುದರಿಂದ ಸಾಕ್ಷಾತ್ ಶಿವನೇ ಆಗುವನೆಂದೂ, ಚರಲಿಂಗದ (ಜಂಗಮಮೂರ್ತಿಯ) ಪೂಜೆಯಿಂದ ಮೋಕ್ಷವನ್ನು ಹೊಂದುವನೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಗುರುಪೂಜೈವ ಪೂಜಾ ಸ್ಯಾಚ್ಛಿವಸ್ಯ ಪರಮಾತ್ಮನಃ ।
ಗುರುಶೇಷಂ ತು ಯತ್ಸರ್ವಮಾತ್ಮಶುದ್ಧಿಕರಂ ಭವೇತ್ ॥೯೫॥

ಗುರೋಃ ಶೇಷಂ ಶಿವೋಚ್ಛಿಷ್ಟಂ ಜಲಮನ್ನಾದಿನಿರ್ಮಿತಂ ।
ಶಿಷ್ಯಾಣಾಂ ಶಿವಭಕ್ತಾನಾಂ ಗ್ರಾಹ್ಯಂ ಭೋಜ್ಯಂ ಭವೇದ್ದ್ವಿಜಾಃ ॥೯೬॥

(ವಿದ್ಯೇಶ್ವರಸಂಹಿತಾ. ಅಧ್ಯಾಯ ೧೬)

ಗುರುವಿನ ಪೂಜೆಯೇ ಶಿವನ ಪೂಜೆಯೆಂದೂ, ಗುರುವಿನ ಪ್ರಸಾದವೇ ಆತ್ಮಶುದ್ಧಿಕರವೆಂದೂ, ಅನ್ನಜಲಾದಿರೂಪವಾದ ಗುರುಪ್ರಸಾದ ಮತ್ತು ಶಿವಪ್ರಸಾದ ಇವುಗಳನ್ನೇ ಶಿವಭಕ್ತಶಿಷ್ಯರು ಸ್ವೀಕರಿಸಬೇಕೆಂದೂ ಈ ಶ್ಲೋಕಗಳಲ್ಲಿ ವೀರಶೈವಗುರುಪ್ರಸಾದ ಮಹಿಮೆಯು ವರ್ಣಿಸಲ್ಪಟ್ಟಿರುವುದು.

ದಿವಾ ವಾ ಯದಿ ವಾ ರಾತ್ರೌ ನಾರೀ ವಾಽಥ ನರೋಽಥ ವಾ ।
ಪೂಜಾರ್ಥಂ ಸಜಲಂ ಭಸ್ಮ ತ್ರಿಪುಂಡ್ರೇಣೈವ ಧಾರಯೇತ್ ॥೭೯॥

ತ್ರಿಪುಂಡ್ರಂ ಸಜಲಂ ಭಸ್ಮ ಧೃತ್ವಾ ಪೂಜಾಂ ಕರೋತಿ ಯಃ ।
ಶಿವಪೂಜಾಫಲಂ ಸಾಂಗಂ ತಸ್ಯೈವ ಹಿ ಸುನಿಶ್ಚಿತಂ ॥೮೦॥

ಭಸ್ಮ ವೈ ಶಿವಮಂತ್ರೇಣ ಧೃತ್ವಾ ಹ್ಯತ್ಯಾಶ್ರಮೀ ಭವೇತ್ ।
ಶಿವಾಶ್ರಮೀತಿ ಸಂಪ್ರೋಕ್ತಃ ಶಿವೈಕಪರಮೋ ಯತಃ ॥೮೧॥

(ವಿದ್ಯೇಶ್ವರಸಂಹಿತಾ. ಅಧ್ಯಾಯ ೧೬)

ಸ್ತ್ರೀಪುರುಷರೀರ್ವರೂ ಹಗಲು ಮತ್ತು ರಾತ್ರಿ ಕಾಲಗಳಲ್ಲಿ ಶಿವಪೂಜೆಯನ್ನು ಮಾಡುವಾಗ ಜಲದಿಂದ ಮಿಶ್ರವಾದ ಭಸ್ಮವನ್ನು ಮೂರು ಬೆರಳುಗಳಿಂದ ಮೂರು ರೇಖೆಗಳನ್ನಾಗಿ ಧರಿಸಬೇಕೆಂದೂ, ಜಲಮಿಶ್ರವಾದ ಭಸ್ಮವನ್ನು ಧರಿಸಿಕೊಂಡು ಯಾವನು ಶಿವಪೂಜೆಯನ್ನುಮಾಡುವನೋ ಅವನಿಗೆಮಾತ್ರ ಸಾಂಗವಾದ ಶಿವಪೂಜಾಫಲವು ದೊರೆಯುವುದೆಂದೂ, ಶಿವಮಂತ್ರೋಚ್ಚಾರಣಪೂರ್ವಕವಾಗಿ ಭಸ್ಮವನ್ನು ಧರಿಸಿಕೊಳ್ಳುವವನು ಅತ್ಯಾಶ್ರಮಿಯಾಗುವನೆಂದೂ, ಇವನೇ ಶಿವಾಶ್ರಮಿಯೆಂದು ಹೇಳಿಸಿಕೊಳ್ಳುವನೆಂದೂ ಈ ಶ್ಲೋಕಗಳಲ್ಲಿ ವೀರಶೈವರ ಭಸ್ಮಧಾರಣವಿಷಯವು ಹೇಳಲ್ಪಟ್ಟಿರುತ್ತದೆ. ೮೧ ನೆಯ ಶ್ಲೋಕದಲ್ಲುಕ್ತವಾಗಿರುವ “**ಅತ್ಯಾಶ್ರಮಿ**” “**ಶಿವಾಶ್ರಮಿ**” ಎಂಬ

ಪದಗಳು, ವೀರಶೈವರ ಪರ್ಯಾಯನಾಮಗಳಾಗಿರುತ್ತವೆ. ಶಿವಾಗಮಗಳಲ್ಲಿಯೂ, ವೀರಶೈವಮತಗ್ರಂಥಗಳಲ್ಲಿಯೂ ವೀರಶೈವರಿಗೆ "ಅತ್ಯಾಶ್ರಮಿ-ಶಿವಾಶ್ರಮಿ" ಶಬ್ದಗಳು ಮೇಲಿಂದಮೇಲೆ ಪ್ರಯೋಗಿಸಲ್ಪಟ್ಟಿರುವವು.

ಯಸ್ತು ಶುಶ್ರೂಷಣಾದ್ಯೈಶ್ಚ ಶಿವಭಕ್ತಸ್ಯ ಲಿಂಗಿನಃ ।
ಆನಂದಂ ಜನಯೇದ್ವಿದ್ವಾನ್ ಶಿವಃ ಪ್ರೀತತರೋ ಭವೇತ್ ॥೧೪೦॥

(ವಿದ್ಯೇಶ್ವರಸಂಹಿತಾ. ಅಧ್ಯಾಯ ೧೫)

ಯಾವನು ಲಿಂಗಧಾರಿಯಾದ ಶಿವಭಕ್ತನನ್ನು ಸೇವಾದಿಗಳಿಂದ ಸಂತೋಷಪಡಿಸುವನೋ, ಅವನ ವಿಷಯದಲ್ಲಿ ಪರಶಿವನು ಪರಮ ಸಂತುಷ್ಟನಾಗಿ ಅಸಾಧಾರಣವಾದ ಸುಖವನ್ನು ಕೊಡುವನೆಂದು ಈ ಶ್ಲೋಕದಲ್ಲಿ ಲಿಂಗಧಾರಿಶಿವಭಕ್ತನ ಆಧಿಕ್ಯವು ಉಕ್ತವಾಗಿರುವುದು.

ವಿಷ್ಣುಭಕ್ತಸ್ಯ ವಿಪ್ರಸ್ಯ ದತ್ತಂ ವೈಕುಂಠದಂ ವಿದುಃ ।
ಶಿವಭಕ್ತಸ್ಯ ವಿಪ್ರಸ್ಯ ದತ್ತಂ ಕೈಲಾಸದಂ ವಿದುಃ ॥೨೫॥

(ವಿದ್ಯೇಶ್ವರಸಂಹಿತಾ. ಅಧ್ಯಾಯ ೧೩)

ವಿಷ್ಣುಭಕ್ತನಾದ ಬ್ರಾಹ್ಮಣನಿಗೆ ವೈಕುಂಠಲೋಕವು ಪ್ರಾಪ್ತವಾಗುವುದೆಂದೂ, ಶಿವಭಕ್ತಬ್ರಾಹ್ಮಣನಿಗೆ ಶಿವಲೋಕವು ಪ್ರಾಪ್ತವಾಗುವುದೆಂದೂ ಈ ಶ್ಲೋಕದ ಅಭಿಪ್ರಾಯವಿರುತ್ತದೆ.

ಸಾಂಗೋಪಾಂಗಮಿತಿ ಪ್ರೋಕ್ತಂ ಶಿವಲಿಂಗಸ್ಯ ಪೂಜನಂ ।
ಪ್ರವೃತ್ತಾನಾಂ ನಿವೃತ್ತಾನಾಂ ಭೇದತೋ ದ್ವಿವಿಧಂ ದ್ವಿಜಾಃ ॥೩೨॥

ಪ್ರವೃತ್ತಾನಾಂ ಪೀಠಪೂಜಾ ಸರ್ವಾಭೀಷ್ಟಪ್ರದಾ ಭುವಿ ।
ಪಾತ್ರೇಣೈವ ಪ್ರವೃತ್ತಸ್ತು ಸರ್ವಪೂಜಾಂ ಸಮಾಚರೇತ್ ॥೩೩॥

ನೈವೇದ್ಯಮಭಿಷೇಕಾಂತೇ ಶಾಲ್ಯನ್ನೇನ ಸಮಾಚರೇತ್ ।
ಪೂಜಾಂತೇ ಸ್ಥಾಪಯೇಲ್ಲಿಂಗಂ ಸಂಪುಟೇ ಚ ಪೃಥಗ್ಗೃಹೇ ॥೩೪॥

ಕರಪೂಜಾ ನಿವೃತ್ತಾನಾಂ ಸ್ವಭೋಜ್ಯಂ ತು ನಿವೇದಯೇತ್ ।
ನಿವೃತ್ತಾನಾಂ ಪರಂ ಸೂಕ್ಷ್ಮಂ ಲಿಂಗಮೇವ ವಿಶಿಷ್ಯತೇ ॥೩೫॥

ವಿಭೂತ್ಯಭ್ಯರ್ಚನಂ ಕುರ್ಯಾದ್ವಿಭೂತ್ಯಾ ಚ ನಿವೇದಯೇತ್ ।
ಪೂಜಾಂ ಕೃತ್ವಾಽಥ ತಲ್ಲಿಂಗಂ ಶಿರಸಾ ಧಾರಯೇತ್ ಸದಾ ॥೩೬॥

(ವಿದ್ಯೇಶ್ವರಸಂಹಿತಾ. ಅಧ್ಯಾಯ ೨೨)

ಪ್ರವೃತ್ತಿಮಾರ್ಗವುಳ್ಳವರ ಮತ್ತು ನಿವೃತ್ತಿಮಾರ್ಗವುಳ್ಳವರ ಶಿವಲಿಂಗಪೂಜೆಯು ಎರಡು ಪ್ರಕಾರವಾಗಿರುವುದೆಂದೂ, ಪ್ರವೃತ್ತಿ ಮಾರ್ಗವುಳ್ಳವರು ಶಿವಲಿಂಗವನ್ನು ಬಾಹ್ಯಪೀಠದಲ್ಲಿಟ್ಟು ಪೂಜಿಸಿ ಶಾಲ್ಯನ್ನದಿಂದ ನೈವೇದ್ಯವನ್ನು ಮಾಡಬೇಕೆಂದೂ, ಪೂಜೆಯು ಸಮಾಪ್ತಿಗೊಂಡಮೇಲೆ ಆ ಶಿವಲಿಂಗವನ್ನು ಭರಣಿಯಲ್ಲಿಟ್ಟು ಮನೆಯ ಏಕಾಂತಸ್ಥಳದಲ್ಲಿರಿಸಬೇಕೆಂದೂ, ನಿವೃತ್ತಿಮಾರ್ಗವುಳ್ಳವರು ಶಿವಲಿಂಗ ವನ್ನು ಹಸ್ತದಲ್ಲಿಟ್ಟು ಪೂಜಿಸಬೇಕೆಂದೂ, ತಾವು ಸ್ವೀಕರಿಸುವ ಅನ್ನವನ್ನೇ ನಿವೇದಿಸಬೇಕೆಂದೂ, ವಿಭೂತಿಯೊಡನೆ ಪೂಜಿಸಿ ವಿಭೂತಿಯೊಡನೆ ನೈವೇದ್ಯಮಾಡಬೇಕೆಂದೂ, ಪೂಜೆಯು ಸಮಾಪ್ತಿ ಗೊಂಡಮೇಲೆ ಆ ಶಿವಲಿಂಗವನ್ನು ಸದಾ ಶಿರಸ್ಸಿನಲ್ಲಿ ಧರಿಸಬೇಕೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ಶಿವಲಿಂಗವನ್ನು ಹಸ್ತದಲ್ಲಿಟ್ಟು ಕೊಂಡು ಪೂಜಿಸುತ್ತ ನಿವೃತ್ತಿಮಾರ್ಗವನ್ನನುಸರಿಸುವವರೂ, ಶಿವಲಿಂಗವನ್ನು ಶಿರಸ್ಸಿನಲ್ಲಿ ಧರಿಸುವವರೂ ವೀರಶೈವರಲ್ಲದೆ ಬೇರೊಬ್ಬರಿಲ್ಲವೆನ್ನುವ ವಿಷಯವು ಸರ್ವರಿಗೂ ವೇದ್ಯವಾದುದಾಗಿದೆ. ಶಿವಾಗಮಗಳು ವೀರಶೈವರನ್ನು ನಿವೃತ್ತಿಮಾರ್ಗಶೀಲರೆಂದು ಸಂಬೋಧಿಸುತ್ತವೆ.

ಶಿವಪುರಾಣ ಸನತ್ಕುಮಾರಸಂಹಿತೆಯಲ್ಲಿ—

ಗೃಹಿಣೋ ಲಿಂಗಿನೋ ವಾಽಪಿ ಮದ್ಭಕ್ತಾ ಮತ್ಪರಾಯಣಾಃ ।
ಮತ್ಪ್ರಸಾದಾದ್ಗಮಿಷ್ಯಂತಿ ಮೋಕ್ಷಂ ಪರಮದುರ್ಲಭಂ ॥೬೮॥

(ಸ. ಸಂ. ಅಧ್ಯಾಯ ೪೩)

ಕಾಶೀಕ್ಷೇತ್ರದಲ್ಲಿ ವಾಸವಾಗಿದ್ದು ನನ್ನಲ್ಲಿ ಪರಮಭಕ್ತಿಯುಳ್ಳವರೂ, ಅನಿತರಸಾಧಾರಣವಾದ ಪ್ರೇಮವುಳ್ಳವರೂ ಆದ ಗೃಹಸ್ಥರೇ ಆಗಲಿ ಅಥವಾ ಲಿಂಗಧಾರಿಗಳೇ ಆಗಲಿ, ನನ್ನ ಅನುಗ್ರಹದಿಂದ ಮೋಕ್ಷವನ್ನು ಪಡೆಯುವರೆಂದು ಶ್ರೀಪರಮೇಶ್ವರನು ಪಾರ್ವತಿಗೆ ಕಾಶೀಕ್ಷೇತ್ರದ ಮಹಿಮೆಯನ್ನು ಹೇಳುವ ಸಮಯದಲ್ಲಿ ನುಡಿದಿದ್ದಾನೆ.

ಇಲ್ಲಿಯವರೆಗೆ ಕಲ್ಕತ್ತಾಪಟ್ಟಣದಲ್ಲಿ ಮುದ್ರಿತವಾದ ಶಿವಪುರಾಣದಲ್ಲುಕ್ತವಾಗಿರುವ ವೀರಶೈವಮತವಿಷಯವು ಪ್ರತಿಪಾದಿಸಲ್ಪಟ್ಟಿತು. ಇನ್ನು ಮುಂಬಯಿ ಪಟ್ಟಣದಲ್ಲಿರುವ ಶ್ರೀವೈಷ್ಣವಮತಾನುಯಾಯಿಗಳಾದ ಮ॥ ರಾ॥ ಖೇಮರಾಜ ಶ್ರೀಕೃಷ್ಣದಾಸ ಮಹೋದಯರಿಂದ ಮುದ್ರಿಸಲ್ಪಟ್ಟಿರುವ ವ್ಯಾಸೋಕ್ತಪುರಾಣಗಳಲ್ಲಿ ವೀರಶೈವಮತ ವಿಷಯವು ಯಾವರೀತಿಯಾಗಿ ಪ್ರತಿಪಾದಿಸಲ್ಪಟ್ಟಿರುವುದೆಂಬುದನ್ನು ವಿಮರ್ಶಿಸುವೆನು.

ಸ್ಕಂದಪುರಾಣ ಕೇದಾರಖಂಡದಲ್ಲಿ—

ಯಥೋಕ್ತಾಃ ಶಿವಧರ್ಮಾ ಹಿ ನಂದಿನಾ ಪರಿಕೀರ್ತಿತಾಃ ॥೪೦॥

ಶೈಲಾದೇನ ಮಹಾಭಾಗಾ ವಿಚಿತ್ರಾ ಲಿಂಗಧಾರಕಾಃ ।
ದೇಹಸ್ಯೋಪರಿ ಲಿಂಗಂ ತು ಧ್ರಿಯತೇ ಹಿ ಪುರಾತನೈಃ ॥೪೧॥

ಲಿಂಗೇನ ಸಹ ಪಂಚತ್ವಂ ಲಿಂಗೇನ ಸಹ ಜೀವಿತಂ ।
ಏತೇ ಧರ್ಮಾಃ ಸುಪ್ರತಿಷ್ಠಾಃ ಶೈಲಾದೇನ ಮಹಾತ್ಮನಾ ॥೪೨॥

(ಸ್ಕಂದ. ಕೇದಾರಖಂಡ. ಅಧ್ಯಾಯ ೭)

ಶಿವಧರ್ಮಯುಕ್ತರಾದ ಲಿಂಗಧಾರಿಗಳು ಅದ್ಭುತಚರಿತ್ರಶಾಲಿಗಳೆಂದೂ, ಸರ್ವೋತ್ಕೃಷ್ಟರೆಂದೂ, ಲಿಂಗಧಾರಿಗಳು ತಮ್ಮ ದೇಹದ ಮೇಲೆ ಶಿವಲಿಂಗವನ್ನು ಧರಿಸಿಕೊಳ್ಳುವರೆಂದೂ, ಶಿವಲಿಂಗದೊಡನೆ ಜೀವಿಸುವರೆಂದೂ, ಶಿವಲಿಂಗದೊಡನೆ ಐಕ್ಯರಾಗುವರೆಂದೂ, ಈ ಶಿವಧರ್ಮಗಳು ಮಹಾತ್ಮನಾದ ನಂದೀಶ್ವರನಿಂದ ಹೇಳಲ್ಪಟ್ಟಿರುವುವೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಇಂದ್ರನೀಲಮಯಂ ಲಿಂಗಂ ವಿಷ್ಣುಃ ಪೂಜಯತೇ ಸದಾ ॥೨೧॥

ಬ್ರಹ್ಮಾ ಮಣಿಮಯಂ ಲಿಂಗಂ ಪೂಜಯತ್ಯನಿಶಂ ಶುಭಂ ।
ಇಂದ್ರೋ ರತ್ನಮಯಂ ಲಿಂಗಂ ಚಂದ್ರೋ ಮುಕ್ತಾಮಯಂ ತಥಾ ॥೨೨॥

ಭಾನುಸ್ತಾಮ್ರಮಯಂ ಲಿಂಗಂ ಪೂಜಯತ್ಯನಿಶಂ ಶುಭಂ ।
ರೌಕ್ಮಂ ಲಿಂಗಂ ಕುಬೇರಶ್ಚ ಪಾಶೀ ಚಾಲಕ್ತಮೇವಚ । ॥೨೩॥

ಯಮೋ ನೀಲಮಯಂ ಲಿಂಗಂ ರಾಜತಂ ನೈಋರ್ತಸ್ತಥಾ ।
ಕಾಶ್ಮೀರಂ ಪವನೋ ಲಿಂಗಮರ್ಚಯತ್ಯನಿಶಂ ವಿಭೋಃ ॥೨೪॥

ಏವಂ ತೇ ಲಿಂಗಿತಾಃ ಸರ್ವೇ ಲೋಕಪಾಲಾಃ ಸವಾಸವಾಃ ।
ತಥಾ ಸರ್ವೇಽಪಿ ಗಂಧರ್ವಾಃ ಪಾತಾಲೇ ಕಿನ್ನರೈಃ ಸಹ ॥೨೫॥

(ಕೇದಾರಖಂಡ. ಅಧ್ಯಾಯ ೭)

ವಿಷ್ಣುವು ಇಂದ್ರನೀಲಮಣಿಯಿಂದ ರಚಿತವಾದ ಶಿವಲಿಂಗವನ್ನೂ, ಬ್ರಹ್ಮನು ರಕ್ತಮಣಿಯಿಂದ ರಚಿತವಾದ ಶಿವಲಿಂಗವನ್ನೂ, ಇಂದ್ರನು ರತ್ನದಿಂದ ರಚಿತವಾದ ಶಿವಲಿಂಗವನ್ನೂ, ಚಂದ್ರನು ಮುತ್ತಿನಿಂದ ರಚಿತವಾದ ಶಿವಲಿಂಗವನ್ನೂ, ಸೂರ್ಯನು ತಾಮ್ರದ ಲಿಂಗವನ್ನೂ, ಕುಬೇರನು ಸುವರ್ಣಲಿಂಗವನ್ನೂ, ವರುಣನು ಅರಗಿನ ಲಿಂಗವನ್ನೂ, ನೈಋರ್ತನು ಬೆಳ್ಳಿಯ ಲಿಂಗವನ್ನೂ, ವಾಯುವು

ಕುಂಕುಮದಿಂದ ರಚಿತವಾದ ಲಿಂಗವನ್ನೂ ಪೂಜಿಸುತ್ತಾರೆಂದೂ, ಈ ಪ್ರಕಾರವಾಗಿಯೇ ಇಂದ್ರನೇ ಮೊದಲಾದ ಲೋಕಪಾಲಕರೂ, ಗಂಧರ್ವರೂ, ಕಿನ್ನರರೂ ಸಹ ಪೂಜಿಸುತ್ತಾರೆಂದೂ, ಈ ಸಮಸ್ತ ದೇವತೆಗಳೂ "ಲಿಂಗಿತ" ಅಂದರೆ ಲಿಂಗಧಾರಣಯುತರಾಗಿರುವರೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಸ್ಕಂದಪುರಾಣ ಅರುಣಾಚಲಮಾಹಾತ್ಮ್ಯಖಂಡದಲ್ಲಿ—

ಭಗವನ್ ಸರ್ವಧರ್ಮಜ್ಞ ಗೌತಮಾರ್ಯ ಮುನೀಶ್ವರ ॥೫೩॥

ಮಯಾಽನ್ಯಧರ್ಮರೂಪೇಣ ಕೋಽಪ್ಯಧರ್ಮಃ ಪ್ರಕಲ್ಪಿತಃ ।
ದೇವಾನಾಂ ರಕ್ಷಣಂ ಕರ್ತುಮಭಯಂ ದಾತುಮುದ್ಯತಾ ॥೫೪॥

ಅಜಾನನ್ಮಹಿಷಂ ದೈತ್ಯಂ ಶಿವಭಕ್ತಮಮರ್ದಯಂ ।
ರಜಸಾಕ್ರಾಂತಬುದ್ಧೀನಾಂ ನ ಭವೇದ್ಧರ್ಮಸಂಗ್ರಹಃ ॥೫೫॥

ಗುರುಪ್ರಸಾದಸುಲಭಃ ಸ್ಫುರದ್ವಿಘ್ನಶತಾಕುಲಃ ।
ಸುದುರ್ಧರ್ಷಾ ನಿರಾಚಾರದುರ್ದಮಾಃ ಶಿವಸಂಶ್ರಯಾಃ ॥೫೬॥

ವಿಶೇಷತೋ ಲಿಂಗಧರಾಃ ಶಿವಸ್ತಾನ್ ಬಹುಮನ್ಯತೇ ।
ಪುರಾ ಪುರತ್ರಯಾವಾಸಾ ದೈತೇಯಾ ಲಿಂಗಧಾರಕಾಃ ॥೫೭॥

ಅಜಿತಾಃ ಶಂಭುನಾ ಪೂರ್ವಂ ಮುಕ್ತಲಿಂಗಾ ವಿದೂಷಿತಾಃ ।
ಅಸ್ಯ ಕಂಠಸ್ಥಿತಂ ಲಿಂಗಂ ಮಮ ಪಾಣಿಂ ನ ಮುಂಚತಿ ॥೫೮॥

(ಸ್ಕಂದ. ಅ. ಮಾ. ಖಂಡ. ಅಧ್ಯಾಯ ೧೧)

ದೇವಿಯು ಲಿಂಗಧಾರಿಯಾದ ಮಹಿಷಾಸುರನನ್ನು ಸಂಹರಿಸಿದ ಮೇಲೆ ವ್ಯಸನಾಕ್ರಾಂತಳಾಗಿ, ಗೌತಮಮಹರ್ಷಿಯನ್ನು ಕುರಿತು ನುಡಿದ ವಾಕ್ಯಗಳಿವು. ಈ ಶ್ಲೋಕಗಳ ಅಭಿಪ್ರಾಯವೇನೆಂದರೆ—

"ಎಲೈ ಮುನಿಶ್ರೇಷ್ಠನಾದ ಗೌತಮನೇ! ನಾನು ಅನ್ಯಕಾರ್ಯದಲ್ಲಿ ಧರ್ಮಬುದ್ಧಿಯನ್ನಿಟ್ಟು ಅಧರ್ಮವನ್ನು ಮಾಡಿದೆನು. ದೇವತೆಗಳನ್ನು ರಕ್ಷಣಮಾಡುವುದಕ್ಕೋಸ್ಕರ ಅಭಯವನ್ನು ಕೊಟ್ಟ ನಾನು, ಅಜ್ಞಾನದಿಂದ ಪರಮಶಿವಭಕ್ತನಾದ ಮಹಿಷಾಸುರನನ್ನು ಸಂಹರಿಸಿದೆನು. ರಜೋಗುಣದಿಂದಾವೃತರಾದವರಿಗೆ ನಾನಾವಿಧ ವಿಘ್ನಯುತವೂ ಗುರುವಿನ ಅನುಗ್ರಹಕ್ಕೆ ಸುಲಭವೂ ಆದ ಧರ್ಮ ಸಂಗ್ರಹವು ಆಗುವುದಿಲ್ಲ. ಲಿಂಗಧಾರಿಗಳು ವಿಶೇಷವಾಗಿ ಯಾರಿಂದಲೂ ತಿರಸ್ಕರಿಸಲು ಶಕ್ಯರಲ್ಲದವರೂ, ಪರಮಾಚಾರಶೀಲರೂ, ಶಿವನನ್ನು ಆಶ್ರಯಿಸಿದವರೂ ಆಗಿರುವದರಿಂದ, ಇವರನ್ನು ಶಿವನು ಬಹುವಾಗಿ ಪ್ರೀತಿಸುತ್ತಿರುವನು. ಪೂರ್ವದಲ್ಲಿ ತ್ರಿಪುರಾಸುರರು ಲಿಂಗಧಾರಿಗಳಾಗಿದ್ದುದರಿಂದ ಅವರನ್ನು ಜಯಿಸಲು ಪರಮೇಶ್ವರನೂ ಸಹ ಸಮರ್ಥನಾಗಲಿಲ್ಲ. ವಿಷ್ಣುವಿನ ಮಾಯೆಯಿಂದ ಅವರು ಲಿಂಗವನ್ನು ದೂರೀಕರಿಸಿದ ಮೇಲೆ ಜಯಿಸಲ್ಪಟ್ಟರು. ಮಹಿಷಾಸುರನ ಕಂಠದಲ್ಲಿದ್ದ ಶಿವಲಿಂಗವನ್ನು ನಾನು ಹಸ್ತದಲ್ಲಿಟ್ಟುಕೊಂಡಮೇಲೆ ಆ ಶಿವಲಿಂಗವು ನನ್ನ ಹಸ್ತವನ್ನು ಬಿಡಲೊಲ್ಲದು." ಎಂದು ನುಡಿದಳು.

ಅದಕ್ಕೆ ಗೌತಮಮಹರ್ಷಿಯು—

ಪೂರ್ವಜನ್ಮನಿ ಭಕ್ತೋಽಯಮರುಣಾದ್ರಿಪತೇಃ ಸ್ಫುಟಂ ‖
ಮಹಿಷತ್ವೇ ಮದಾಕ್ರಾಂತಃ ಪರಂ ಲಿಂಗೇನ ಸಂಗತಃ ।
ಭಕ್ತ್ಯಾ ಲಿಂಗಧರಂ ಹಂತುಂ ಕಃ ಸಮರ್ಥೋ ಜಗತ್ತ್ರಯೇ ‖೮೨‖

ದೃಷ್ಟಾಃ ಪುರತ್ರಯೇ ಪೂರ್ವಂ ರುದ್ರೇಣ ವಿಜಿತಾಸ್ತ್ರಯಃ ।
ತ್ವತ್ಖಡ್ಗಪರಿಕೃತ್ತೇನ ಕಂಠೇನಾಸ್ಯ ವರಾನನೇ ‖೮೩‖

ದೀಕ್ಷಾದಿರಹಿತಂ ಲಿಂಗಂ ದತ್ತಂ ಹಂತೀತಿ ಚೋದಿತಂ ।
ಕೃತಂ ಹಿ ಮಹಿಷೇಣಾಪಿ ಭಕ್ತಿತೋ ಲಿಂಗಧಾರಣಂ ‖೮೪‖

ಪೂರ್ವಜನ್ಮತಪೋಯೋಗಾತ್ ಸ್ಮರಣಾಲ್ಲಿಂಗಧಾರಣಾತ್ ।
ತ್ವತ್ಪಾದಪದ್ಮಸಂಸ್ಪರ್ಶಾದಯಂ ಮುಕ್ತೋ ನ ಸಂಶಯಃ ॥೮೪॥

(ಸ್ಕಂದ. ಅ. ಮಾ. ಖಂಡ. ಅಧ್ಯಾಯ ೧೧)

"ಎಲೌ ದೇವಿಯೇ ! ಪೂರ್ವಜನ್ಮದಲ್ಲಿ ಇವನು ಅರುಣಾಚಲೇಶ್ವರನ ಪರಮಭಕ್ತನಾಗಿದ್ದನು. ಮಹಿಷಾಕಾರವನ್ನು ಧರಿಸಿ ಮದೋನ್ಮತ್ತನಾದನು. ಆದರೂ ಶಿವಲಿಂಗಧಾರಣದಿಂದ ಕೂಡಿದ್ದನು. ಅಸಾಧಾರಣವಾದ ಭಕ್ತಿಯಿಂದ ಲಿಂಗಧರಿಸಿದವನನ್ನು ಸಂಹರಿಸುವುದಕ್ಕೋಸ್ಕರ ಮೂರು ಲೋಕಗಳಲ್ಲಿ ಯಾವನೂ ಸಮರ್ಥನಾಗುವುದಿಲ್ಲ. ಪೂರ್ವದಲ್ಲಿ ಪರಮೇಶ್ವರನಿಂದ ತ್ರಿಪುರಾಸುರರು ಮಾತ್ರ ಜಯಿಸಲ್ಪಟ್ಟರು. ನಿನ್ನ ಖಡ್ಗದಿಂದ ಕತ್ತರಿಸಲ್ಪಟ್ಟ ಈ ಮಹಿಷಾಸುರನ ಕಂಠದಿಂದ ಪ್ರಾಪ್ತವಾದ ಶಿವಲಿಂಗವು ಶಿವದೀಕ್ಷಾಸಂಸ್ಕಾರಶೂನ್ಯವಾದುದರಿಂದ ಅವನು ನಾಶವಾದನು. ಮಹಿಷಾಸುರನಾದರೋ ಅತ್ಯಂತಭಕ್ತಿಯಿಂದ ಶಿವದೀಕ್ಷಾಸಂಸ್ಕಾರಶೂನ್ಯವಾದ ಲಿಂಗವನ್ನು ಧಾರಣಮಾಡಿಕೊಂಡಿದ್ದನು. ಇವನು ಪೂರ್ವಜನ್ಮದಲ್ಲಿ ಮಾಡಿದ ತಪಸ್ಸಿನಫಲದಿಂದಲೂ, ಶಿವಧ್ಯಾನದಿಂದಲೂ, ಲಿಂಗಧಾರಣದಿಂದಲೂ, ನಿನ್ನ ಪಾದಕಮಲಸ್ಪರ್ಶದಿಂದಲೂ ಮುಕ್ತನಾದನು." ಎಂದು ನುಡಿದನು. ಈ ರೀತಿಯಾಗಿ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ಇದರ ಮೇಲಿಂದ ಮಹಿಷಾಸುರನು ಲಿಂಗಧಾರಿಯಾಗಿದ್ದನೆಂದೂ, ಅವನು ಶಿವದೀಕ್ಷಾಸಂಸ್ಕಾರವಿಲ್ಲದ ಶಿವಲಿಂಗವನ್ನು ಧರಿಸಿಕೊಂಡಿದ್ದುದರಿಂದ ಸಂಹರಿಸಲ್ಪಟ್ಟನೆಂದೂ, ಶಿವದೀಕ್ಷಾಪೂರ್ವಕವಾಗಿ ಲಿಂಗಧಾರಣಮಾಡಿಕೊಂಡವರನ್ನು ಜಯಿಸಲು ಯಾರಿಗೂ ಸಾಧ್ಯವಿಲ್ಲವೆಂದೂ ಸ್ಪಷ್ಟವಾಗುವುದು.

ಪದ್ಮಪುರಾಣ ಪಾತಾಲಖಂಡದಲ್ಲಿ—

ಲಿಂಗಸ್ಯ ಸ್ಥಾಪನಂ ಪೂಜಾ ಉದ್ವಾಸನಮಥೈವಚ ।
ಧಾರಣಂ ಶಂಕರಸ್ಯೈವ ಲಿಂಗಮೇವ ಮಹೇಶ್ವರಂ ॥೧೨೧॥

ಸಜ್ಜಿಕಂ ಪರಮೋತ್ಕೃಷ್ಟಂ ಸ್ವರ್ಣೇನೈವ ವಿನಿರ್ಮಿತಂ ।
ರಾಜತೈರ್ವಾ ದಲೈಃ ಕಾರ್ಯಂ ರೋಚತೇ ವೈಣವೈಸ್ತು ಯತ್ ॥೧೨೨॥

ಲತಾಸೂತ್ರೈರಥೋವಾಪಿ ರಚಿತಂ ದಾರುಣಾಽಥವಾ ।
ವಸ್ತ್ರೇಣ ವಾಽಥ ರಚಿತಂ ಮೃದಾ ವಿರಚಿತಂ ಭವೇತ್ ॥೧೨೩॥

ತತ್ರ ಸಂವೇಷ್ಟ್ಯ ವಸ್ತ್ರೇಣ ಸುಗಂಧೇನ ಸಮನ್ವಿತೇ ।
ಧೌತವಸ್ತ್ರಯುಗೇ ಶುದ್ಧೇ ಮೃದ್ವಾಸನಸಮನ್ವಿತೇ ॥೧೨೪॥

ಶೀತೋಷ್ಣರಹಿತೇ ಪಾದಚತುಷ್ಟಯಸಮನ್ವಿತೇ ।
ಪ್ರಾವೃತಿಚ್ಛೇದನೋಪೇತೇ ಕ್ರಿಮಿಕೀಟವಿವರ್ಜಿತೇ ॥೧೨೫॥

ಧೌತೇನ ಮೃದುವಸ್ತ್ರೇಣ ಸರ್ವತೋ ವೇಷ್ಟಿತಂ ಶಿವಂ ।
ವಿನ್ಯಸ್ಯ ಸಜ್ಜಿಕಾಮಧ್ಯೇ ಪ್ರಾವೃತ್ಯ ಚ ಪುನರ್ವಿಭುಂ ॥೧೨೬॥

ಏಷಾ ಹಿ ಸಜ್ಜಿಕಾ ರಾಮ ದೇವಸ್ಯಾಗ್ರೇತಿ ಕೀರ್ತಿತಾ ।
ತಸ್ಯ ಚ ಸ್ಥಾಪನಂ ಪಾಠೋ ರಹಸ್ಯೇ ಚ ಮಹೇಶಿತುಃ ॥೧೨೭॥

ಅಥವಾ ಭಿತ್ತಿಮೂಲೇ ಸ್ಯಾದ್ದೇವವೇದ್ಯಾಮಥಾಪಿ ವಾ ।
ಸುರಕ್ಷಿತೇ ತಥಾ ದೇಶೇ ರಕ್ಷಕಂ ಚ ನಿಯೋಜಯೇತ್ ॥೧೨೮॥

ಧಾರಣಂ ಗಾತ್ರಸಂಸ್ಪರ್ಶಮಶೇಷದೇಹಗೋಪನಂ ॥೧೩೦॥

ಮಸ್ತಕೇ ಧಾರಣಂ ಮುಖ್ಯಂ ಬ್ರಹ್ಮಣಾ ಚ ತಥಾ ಕೃತಂ ।
ವಿನ್ಯಸ್ಯ ಮುಕುಟಸ್ಯಾಂತೇ ಧಾರಣಂ ಶುಭಮುಚ್ಯತೇ ॥೧೩೧॥

ಲಲಾಟೇ ಧಾರಣಂ ಶಸ್ತಂ ಯಥಾ ಲಕ್ಷ್ಮ್ಯಾ ಧೃತಂ ಶುಭಂ ।
ಬಾಣೇನ ಚ ಧೃತಂ ಮೂರ್ಧ್ನಿ ದಕ್ಷಿಣೋರಸಿ ವಾ ಪುನಃ ॥೧೩೨॥

ಕರ್ಣೇ ಚ ಹರಕರ್ಣೇನ ಮುನಿನಾ ಪರಮರ್ಷಿಣಾ ।
ವಿನಿರ್ಭಿದ್ಯ ತಥಾ ಗಾತ್ರಂ ಲೋಹಸ್ಥಾನಂ ಪ್ರಕಲ್ಪ್ಯ ಚ ॥೧೩೩॥

ಧಾರಯಂತಿ ತಥಾ ಲಿಂಗಂ ರಾಕ್ಷಸಾಃ ಕೇಚಿದುತ್ತಮಾಃ ।
ಅನಿಕೇತನಮರ್ತ್ಯಾನಾಮಶಕ್ತಾನಾಂ ಶಿರೋಧೃತಿಃ ॥೧೩೪॥

ಅಧಮಾಧಮಮಾಖ್ಯಾತಂ ನೀವೀಬಂಧಾದಿಧಾರಣಂ ।
ತೇಷು ತೂಚ್ಛಿಷ್ಟಸಂಪ್ರಾಪ್ತಾ ಮಸ್ತಕೇ ಧಾರಣಂ ಭವೇತ್ ॥೧೩೫॥

ಅಧಮಾಧಮವೃತ್ತೀನಾಂ ಸದಾ ವೈ ಲಿಂಗಧಾರಣಂ ।
ಪಾಪಿನಾಮಪಿ ಚಾಶ್ಚರ್ಯಂ ಯಮಲೋಕೋ ನ ವಿದ್ಯತೇ ॥೧೩೬॥

(ಪದ್ಮ. ಪಾತಾಲಖಂಡ. ಅಧ್ಯಾಯ ೧೦)

ಶ್ರೀಶಂಕರನು ರಾಮಚಂದ್ರನಿಗೆ ಬೋಧಿಸಿದ ಶಿವಲಿಂಗ ಧಾರಣದ ಮಹತ್ತ್ವವೂ, ಶಿವಲಿಂಗವನ್ನಿರಿಸುವುದಕ್ಕೋಸ್ಕರ ಬೇಕಾಗುವ ಸಜ್ಜಿಕೆಯ ಸ್ವರೂಪವೂ ಈ ಶ್ಲೋಕಗಳಲ್ಲುಕ್ತವಾಗಿವೆ. ಶಿವಲಿಂಗವನ್ನು ಕರದಲ್ಲಿರಿಸಿ ಪೂಜಿಸಿ ಶರೀರದಲ್ಲಿ ಧರಿಸಬೇಕೆಂದೂ, ಶಿವಲಿಂಗವನ್ನಿರಿಸುವುದಕ್ಕೋಸ್ಕರ ಬಂಗಾರದಿಂದ ಮಾಡಿದ ಸಜ್ಜಿಕೆಯು (ಕರಡಿಗೆಯು) ಸರ್ವೋತ್ಕೃಷ್ಟವೆಂದೂ, ಬೆಳ್ಳಿಯಿಂದಾಗಲಿ, ಬಿದುರಿನಿಂದಾಗಲಿ, ಬಳ್ಳಿಯ ಎಳೆಗಳಿಂದಾಗಲಿ, ಮರದಿಂದಾಗಲಿ, ವಸ್ತ್ರದಿಂದಾಗಲಿ, ಮಣ್ಣಿನಿಂದಾಗಲಿ ಮಾಡಿದ ಸಜ್ಜಿಕೆಯಲ್ಲಿ ಶಿವಲಿಂಗವನ್ನು ಧರಿಸಬಹುದೆಂದೂ, ಕ್ರಿಮಿಕೀಟಾದಿಗಳಿಲ್ಲದಿರುವುದಾಗಿಯೂ, ಸುಗಂಧಯುಕ್ತವಾಗಿಯೂ, ಮೃದುವಾಗಿಯೂ, ಶೀತೋಷ್ಣರಹಿತವಾಗಿಯೂ, ತೊಳೆದುದಾಗಿಯೂ, ಮುಚ್ಚಿ ತೆಗೆಯಲು ಬರುವಂಥದಾಗಿಯೂ, ನಾಲ್ಕುಪಾದಗಳ ಅಳತೆಯುಳ್ಳುದಾಗಿಯೂ ಇರುವ ಎರಡುಭಾಗವುಳ್ಳ ವಸ್ತ್ರದಲ್ಲಿ ಶಿವಲಿಂಗವನ್ನಿರಿಸಿ ಸಜ್ಜಿಕೆಯಲ್ಲಿ ಧರಿಸ

ಬೇಕೆಂದೂ, ಈ ಸಜ್ಜಿಕೆಯೇ ಶಿವನಿಗೆ ಮುಖ್ಯವಾಗಿರುವುದೆಂದೂ, ಶಿವಲಿಂಗಸ್ಥಾಪನ ಮತ್ತು ಶಿವಲಿಂಗಸ್ತೋತ್ರ ಇವುಗಳನ್ನು ಗುಪ್ತ ವಾಗಿ ಮಾಡಬೇಕೆಂದೂ, ಗೋಡೆಯಲ್ಲಿರುವ ಗೂಡಿನಲ್ಲಾಗಲಿ, ದೇವರ ಜಗುಲಿಯ ಮೇಲಾಗಲಿ ಇಡಬೇಕೆಂದೂ ಅಥವಾ ರಕ್ಷಣ ವಾಗುವ ಬೇರೆಸ್ಥಲದಲ್ಲಿಟ್ಟು ರಕ್ಷಕನನ್ನು ನಿಯಮಿಸಬೇಕೆಂದೂ, ಶಿವಲಿಂಗವನ್ನು ಶರೀರದಲ್ಲಿ ಧರಿಸುವುದರಿಂದ ದೇಹರಕ್ಷಣವಾಗುವು ದೆಂದೂ, ಬ್ರಹ್ಮನು ಮಸ್ತಕದಲ್ಲಿ ಶಿವಲಿಂಗವನ್ನು ಧರಿಸಿಕೊಂಡಿರು ವುದರಿಂದ ಆಸ್ಥಾನದಲ್ಲಿ ಶಿವಲಿಂಗವನ್ನು ಧರಿಸುವುದು ಶುಭವೆಂದೂ, ಲಕ್ಷ್ಮಿಯು ಹಣೆಯಲ್ಲಿ ಶಿವಲಿಂಗವನ್ನು ಧರಿಸಿಕೊಂಡಿರುವುದರಿಂದ ಆಸ್ಥಾನವೂ ಸಹ ಪ್ರಶಸ್ತವೆಂದೂ, ಬಾಣಾಸುರನು ಶಿವಲಿಂಗವನ್ನು ಮಸ್ತಕದಲ್ಲಿಯೂ ಎದೆಯ ಬಲಭಾಗದಲ್ಲಿಯೂ ಧರಿಸಿರುವನೆಂದೂ, ಹರಕರ್ಣಮಹರ್ಷಿಯು ಕರ್ಣದಲ್ಲಿ ಧರಿಸಿರುವನೆಂದೂ, ರಾಕ್ಷಸೋತ್ತ ಮರು ತಮ್ಮ ಶರೀರವನ್ನು ಭೇದಿಸಿ ಅದನ್ನೇ ಲೋಹಸಜ್ಜಿಕೆಯ ನ್ನಾಗಿ ಮಾಡಿ ಲಿಂಗವನ್ನು ಧರಿಸುವರೆಂದೂ, ಮನೆಯಿಲ್ಲದವರೂ ಅಶಕ್ತರೂ ಶಿರಸ್ಸಿನಲ್ಲಿ ಧರಿಸಬೇಕೆಂದೂ, ನಡುವು ಮೊದಲಾದ ಕೆಳಗಿನ ಸ್ಥಾನಗಳಲ್ಲಿ ಧರಿಸುವುದು ಅಧಮಾಧಮವೆಂದೂ, ಮೇಲೆ ಹೇಳಿದ ಸ್ಥಾನಗಳಲ್ಲಿ ದೋಷವು ಪ್ರಾಪ್ತವಾದರೆ ಮಸ್ತಕದಲ್ಲಿ ಧರಿಸ ಬೇಕೆಂದೂ, ಅಧಮಾಧಮವೃತ್ತಿಯುಳ್ಳವರೂ ಸಹ ಯಾವಾಗಲೂ ಲಿಂಗವನ್ನು ಧರಿಸಬೇಕೆಂದೂ, ಲಿಂಗಧಾರಣದಿಂದ ಮಹಾಪಾಪಿ ಗಳಿಗೂ ಸಹ ಯಮಲೋಕಪ್ರಾಪ್ತಿಯಿಲ್ಲವೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ಪದ್ಮಪುರಾಣದಲ್ಲುಕ್ತವಾಗಿರುವ ಈ ಸಮಸ್ತ ಶ್ಲೋಕಗಳು ಕೇವಲ ವೀರಶೈವಮಾರ್ಗವನ್ನು ಬೋಧಿಸುತ್ತಿರುವ ವೆನ್ನುವುದು ಚಿಕ್ಕಬಾಲಕರಿಗೂ ಸಹ ತಿಳಿಯುವಂತಿದೆ.

ಪದ್ಮಪುರಾಣ ಶಿವಗೀತೆಯಲ್ಲಿ —

ಜಡೋಽಂಧೋ ಬಧಿರೋ ಮೂಕೋ ನಿಶ್ಶೌಚಃ ಕರ್ಮವರ್ಜಿತಃ ॥೪॥
ಅಜ್ಞೋಪಹಾಸೋಽಭಕ್ತಶ್ಚ ಭೂತಿರುದ್ರಾಕ್ಷಧಾರಿಣಃ ।
ಲಿಂಗಿನೋ ಯಶ್ಚ ವಾ ದ್ವೇಷ್ಟಿ ತೇನೈವಾತ್ರಾಧಿಕಾರಿಣಃ ॥೫॥
(ಪದ್ಮ. ಪು. ಶಿ. ಗೀ. ಅಧ್ಯಾಯ. ೧೬)

ಮೂರ್ಖನು, ಕುರುಡನು, ಕಿವುಡನು, ಮೂಕನು, ಸದಾಚಾರಶೂನ್ಯನು, ಸತ್ಕರ್ಮರಹಿತನು, ಅಜ್ಞಾನಮೂಲಕ ಉಪಹಾಸತತ್ಪರನು, ಶಿವನಲ್ಲಿ ಭಕ್ತಿಯಿಲ್ಲದವನು, ವಿಭೂತಿರುದ್ರಾಕ್ಷಾಲಂಕೃತರಾದ ಲಿಂಗಧಾರಿಗಳನ್ನು ದ್ವೇಷಿಸುವವನು ಇವರೆಲ್ಲರೂ ಈ ಶಿವಗೀತೆಯನ್ನು ಪಠಿಸಲಿಕ್ಕೆ ಅರ್ಹರಲ್ಲವೆಂದು ಶ್ರೀಶಂಕರನು ರಾಮಚಂದ್ರನಿಗೆ ಉಪದೇಶಿಸಿದ್ದಾನೆ. ಇದರಿಂದ ಲಿಂಗಧಾರಿಗಳ ಶ್ರೇಷ್ಠತ್ವವು ವ್ಯಕ್ತವಾಗುತ್ತದೆ.

ಕಾಂಚೀನಗರನಿವಾಸಿಗಳೂ ಅಷ್ಟಾದಶಪುರಾಣೋದ್ಧಾರಕಬಿರುದಾಂಕಿತರೂ ಆದ ಪೂವ್ವಾಡ ವೆಂಕಟರಾಯಮಹೋದಯರು ೧೮೭೯ನೆಯ ಇಸ್ವಿಯಲ್ಲಿ "ಲಿಂಗಪುರಾಣ" ವನ್ನು ಮುದ್ರಿಸಿರುವರು. ಅವರು ಮುದ್ರಿಸಿರುವ ಲಿಂಗಪುರಾಣದ ಉತ್ತರಭಾಗದ ೨೧ನೆಯ ಅಧ್ಯಾಯದಲ್ಲಿ ಕೇವಲ ವೀರಶೈವಮತವಿಷಯವೇ ಹೇಳಲ್ಪಟ್ಟಿರುವುದು. ಅಲ್ಲಿರುವ ಕೆಲವು ಶ್ಲೋಕಗಳನ್ನು ಉದಾಹರಿಸುವೆನು.

ಲಿಂಗಪುರಾಣದಲ್ಲಿ —

ದೀಯತೇ ಲಿಂಗಸಂಬಂಧಃ ಕ್ಷೀಯತೇ ಚ ಮಲತ್ರಯಂ ।
ದೀಯತೇ ಕ್ಷೀಯತೇ ಯಸ್ಮಾತ್ ಸಾ ದೀಕ್ಷೇತಿ ನಿಗದ್ಯತೇ ॥೮೧॥
ಸಾ ದೀಕ್ಷಾ ಪರಮಾ ಶೈವೀ ತ್ರಿಧಾ ಭವತಿ ನಿರ್ಮಲಾ ।

ಏಕಾ ವೇದಾತ್ಮಿಕಾ ಸಾಕ್ಷಾದನ್ಯಾ ಮಂತ್ರಾತ್ಮಿಕಾ ಮತಾ ॥
ಕ್ರಿಯಾತ್ಮಿಕಾ ಪರಾ ಕಾಚಿದೇವಮೇವ ತ್ರಿಧಾ ಭವೇತ್ ॥೮೨॥

ಹಸ್ತಮಸ್ತಕಸಂಯೋಗಾದ್ವೇಧೇತಿ ಪರಿಗೀಯತೇ ।
ಗುರುಣೋದೀರಿತಾ ಕರ್ಣೇ ಯಾ ಸಾ ಮಂತ್ರೇತಿ ಕಥ್ಯತೇ ॥
ಶಿಷ್ಯಪಾಣಿತಲೇ ದತ್ತಾ ಯಾ ದೀಕ್ಷಾ ಸಾ ಕ್ರಿಯಾ ಮತಾ ॥೮೩॥

ಪಾಶಾನಶೇಷಾನ್ ಕರ್ತರ್ಯಾ ಛಿತ್ವಾ ಲಿಂಗಂ ಸಮಾದಿಶೇತ್ ।
ಕರ್ತರೀ ಶಿವದೀಕ್ಷಾ ಸ್ಯಾದ್ಯಯಾ ಪಾಶಾನ್ ಛಿನತ್ತ್ಯಸೌ ॥೮೪॥

ಕೃತ್ವಾ ಶೈವೀಂ ಪರಾಂ ದೀಕ್ಷಾಂ ತತ್ತ್ವವಿದ್ಯಾಂ ಶಿವಾತ್ಮಿಕಾಂ ।
ಛಿತ್ವಾಽವಿದ್ಯಾಮಹಾಕೋಶಂ ಕಲಾಧ್ಯಾನಂ ವಿಚಿಂತಯೇತ್ ॥೮೫॥

ಯಥಾ ಕಲಾ ತಥಾ ಭಾವೋ ಯಥಾ ಭಾವಸ್ತಥಾ ಮನಃ ।
ಯಥಾ ಮನಸ್ತಥಾ ದೃಷ್ಟಿಃ ಯಥಾ ದೃಷ್ಟಿಸ್ತಥಾ ಸ್ಥಲಂ ॥೮೬॥

ಯಾ ಕಲಾ ಪರಮಾ ಸೂಕ್ಷ್ಮಾ ಮಂತ್ರಾಣಾಂ ಬೋಧಿನೀ ಪರಾ ।
ತಾಮಾಕೃಷ್ಯ ಯಥಾನ್ಯಾಯಂ ಲಿಂಗೇ ಸಮುಪವೇಶಯೇತ್ ॥೮೭॥

ತತಸ್ತಲ್ಲಿಂಗಮಸ್ಯಾಂಗೇ ಶಿಷ್ಯಸ್ಯಾಮಿತತೇಜಸಾ ।
ಸಂಯೋಜನೀಯಂ ಗುರುಣಾ ಪೂರ್ವೋಕ್ತೇನೈವ ವರ್ತ್ಮನಾ ॥೮೮॥

ತನುತ್ರಯಗತಾನಾದಿಮಲತ್ರಯಮಸೌ ಗುರುಃ ।
ದೀಕ್ಷಾತ್ರಯೇಣ ನಿರ್ದಗ್ಧ್ವಾ ಲಿಂಗತ್ರಿತಯಮಾದಿಶೇತ್ ॥೮೯॥

ಲಿಂಗಂ ತು ತ್ರಿವಿಧಂ ಪ್ರೋಕ್ತಂ ಸ್ಥೂಲಂ ಸೂಕ್ಷ್ಮಂ ತು ಕಾರಣಂ ।
ಧಾರಯತೋ ನರಾಃ ಸ್ಥೂಲಂ ಕಾರಣಂ ಸಂಪ್ರಯಾಂತಿ ಹಿ ॥೯೦॥

ಕುರ್ಯಾತ್ತ್ರಿಪುಟಸಂಧಾನಂ ಶಿವಸಾಯುಜ್ಯಕಾರಣಂ ।
ವಕ್ಷ್ಯೇ ತ್ರಿಪುಟಸಂಧಾನಲಕ್ಷಣಂ ಶಿವಯೋಗಿನಾಂ ॥೯೧॥

ಸ್ಥೂಲಸ್ಯ ಲಿಂಗದೇಹಸ್ಯ ಸೂಕ್ಷ್ಮಸ್ಯ ಮನಸಸ್ತಥಾ ।
ಕಾರಣಸ್ಯಾತ್ಮನೋ ನಿತ್ಯಂ ಕುರ್ಯಾದೈಕ್ಯಮತಂದ್ರಿತಃ ॥೯೨॥

ಲಿಂಗೇನ ಧಾರಯೇಲ್ಲಿಂಗಂ ಧ್ಯಾಯೇಚ್ಚಿತ್ತೇನ ಶಂಕರಂ ।
ಸ್ವಾತ್ಮನಾ ಭಾವಯೇತ್ಪೂರ್ಣಮೈಕ್ಯಭಾವೇನ ಸರ್ವತಃ ॥
ಏತತ್ತ್ರಿಪುಟಿಸಂಧಾನಲಕ್ಷಣಂ ಪರಿಕೀರ್ತಿತಂ ॥೯೩॥

ಕೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ ।
ಮಾನವಃ ಶಿವಯೋಗೇನ ಶಿವೋ ಭವತಿ ನಿಶ್ಚಯಂ ॥
ಅನೇನ ವರ್ತ್ಮನಾ ಗಚ್ಛನ್ ಸ ಜೀವನ್ನೇವ ಶಂಕರಃ ॥೯೪॥

ಬ್ರಹ್ಮವಿಷ್ಣ್ವಾದಯೋ ದೇವಾ ಮುನಯೋ ಗೌತಮಾದಯಃ ।
ಧಾರಯಂತಿ ಸದಾ ಲಿಂಗಮುತ್ತಮಾಂಗೇ ವಿಶೇಷತಃ ॥೯೫॥

ವೇದೇಷು ಶಾಸ್ತ್ರಸಂಘೇಷು ಪುರಾಣೇಷ್ವಾಗಮೇಷು ಚ ।
ಬ್ರಾಹ್ಮಣಸ್ಯ ಸಮಾಖ್ಯಾತಂ ಲಿಂಗಧಾರಣಮುತ್ತಮಂ ॥೯೬॥

ಆಚಾರಲಿಂಗಂ ಪ್ರಥಮಂ ಗುರುಲಿಂಗಂ ದ್ವಿತೀಯಕಂ ।
ಶಿವಲಿಂಗಂ ತೃತೀಯಂ ಸ್ಯಾಚ್ಚರಲಿಂಗಂ ಚತುರ್ಥಕಂ ॥
ಪ್ರಸಾದಂ ಪಂಚಮಂ ಲಿಂಗಂ ಮಹಾಲಿಂಗಂ ತು ಷಷ್ಠಕಂ ॥೧೨೨॥

ಭಕ್ತೋ ಮಹೇಶ್ವರಶ್ಚೈವ ಪ್ರಸಾದೀ ಪ್ರಾಣಲಿಂಗಕಃ ।
ಶರಣೈಕ್ಯಾ ಸ್ಥಲೈಃ ಷಡ್ಭಿಃ ಕ್ರಮಾಲ್ಲಿಂಗಮುದಾಹೃತಂ ॥೧೨೩॥

ಯಾವುದರಿಂದ ಲಿಂಗಸಂಬಂಧವುಂಟಾಗುವುದೋ ಮತ್ತು ಮಲತ್ರಯವು ನಷ್ಟವಾಗುವುದೋ ಅದು ದೀಕ್ಷೆಯೆನಿಸಿಕೊಳ್ಳುವುದೆಂದೂ, ಈ ದೀಕ್ಷೆಯು ವೇಧಾದೀಕ್ಷೆ-ಮಂತ್ರದೀಕ್ಷೆ-ಕ್ರಿಯಾದೀಕ್ಷೆ ಎಂದು ಮೂರುಪ್ರಕಾರವಾಗಿರವುದೆಂದೂ, ಹಸ್ತಮಸ್ತಕಸಂಯೋಗವು ವೇಧಾ ದೀಕ್ಷೆಯೆನಿಸಿಕೊಳ್ಳುವುದೆಂದೂ, ಗುರುಮಂತ್ರೋಪದೇಶವು ಮಂತ್ರದೀಕ್ಷೆಯೆನಿಸಿಕೊಳ್ಳುವುದೆಂದೂ, ಶಿಷ್ಯನ ಹಸ್ತದಲ್ಲಿ ಶಿವಲಿಂಗವನ್ನು ಸ್ಥಾಪಿಸುವುದು ಕ್ರಿಯಾದೀಕ್ಷೆಯೆನಿಸಿಕೊಳ್ಳುವುದೆಂದೂ, ಶ್ರೀಗುರುವು ಶಿವದೀಕ್ಷಾರೂಪವಾದ ಕತ್ತರಿಯಿಂದ ಸಮಸ್ತಪಾಶಗಳನ್ನು

ಕತ್ತರಿಸಿ ಲಿಂಗಜ್ಞಾನವನ್ನುಂಟುಮಾಡುವನೆಂದೂ, ಶ್ರೀಗುರುವು ಶಿವತತ್ತ್ವದಾಯಕವಾದ ಶಿವದೀಕ್ಷೆಯನ್ನು ಮಾಡಿ ಅವಿದ್ಯಾಕೋಶವನ್ನು ಭೇದಿಸಿ ಕಲೆಯನ್ನು ಧ್ಯಾನಿಸಿ ಆ ಸೂಕ್ಷ್ಮಕಲೆಯನ್ನು ಆಕರ್ಷಿಸಿ ವಿಧ್ಯುಕ್ತವಾಗಿ ಶಿವಲಿಂಗದಲ್ಲಿ ಸಮಾವೇಶಮಾಡಬೇಕೆಂದೂ, ಅನಂತರ ಕಲಾನ್ವಿತವಾದ ಆಶಿವಲಿಂಗವನ್ನು ಶಿಷ್ಯನ ಶರೀರದಲ್ಲಿ ಧರಿಸಬೇಕೆಂದೂ, ಕಾರಣಾದಿತನುತ್ರಯವನ್ನಾವರಿಸಿದ ಆಣವಾದಿ ಮಲತ್ರಯವನ್ನು ವೇಧಾದಿದೀಕ್ಷಾತ್ರಯದಿಂದ ಲಯಗೊಳಿಸಿ ಇಷ್ಟ-ಪ್ರಾಣ-ಭಾವರೂಪ ಲಿಂಗತ್ರಯವನ್ನು ಬೋಧಿಸಬೇಕೆಂದೂ, ಲಿಂಗವು ಸ್ಥೂಲ-ಸೂಕ್ಷ್ಮ-ಕಾರಣಭೇದದಿಂದ ಮೂರುಪ್ರಕಾರವಾಗಿರುವುದೆಂದೂ, ಸ್ಥೂಲ ಲಿಂಗವನ್ನು ಧರಿಸುವವರು ಕಾರಣಲಿಂಗವನ್ನು ಹೊಂದುವರೆಂದೂ, ತ್ರಿಪುಟೀಸಂಧಾನವು ಶಿವಸಾಯುಜ್ಯಕ್ಕೆ ಕಾರಣವೆಂದೂ, ಸ್ಥೂಲವಾದ ಲಿಂಗದೇಹಕ್ಕೂ, ಸೂಕ್ಷ್ಮವಾದ ಮನಸ್ಸಿಗೂ, ಕಾರಣವಾದ ಆತ್ಮನಿಗೂ ನಿತ್ಯದಲ್ಲಿ ಐಕ್ಯವನ್ನುಂಟುಮಾಡುತ್ತ ಲಿಂಗದಿಂದ ಲಿಂಗವನ್ನು ಧರಿಸಿ ಚಿತ್ತದಲ್ಲಿ ಶಂಕರನನ್ನು ಧ್ಯಾನಿಸುತ್ತ ಪೂರ್ಣವಾಗಿ ಐಕ್ಯವನ್ನು ಭಾವಿಸುವುದು ತ್ರಿಪುಟೀಸಂಧಾನವಾಗುವುದೆಂದೂ, ಭ್ರಮರದ ಸಂಬಂಧದಿಂದ ಕೀಟವು ಭ್ರಮರವಾಗುವಂತೆ ಶಿವನ ಸಂಬಂಧದಿಂದ ಮಾನವನು ಶಿವನಾಗುವನೆಂದೂ, ಈ ಮಾರ್ಗವನ್ನನುಸರಿಸುವವನು ಜೀವಿಸಿರುವಾಗಲೇ ಶಿವನಾಗುವನೆಂದೂ, ಬ್ರಹ್ಮ ವಿಷ್ಣು ಮೊದಲಾದ ದೇವತೆಗಳೂ ಗೌತಮಾದಿಮಹರ್ಷಿಗಳೂ ಮಸ್ತಕದಲ್ಲಿ ಸದಾ ಶಿವಲಿಂಗವನ್ನು ಧರಿಸಿಕೊಳ್ಳುವರೆಂದೂ, ವೇದ-ಶಾಸ್ತ್ರ-ಪುರಾಣ-ಆಗಮಾದಿಗಳಲ್ಲಿ ಬ್ರಾಹ್ಮಣನಿಗೆ ಲಿಂಗಧಾರಣವು ಹೇಳಲ್ಪಟ್ಟಿರುವುದೆಂದೂ, ಲಿಂಗವು ಆಚಾರಲಿಂಗ-ಗುರುಲಿಂಗ-ಶಿವಲಿಂಗ-ಚರಲಿಂಗ-ಪ್ರಸಾದಲಿಂಗ-ಮಹಾಲಿಂಗವೆಂದು ಆರು ಪ್ರಕಾರವಾಗಿರುವುದೆಂದೂ, ಸ್ಥಲವು

ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯವೆಂದು ಆರು ಪ್ರಕಾರವಾಗಿರುವುದೆಂದೂ, ಈ ಆರು ಸ್ಥಲಗಳಿಗೆ ಆರು ಲಿಂಗಗಳು ಕ್ರಮವಾಗಿ ಸಂಬಂಧಿಸುವುವೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ವ್ಯಾಸಮಹರ್ಷಿಗಳು ಈ ಶೋಕಗಳಲ್ಲಿ ವೀರಶೈವಶಾಸ್ತ್ರದ ರಹಸ್ಯವನ್ನೆಲ್ಲ ಅತ್ಯಂತಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ.

ಕಲಶಾನ್ ವಿನ್ಯಸೇತ್ ಪಂಚ ಪಂಚಭಿರ್ಬ್ರಾಹ್ಮಣೈಸ್ತತಃ ।
ಹೋಮಂ ಚ ಚರುಣಾ ಕುರ್ಯಾದ್ಯಥಾ ವಿಭವವಿಸ್ತರಂ ॥೩೬॥

(ಲಿಂ. ಉ. ಭಾಗ. ಅಧ್ಯಾಯ. ೨೧)

ಶಿವದೀಕ್ಷಾಸಮಯದಲ್ಲಿ ಶ್ರೀಮತ್ಪಂಚಾಚಾರ್ಯರ ಪ್ರತಿನಿಧಿಗಳಾದ ಐದುಜನ ಮಾಹೇಶ್ವರಬ್ರಾಹ್ಮಣರಿಂದ ಪಂಚಕಲಶಗಳನ್ನು ಸ್ಥಾಪಿಸಬೇಕೆಂದೂ, ಅನಂತರ ವೈಭವದೊಡನೆ ಚರುವಿನಿಂದ ಹೋಮವನ್ನು ಮಾಡಬೇಕೆಂದೂ ಈ ಶ್ಲೋಕದ ಅಭಿಪ್ರಾಯವಿರುತ್ತದೆ. ಈ ಶ್ಲೋಕವು ವೀರಶೈವದೀಕ್ಷಾಪ್ರಕರಣದಲ್ಲಿ ಉಕ್ತವಾಗಿದೆ.

ಇನ್ನು ಪೂನಾಪಟ್ಟಣದಲ್ಲಿ ಸ್ಥಾಪಿತವಾಗಿರುವ "ಆನಂದಾಶ್ರಮಸಂಸ್ಕೃತಗ್ರಂಥಮಾಲೆ"ಯಲ್ಲಿ ಮುದ್ರಿಸಲ್ಪಟ್ಟ 'ಸೌರಪುರಾಣ'ದಲ್ಲಿ ಪ್ರತಿಪಾದಿಸಲ್ಪಟ್ಟಿರುವ ವೀರಶೈವಗಣವಿಷಯವನ್ನು ವಿಮರ್ಶಿಸುವೆನು.

ಸೌರಪುರಾಣದಲ್ಲಿ—

ಯಸ್ತು ಮಾಹೇಶ್ವರೋ ವಿಪ್ರೋ ಜಾತಿಮಾತ್ರೋಽಪಿ ಯದ್ಯಪಿ ।
ಉತ್ತಮಃ ಸರ್ವಪಾತ್ರಾಣಾಂ ತಸ್ಮೈ ದತ್ತಂ ತದಕ್ಷಯಂ ॥೧೨॥

(ಸೌ. ಪು. ಅಧ್ಯಾಯ. ೧೦)

ಮಾಹೇಶ್ವರಬ್ರಾಹ್ಮಣನು ಜಾತಿಮಾತ್ರದಿಂದ ವಿಪ್ರನಾಗಿದ್ದರೂ (ಅರ್ಥಾತ್ ಅವನು ಏನನ್ನೂ ಕಲಿಯದಿದ್ದರೂ) ಅವನೇ ದಾನವನ್ನು ತೆಗೆದುಕೊಳ್ಳಲಿಕ್ಕೆ ಉತ್ತಮನೆಂದೂ, ಅವನಿಗೆ ಮಾಡಿದ ದಾನವು ಅಕ್ಷಯವಾಗುವುದೆಂದೂ ಈ ಶ್ಲೋಕದ ಅಭಿಪ್ರಾಯವಿರುತ್ತದೆ. ಈ ಶ್ಲೋಕದಲ್ಲಿ ವೀರಶೈವರಿಗೆ ಗುರುಗಳಾಗಿರುವ ಮಾಹೇಶ್ವರರ ವಂಶಮಹತ್ತ್ವವು ಉಕ್ತವಾಗಿರುವುದು.

ಶಂಭೋರ್ಗಣೇಶ್ವರಾ ಯೇ ಚ ನಾವರ್ತಂತೇ ಭವೇ ಪುನಃ ।
ಭೋಗಾನ್ಯಥೇಪ್ಸಿತಾನ್ ಭುಕ್ತ್ವಾ ಶಂಭೋಸ್ಸಾಯುಜ್ಯಮಾಪ್ನುಯುಃ ॥೪೮॥

ಸ್ವೇಚ್ಛಾವಿಗ್ರಹಿಣಃ ಸರ್ವೇ ಸ್ವೇಚ್ಛಾಚಾರಾ ಗಣೇಶ್ವರಾಃ ।
ಶಿವೇನ ಸಹ ತೇ ಭೋಗಾನ್ ಭುಕ್ತ್ವಾ ಯಾಂತಿ ಶಿವಂ ಪದಂ ॥೪೯॥

(ಸೌ. ಪು. ಅಧ್ಯಾಯ. ೩೨)

ಯಾರು ಶಿವಗಣಾಧೀಶ್ವರರೋ ಅವರು ಪುನಃ ಸಂಸಾರಕ್ಕೆ ಬರುವುದಿಲ್ಲವೆಂದೂ, ಯಥೇಷ್ಟವಾಗಿ ಶಿವಭೋಗಗಳನ್ನು ಭೋಗಿಸಿ ಶಿವಸಾಯುಜ್ಯವನ್ನೈದುವರೆಂದೂ, ಎಲ್ಲ ಗಣಾಧೀಶ್ವರರೂ ಸ್ವೇಚ್ಛಾಚಾರಶೀಲರೆಂದೂ, ಅವರು ಶಿವನೊಡನೆ ಭೋಗಗಳನ್ನನು ಭವಿಸಿ ಶಿವಪದವನ್ನು ಹೊಂದುವರೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ಶಿವಗಣಾಧೀಶ್ವರರು ವೀರಶೈವಮತಪ್ರವರ್ತಕರಾಗಿರುವರೆಂಬ ವಿಷಯವು ಸರ್ವರಿಗೂ ವೇದ್ಯವೇ ಅದೆ.

ಭೃಂಗೀ ಪುರತ್ರಯಂ ಹಂತುಂ ಲಕ್ಷಕೋಟಿಗಣೈರ್ಯುತಃ ॥೨೫॥

ಜಗಾಮ **ಶಂಕುಕರ್ಣಶ್ಚ ಗೋಕರ್ಣಶ್ಚ** ಮಹಾಬಲಃ ।
ಕುಂಭದಂತೋ ಮಹಾಕಾಲೋ ಡಿಂಡೀ ಮುಂಡೀ ಗಣೇಶ್ವರಃ ॥೨೬॥

ಶತಜಿಹ್ವಃ ಸಹಸ್ರಾಕ್ಷೋ ವೀರಭದ್ರೋ ಮಹಾಬಲಃ ।
ಶಿವಾಖ್ಯೋ ವಿಶಿಖಶ್ಚೈವ ತಥಾ ಪಂಚಶಿಖೋ ಮಹಾನ್ ॥೨೭॥
(ಸೌ. ಪು. ಅಧ್ಯಾಯ. ೩೫)

ಭೃಂಗಿಯು ತ್ರಿಪುರಾಸುರರನ್ನು ನಾಶಮಾಡುವುದಕ್ಕೋಸ್ಕರ ಶಂಕುಕರ್ಣ, ಗೋಕರ್ಣ, ಮಹಾಬಲ, ಕುಂದದಂತ, ಡಿಂಡಿ, ಮುಂಡಿ, ಶತಜಿಹ್ವ, ಸಹಸ್ರಾಕ್ಷ, ವೀರಭದ್ರ, ಶಿವ, ವಿಶಿಖ, ಪಂಚಶಿಖ ಇವರೇ ಮೊದಲಾದ ಅಸಂಖ್ಯಪ್ರಮಥರೊಡನೆ ಹೊರಟನೆಂದು ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ಈ ಪ್ರಮಥರೆಲ್ಲರೂ ಲಿಂಗಧಾರಿಗಳೆಂಬ ವಿಷಯವೂ, **ಶಂಕುಕರ್ಣ** ಮತ್ತು **ಗೋಕರ್ಣ** ಈ ಉಭಯರೂ ವೀರಶೈವಮತಸ್ಥಾಪಕರಾದ ಪಂಚಾಚಾರ್ಯರಲ್ಲಿ ಪರಿಶೋಭಿಸುತ್ತಿರುವರೆಂಬ ವಿಷಯವೂ ಶಿವಾಗಮಗಳಲ್ಲಿ ಘಂಟಾಘೋಷವಾಗಿ ಹೇಳಲ್ಪಟ್ಟಿದೆ. ಶಂಕುಕರ್ಣ ಮತ್ತು ಗೋಕರ್ಣ ಎಂಬ ನಾಮಗಳು **ಘಂಟಾಕರ್ಣ** ಮತ್ತು **ಧೇನುಕರ್ಣ** ಶಿವಾಚಾರ್ಯರ ಪರ್ಯಾಯನಾಮಗಳೆಂದ ಶಿವಾಗಮಗಳಲ್ಲಿ ಉದಾಹರಿಸಲ್ಪಟ್ಟಿವೆ.

ಮದ್ರಾಸ್, ಮೈಸೂರು, ಸೊಲ್ಲಾಪುರ ಮೊದಲಾದ ಪಟ್ಟಣಗಳಲ್ಲಿ ಸ್ಕಂದಪುರಾಣಾಂತರ್ಗತ 'ಶಂಕರಸಂಹಿತೆ' ಯು ಮುದ್ರಿಸಲ್ಪಟ್ಟಿರುವುದು. ಈ ಸಂಹಿತೆಯ ೮೧-೮೨-೮೩-೮೪-೮೫ ಮತ್ತು ೮೬ ನೆಯ ಅಧ್ಯಾಯಗಳಲ್ಲಿ ಕೇವಲ ವೀರಶೈವಮತವಿಷಯವೇ ತುಂಬಿ ತುಳುಕುತ್ತಿರುವುದು. ಸದ್ಯಃ ಅದನ್ನೇ ಸಂಕ್ಷೇಪವಾಗಿ ವಿವರಿಸುತ್ತೇನೆ.

ಸ್ಕಂದಪುರಾಣ ಶಂಕರಸಂಹಿತೆಯಲ್ಲಿ—

ಯತ್ರ ಮಾಹೇಶ್ವರಃ ಕುರ್ಯಾಚ್ಛಿವಲಿಂಗಾರ್ಚನಂ ಸಕೃತ್ ।
ವಸಂತಿ ತತ್ರ ತೀರ್ಥಾನಿ ಸರ್ವಾಣಿ ಸತತಂ ಗುಹ ॥೬೫॥

ವೀರಮಾಹೇಶ್ವರಂ ಮಾಂ ಚ ವಿಭಿನ್ನಂ ಪ್ರವದಂತಿ ಯೇ ।
ತೇ ಮೂಢಾ ಏವ ಮನುಜಾ ನಾತ್ರ ಕಾರ್ಯಾ ವಿಚಾರಣಾ ॥೬೬॥

(ಸ್ಕಂದ. ಶಂ. ಸಂ. ಅಧ್ಯಾಯ. ೮೧)

ಮಾಹೇಶ್ವರನು (ಗುರುವಂಶೋದ್ಭವನಾದ ಜಂಗಮನು) ಯಾವ ಸ್ಥಾನದಲ್ಲಿ ಶಿವಲಿಂಗಾರ್ಚನೆಯನ್ನು ಮಾಡುವನೋ, ಅಲ್ಲಿ ಸಕಲತೀರ್ಥಗಳೂ ಸನ್ನಿಹಿತವಾಗುವುವೆಂದೂ, ವೀರಮಾಹೇಶ್ವರನಿಗೂ ಶಿವನಿಗೂ ಯಾರು ಭೇದವನ್ನು ಕಲ್ಪಿಸುವರೋ ಅವರು ಮೂರ್ಖರೆಂದೂ ಶ್ರೀಪರಮೇಶ್ವರನು ಷಣ್ಮುಖನಿಗೆ ಉಪದೇಶಿಸಿರುವನು.

ಧಾರಯೇದವಧಾನೇನ ಲಿಂಗಂ ಸದ್ಗುರುಣಾಽರ್ಪಿತಂ ।
ಪ್ರಮಾದಾತ್ಪತಿತೇ ಲಿಂಗೇ ಪ್ರಾಣಾನಪಿ ಪರಿತ್ಯಜೇತ್ ॥೬೭॥

ಪತಿತೇ ಪ್ರಾಣಲಿಂಗೇ ಯೋ ಧತ್ತೇ ಪ್ರಾಣಾನ್ನರಾಧಮಃ ।
ಸ ಚಂಡಾಲ ಇತಿ ಜ್ಞೇಯಃ ಶಿವದ್ರೋಹೀ ನ ತಂ ಸ್ಪೃಶೇತ್ ॥೬೮॥

(ಸ್ಕಂದ. ಶಂ. ಸಂ. ಅಧ್ಯಾಯ. ೮೩)

ಸದ್ಗುರುವಿನಿಂದ ಅನುಗ್ರಹಿಸಲ್ಪಟ್ಟ ಶಿವಲಿಂಗವನ್ನು ಪ್ರೇಮಪೂರ್ವಕವಾಗಿ ಶರೀರದಲ್ಲಿ ಧರಿಸಿಕೊಳ್ಳಬೇಕೆಂದೂ, ಈ ಶಿವಲಿಂಗವು ಶರೀರದಿಂದ ವಿಯೋಗವನ್ನು ಹೊಂದಿದರೆ ಪ್ರಾಣವನ್ನು ಬಿಡಬೇಕೆಂದೂ, ಶಿವಲಿಂಗವು ಶರೀರದಿಂದ ಅಗಲಿದ ಮೇಲೆ ಪ್ರಾಣವನ್ನು ಧರಿಸಿದ್ದಾದರೆ ಅವನು ನರಾಧಮನೂ, ಚಂಡಾಲನೂ, ಶಿವದ್ರೋಹಿಯೂ ಆಗುವನೆಂದೂ, ಅವನನ್ನು ಯಾರೂ ಮುಟ್ಟಬಾರದೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಶಿವಲಿಂಗಾಂಗಸಂಬಂಧಭಾಜಾಂ ದರ್ಶನಮಾತ್ರತಃ ।
ಮುಕ್ತಿಂ ಗಚ್ಛಂತಿ ಮನುಜಾಃ ಪಶುಪಕ್ಷಿಮೃಗಾದಯಃ ॥೮೭॥

ತೇಷಾಂ ಸಂರಕ್ಷಣಂ ಯಸ್ತು ಕುರುತೇ ಮನುಜೋತ್ತಮಃ ।
ಸ ಧನ್ಯಃ ಸ ಕೃತಾರ್ಥಃ ಸ್ಯಾತ್ ಸ ಶಿವೈಕ್ಯಪದಂ ವ್ರಜೇತ್ ॥೮೮॥

ತಸ್ಮಾತ್ಸರ್ವಂ ಪರಿತ್ಯಜ್ಯ ಸರ್ವಭಾವೇನ ಸರ್ವದಾ ।
ಪೂಜಯೇದಾದರೇಣೈವ ದ್ವಿಜಂ ಲಿಂಗಾಂಗಸಂಗಿನಂ ॥೮೯॥

(ಸ್ಕಂದ. ಶಂ. ಸಂ. ಅಧ್ಯಾಯ. ೮೩)

ಶಿವಲಿಂಗಾಂಗಸಂಬಂಧವುಳ್ಳ ವೀರಮಾಹೇಶ್ವರರ ದರ್ಶನ ಮಾತ್ರದಿಂದ ಮನುಷ್ಯರಿಗೂ ಪಶುಪಕ್ಷಿಮೃಗಾದಿಗಳಿಗೂ ಮುಕ್ತಿಯು ದೊರಕುವುದೆಂದೂ, ಈ ವೀರಮಾಹೇಶ್ವರರ ಸಂರಕ್ಷಣೆಯನ್ನು ಯಾವನು ಮಾಡುವನೋ ಅವನೇ ಧನ್ಯನೆಂದೂ, ಅವನು ಶಿವಪದ ವನ್ನು ಹೊಂದುವನೆಂದೂ, ಆದಕಾರಣ ಸಕಲಕಾರ್ಯಗಳನ್ನು ಬಿಟ್ಟು ಆದರಬುದ್ಧಿಯಿಂದ ಲಿಂಗಾಂಗಸಂಗಿಯಾದ ಮಾಹೇಶ್ವರಬ್ರಾಹ್ಮಣ ನನ್ನು ಪೂಜಿಸಬೇಕೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಉರಃಸ್ಥಲೇ ಹರಿರ್ಲಿಂಗಂ ಧೃತ್ವಾ ಶಕ್ರಪುರೋಗಮಾಃ ।
ಲಿಂಗಸ್ಥಂ ಮಾಂ ಸಮಾರಾಧ್ಯ ಸ್ವಂ ಸ್ವಂ ಪದಮವಾಪಿರೇ ॥೪೩॥

ಲಕ್ಷ್ಮೀಸರಸ್ವತೀಮುಖ್ಯಾ ದೇವ್ಯೋ ಮಲ್ಲಿಂಗಮಾದರಾತ್ ।
ಧೃತ್ವಾ ನಿಜಾಂಗೇ ತಲ್ಲೀನಭಾವಾ ಜಗ್ಮುಃ ಪರಂ ಸುಖಂ ॥೪೪॥

(ಸ್ಕಂದ. ಶಂ. ಸಂ. ಅಧ್ಯಾಯ. ೮೪)

ವಿಷ್ಣು, ಇಂದ್ರ ಮೊದಲಾದ ದೇವತೆಗಳು ವಕ್ಷಃಸ್ಥಲದಲ್ಲಿ ಶಿವ ಲಿಂಗವನ್ನು ಧರಿಸಿ ಪೂಜಿಸಿ ತಮ್ಮ ತಮ್ಮ ಸ್ಥಾನಗಳನ್ನು ಹೊಂದಿದ ರೆಂದೂ, ಲಕ್ಷ್ಮಿ-ಸರಸ್ವತಿ ಮೊದಲಾದ ದೇವತಾಸ್ತ್ರೀಯರೂ ಸಹ ಶಿವಲಿಂಗವನ್ನು ತಮ್ಮ ಶರೀರದಮೇಲೆ ಧರಿಸಿಕೊಂಡು ಪೂಜಿಸಿ ಅಸಾಧಾರಣವಾದ ಸುಖವನ್ನು ಹೊಂದಿದರೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ತಸ್ಮಿಂಚ್ಛ್ರೀಪರ್ವತೇ ಪುಣ್ಯೇ ಸಂಸಾರಾಮಯಭೇಷಜೇ ।
ಆಸ್ತೇ ಲಿಂಗಾಂಗಸಂಬಂಧೀ **ಸದಾನಂದಾ**ಹ್ವಯೋ ಮುನಿಃ ॥೯೧॥

ಸರ್ವೋಪನಿಷದರ್ಥಜ್ಞಃ ಶಿವಧ್ಯಾನಪರಾಯಣಃ ।
ಭಸ್ಮಾವಲಿಪ್ತಸರ್ವಾಂಗೋ ರುದ್ರಾಧ್ಯಾಯಜಪಾಶ್ರಯಃ ॥೯೨॥

ರುದ್ರಾಕ್ಷಮಾಲಾಭರಣೋ ಧೃತಪಾಶುಪತವ್ರತಃ ।
ಅತಿವರ್ಣಾಶ್ರಮೀ ಯೋಗೀ ಜೀವನ್ಮುಕ್ತೋ ಜಗದ್ಗುರುಃ ॥೯೩॥

ತಂ ಸದಾನಂದನಾಮಾನಂ ಶಂಕರಧ್ಯಾನಲಾಲಸಂ ।
ನಿರಸ್ತಕುಹಕಂ ವಿಪ್ರ ಸಹ ಪುತ್ರೇಣ ಪೂಜಯ ॥೯೪॥

ತಸ್ಯ ಪ್ರಸಾದಾತ್ತೇ ಪುತ್ರೋ ಗಚ್ಛೇನ್ನೀರೋಗತಾಂ ಧ್ರುವಂ ।
ತಸ್ಮಾದುತ್ತಿಷ್ಠ ಗಚ್ಛ ತ್ವಂ ಶ್ರೀಪರ್ವತಮತಂದ್ರಿತಃ ॥೯೫॥

(ಸ್ಕಂದ. ಶಂ. ಸಂ. ಅಧ್ಯಾಯ. ೮೫)

" ಸಂಸಾರರೋಗವನ್ನು ನಾಶಮಾಡತಕ್ಕ ಪರಮಪವಿತ್ರವಾದ ಶ್ರೀಶೈಲಕ್ಷೇತ್ರದಲ್ಲಿ ಲಿಂಗಾಂಗಿಯೂ, ಸಕಲೋಪನಿಷತ್ತುಗಳ ಅರ್ಥವನ್ನು ಬಲ್ಲವನೂ, ಶಿವಧ್ಯಾನಲೋಲನೂ, ಭಸ್ಮಧಾರಿಯೂ, ರುದ್ರಾಕ್ಷಮಾಲಾಲಂಕೃತನೂ, ಶ್ರೀರುದ್ರಾಧ್ಯಾಯಜಪಾಸಕ್ತನೂ, ಶಿವವ್ರತಯುತನೂ, ಅತಿವರ್ಣಾಶ್ರಮಿಯೂ, ಯೋಗಿಯೂ, ಜೀವನ್ಮುಕ್ತನೂ, ಜಗದ್ಗುರುವೂ ಆಗಿರುವ "**ಸದಾನಂದ**"ನೆಂಬ ಯತಿಶ್ರೇಷ್ಠನಿರುವನು. ಆ ಜಗದ್ಗುರುವನ್ನು ಪೂಜಿಸಿದ್ದಾದರೆ, ಆ ಮಹನೀಯನ ಅನುಗ್ರಹದಿಂದ ನಿನ್ನ ಮಗನಾದ ಪಿಂಗಲನು ರೋಗದಿಂದ ದೂರನಾಗುವನು. ಆದುದರಿಂದ ಕೂಡಲೆ ನೀನು ಶ್ರೀಶೈಲಕ್ಷೇತ್ರಕ್ಕೆ ಹೊರಟು ಹೋಗು." ಎಂದು ಹರಪ್ರಿಯನು ಶ್ವೇತನಿಗೆ ಹೇಳಿದ ವಿಷಯವು ಈ ಶ್ಲೋಕಗಳಲ್ಲುಕ್ತವಾಗಿದೆ. ಈ ಶ್ಲೋಕಗಳು ಶ್ರೀಶೈಲಕ್ಷೇತ್ರದಲ್ಲಿ

ಅನಾದಿಕಾಲದಿಂದ ವಿರಾಜಿಸುತ್ತಿರುವ ವೀರಶೈವಗುರುಪೀಠಕ್ಕೆ ಅಧಿಪತಿಗಳಾಗಿದ್ದ **ಶ್ರೀಜಗದ್ಗುರು ಸದಾನಂದಶಿವಯೋಗಿಗಳ** ವಿಷಯಕವಾಗಿರುವುವೆಂದು ಸ್ಪಷ್ಟವಾಗುತ್ತದೆ.

ಮಹಾಭಾರತ ಅನುಶಾಸನಪರ್ವದಲ್ಲಿ—

ಕಿಮಾಹುರ್ಭರತಶ್ರೇಷ್ಠ ಪಾತ್ರಂ ವಿಪ್ರಾಃ ಸನಾತನಾಃ ।
ಬ್ರಾಹ್ಮಣಂ ಲಿಂಗಿನಂ ಚೈವ ಬ್ರಾಹ್ಮಣಂ ವಾಽಪ್ಯಲಿಂಗಿನಂ ॥೧॥

ಸ್ವವೃತ್ತಿಮಭಿಪನ್ನಾಯ ಲಿಂಗಿನೇ ಚೇತರಾಯಚ ।
ದೇಯಮಾಹುರ್ಮಹಾರಾಜ ಉಭಾವೇತೌ ತಪಸ್ವಿನೌ ॥೨॥

(ಮ. ಭಾ. ಅನು. ಪರ್ವ. ಅಧ್ಯಾಯ. ೨೨)

ಎಲೈ ಭರತಶ್ರೇಷ್ಠನಾದ ಭೀಷ್ಮನೇ! ಲಿಂಗಿಬ್ರಾಹ್ಮಣ ಮತ್ತು ಅಲಿಂಗಿಬ್ರಾಹ್ಮಣ ಇವರಿಬ್ಬರಲ್ಲಿ ದಾನವನ್ನು ತೆಗೆದುಕೊಳ್ಳುವುದಕ್ಕೆ ಯಾರು ಯೋಗ್ಯರು? ಎಂದು ಧರ್ಮರಾಜನು ಪ್ರಶ್ನೆಮಾಡಲು, ಅದಕ್ಕೆ ಭೀಷ್ಮನು—ಎಲೈ ಧರ್ಮರಾಜನೇ! ತನ್ನ ಧರ್ಮದಲ್ಲಿ ನಿಷ್ಠೆಯುಳ್ಳ ಲಿಂಗಿಬ್ರಾಹ್ಮಣನಿಗಾಗಲಿ ಅಥವಾ ಅಲಿಂಗಿಬ್ರಾಹ್ಮಣನಿಗಾಗಲಿ ದಾನಮಾಡಬೇಕೆಂದೂ, ಇವರಿಬ್ಬರೂ ತಪಸ್ವಿಗಳೆಂದೂ ಉತ್ತರವನ್ನು ಹೇಳಿದ್ದಾನೆ. ಈ ಶ್ಲೋಕಗಳಲ್ಲಿ ಲಿಂಗಧಾರಿಮಾಹೇಶ್ವರ ಬ್ರಾಹ್ಮಣರ ಪೂಜ್ಯತೆಯು ಸ್ಪಷ್ಟವಾಗಿ ಪ್ರತಿಪಾದಿಸಲ್ಪಟ್ಟಿದೆ. ಈ ಮಹಾಭಾರತವು ಕಲಕತ್ತಾನಗರನಿವಾಸಿಗಳಾದ ಪ್ರತಾಪಚಂದ್ರರಾಯ ಮಹೋದಯರಿಂದ ಶಕ ೧೮೦೯ ರಲ್ಲಿ ಮುದ್ರಿಸಲ್ಪಟ್ಟಿದೆ.

ಇಲ್ಲಿಯವರೆಗೆ ವೇದಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ, ಆಗಮಗಳಲ್ಲಿಯೂ, ಪುರಾಣಗಳಲ್ಲಿಯೂ, ಇತಿಹಾಸಗಳಲ್ಲಿಯೂ ವೀರ

ಶೈವಮತದ ವಿಷಯವು ಯಾವರೀತಿಯಾಗಿ ಪ್ರತಿಪಾದಿಸಲ್ಪಟ್ಟಿರುವು ದೆಂಬುದು ಪ್ರಮಾಣಪುರಸ್ಸರವಾಗಿ ತೋರಿಸಲ್ಪಟ್ಟಿತಷ್ಟೆ! ಈ ರೀತಿ ಯಾಗಿ ಲೋಕೈಕಮಾನ್ಯವಾಗಿ ಮೆರೆಯುತ್ತಿರುವ ವೀರಶೈವಮತದ ವಿಷಯದಲ್ಲಿ ಸರ್ವರೂ ಆದರಬುದ್ಧಿಯನ್ನಿಟ್ಟು ವರ್ತಿಸಬೇಕೆಂದೂ, ಸರ್ವೇಶ್ವರನು ಸರ್ವರಲ್ಲಿಯೂ ಇಂತಹ ಸದ್ಬುದ್ಧಿಯನ್ನನುಗ್ರಹಿಸ ಲೆಂದೂ, ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಅನುಗ್ರಹಬಲದಿಂದ ವೀರಶೈವಮತವು ಪೂರ್ವದಂತೆ ಜಗತ್ತಿನಲ್ಲಿ ಸರ್ವತೋಮುಖವಾಗಿ ರಾರಾಜಿಸಲೆಂದೂ ಆ ಪೂಜ್ಯಪಾದರ ಪಾದಕಮಲಗಳನ್ನು ಧ್ಯಾನಿಸಿ, ನನ್ನೀ ಭಾಷಣವನ್ನು ಸಮಾಪ್ತಿ ಗೊಳಿಸುತ್ತೇನೆ.

ಶಿವಂಭೂಯಾತ್! ಶಿವಂಭೂಯಾತ್!!

ಭಾಗ—೪

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ಮೈಸೂರುರಾಜಧಾನಿಯಲ್ಲಿ ಪ್ರಜೋತ್ಪತ್ತಿಸಂವತ್ಸರದ ವೈಶಾಖ ಶು|| ೫
(ತಾ|| ೨೨-೪-೧೯೩೧) ದಿವಸ ನೆರವೇರಿದ

ಶ್ರೀಜಗದ್ಗುರುದಾರುಕಜಯಂತೀಮಹೋತ್ಸವ ಸಮಯದಲ್ಲಿ

ನಾಗನೂರು ಬೃಹನ್ಮಠಾಧ್ಯಕ್ಷರಾದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ

ಭಾಷಣ.

ಪಂಚಾನನತನೂದ್ಭೂತಾನ್ ಪಂಚಾಕ್ಷರಮನೂಪಮಾನ್ ।
ಪಂಚಸೂತ್ರಕೃತೋ ವಂದೇ ಪಂಚಾಚಾರ್ಯಾನ್ ಜಗದ್ಗುರೂನ್ ॥

ಸಭಾಸದರೇ! ಈ ಪ್ರಜೋತ್ಪತ್ತಿಸಂವತ್ಸರವೈಶಾಖ ಶು|| ೫ ದಿವಸ ಪ್ರಾಪ್ತವಾಗಿರುವ ವೀರಶೈವಮತಸ್ಥಾಪನಾಚಾರ್ಯರಲ್ಲೊಬ್ಬರಾದ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವದ ಈ ಶುಭಸಮಯದಲ್ಲಿ ತಾವೆಲ್ಲರೂ ಇಲ್ಲಿ ಸಮ್ಮಿಲಿತರಾಗಿರುವುದನ್ನು ಕಂಡು ಅತ್ಯಂತಸಂತೋಷವೆನಿಸುತ್ತದೆ. ವೀರಶೈವರು ಯಾವಾಗಲೂ ಶಿವಧ್ಯಾನದಲ್ಲಿಯೂ, ಶಿವಕಥಾಶ್ರವಣದಲ್ಲಿಯೂ, ಶಿವಕ್ಷೇತ್ರಗಳ ಮಹಿಮಾತಿಶಯವನ್ನು ತಿಳಿದುಕೊಳ್ಳುವುದರಲ್ಲಿಯೂ ಬದ್ಧಾದರರಾಗಬೇಕಾಗಿರುವುದರಿಂದ, ತಮ್ಮ ಮನಸ್ಸಂತೋಷಕ್ಕೋಸ್ಕರ ಈ ದಿವಸ ಶಿವಕ್ಷೇತ್ರಗಳ ವಿಷಯವನ್ನು ಕುರಿತು ಸಂಭಾಷಿಸಲಿಚ್ಛಿಸುತ್ತೇನೆ.

ಶಿವಕ್ಷೇತ್ರಗಳು ನಮ್ಮ ಭರತಖಂಡದಲ್ಲಿ ಅನೇಕಾನೇಕವಾಗಿರುವುವು. ಈ ವಿಷಯವು ಸರ್ವರಿಗೂ ತಿಳಿದುದಾಗಿರುವದರಿಂದ ನಮ್ಮ ಖಂಡ ದಲ್ಲಿರುವ ಶಿವಕ್ಷೇತ್ರಗಳ ವಿಷಯವನ್ನು ಪ್ರಸ್ತಾಪಿಸಲಿಚ್ಛಿಸುವುದಿಲ್ಲ. ಆದರೆ ಭರತಖಂಡದ ಹೊರಗಿರತಕ್ಕ ದೇಶಗಳಲ್ಲಿರುವ ಶಿವಕ್ಷೇತ್ರಗಳ ವಿಷಯವು ಅನೇಕಜನರಿಗೆ ತಿಳಿಯದಾಗಿದೆ. ಆದುದರಿಂದ ಆ ವಿಷಯ ವನ್ನೇ ಈಗ ಪ್ರಸ್ತಾಪಿಸುತ್ತೇನೆ.

ವಿದೇಶಗಳಲ್ಲಿ ಶಿವದೇವಾಲಯಗಳು ಇಲ್ಲವೇ ಇಲ್ಲವೆಂದು ಅನೇಕರ ಭಾವನೆಯಾಗಿರುವುದು. ಇದು ಭ್ರಮೆಯಲ್ಲದೆ ಬೇರೆಯಲ್ಲ. ಏಕೆಂದರೆ—ಈ ಅಖಂಡಭೂಮಂಡಲವನ್ನು ಸೃಷ್ಟಿಸಿದ ಆ ಶಿವನ ಸಂಬಂಧವು ಸಮಸ್ತದೇಶಗಳಲ್ಲಿಯೂ ಇದ್ದೇ ಇರುವುದು; ಹಾಗಿಲ್ಲ ದಿದ್ದರೆ ಅವನಲ್ಲಿ ಅಖಂಡಸೃಷ್ಟಿಕರ್ತೃತ್ವವು ಎಂದೂ ಸಿದ್ಧಿಸಲಾರದು. ಈ ವಿಷಯವನ್ನು ನಾನು ವಿಭವಸಂವತ್ಸರದಲ್ಲಿ ಈ ಸ್ಥಾನದಲ್ಲಿಯೇ ಪ್ರಸ್ತಾಪಿಸಿ, ಯೂರೋಪ್, ಆಫ್ರಿಕಾ ಮೊದಲಾದ ಖಂಡಗಳಲ್ಲಿ ಶಿವಾಲಯಗಳು ಯಾವ ಯಾವ ಸ್ಥಾನಗಳಲ್ಲಿರುವುವೆಂಬುದನ್ನು ಸಂಕ್ಷೇಪವಾಗಿ ತಿಳುಹಿಸಿದ್ದೇನೆ. ಈ ದಿವಸ ಫ್ರೆಂಚರ ರಾಜ್ಯದಲ್ಲಿಯೂ, ಡಚ್ಚರ ರಾಜ್ಯದಲ್ಲಿಯೂ ಇರತಕ್ಕ ಶಿವಾಲಯಗಳ ವಿಷಯವನ್ನು ಸಂಕ್ಷೇಪವಾಗಿ ವಿವರಿಸುತ್ತೇನೆ.


ಫ್ರೆಂಚರ ಆಧಿಪತ್ಯಕ್ಕೊಳಪಟ್ಟಿರುವ "**ಅನ್ನಾಂ**" ದೇಶದಲ್ಲಿ ಶಿವಾಲಯಗಳು ಅನೇಕಾನೇಕವಾಗಿರುವುವು. ಈ ಅನ್ನಾಂ (Annam) ದೇಶವು ಇಂಡೋ-ಚೈನಾ (Indo Chaina) ದಲ್ಲಿರುವದು. ಪೂರ್ವ ದಲ್ಲಿ ಈ ದೇಶಕ್ಕೆ "**ಚಂಪಾ**" ಎಂದು ಕರೆಯುತ್ತಿದ್ದರು. ಈ ದೇಶದಲ್ಲಿ ಈಗಲೂ ಅನೇಕಾನೇಕಪ್ರಾಚೀನಶಿವದೇವಾಲಯಗಳು ಪರಿಶೋಭಿಸುತ್ತಿರುವುವು. ಫ್ರಾನ್ಸ್‌ದೇಶದ ಇತಿಹಾಸಸಂಶೋಧಕರಲ್ಲಿ

ಪ್ರಸಿದ್ಧರಾದ ಮಿ॥ ಎ. ಬರ್ಗೆನ್ (A. Bergaigne) ಎಂಬವರು ಆ ದೇಶದ ದೇವಾಲಯುಗಳಲ್ಲಿರತಕ್ಕ ಸಮಸ್ತಸಂಸ್ಕೃತ ಶಿಲಾಶಾಸನಗಳನ್ನು ಪರಿಶೋಧಿಸಿ ಒಂದು ದೊಡ್ಡ ಗ್ರಂಥವನ್ನೇ ರಚಿಸಿರುವರು. ಈ ಗ್ರಂಥಾಧಾರಗಳಿಂದಲೂ, ಇತರ ಫ್ರೆಂಚ್ ಗ್ರಂಥಾಧಾರಗಳಿಂದಲೂ ಮಿ॥ ಆರ್. ಸಿ. ಮಜುಂದಾರ್ ಎಂಬವರು "Ancient Indian Colonies in the Far East" ಎಂಬ ಗ್ರಂಥವನ್ನು ಬರೆದಿರುವರು. ಈ ಗ್ರಂಥದಲ್ಲಿ ಆ ದೇಶದಲ್ಲಿರುವ ಸಕಲಶಿವಾಲಯಗಳ ವಿಷಯವು ಬಹುವಿಸ್ತರವಾಗಿ ಪ್ರತಿಪಾದಿಸಲ್ಪಟ್ಟಿರುವುದಲ್ಲದೆ, ಆ ದೇಶದಲ್ಲಿರತಕ್ಕ ಅನೇಕಶಾಸನಗಳು ಉದಾಹರಿಸಲ್ಪಟ್ಟಿವೆ. ಇವುಗಳಲ್ಲಿ ೯೨ ಶಾಸನಗಳು ಶಿವನ ವಿಷಯಕವಾಗಿಯೂ, ೩ ಶಾಸನಗಳು ವಿಷ್ಣುವಿನ ವಿಷಯಕವಾಗಿಯೂ, ೫ ಶಾಸನಗಳು ಬ್ರಹ್ಮನ ವಿಷಯಕವಾಗಿಯೂ, ೨ ಶಾಸನಗಳು ಶಿವ ಮತ್ತು ವಿಷ್ಣು ಇವರಿಬ್ಬರ ವಿಷಯಕವಾಗಿಯೂ, ೭ ಶಾಸನಗಳು ಬುದ್ಧನ ವಿಷಯಕವಾಗಿಯೂ ಇರುವುವು. ಈ ಮಹೋದಯರು ಸಂಸ್ಕೃತಾಕ್ಷರಗಳಿಂದಿರತಕ್ಕ ಆ ಸಮಸ್ತಶಾಸನಗಳನ್ನು ಇದ್ದಕ್ಕಿದ್ದಹಾಗೆಯೇ ಮುದ್ರಿಸಿರುವರು. ಕೆಲವು ಪ್ರಾಚೀನಶಾಸನಗಳಲ್ಲಿ ಅಕ್ಷರಗಳೇ ಲೋಪವಾಗಿವೆ. ಆ ಶಾಸನಗಳಲ್ಲಿರತಕ್ಕ ಸಂಸ್ಕೃತಕವಿತಾಶೈಲಿಯು ಬಹುಹೃದಯಂಗಮವಾಗಿದೆ. ಶಿವನ ವಿಷಯಕವಾಗಿರುವ ಅನೇಕಶಾಸನಗಳ ಮೇಲ್ಭಾಗದಲ್ಲಿ "ಓಂ ನಮಃ ಶಿವಾಯ" ಎಂಬ ಮಹಾಮಂತ್ರವು ಬರೆಯಲ್ಪಟ್ಟಿದ್ದು, ಮುಂದೆ ಆ ದೇಶವನ್ನಾಳುತ್ತಿದ್ದ ರಾಜರ ವಿಷಯವೂ, ಅವರು ಸ್ಥಾಪಿಸಿದ ಶಿವಲಿಂಗಗಳ ವಿಷಯವೂ ಗದ್ಯಪದ್ಯಾತ್ಮಕವಾಗಿ ಬರೆಯಲ್ಪಟ್ಟಿವೆ. ಆ ದೇಶದ ಪ್ರತಿಯೊಂದು ಶಾಸನಗಳನ್ನು ಓದಿ ನೋಡಿದರೆ, ಶಿವಭಕ್ತರ ಮನಸ್ಸು ಆನಂದಸಾಗರದಲ್ಲಿ ಲೋಲಾಡುವಂತಿದೆ.


ಪೂರ್ವದಲ್ಲಿ ಆ ದೇಶವನ್ನಾಳುತ್ತಿದ್ದ ಸಮಸ್ತರಾಜರೂ ಪರಮ ಶಿವಭಕ್ತರಾಗಿ ಹೋಗಿದ್ದಾರೆ. ಆ ರಾಜರಲ್ಲಿದ್ದ ಶಿವಭಕ್ತಿಯು, ಶೈವ ಶಿಖಾಮಣಿಗಳೆಂದು ಹೇಳಿಸಿಕೊಳ್ಳುವ ವೀರಶೈವರಲ್ಲಿಯೂ ಸಹ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು.

ಆ ದೇಶದಲ್ಲಿ "ಮಿ-ಸೋನ" ಎಂಬ ಗ್ರಾಮವಿರುವುದು. ಆ ಗ್ರಾಮವು ಪೂರ್ವದಲ್ಲಿ ಶ್ರೀಕಾಶೀಕ್ಷೇತ್ರಕ್ಕಿಂತಲೂ ಮಿಗಿಲಾದ ಶಿವ ಕ್ಷೇತ್ರವೆನಿಸಿಕೊಂಡಿತ್ತೆಂದು ಅಲ್ಲಿರತಕ್ಕ ಅನೇಕಾನೇಕಶಿವದೇವಾಲಯ ಗಳಿಂದಲೂ, ಶಿಲಾಶಾಸನಗಳಿಂದೂ ತಿಳಿದುಬರುತ್ತದೆ. ಅಲ್ಲಿರತಕ್ಕ ಶಿವಾಲಯಗಳಷ್ಟು ಮನೋಹರವಾದ ಶಿವಾಲಯಗಳು ನಮ್ಮ ಭರತಖಂಡದಲ್ಲಿಯೇ ಇಲ್ಲವೆಂದು ಹೇಳಬಹುದಾಗಿದೆ. ಇಂಥ ಪರಮ ಪವಿತ್ರವಾದ ಶಿವಕ್ಷೇತ್ರವು ಕಾಲಮಹಿಮೆಯಿಂದ ಅನ್ಯಮತೀಯರ ಕೈಸೇರಿ, ಅತ್ಯಂತಹೀನಾವಸ್ಥೆಗೊಳಗಾಗಿರುವುದನ್ನು ನೋಡಿದರೆ ಯಾರಿಗೆತಾನೆ ವ್ಯಸನವೆನಿಸಲಿಕ್ಕಿಲ್ಲ?

ಈ ಮಿ-ಸೋನ ಗ್ರಾಮದಲ್ಲಿ ಅನೇಕಶಾಸನಗಳಿದ್ದು, ಅವುಗಳ ಲ್ಲಿಯ ೪ ನೆಯ ಶಾಸನದಲ್ಲಿ—ಭದ್ರವರ್ಮನೆಂಬ ಮಹಾರಾಜನು "**ಭದ್ರೇಶ್ವರ**" ಎಂಬ ಶಿವಲಿಂಗವನ್ನು ಸ್ಥಾಪಿಸಿ, ಆ ದೇವರ ಸೇವೆ ಗೋಸ್ಕರ ಸುಲಹಪರ್ವತ, ಮಹಾಪರ್ವತ, ಕುಚಕಪರ್ವತ, ಮಹಾನದಿ ಇವುಗಳ ಮಧ್ಯದಲ್ಲಿರುವ ಸಮಸ್ತಭೂಮಿಯನ್ನು ದಾನಮಾಡಿದ ವಿಷಯವು ಬರೆಯಲ್ಪಟ್ಟಿರುತ್ತದೆ. ಈ ಶಾಸನವು ಕ್ರಿ. ಶ. ೫ ನೆಯ ಶತಮಾನದಲ್ಲಿ ಬರೆಯಲ್ಪಟ್ಟಿದೆ. ಇಷ್ಟು ಭೂಮಿಯನ್ನು ಭದ್ರವರ್ಮ ಮಹಾರಾಜನು ಭದ್ರೇಶ್ವರಲಿಂಗಕ್ಕೋಸ್ಕರ ದಾನಮಾಡಬೇಕಾದರೆ, ಆ ಮಹಾರಾಜನಿಗೆ ಆ ಶಿವಲಿಂಗದಲ್ಲಿ ಎಷ್ಟು ಭಕ್ತಿಯಿದ್ದಿರಬಹುದೆಂಬ ವಿಷಯವನ್ನು ಸಭಿಕರೇ ಯೋಚಿಸಬಹುದಾಗಿದೆ. ಭದ್ರವರ್ಮನು



ಮಿ-ಸೋನ್ ಗ್ರಾಮದಲ್ಲಿ ಪರಿಶೋಭಿಸುತ್ತಿರುವ ಶಿವಲಿಂಗವು.



ಮಿ-ಸೋನ್ ಗ್ರಾಮದಲ್ಲಿ ರಾರಾಜಿಸುತ್ತಿರುವ ಶಿವಾಲಯ.

ಕಟ್ಟಿಸಿದ ಈ ದೇವಾಲಯವು ಸುಟ್ಟು ಹೋಗಲು, ರುದ್ರವರ್ಮನ ಪುತ್ರನಾದ ಶಂಭುಭದ್ರವರ್ಮನು "ಶಂಭುಭದ್ರೇಶ್ವರ" ಎಂಬ ಹೆಸರಿನಿಂದ ಬೇರೊಂದು ಶಿವಲಿಂಗವನ್ನು ಸ್ಥಾಪಿಸಿದನು. ಈ ವಿಷಯವು ೭ ನೆಯ ಶಾಸನದಲ್ಲಿ ಹೇಳಲ್ಪಟ್ಟಿದ್ದು, ಆ ಲಿಂಗದ ಸ್ತುತಿಯು ಈ ಕೆಳಗೆ ಕೊಟ್ಟಂತೆ ಆ ಶಾಸನದಲ್ಲಿ ಬರೆಯಲ್ಪಟ್ಟಿದೆ.

ಸೃಷ್ಟಂ ಯೇನ ತ್ರಿತಯಮಖಿಲಂ ಭೂರ್ಭುವಃಸ್ವಃ ಸ್ವಶಕ್ತ್ಯಾ
ಯೇನೋತ್ಪಾತಂ ಭುವನದುರಿತಂ ವಹ್ನಿನೇವಾಂಧಕಾರಂ ।
ಯಸ್ಯಾಚಿಂತ್ಯೋ ಜಗತಿ ಮಹಿಮಾ ಯಸ್ಯ ನಾದಿರ್ನಚಾಂತ
ಶ್ಚಂಪಾದೇಶೇ ಜನಯತು ಸುಖಂ ಶಂಭುಭದ್ರೇಶ್ವರೋಽಯಂ ॥

ಈ ಶ್ಲೋಕಾಭಿಪ್ರಾಯವೇನೆಂದರೆ—ಯಾವನು ಭೂಲೋಕ, ಭುವರ್ಲೋಕ, ಸ್ವರ್ಗಲೋಕಗಳೆಂಬ ಮೂರುಲೋಕಗಳನ್ನು ಸ್ವಶಕ್ತಿಯಿಂದ ನಿರ್ಮಿಸಿದನೋ, ತೇಜಸ್ಸಿನಿಂದ ಅಂಧಕಾರವು ನಾಶವಾಗುವಂತೆ ಯಾವನಿಂದ ಸಮಸ್ತಲೋಕಗಳ ಪಾಪವು ನಾಶವಾಗುವುದೋ, ಯಾವನ ಮಹಿಮೆಯು ಬುದ್ಧಿಗೆ ಅಗೋಚರವಾಗಿದೆಯೋ, ಯಾವನಿಗೆ ಉತ್ಪತ್ತಿ-ನಾಶಗಳಿಲ್ಲವೋ, ಆ ಶಂಭುಭದ್ರೇಶ್ವರನು ಚಂಪಾದೇಶದಲ್ಲಿ ಸುಖವನ್ನುಂಟುಮಾಡಲಿ.

ಈ ಶ್ಲೋಕದಲ್ಲಿರತಕ್ಕ ಅರ್ಥವನ್ನು ವಿಚಾರಮಾಡಿದರೆ, ಆ ರಾಜನಿಗೆ ಶಿವಲಿಂಗದಲ್ಲಿ ಎಂತಹ ಘನತರವಾದ ಭಕ್ತಿಯಿದ್ದಿತೆಂಬ ವಿಷಯವು ಪ್ರತಿಯೊಬ್ಬರಿಗೂ ವೇದ್ಯವಾಗುವುದು.

ಶಂಭುಭದ್ರಮಹಾರಾಜನ ತರುವಾಯ ರಾಜಪಟ್ಟವನ್ನಲಂಕರಿಸಿದ ಪ್ರಕಾಶಧರ್ಮಮಹಾರಾಜನು, ಎರಡನೆಯ ಇಂದ್ರವರ್ಮಮಹಾರಾಜನು ಮತ್ತು ಇತರ ರಾಜರು ಈ ಶಂಭುಭದ್ರೇಶ್ವರನಲ್ಲಿ

ಅಸಾಧಾರಣವಾದ ಭಕ್ತಿಯನ್ನಿಟ್ಟು ಈ ದೇವರಿಗೆ ಅಮೂಲ್ಯವಾದ ರತ್ನಾಭರಣಗಳನ್ನು ಸಮರ್ಪಿಸಿದರಲ್ಲದೆ, ಆ ದೇವಾಧಿದೇವನಲ್ಲಿ ತಮ್ಮ ಭಕ್ತಿಯು ಅನ್ಯಾದೃಶವಾಗಿರುವುದೆಂಬುದನ್ನು ಪ್ರಕಟಿಸುವದಕ್ಕೋಸ್ಕರ ಕೆಲವು ಶಾಸನಗಳನ್ನು ಬರೆಯಿಸಿರುವರು. ಆ ಶಾಸನಗಳಲ್ಲಿ ಈ ಮಹಾ ರಾಜರು ಆ ದೇವಾಧಿದೇವನನ್ನು ನಾನಾರೀತಿಯಾಗಿ ಕೊಂಡಾಡಿದ್ದಾರೆ.

೧೬ನೆಯ ಶಾಸನದಲ್ಲಿ—

ಯಂ ಸರ್ವದೇವಾಃ ಸಸುರೇಶಮುಖ್ಯಾ ಧ್ಯಾಯಂತಿ ತತ್ತತ್ತ್ವವಿದಶ್ಚ ಸಂತಃ ।
ಸ್ವಸ್ಥಃ ಸುಶುದ್ಧಃ ಪರಮೋ ವರೇಣ್ಯ ಈಶಾನನಾಥಃ ಸ ಜಯತ್ಯಜಸ್ರಂ ॥

ಸ್ಮೃತಿರಪಿ ಯಸ್ಯ ಸಕೃದಪಿ ಪ್ರಣಿಪತಿತಾನ್ ತಾರಯತ್ಯಪಾಯೇಭ್ಯಃ ।
ಸೋ ಶ್ರೀಭದ್ರೇಶ್ವರೋಸ್ತು ಪ್ರಜಾಹಿತಾರ್ಥಂ ತಥಾ ಪ್ರಭಾಸೇಶಃ ॥

೧೭ನೆಯ ಶಾಸನದಲ್ಲಿ—

ಐಶ್ವರ್ಯಾತಿಶಯಪ್ರದೋ ಮಖಭುಜಾಂ ಯಸ್ತಪ್ಯಮಾನಸ್ತಪಃ
ಕಂದರ್ಪೋತ್ತಮವಿಗ್ರಹಪ್ರದಹನೋ ಹೈಮಾದ್ರಿಜಾಯಾಃ ಪತಿಃ ।
ಲೋಕಾನಾಂ ಪರಮೇಶ್ವರತ್ವಮಸಮಂ ಯಾತೋ ನದದ್ವಾಹನೋ
ಯಾಥಾತಥ್ಯವಿಶಾರದಾಸ್ತು ಜಗತಾಮೀಶಸ್ಯ ನೋ ಸಂತಿ ಹಿ ॥

ಇಚ್ಛಾತೀತವರಪ್ರದಾನವಶಿನಂ ಭಕ್ತ್ಯಾ ಸಮಾರಾಧ್ಯ ಯಂ
ತ್ರೈಲೋಕ್ಯಪ್ರಭವಪ್ರಭಾವಮಹತಾ ವೃತ್ರಸ್ಯ ಹಂತ್ರಾ ವಿನಾ ।
ಭುಂಕ್ತೇದ್ಯಾಪ್ಯುಪಮನ್ಯುರಿಂದುಧವಲಂ ಕ್ಷೀರಾರ್ಣವಂ ಬಾಂಧವೈಃ
ಶ್ರೀಶಾನೇಶ್ವರನಾಥ ಏಷ ಭಗವಾನ್ ಪಾಯಾದಪಾಯಾತ್ ಸ ವಃ ॥

ಇದೇ ರೀತಿಯಾಗಿ ಆ ದೇಶದ ಮಹಾರಾಜರು ಶ್ರೀಶಾನ ಭದ್ರೇಶ್ವರನನ್ನು ಅನೇಕಶಾಸನಗಳಲ್ಲಿ ಕೊಂಡಾಡಿ, ತಾವು ಪರಮ ಶಿವಭಕ್ತರೆಂಬುದನ್ನು ಜಗತ್ತಿನಲ್ಲಿ ಪ್ರಕಾಶಪಡಿಸಿರುವರಲ್ಲದೆ, ಆ

ಶಿವಲಿಂಗಮೂರ್ತಿಗೆ ಅನೇಕವಿಧವಾದ ಸಂಪತ್ತನ್ನು ಸಮರ್ಪಿಸಿರುವರು. ಈ ವಿಷಯವು ೧೬ ನೆಯ ಶಾಸನದಲ್ಲಿ ಉಕ್ತವಾಗಿದೆ.

ಶ್ರೀಶಾನೇಶ್ವರಕೋಶಂ ಸಂಸ್ಥಾಪ್ಯ ಯಥಾವಿಧಿ ಸ್ವಭಕ್ತಿವಶಾತ್ ।
ಶ್ರೀಮಾನ್ ಪ್ರಕಾಶಧರ್ಮೋ ಮುಕುಟಂ ಭದ್ರೇಶ್ವರಾಯಾದಾತ್ ॥

ಪ್ರಕಾಶಧರ್ಮನೆಂಬ ಮಹಾರಾಜನು ಭಕ್ತಿವಿಶೇಷದಿಂದ ವಿಧಿಗನುಸಾರವಾಗಿ ಶ್ರೀಶಾನಭದ್ರೇಶ್ವರನಿಗೆ ಕವಚವನ್ನು ಧರಿಸಿ, ಕಿರೀಟವನ್ನು ಸಮರ್ಪಿಸಿದನೆಂದು ಈಶ್ಲೋಕದ ಅಭಿಪ್ರಾಯವಿರುತ್ತದೆ. ಈ ಶಾಸನವು ಕ್ರಿ.ಶ. ೬೮೭ ರಲ್ಲಿ ಬರೆಯಲ್ಪಟ್ಟಿದೆ.

ಶ್ರೀಶಾನಭದ್ರೇಶ್ವರಲಿಂಗದಲ್ಲಿ ಅಸಾಧಾರಣಭಕ್ತಿಯುಳ್ಳ ನರವಾಹನವರ್ಮನೆಂಬ ಮಹಾರಾಜನು ಆ ಶಿವಲಿಂಗದ ವೇದಿಕೆಯನ್ನು ಸುವರ್ಣರಜತಗಳಿಂದ ನಿರ್ಮಿಸಿದ ವಿಷಯವು ೨೧ ನೆಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ನರವಾಹನವರ್ಮಶ್ರೀರಕರೋತ್ತಾಂ ಶಿಲಾಮಯೀಂ ।
ರುಗ್ಮರೌಪ್ಯಬಹಿರ್ಬದ್ಧಾಂ ಬ್ರಹ್ಮಾ ಮೇರುಶಿಖಾಮಿವ ॥

ಸ್ವರ್ಣರೌಪ್ಯಮಯೀ ಲಕ್ಷ್ಮೀಂ ಬಿಭ್ರತೀ ವೇದಿಕಾ ಪುನಃ ।
ವಿದ್ಯುತ್.............................ಭಾತಿ ಶಿಖಾ ಹಿಮಗಿರೇರಿವ ॥

ನರವಾಹನವರ್ಮಮಹಾರಾಜನು ಶ್ರೀಶಾನಭದ್ರೇಶ್ವರಲಿಂಗ ಮೂರ್ತಿಯ ವೇದಿಕೆಯನ್ನು ಬೆಳ್ಳಿ ಮತ್ತು ಬಂಗಾರದ ತಗಡುಗಳಿಂದ ಅಲಂಕರಿಸಿದನೆಂದೂ, ಇದರಿಂದ ಆ ವೇದಿಕೆಯು ಮೇರುಪರ್ವತ ಮತ್ತು ಹಿಮವತ್ಪರ್ವತಾಗ್ರದ ಶೋಭೆಯನ್ನು ವಹಿಸಿತ್ತೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ. ಈ ಶಾಸನವು ಕ್ರಿ.ಶ. ೭೩೦ ರಲ್ಲಿ ಬರೆಯಲ್ಪಟ್ಟಿದೆ.

ಕ್ರಿ.ಶ. ೮೭೫ ನೆಯ ಇಸ್ವಿಯಲ್ಲಿ ಬರೆಯಲ್ಪಟ್ಟ ೩೧ ನೆಯ ಶಾಸನದಲ್ಲಿ—ಈ ಶಂಭುಭದ್ರೇಶ್ವರಲಿಂಗವನ್ನು ಶಿವನು ಆದಿಯಲ್ಲಿ ಭೃಗುವಿಗೆ ಅನುಗ್ರಹಿಸಿದನೆಂದೂ, ಅನಂತರ ಭೃಗುವು ಉರೋಜ ನೆಂಬ ಮಹಾರಾಜನಿಗೆ ದಯಪಾಲಿಸಿದನೆಂದೂ, ಆ ಉರೋಜ ಮಹಾರಾಜನು ಈ ಶಿವಲಿಂಗವನ್ನು ಚಂಪಾನಗರಿಯಲ್ಲಿ ಸ್ಥಾಪಿಸಿದ ನೆಂದೂ, ಈ ದೇವರೇ ಚಂಪಾದೇಶದ ರಕ್ಷಣೆಗೆ ಮೂಲಕಾರಣನೆಂದೂ, ಈ ದೇವರ ಅನುಗ್ರಹದಿಂದಲೇ ಚಂಪಾದೇಶದ ರಾಜರೆಲ್ಲರೂ ಕೀರ್ತಿಶಾಲಿಗಳಾದರೆಂದೂ ಪೌರಾಣಿಕಕಥೆಯು ಬರೆಯಲ್ಪಟ್ಟಿದೆ. ಉರೋಜಮಹಾರಾಜನು ತನ್ನ ಕಾಲದಲ್ಲಿ ಈ ಶಂಭುಭದ್ರೇಶ್ವರ ಶಿವಲಿಂಗಕ್ಕೆ 'ಶ್ರೀಶಾನಭದ್ರೇಶ್ವರ' ಎಂಬ ನೂತನನಾಮವನ್ನಿಟ್ಟ ನೆಂದೂ, ಈ ಶಿವಲಿಂಗವು ಆ ದೇಶದಲ್ಲಿ ಶೋಭಿಸುತ್ತಿರುವ 'ವುಗ್ವನ್' ಎಂಬ ಹೆಸರಿನ ಪರ್ವತದ ಮೇಲೆ ಸ್ಥಾಪಿಸಲ್ಪಟ್ಟಿರುವುದೆಂದೂ ೭೩ನೆಯ ಶಾಸನದಲ್ಲಿರತಕ್ಕ ಪದ್ಯಗಳಿಂದ ತಿಳಿದುಬರುತ್ತದೆ.

ಶ್ರೀಶಾನಭದ್ರೇಶ್ವರಮಂದಿರಾರ್ಕಂ ಪರೈಃ ಪುರೋರೋಜಕೃತಂ ವಿಶೀರ್ಣಂ ।
ಪುನರ್ಭವೋಽಹಂ ಸವಿನಾಶಕಾಂಸ್ತಾನ್ ಹತ್ವಾ ರಣೇ ತಸ್ಯ ಪುನಃ ಪ್ರಚಕ್ರೇ ॥

ಶ್ರೀಮಾನ್ ಶ್ರೀಶಾನಭದ್ರೇಶ್ವರಮುಮಿತಮುದಂ ಸ್ಥಾಪಯಿತ್ವಾ ಹ್ಯುರೋಜೋ
ನಾಕೌಕಸ್ಸ್ಥಾಪನಸ್ಯಾಕ್ಷಯಮುತ ಸ ವುಗ್ವನ್ ಭೂಧರಸ್ಯಾಂಕಮೂರ್ಧ್ವಂ ।
ಕೃತ್ವಾ ಚಾಸ್ತಂಗತೋಽಭೂತ್ ಪುನರಪಮುಪರೋ ಭಾವಯಿತ್ವಾ ವಿನಷ್ಟಂ
ಸ್ಥಾನಂ ದೇವಸ್ಯ ತಸ್ಯಾಭಿಮತರುಚಿ ವುಗ್ವನ್ ಸ್ಥಾಪಿತೇಶಃ ಪುರೇಷ್ಟ್ಯಾ ॥

ಎಂಬೀ ಶ್ಲೋಕಗಳೇ ಈ ವಿಷಯದಲ್ಲಿ ಆಧಾರಗಳಾಗಿವೆ.

ಉರೋಜಮಹಾರಾಜನು ಗತಿಸಿದಮೇಲೆ ಅವನ ವಂಶದ ಪ್ರತಿಯೊಬ್ಬ ರಾಜರೂ ಈ ದೇವರಲ್ಲಿ ಅಸಾಧಾರಣವಾದ ಭಕ್ತಿ

ಯನ್ನಿಟ್ಟು, ಈ ದೇವಾಲಯವನ್ನು ಅತ್ಯಂತವೈಭವಸ್ಥಿತಿಯಲ್ಲಿಟ್ಟಿದ್ದರು. ಈ ದೇವಾಲಯದ ಅಪಾರವಾದ ಸಂಪತ್ತನ್ನು ಕಂಡು, ಕಾಂಬೋಡಿಯಾದೇಶದ ಜನರು ಮೇಲಿಂದಮೇಲೆ ಇದಕ್ಕೆ ತೊಂದರೆಯನ್ನುಂಟುಮಾಡುತ್ತಿದ್ದರು. ಆದರೂ ಚಂಪಾದೇಶದ ರಾಜರು ಕಾಂಬೋಡಿಯಾದೇಶದ ಮೇಲೆ ದಂಡೆತ್ತಿಹೋಗಿ ಆ ದೇಶವನ್ನು ಲೂಟಿಮಾಡಿ, ಅಲ್ಲಿ ದೊರೆತ ಸಂಪತ್ತಿನಿಂದ ಈ ದೇವಾಲಯವನ್ನು ಜೀರ್ಣೋದ್ಧಾರಮಾಡುತ್ತಿದ್ದರು. ಜಯಇಂದ್ರವರ್ಮನೆಂಬ ಮಹಾರಾಜನು ಕ್ರಿ. ಶ. ೧೦೮೮ ರಲ್ಲಿ ಈ ದೇವರಿಗೆ ಅಮೂಲ್ಯವಾದ ರತ್ನಗಳಿಂದ ಕೆತ್ತಲ್ಪಟ್ಟ ಆರುಮುಖಗಳುಳ್ಳ ಸರ್ಪದಿಂದ ಯುಕ್ತವಾದ ಸುವರ್ಣಕವಚವನ್ನು ಸಮರ್ಪಿಸಿದನು. ಈ ಸುವರ್ಣಕವಚವು ೧೭೨೦ ತೊಲೆಗಳ ತೂಕವುಳ್ಳದಾಗಿತ್ತೆಂದು ಕೆಲವು ದಾಖಲೆಗಳಿಂದ ತಿಳಿದುಬರುತ್ತದೆ. ೮೦ ವರ್ಷಗಳಾದಮೇಲೆ ಇದೇ ಹೆಸರಿನ ೭ ನೆಯ ಜಯಇಂದ್ರವರ್ಮನೆಂಬ ಮಹಾರಾಜನು ಈ ದೇವರಲ್ಲಿ ಅನಿತರಸಾಧಾರಣವಾದ ಭಕ್ತಿಯನ್ನಿಟ್ಟು, ಎಲ್ಲ ರಾಜರಿಗಿಂತಲೂ ವಿಶೇಷ ಬೆಲೆಯುಳ್ಳ ಮುತ್ತು-ರತ್ನಗಳಿಂದಲಂಕೃತವಾದ ಸುವರ್ಣಕವಚವನ್ನು ಸಮರ್ಪಿಸಿದನೆಂದೂ, ದೇವರ ಪೂಜೆಗೋಸ್ಕರ ಸಕಲಪೂಜಾಸಾಮಗ್ರಿಗಳನ್ನು ಸುವರ್ಣದಿಂದ ಮಾಡಿಸಿ ಸಮರ್ಪಿಸಿದನೆಂದೂ, ಈ ದೇವಾಲಯದ ಗೋಪುರವನ್ನು ಬಂಗಾರದ ತಗಡಿನಿಂದ ನಿರ್ಮಿಸಿದನೆಂದೂ, ಇದಕ್ಕೋಸ್ಕರ (೭೫ ಪೌಂಡು) ೩೦೦೦ ತೊಲೆ ಬಂಗಾರವು ವೆಚ್ಚವಾಯಿತೆಂದೂ ಈ ದೇವಾಲಯವನ್ನೆಲ್ಲ ಬೆಳ್ಳಿಯ ತಗಡಿನಿಂದ ಆಚ್ಛಾದಿಸಿದನೆಂದೂ, ಇದಕ್ಕಾಗಿ ೩೫ ಸಾವಿರ ಪೌಂಡು (೧೪ ಲಕ್ಷ ತೊಲೆ) ಬೆಳ್ಳಿಯು ವೆಚ್ಚವಾಯಿತೆಂದೂ "ಮ್ಯಾಸ್ಪರೋ" ಎಂಬ ಫ್ರಾನ್ಸ್‌ದೇಶದ ಇತಿಹಾಸಜ್ಞರು ಬರೆದ ಗ್ರಂಥದಿಂದ ತಿಳಿದುಬರುತ್ತದೆ.

ಇದೇ ರೀತಿಯಾಗಿ ಈ ದೇಶದ ಮಹಾರಾಜರು ದೇವರಿಗೋಸ್ಕರ ಮುತ್ತು-ರತ್ನ-ಸುವರ್ಣಾದ್ಯಾಭರಣಗಳನ್ನು ಹೇರಳವಾಗಿ ಸಮರ್ಪಿಸಿದ್ದಲ್ಲದೆ, ಆನೆಗಳನ್ನೂ, ಸ್ತ್ರೀ-ಪುರುಷಸೇವಕರನ್ನೂ, ವೃಷಭಗಳನ್ನೂ, ಗಾಯಕರನ್ನೂ, ನರ್ತಕಿಯರನ್ನೂ ಸಮರ್ಪಿಸಿದರೆಂಬ ವಿಷಯವು ೨೩ ಮತ್ತು ೨೪ ನೆಯ ಶಾಸನಗಳಿಂದ ತಿಳಿದುಬರುತ್ತದೆ.

೨೩ ನೆಯ ಶಾಸನದಲ್ಲಿ—

ಅಥ ತಸ್ಯ ತದಾಪಿ ರಾಜ್ಞೇಂದ್ರವರ್ಮಣಾ ಪುನಃ ಸ್ಥಾಪಿತಮೇವ ಸಕಲಕೋಶಕೋಷ್ಠಾಗಾರರಜತಸುವರ್ಣಮಕುಟರತ್ನಹಾರಾದಿಪರಿಭೋಗಸಾಂತಃಪುರವಿಲಾಸಿನೀದಾಸದಾಸೀಗೋಮಹಿಷಕ್ಷೇತ್ರಾದಿದ್ರವ್ಯಂ ತಸ್ಮೈ ತೇನ ದತ್ತಂ ಚಿತ್ತಪ್ರಸಾದೇನ ॥

ತಸ್ಮೈ ಭಗವತೇ ಸಕಲಲೋಕಹಿತಕಾರಣಾಯ ಶ್ರೀಂದ್ರಭದ್ರೇಶ್ವರಾಯೇದಮಿತಿ ಸ ಭಗವಾನ್ ಶ್ರೀಮಾನಿಂದ್ರವರ್ಮಾ ಜಞಂ ಕೋಷ್ಠಾಗಾರಂ ಶಿವಯಜ್ಞಕ್ಷೇತ್ರದ್ವಯಂ ಶಿಖಿಶಿಖಾಗಿರಿಪ್ರದೇಶಂ ಭಕ್ತ್ಯಾ ಶುದ್ಧೇನ ಮನಸೈವ ದತ್ತವಾನಿತಿ ॥

ಇಂದ್ರಭದ್ರೇಶ್ವರಸ್ಯೈವ ಸರ್ವದ್ರವ್ಯಂ ಮಹೀತಲೇ ।
ಯೇ ರಕ್ಷಂತಿ ರಮಂತ್ಯೇತೇ ಸ್ವರ್ಗೇ ಸುರಗಣೈಃ ಸದಾ ॥

ಯೇ ಹರಂತಿ ಪತಂತ್ಯೇತೇ ನರಕೇ ವಾ ಕುಲೈಃಸಹ ।
ಯಾವತ್ ಸೂರ್ಯೋಽಸ್ತಿ ಚಂದ್ರಶ್ಚ ತಾವನ್ನರಕದುಃಖಿತಾಃ ॥

ಲುಬ್ಧೇನ ಮನಸಾ ದ್ರವ್ಯಂ ಯೋ ಹರೇತ್ಪರಮೇಶ್ವರಾತ್ ।
ನರಕಾತ್ ನ ಪುನರ್ಗಚ್ಛೇತ್ ನ ಚಿರಂ ತು ಸ ಜೀವತಿ ॥

ಈ ಪ್ರಕಾರವಾಗಿ ಉಲ್ಲೇಖಿಸಲ್ಪಟ್ಟಿದೆ. ಇಂದ್ರವರ್ಮನೆಂಬ ಮಹಾರಾಜನು ಶ್ರೀಶಾನಭದ್ರೇಶ್ವರಲಿಂಗಕ್ಕೆ ತನ್ನ ನಾಮಬೋಧಕ

ನಾದ 'ಇಂದ್ರಭದ್ರೇಶ್ವರ' ಎಂಬ ಹೆಸರನ್ನಿಟ್ಟು, ಈ ದೇವರಸೇವೆ ಗೋಸ್ಕರ ರತ್ನಸುವರ್ಣರಜತಾದಿಗಳನ್ನೂ, ಭೂಮಿಯನ್ನೂ, ಗಜ ಗಳನ್ನೂ, ದಾಸದಾಸಿಯರನ್ನೂ, 'ಜಙಂ, ಎಂಬ ಧಾನ್ಯಗೃಹ ವನ್ನೂ, ಶಿವಕ್ಷೇತ್ರ–ಯಜ್ಞಕ್ಷೇತ್ರ ಎಂಬ ಹೆಸರಿನ ಭೂಮಿಯಿಂದ ಕೂಡಿದ 'ಶಿಖಿಶಿಖಾಗಿರಿ' ಎಂಬ ಪ್ರದೇಶವನ್ನೂ ಸಮರ್ಪಿಸಿದ ನೆಂದೂ, ಈ ರೀತಿಯಾಗಿ ದೇವರಿಗೆ ಸಮರ್ಪಿಸಿದ ದ್ರವ್ಯವನ್ನು ಯಾರು ರಕ್ಷಣಮಾಡುವರೋ ಅವರು ಸ್ವರ್ಗಸುಖವನ್ನನುಭವಿಸುವ ರೆಂದೂ, ಯಾರು ಈ ದೇವದ್ರವ್ಯವನ್ನು ಹರಣಮಾಡುವರೋ ಅವರು ತಮ್ಮ ವಂಶಪರಂಪರೆಯಾಗಿ ಸೂರ್ಯಚಂದ್ರರಿರುವವರೆಗೆ ನರಕದಲ್ಲಿ ಬೀಳುವರೆಂದೂ ಈ ಶಾಸನವಾಕ್ಯಗಳಅಭಿಪ್ರಾಯವಿರುತ್ತದೆ.

ಈ ರೀತಿಯಾಗಿ ಆ ದೇಶದ ಮಹಾರಾಜರು ದೇವಾಧಿದೇವ ನಾದ ಪರಶಿವನಲ್ಲಿ ವರ್ಣಿಸಲಸಾಧ್ಯವಾದ ಶುದ್ಧಭಕ್ತಿಯನ್ನಿಟ್ಟು ಸೇವೆಮಾಡಿರುವುದನ್ನು ನೋಡಿದರೆ, ಆ ಮಹಾರಾಜರ ಸಂಪತ್ತು ಸೀಮಾತೀತವಾಗಿತ್ತೆಂದೂ, ಅವರಿಗೆ ಈ ವಿಧವಾದ ಅಪಾರಸಂಪತ್ತು ಪ್ರಾಪ್ತವಾಗುವುದಕ್ಕೋಸ್ಕರ ಅವರಲ್ಲಿದ್ದ ನಿಜವಾದ ಶಿವಭಕ್ತಿಯೇ ಮೂಲಕಾರಣವಾಗಿತ್ತೆಂದೂ ನಿಸ್ಸಂದೇಹವಾಗಿ ಹೇಳಬಹುದಾಗಿದೆ. ೧೪ ಲಕ್ಷ ತೊಲೆ ಬೆಳ್ಳಿಯಿಂದಲೂ, ೩ ಸಾವಿರ ತೊಲೆ ಬಂಗಾರ ದಿಂದಲೂ ವಿರಚಿತವಾಗಿದ್ದ ಆ ದೇವಾಲಯದ ವೈಭವವನ್ನು ಆದಿ ಶೇಷನೂ ಸಹ ವರ್ಣಿಸಲು ಸಮರ್ಥನಾಗಲಾರನೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಾರದು. ಇಂಥ ದೇವಾಲಯವು ಕಾಲ ಮಹಿಮೆಯಿಂದ ಸದ್ಯಃ ಹಾಳುಬಿದ್ದಿರುವುದನ್ನು ಕೇಳಿದರೆ ಯಾವ ಶಿವಭಕ್ತನ ಮನಸ್ಸು ಶೋಕಸಾಗರದಲ್ಲಿ ಮುಳುಗಲಿಕ್ಕಿಲ್ಲ? ಅಸ್ತು!

ಚಂಪಾ (ಅನ್ನಾಂ) ದೇಶದಲ್ಲಿರತಕ್ಕ ಸಾವಿರಾರು ಶಿವಲಿಂಗ ಮೂರ್ತಿಗಳಲ್ಲಿ ಆ ದೇಶವನ್ನಾಳಿದ ರಾಜರ ಭಕ್ತಿವಿಶೇಷದಿಂದ ಈ ಶಿವಲಿಂಗಕ್ಕೆ ಬಹುಗೌರವವಿದ್ದರೂ, ಇದಕ್ಕಿಂತಲೂ ಅತ್ಯಂತ ಪ್ರಾಚೀನವಾದ ಶಿವಲಿಂಗಮೂರ್ತಿಗಳು ಆ ದೇಶದಲ್ಲಿ ಅನಾದಿಕಾಲ ದಿಂದಲೂ ಶೋಭಿಸುತ್ತಿರುವುವು. ಅವುಗಳಲ್ಲಿ "**ಮುಖಲಿಂಗ**" ವೆಂಬ ಶಿವಲಿಂಗಮೂರ್ತಿಯು ಅತ್ಯಂತಪ್ರಾಚೀನವಾದುದು. ಈ ಶಿವಲಿಂಗ ಸ್ಥಾಪನೆಯ ಕಾಲನಿರ್ಣಯವು ೨೯ನೆಯ ಶಾಸನದಲ್ಲಿ ಈ ರೀತಿ ಯಾಗಿ ಹೇಳಲ್ಪಟ್ಟಿದೆ. ಅದೇನೆಂದರೆ—

ಪಂಚಸಹಸ್ರನವಶತ್ಯೈಕಾದಶೇ ವಿಗತಕಲಿಕಲಂಕದ್ವಾಪರವರ್ಷೇ ಶ್ರೀ ವಿಚಿತ್ರಸಗರಸಂಸ್ಥಾಪಿತಃ ಶ್ರೀಮುಖಲಿಂಗದೇವಃ । ತಸ್ಯ ಸಕಲಕೋಷ್ಠಾಗಾರರಜತರತ್ನಹೇಮಕದವಕಲಶಭೃಂಗಾರರುಕ್ಮದಂಡಸಿತಾತಪತ್ರಚಾಮರಹೈಮಘಟಾದಿಪರಿಭೋಗಾ ವರ್ಧಮಾನಾ ಭವಂತಿ ಸ್ಮ । ತತಶ್ಚಿರಕಾಲ ಕಲಿಯುಗದೋಷಾದ್ದೇಶಾಂತರಪ್ಲವಾಗತಪಾಪನರಭುಗ್ಗಣಸಂಹೃತೇಷು ಪ್ರತಿಮಾಪರಿಭೋಗಭೂಷಣೇಷು ಶೂನ್ಯೋಽಭವತ್ । ಪುನರದ್ಯಾಪಿ ತತ್ಪುಣ್ಯಕೀರ್ತ್ಯವಿನಾಶಾಯ ಶ್ರೀಸತ್ಯವರ್ಮನರಪತಿರ್ವಿಚಿತ್ರಸಗರಮೂರ್ತಿರಿವ ಮಾಧವಸಪ್ತಶುಕ್ಲಪಕ್ಷೇ ಯಥಾಪುರಾ ಶ್ರೀಭಗವತೀಶ್ವರಮುಖಲಿಂಗಮತಿಷ್ಠಿಪತ್ ॥

ದ್ವಾಪರಯುಗದಲ್ಲಿ ೫೯೧೧ ವರ್ಷಗಳು ಕಳೆದಮೇಲೆ ಅಂದರೆ ಈಗ್ಗೆ ಸುಮಾರು ೧೭೮೦೫೦೦ ವರ್ಷಗಳ ಪೂರ್ವದಲ್ಲಿ, ಈ ಮುಖಲಿಂಗವು 'ವಿಚಿತ್ರಸಗರ' ನೆಂಬ ಮಹಾರಾಜನಿಂದ ಸ್ಥಾಪಿಸಲ್ಪಟ್ಟಿತೆಂದೂ, ಈ ಶಿವಲಿಂಗಕ್ಕೋಸ್ಕರ ಸುವರ್ಣ-ರತ್ನ-ರಜತ-ಭೂಮಿ ಮೊದಲಾದುವುಗಳು ವಿಶೇಷವಾಗಿ ಸಮರ್ಪಿಸಲ್ಪಟ್ಟಿದ್ದುವೆಂದೂ, ಎಷ್ಟೋ ದಿನಗಳು ಕಳೆದಮೇಲೆ ಕಲಿಕಾಲದೋಷದಿಂದ ಅನ್ಯದೇಶಗಳ

ಕಾಡುಜನರು ಸಮುದ್ರಮಾರ್ಗವಾಗಿ ಬಂದು ನುಗ್ಗಿ ಆ ದೇವರನ್ನು ನಾಶಮಾಡಿ ಅಲ್ಲಿದ್ದ ಸಕಲಸಂಪತ್ತನ್ನು ಅಪಹರಿಸಿಕೊಂಡು ಹೋದರೆಂದೂ, ಶೂನ್ಯವಾದ ಆ ದೇವಾಲಯದಲ್ಲಿ ಸತ್ಯವರ್ಮನೆಂಬ ಮಹಾರಾಜನು 'ಸತ್ಯಮುಖಲಿಂಗ' ಎಂಬ ಹೆಸರಿನಿಂದ ಬೇರೊಂದು ಲಿಂಗವನ್ನು ಸ್ಥಾಪಿಸಿದನೆಂದೂ ಈ ಶಾಸನದಲ್ಲುಕ್ತವಾಗಿದೆ. ಲಕ್ಷಾಂತರ ವರ್ಷಗಳ ಪೂರ್ವದಲ್ಲಿ ಈ ಶಿವಲಿಂಗವು ಸ್ಥಾಪಿತವಾಗಿರಬೇಕಾದರೆ, ಚಂಪಾ (ಅನ್ನಾಂ) ದೇಶವು ಸೃಷ್ಟ್ಯಾದಿಯಿಂದಲೂ ಶಿವಭಕ್ತಿಮಯ ವಾಗಿದ್ದಿತೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ರೀತಿಯಾಗಿ ಅತ್ಯಂತ ಪ್ರಾಚೀನತ್ವವನ್ನು ತೋರ್ಪಡಿಸುವ ಶಿವಲಿಂಗವು ಈ ಪ್ರಪಂಚದಲ್ಲಿ ಎಲ್ಲಿಯೂ ಇಲ್ಲವೆಂದು ಹೇಳಬಹುದಾಗಿದೆ.

ಪೂರ್ವದಲ್ಲಿ 'ಅನ್ನಾಂ' ದೇಶವನ್ನಾಳುತ್ತಿದ್ದ ಮಹಾರಾಜ ರೆಲ್ಲರೂ ಪರಮಶಿವಭಕ್ತರಾಗಿ, ಶಿವಲಿಂಗಗಳನ್ನು ಸ್ಥಾಪಿಸುವುದರ ಮೂಲಕ ಶಿವನ ಸೇವೆಯನ್ನು ಮಾಡುವುದೇ ತಮ್ಮ ಪ್ರಥಮಕರ್ತವ್ಯ ವೆಂದೂ, ಶಿವನ ಸೇವೆಯೇ ತಮ್ಮ ರಾಜ್ಯಸಂಪತ್ತಿಗೂ ಮೋಕ್ಷ ಸಂಪತ್ತಿಗೂ ಮೂಲಕಾರಣವೆಂದೂ, ಶಿವದೇವಾಲಯಗಳನ್ನು ಕಟ್ಟಿ ಸುವುದೇ ತಮ್ಮ ನಿರ್ಮಲಕೀರ್ತಿಯು ಆಚಂದ್ರಾರ್ಕವಾಗಿ ಬೆಳಗ ಲಿಕ್ಕೆ ಕಾರಣವಾಗಿರುವುದೆಂದೂ, ಶಿವದೇವಾಲಯಗಳ ಸಂರಕ್ಷಣೆಯೇ ತಮ್ಮ ಪವಿತ್ರಧರ್ಮವೆಂದೂ, ಶಿವದೇವಾಲಯಗಳಿಗೋಸ್ಕರ ತಮ್ಮ ಅಪಾರವಾದ ಸಂಪತ್ತನ್ನು ಸಮರ್ಪಿಸುವುದೇ ತಮ್ಮ ವೈಭವದ ಸಾರ್ಥಕತೆಯೆಂದೂ, ಶಿವದ್ವೇಷಿಗಳೊಡನೆ ಯುದ್ಧಮಾಡಿ ಅವರನ್ನು ಶರಣಾಗತರನ್ನಾಗಿ ಮಾಡುವುದೇ ತಮ್ಮ ಶೈವಕ್ಷತ್ರಿಯಧರ್ಮವೆಂದೂ, ಸದಾ ಶಿವನಾಮವನ್ನುಚ್ಚರಿಸುವುದೇ ತಮ್ಮ ರಸನೆಯ ಧ್ಯೇಯ ವೆಂದೂ, ಶಿವಲಿಂಗವನ್ನು ಪೂಜಿಸುವುದೇ ತಮ್ಮ ಹಸ್ತಗಳಿಗೆ ಭೂಷಣ

ವೆಂದೂ, ಶಿವಲಿಂಗಗಳನ್ನು ಸಂದರ್ಶಿಸುವುದೇ ತಮ್ಮ ನೇತ್ರಗಳಿಗೆ ಸಾಫಲ್ಯವೆಂದೂ, ಶಿವಕ್ಷೇತ್ರಯಾತ್ರೆಯನ್ನಾಚರಿಸುವುದೇ ತಮ್ಮ ದೇಹಸೌಭಾಗ್ಯವೆಂದೂ, ಶಿವಪ್ರಸಾದವನ್ನು ಸೇವಿಸುವುದೇ ತಮ್ಮ ದೇಹಶುದ್ಧಿಗೆ ಕಾರಣವೆಂದೂ, ಸದಾ ಶಿವನಲ್ಲಿ ಚಿತ್ತವನ್ನಿರಿಸುವುದೇ ಆತ್ಮೋದ್ಧಾರಕ್ಕೆ ಕಾರಣವೆಂದೂ ಭಾವಿಸಿ, ಅನನ್ಯಸಾಧಾರಣವಾದ ಭಕ್ತಿವಿಶೇಷದಿಂದ ಶಿವನನ್ನು ಸೇವಿಸುತ್ತಿದ್ದರು.

ಚಂಪಾದೇಶವನ್ನಾಳಿದ ಅನೇಕಜನ ಮಹಾರಾಜರು ತಮ್ಮ ನಾಮವು ಭೂಮಂಡಲದಲ್ಲಿ ಚಿರಕಾಲ ಸ್ಥಿರವಾಗಿರಲೆಂಬ ಉದ್ದೇಶದಿಂದ ತಾವು ಸ್ಥಾಪಿಸಿದ ಶಿವಲಿಂಗಗಳಿಗೆ ತಮ್ಮ ತಮ್ಮ ನಾಮವನ್ನು ಸಂಬಂಧಿಸಿ ಸ್ಥಾಪಿಸಿದ್ದಾರೆ. ಭದ್ರವರ್ಮಮಹಾರಾಜನು 'ಭದ್ರೇಶ್ವರ'. ಎಂಬ ಹೆಸರಿನಿಂದಲೂ, ಶಂಭುಭದ್ರವರ್ಮಮಹಾರಾಜನು 'ಶಂಭುಭದ್ರೇಶ್ವರ' ಎಂಬ ಹೆಸರಿನಿಂದಲೂ, ಇಂದ್ರವರ್ಮಮಹಾರಾಜನು 'ಇಂದ್ರಭದ್ರೇಶ್ವರ-ಇಂದ್ರಭೋಗೇಶ್ವರ-ಇಂದ್ರಪರಮೇಶ್ವರ' ಎಂಬ ಹೆಸರುಗಳಿಂದಲೂ, ವಿಕ್ರಾಂತವರ್ಮಮಹಾರಾಜನು 'ವಿಕ್ರಾಂತರುದ್ರ-ಶ್ರೀವಿಕ್ರಾಂತರುದ್ರೇಶ್ವರ ಎಂಬ ಹೆಸರುಗಳಿಂದಲೂ, ಭದ್ರವರ್ಮದೇವಮಹಾರಾಜನು 'ಪ್ರಕಾಶಭದ್ರೇಶ್ವರ-ಭದ್ರಮಲಯೇಶ್ವರ-ಭದ್ರಚಂಪೇಶ್ವರ-ಭದ್ರಮಂಡಲೇಶ್ವರ' ಎಂಬ ಹೆಸರುಗಳಿಂದಲೂ, ಇಂದ್ರವರ್ಮಮಹಾರಾಜನು 'ಇಂದ್ರಕಾಂತೇಶ್ವರ' ಎಂಬ ಹೆಸರಿನಿಂದಲೂ, ಹರಿವರ್ಮಮಹಾರಾಜನು 'ಹರಿವರ್ಮೇಶ್ವರ' ಎಂಬ ಹೆಸರಿಂದಲೂ, ಜಯಹರಿವರ್ಮಮಹಾರಾಜನು 'ಜಯಹರಿಲಿಂಗೇಶ್ವರ' ಎಂಬ ಹೆಸರಿನಿಂದಲೂ, ಜಯಇಂದ್ರವರ್ಮಮಹಾರಾಜನು 'ಜಯಇಂದ್ರಲೋಕೇಶ್ವರ-ಜಯಇಂದ್ರೇಶ್ವರ' ಎಂಬ ಹೆಸರುಗಳಿಂದಲೂ, ಇಂದ್ರವರ್ಮಮಹಾರಾಜನು 'ಇಂದ್ರ

ವರ್ಮಲಿಂಗೇಶ್ವರ' ಎಂಬ ಹೆಸರಿನಿಂದಲೂ, ಜಯಸಿಂಹವರ್ಮದೇವ ಮಹಾರಾಜನು 'ಜಯಸಿಂಹವರ್ಮಲಿಂಗೇಶ್ವರ' ಎಂಬ ಹೆಸರಿನಿಂದಲೂ ಶಿವಲಿಂಗಗಳನ್ನು ಸ್ಥಾಪಿಸಿರುವರು. ಈ ಮಹಾರಾಜರು ಸ್ಥಾಪಿಸಿದ ಶಿವಲಿಂಗಗಳ ವಿಷಯವು ಅನುಕ್ರಮವಾಗಿ ೨-೭-೨೩-೨೪-೩೦-೩೯-೪೪-೭೪-೭೫-೮೧-೧೦೮-೧೧೬-೧೧೭ ನೆಯ ಶಾಸನಗಳಲ್ಲಿ ಉಕ್ತವಾಗಿದೆ. ಈ ಶಿವಲಿಂಗಮೂರ್ತಿಗಳಲ್ಲದೆ ಆ ದೇಶದಲ್ಲಿ 'ದೇವಲಿಂಗೇಶ್ವರ-ಮಹಾಲಿಂಗೇಶ್ವರ-ಶಿವಲಿಂಗೇಶ್ವರ-ಮಹಾಶಿವಲಿಂಗೇಶ್ವರ-ಧರ್ಮಲಿಂಗೇಶ್ವರ' ಎಂಬ ಹೆಸರಿನ ಶಿವಲಿಂಗಮೂರ್ತಿಗಳು ಸ್ಥಾಪಿಸಲ್ಪಟ್ಟಿರುವುವು. ಈ ಶಿವಲಿಂಗಗಳ ವಿಷಯವು ಅನುಕ್ರಮವಾಗಿ ೪೩-೩೨-೩೫-೩೯-೪೧ ನೆಯ ಶಾಸನಗಳಲ್ಲಿ ಉಕ್ತವಾಗಿದೆ.

ನಮ್ಮ ಭರತಖಂಡದಲ್ಲಿಯೂ ಸಹ ಶಿವಲಿಂಗಗಳನ್ನು ತಮ್ಮ ನಾಮದ ಸಂಕೇತದಿಂದ ಸ್ಥಾಪಿಸುವುದು ಅನಾದಿಕಾಲದಿಂದ ರೂಢಿಯಲ್ಲಿದೆ. ಅಗಸ್ತ್ಯ, ಗೌತಮ, ಕಪಿಲ, ಮಾರ್ಕಂಡೇಯ, ವ್ಯಾಸ, ಕಶ್ಯಪ ಮೊದಲಾದ ಮಹರ್ಷಿಗಳು ತಮ್ಮ ತಮ್ಮ ಹೆಸರಿನಿಂದ ಅಗಸ್ತ್ಯೇಶ್ವರ, ಗೌತಮೇಶ್ವರ, ಕಪಿಲೇಶ್ವರ, ಮಾರ್ಕಂಡೇಯೇಶ್ವರ, ವ್ಯಾಸೇಶ್ವರ, ಕಶ್ಯಪೇಶ್ವರ ಮೊದಲಾದ ಶಿವಲಿಂಗಗಳನ್ನು ಸ್ಥಾಪಿಸಿರುವುದೂ, ರಾಮನು ತನ್ನ ಹೆಸರಿನಿಂದ "ರಾಮೇಶ್ವರ" ಎಂಬ ಶಿವಲಿಂಗವನ್ನು ಸ್ಥಾಪಿಸಿರುವುದೂ ಪ್ರಸಿದ್ಧವೇ ಆದೆ. ಇದಲ್ಲದೆ ಪೃಥ್ವೀದೇವನೆಂಬ ಮಹಾರಾಜನು "ಪೃಥ್ವೀದೇವೇಶ್ವರ" ಎಂಬ ಶಿವಲಿಂಗವನ್ನೂ, ಚಾಲುಕ್ಯರಾಜ್ಯದ ಎರಡನೆಯ ವಿಕ್ರಮಾದಿತ್ಯನ ಪತ್ನಿಯರಾದ ಲೋಕಮಹಾದೇವಿ, ತ್ರೈಲೋಕ್ಯಮಹಾದೇವಿ ಎಂಬ ಇಬ್ಬರು ರಾಣಿಯರು ತಮ್ಮ ಹೆಸರಿನಿಂದ "ಲೋಕೇಶ್ವರ-ತ್ರೈಲೋಕ್ಯೇಶ್ವರ" ಎಂಬ ಶಿವಲಿಂಗಗಳನ್ನೂ ಸ್ಥಾಪಿಸಿರುವುದು ಇತಿಹಾಸಪ್ರಸಿದ್ಧವೇ ಆದೆ. ಇದೇ

ರೀತಿಯಾಗಿ ಚಂಪಾದೇಶದ ಮಹಾರಾಜರೂ ಸಹ ತಮ್ಮ ತಮ್ಮ ಹೆಸರುಗಳಿಂದ ಶಿವಲಿಂಗಗಳನ್ನು ಸ್ಥಾಪಿಸಿರುವರೆಂದು ಸ್ಪಷ್ಟವಾಗುತ್ತದೆ.

ಚಂಪಾದೇಶದ ಇತಿಹಾಸವನ್ನು ವಿಚಾರಮಾಡಿನೋಡಿದರೆ, ಆ ದೇಶವು ಪೂರ್ವದಲ್ಲಿ ಕೇವಲ ಶಿವಲಿಂಗಮಯವಾಗಿದ್ದಿತೆಂದು ತಿಳಿದುಬರುತ್ತದೆ. ಆ ದೇಶದ ಜನರು ಶಿವನನ್ನು ಲಿಂಗಾಕಾರದಿಂದಲೂ, ಕರಚರಣಾದ್ಯವಯವಾಕಾರದಿಂದಲೂ ಪೂಜಿಸುತ್ತಿದ್ದರೆಂದು ಅಲ್ಲಿ ಈಗಲೂ ದೊರೆಯುವ ನಾನಾವಿಧಮೂರ್ತಿಗಳಿಂದ ಕಂಡುಬರುತ್ತದೆ. ಆ ದೇಶದಲ್ಲಿ ಮನುಷ್ಯಾಕಾರದ ಮೂರ್ತಿಗಳಿಗಿಂತಲೂ ಲಿಂಗಾಕಾರದ ಮೂರ್ತಿಗಳೇ ವಿಶೇಷವಾಗಿ ಸ್ಥಾಪಿಸಲ್ಪಟ್ಟಿರುವವು. ಆ ದೇಶದಲ್ಲಿರುವ ಶಿವಲಿಂಗಪೀಠಗಳು ಚೌಕಾಗಿಯೂ ಮತ್ತು ವರ್ತುಲಾಕಾರವಾಗಿಯೂ ಇದ್ದು, ಮನೋಹರವಾದ ಬಾಣಲಿಂಗಗಳಿಂದ ಯುಕ್ತವಾಗಿರುವುವು. ಕೆಲವು ದೇವಾಲಯಗಳಲ್ಲಿ ಒಂದು ಪೀಠದಮೇಲೆ ೭ ಲಿಂಗಗಳವರೆಗೆ ಸ್ಥಾಪಿಸಲ್ಪಟ್ಟಿರುವುವು. ಆ ದೇಶದ ಕೆಲಜನ ರಾಜರು ಬಾಣಲಿಂಗಗಳಲ್ಲಿ ತಮ್ಮ ಮುಖಭಾವವನ್ನು ಕೆತ್ತಿಸಿ ಅವುಗಳಿಗೆ ಮುಖಲಿಂಗಗಳೆಂಬ ನಾಮವನ್ನಿಟ್ಟು ಸ್ಥಾಪಿಸಿರುವರೆಂಬ ವಿಷಯವು ಕೆಲವು ಶಾಸನಗಳಿಂದ ತಿಳಿದುಬರುತ್ತದೆ.

ಈ ಶಿವಲಿಂಗಮೂರ್ತಿಗಳಲ್ಲದೆ ಮನುಷ್ಯಾಕಾರದ ಶಿವನ ಮೂರ್ತಿಗಳು ಈಗಲೂ ಅಲ್ಲಲ್ಲಿ ಶೋಭಿಸುತ್ತಿರುವುವು. "ಟ್ರಾ-ಕ್ಯೂ" ಎಂಬ ಗ್ರಾಮದಲ್ಲಿ ಈ ವಿಧವಾದ ಎರಡು ಮೂರ್ತಿಗಳು ದೊರೆತಿರುವುವು. ಈ ವಿಗ್ರಹಗಳು ನಿಂತುಕೊಂಡ ಭಾವದಲ್ಲಿ ಬಹುಮನೋಹರವಾಗಿ ಕೆತ್ತಲ್ಪಟ್ಟಿದ್ದು, ವಿಶಾಲವಾದ ಜಡೆಯಿಂದಲೂ, ಕಿರೀಟದಿಂದಲೂ, ಸರ್ಪಗಳಿಂದಲೂ, ಆಭರಣಗಳಿಂದಲೂ ವಿರಾಜಿಸುತ್ತಿರು

ವುವು. ಈ ಮೂರ್ತಿಗಳ ಕೈಕಾಲುಗಳು ಭಿನ್ನವಾಗಿವೆ. “ ಮಿ-ಸೋನ ” ಗ್ರಾಮದಲ್ಲಿ ಈ ವಿಧವಾದ ಶಿವನ ಮೂರ್ತಿಯೊಂದು ದೊರೆತಿರುವುದು. ಈ ಮೂರ್ತಿಗೆ ಎರಡು ಹಸ್ತಗಳಿದ್ದು, ಒಂದು ಹಸ್ತದಲ್ಲಿ ರುದ್ರಾಕ್ಷ ಮಾಲಿಕೆಯೂ, ಮತ್ತೊಂದು ಹಸ್ತದಲ್ಲಿ ಅಮೃತಪಾತ್ರೆಯೂ ಇರುವುವಲ್ಲದೆ, ಮಸ್ತಕದಲ್ಲಿ ಸುಂದರವಾದ ಜಡೆಯೂ, ಹಣೆಯಲ್ಲಿ ಅಗ್ನಿ ನೇತ್ರವೂ ಶೋಭಿಸುತ್ತಿರುವುವು. “ ಯಾನ್-ಮುಂ ” ಎಂಬ ಗ್ರಾಮದಲ್ಲಿ ಶಿವನ ವಿಗ್ರಹವು ಕುಳಿತಂತಿದ್ದು, ಮೂರುನೇತ್ರಗಳಿಂದಲೂ, ತ್ರಿಶೂಲದಿಂದಲೂ ಯುಕ್ತವಾಗಿರುವುದು. “ ಡ್ರಾನ್-ಲಾಯ್ ” ಎಂಬ ಗ್ರಾಮದಲ್ಲಿ ನಂದಿಯ ಮೇಲೆ ಕುಳಿತಿರುವ ಶಿವನ ಮೂರ್ತಿಯು ಪರಿಶೋಭಿಸುತ್ತಿರುವುದು. ಕೆಲವು ಸ್ಥಾನಗಳಲ್ಲಿ ತಾಂಡವೇಶ್ವರಮೂರ್ತಿಗಳು ವಿರಾಜಿಸುತ್ತಿರುವುವು. ಮನುಷ್ಯಾಕಾರವುಳ್ಳ ಶಿವನಮೂರ್ತಿಗಳಲ್ಲಿ ಕೆಲವು ಮೂರ್ತಿಗಳು ೨ ಕೈಗಳಿಂದಲೂ, ೪ ಕೈಗಳಿಂದಲೂ, ೬ ಕೈಗಳಿಂದಲೂ, ೧೦ ಕೈಗಳಿಂದಲೂ, ೨೪ ಕೈಗಳಿಂದಲೂ, ೨೮ ಕೈಗಳಿಂದಲೂ ಯುಕ್ತವಾಗಿರುವುವು. ಪ್ರತಿಯೊಂದು ಮೂರ್ತಿಯ ಹಣೆಯಲ್ಲಿ ಅಗ್ನಿನೇತ್ರವು ಶೋಭಿಸುತ್ತಿರುವುದಲ್ಲದೆ, ಮುಂಭಾಗದಲ್ಲಿ ನಂದೀಶ್ವರನ ವಿಗ್ರಹವು ವಿರಾಜಿಸುತ್ತಿರುವುದು. ಆ ದೇಶದ ಪ್ರತಿಯೊಂದು ಶಿವದೇವಾಲಯದೊಳಗೆ ಶಿವನ ಸಮ್ಮುಖದಲ್ಲಿ ನಂದೀಶ್ವರನ ಮೂರ್ತಿಗಳು, ನಮ್ಮ ದೇಶದ ಶಿವದೇವಾಲಯಗಳಲ್ಲಿ ಸ್ಥಾಪಿಸಲ್ಪಟ್ಟಿರುವಂತೆ ಸ್ಥಾಪಿಸಲ್ಪಟ್ಟಿರುವುವು. ಆ ನಂದೀಶ್ವರನ ಮೂರ್ತಿಗಳ ಪೀಠಗಳು ಬಹುಸುಂದರವಾದ ಚಿತ್ರಗಳಿಂದ ಯುಕ್ತವಾಗಿರುವುವಲ್ಲದೆ, ಆ ಮೂರ್ತಿಗಳ ಕುತ್ತಿಗೆಯ ಸುತ್ತಲೂ ಗಂಟೆಗಳ ಸರಗಳು ಕೆತ್ತಲ್ಪಟ್ಟಿರುವುವು.

ನಮ್ಮ ದೇಶದ ಅನೇಕ ದೊಡ್ಡ ದೊಡ್ಡ ಶಿವದೇವಾಲಯಗಳಲ್ಲಿ ಶಿವನ ಅರ್ಧಾಂಗಿನಿಯಾದ ಪಾರ್ವತೀದೇವಿಯ ವಿಗ್ರಹಗಳು ಸ್ಥಾಪಿಸಲ್ಪಟ್ಟಿರುವಂತೆ, ಆ ದೇಶದಲ್ಲಿಯೂ ದೇವಿಯ ವಿಗ್ರಹಗಳು ಸ್ಥಾಪಿಸಲ್ಪಟ್ಟಿರುವವು. "ಪೊ-ನಗರ" ಎಂಬ ಗ್ರಾಮದಲ್ಲಿ 'ಕೌಠಾರೇಶ್ವರಿ' ಎಂಬ ಹೆಸರಿನ ದೇವಿಯವಿಗ್ರಹವು ಸ್ಥಾಪಿಸಲ್ಪಟ್ಟಿರುವದು. ಈದೇವಿಯ ವಿಗ್ರಹವು ಅಲ್ಲಿ ಬಹುಪ್ರಾಚೀನಕಾಲದಿಂದ ವಿಶೇಷವೈಭವದೊಡನೆ ಮೆರೆಯುತ್ತಿರಲು, ಕಾಡುಜನರು ಆ ದೇವಾಲಯದೊಳಗೆ ನುಗ್ಗಿ ದೇವಿಯ ವಿಗ್ರಹವನ್ನು ಕಿತ್ತುಕೊಂಡುಹೋದರೆಂದೂ, ಇದರಿಂದ ದೇವಾಲಯವು ದೇವರಿಲ್ಲದೆ ಬಹುಕಾಲದವರೆಗೆ ಹಾಗೆಯೇ ಬಿದ್ದಿತ್ತೆಂದೂ, ಹರಿವರ್ಮಮಹಾರಾಜನು ಕ್ರಿ. ಶ. ೮೧೭ ರಲ್ಲಿ ನೂತನವಾಗಿ ದೇವಿಯ ವಿಗ್ರಹವನ್ನು ಸ್ಥಾಪಿಸಿ, ಆ ದೇವತೆಗೆ ಬೆಳ್ಳಿಬಂಗಾರದ ಪದಾರ್ಥಗಳನ್ನೂ, ಭೂಮಿಯನ್ನೂ, ದಾಸದಾಸಿಯರನ್ನೂ ಸಮರ್ಪಿಸಿದನೆಂದೂ ೨೬ನೆಯ ಶಾಸನದಲ್ಲಿ ಉಕ್ತವಾಗಿದೆ. ಕ್ರಿ. ಶ. ೯೧೮ ರಲ್ಲಿ ಇಂದ್ರವರ್ಮಮಹಾರಾಜನು ಈ ದೇವಿಯ ವಿಗ್ರಹವನ್ನು ಸುವರ್ಣದಿಂದ ನಿರ್ಮಿಸಿದನೆಂದು ೪೫ ನೆಯ ಶಾಸನದಿಂದ ತಿಳಿದುಬರುತ್ತದೆ.

ವ್ಯೋಮಾಂಬುರಾಶಿನುತಗೇ ಶಕರಾಜಕಾಲೇ
ದೇವೀಮಿಮಾಂ ಭಗವತೀಂ ಕಲಧೌತದೇಹಾಂ ।
ಏಕಾದಶೇಹನಿ ಶುಚೇರಸಿತೇರ್ಕವಾರೇ
ಸೋತಿಷ್ಠಪದ್ಭುವನಮಂಡಲಕೀರ್ತಿಕಾಂಕ್ಷೀ ॥

ಈ ದೇವಿಯ ಸುವರ್ಣವಿಗ್ರಹವು ಶಕ ೮೪೦ ಜ್ಯೇಷ್ಠ ಕೃಷ್ಣಪಕ್ಷ ಏಕಾದಶೀ ಭಾನುವಾರ ದಿವಸ ಸ್ಥಾಪಿಸಲ್ಪಟ್ಟಿತೆಂದು ಈ ಶ್ಲೋಕದ ಅಭಿಪ್ರಾಯವಿರುತ್ತದೆ. ಕೆಲವು ದಿನಗಳು ಕಳೆದಮೇಲೆ ಸುವರ್ಣದಿಂದ ನಿರ್ಮಿತವಾಗಿದ್ದ ಈ ದೇವಿಯ ವಿಗ್ರಹವನ್ನು

ಕಾಂಬೋಡಿಯಾದೇಶದ ಜನರು ದ್ರವ್ಯಾಶೆಯಿಂದ ಕಿತ್ತುಕೊಂಡು ಹೋದರೆಂದೂ, ಜಯಇಂದ್ರಮಹಾರಾಜನು ಪುನಃ ಆ ಸ್ಥಾನದಲ್ಲಿ ಶಿಲೆಯಿಂದ ನಿರ್ಮಿಸಿದ ದೇವಿಯನ್ನು ಸ್ಥಾಪಿಸಿದನೆಂದೂ ೪೭ ನೆಯ ಶಾಸನದಿಂದ ತಿಳಿದುಬರುತ್ತದೆ. ಕ್ರಿ. ಶ. ೧೦೫೦ ರಲ್ಲಿ ಪರಮೇಶ್ವರ ವರ್ಮನೆಂಬ ಮಹಾರಾಜನು ಈ ದೇವಿಗೆ ರತ್ನಗಳಿಂದ ಅಲಂಕೃತವಾದ ಕಿರೀಟವನ್ನೂ, ಬೆಳ್ಳಿಯ ಪ್ರಭಾವಳಿಯನ್ನೂ, ನವಿಲುಗರಿಗಳಂತಿರುವ ಛತ್ರಿಯನ್ನೂ, ಬೆಳ್ಳಿ ಬಂಗಾರದ ಸಾಮಾನುಗಳನ್ನೂ ಸಮರ್ಪಿಸಿದ ನೆಂದು ೫೫ ನೆಯ ಶಾಸನದಿಂದ ತಿಳಿದುಬರುತ್ತದೆ. ಈ ಶಾಸನದ ಮೊದಲನೆಯ ಶ್ಲೋಕವು ದೇವಿಯ ಸ್ತೋತ್ರರೂಪವಾಗಿದ್ದು, ಎರಡ ನೆಯ ಶ್ಲೋಕವು ಪರಮೇಶ್ವರವರ್ಮಮಹಾರಾಜನ ವರ್ಣನಾತ್ಮಕ ವಾಗಿರುವುದು. ಈ ಶ್ಲೋಕಗಳು ಎಷ್ಟು ಮನೋಹರವಾಗಿ ರಚಿಸಲ್ಪ ಟ್ಟಿರುವುವೆಂಬುದನ್ನು ಪ್ರತಿಯೊಬ್ಬರೂ ಕೇಳಿ ಸಂತೋಷಿಸಬೇಕಾಗಿದೆ.

೫೫ ನೆಯ ಶಾಸನದಲ್ಲಿ—

ಭೂತಾಭೂತೇಶಭೂತಾ ಭುವಿ ಭವವಿಭವೋದ್ಭಾವಭಾವಾತ್ಮಭಾವಾ
ಭಾವಾಭಾವಸ್ವಭಾವಾ ಭವಭವಕಭವಾಭಾವಭಾವೈಕಭಾವಾ ।
ಭಾವಾಭಾವಾಗ್ರಶಕ್ತಿಃ ಶಶಿಮುಕುಟತನೋರರ್ಧಕಾಯಾ ಸುಕಾಯಾ
ಕಾಯೇ ಕಾಯೇಶಕಾಯಾ ಭಗವತಿ ನಮತೋ ನೋ ಜಯೇವಸ್ವಸಿದ್ಧ್ಯೈ ॥೧॥

ಸಾರಾಸಾರವಿವೇಚನಸ್ಫುಟಮನಾ ಮಾನ್ಯೋ ಮನೋನಂದನಃ
ಪಾಪಾಪಾಪಭಯಪ್ರಿಯಃ ಪ್ರಿಯಕರಃ ಕೀರ್ತ್ಯರ್ಜ್ಜನೈಕೋದ್ಯಮಃ ।
ಲೋಕಾಲೋಕಿಕಲಾ ಕಲಾ ಸತಿ ಸತಸ್ತ್ರಾತುಂ ಭವದ್ಭಾವಿನೋ
ಭಾವೋದ್ಭಾವಸುಭಾವಸದ್ಗುಣಗಣೈರ್ಧರ್ಮಂ ತನೋತ್ಯೇವ ಯಃ ॥೨॥

ಈ ಶ್ಲೋಕಗಳಲ್ಲಿರುವ ಪ್ರಾಸನ್ನೂ, ಪದಲಾಲಿತ್ಯವನ್ನೂ, ಅರ್ಥಗಾಂಭೀರ್ಯವನ್ನೂ ಪರಿಶೀಲಿಸಿದರೆ, ಆಗಿನ ಕಾಲದ ಮಹಾ

ರಾಜರ ಆಸ್ಥಾನದಲ್ಲಿ ಮಹಾಮಹಾಪಂಡಿತರಿದ್ದರೆಂದು ಕಂಡುಬರು ತ್ತದೆ. ಕ್ರಿ. ಶ. ೧೧೬೭ ರಲ್ಲಿ ೬ ನೆಯ ಜಯಇಂದ್ರವರ್ಮನೆಂಬ ಮಹಾರಾಜನು ಪರಮೇಶ್ವರಿ ಮತ್ತು ರಯಾ ಎಂಬ ರಾಣಿಯರಿಂ ದಲೂ, ಭಾಗ್ಯವತಿ, ಸುಪುತ್ರಾ, ಸುದಕ್ಷಿಣಾ ಎಂಬ ಪುತ್ರಿಯರಿಂದಲೂ ಯುಕ್ತನಾಗಿ, ಕೌಠಾರೇಶ್ವರೀದೇವಿಗೆ ಅಮೂಲ್ಯವಾದ ಕಾಣಿಕೆ ಗಳನ್ನು ಸಮರ್ಪಿಸಿದನೆಂದು ೮೦ ನೆಯ ಶಾಸನದಿಂದ ತಿಳಿದುಬರುತ್ತದೆ. ಇದೇರೀತಿಯಾಗಿ ಅನೇಕಜನಮಹಾರಾಜರು ಈ ದೇವಿಯಲ್ಲಿ ನಿರುಪಮವಾದ ಭಕ್ತಿಯನ್ನಿಟ್ಟು ಸೇವಿಸಿರುವ ವಿಷಯವು ೯೭-೯೮-೯೯-೧೦೫-೧೦೯ ನೆಯ ಶಾಸನಗಳಿಂದ ತಿಳಿದುಬರುತ್ತದೆ.

"ನ್ಹಾ-ಟ್ರಾಂಗ್" ಎಂಬ ಗ್ರಾಮದಲ್ಲಿರುವ ದೇವಿಯ ವಿಗ್ರಹವು ಕಪ್ಪುಕಲ್ಲಿನಿಂದ ಕುಳಿತಿರುವ ಆಕಾರದಲ್ಲಿ ನಿರ್ಮಿಸಲ್ಪ ಟ್ಟಿದ್ದು, ಹತ್ತು ಕೈಗಳಿಂದ ಯುಕ್ತವಾಗಿರುವುದು. ಆ ದೇಶದ ಕೆಲವೆಡೆ ಯಲ್ಲಿ ದೇವಿಯ ವಿಗ್ರಹಗಳು ನಂದಿಯಮೇಲೆ ಕುಳಿತಂತೆ ಸ್ಥಾಪಿಸಲ್ಪಟ್ಟಿ ರುವುವು. ಮಿ-ಸೋನ ಗ್ರಾಮದಲ್ಲಿರುವ ದೇವಿಯ ವಿಗ್ರಹಕ್ಕೆ ಹತ್ತು ಕೈಗಳಿದ್ದು ನರ್ತಿಸುತ್ತಿರುವಂತೆ ನಿರ್ಮಿಸಲ್ಪಟ್ಟಿದೆ. "ಚಿಯನ್-ಡಾಂಗ್" ಎಂಬ ಗ್ರಾಮದಲ್ಲಿರುವ ದೇವಿಯ ವಿಗ್ರಹಕ್ಕೆ ಆರು ಕೈಗಳಿದ್ದು, ಯುದ್ಧಕ್ಕೆ ಸನ್ನದ್ಧಳಾಗಿರುವಂತೆ ನಿರ್ಮಿಸಲ್ಪಟ್ಟಿದೆ.

ಅನ್ನಾಂ ದೇಶದಲ್ಲಿ ಶಿವನ ಅರ್ಧಾಂಗಿನಿಯಾದ ದೇವಿಯ ವಿಗ್ರಹಗಳಿರುವಂತೆ, ಶಿವನ ಪುತ್ರರಾದ ವಿಘ್ನೇಶ್ವರ ಮತ್ತು ಷಣ್ಮುಖ ಇವರ ವಿಗ್ರಹಗಳೂ ಕೂಡ ಇರುವುವು. ಆ ದೇಶದಲ್ಲಿ ವಿಘ್ನೇಶ್ವರನ ಮೂರ್ತಿಗಳು ಹೇರಳವಾಗಿ ದೊರೆಯುವುವು. ಆದರೂ ಈ ಮೂರ್ತಿ ಗಳು ವಿಶೇಷವಾಗಿ ಶಿವದೇವಾಲಯಗಳಲ್ಲಿ ಸ್ಥಾಪಿಸಲ್ಪಟ್ಟಿರುವವು.



ಮಿ-ಸೋನ್ ಗ್ರಾಮದಲ್ಲಿರುವ ಮಯೂರವಾಹನನಾದ
ಷಣ್ಮುಖಸ್ವಾಮಿಯ ವಿಗ್ರಹ.

(ನವಿಲಿನ ಮುಖವು ಭಿನ್ನವಾಗಿದೆ.)

" ಪೋ-ನಗರ " ಎಂಬ ಗ್ರಾಮದಲ್ಲಿ ಮಾತ್ರ ಈ ದೇವರಿಗೆ ಪ್ರತ್ಯೇಕ ವಾದ ಮಂದಿರವು ಕ್ರಿ. ಶ. ೮೧೭ ರಲ್ಲಿ ಕಟ್ಟಲ್ಪಟ್ಟಿತೆಂದು ೨೬ ನೆಯ ಶಾಸನದಿಂದ ತಿಳಿದುಬರುತ್ತದೆ. ಆ ದೇಶದಲ್ಲಿರುವ ಪ್ರತಿಯೊಂದು ವಿಘ್ನೇಶ್ವರಮೂರ್ತಿಗೂ ಎರಡು ಕೈಗಳಿದ್ದು, ಎಡಗೈಯಲ್ಲಿ ಅಮೃತ ಪಾತ್ರೆಯೂ, ಬಲಗೈಯಲ್ಲಿ ಶಿವಲಿಂಗಧಾರಣವೂ ಇರುವುವು. ನಮ್ಮ ದೇಶದಲ್ಲಿ ಅನೇಕದೇವತೆಗಳ ಹಸ್ತದಲ್ಲಿ ಶಿವಲಿಂಗಧಾರಣವಿದ್ದುದು ಕಂಡುಬರುವಂತೆ, ಆ ದೇಶದಲ್ಲಿ ವಿಘ್ನೇಶ್ವರನ ಹಸ್ತದಲ್ಲಿ ಶಿವಲಿಂಗ ಧಾರಣವಿದ್ದುದು ಕಂಡುಬರುತ್ತದೆ. ಅಲ್ಲಿ ಇದೊಂದು ವೀರಶೈವ ಮತದ ಹೆಗ್ಗುರುತಾಗಿದೆ. ಯಾರಾದರೂ ಮತಾಭಿಮಾನಿಗಳು ಆ ದೇಶಕ್ಕೆ ಹೋಗಿ ಪರಿಶೋಧಿಸಿದರೆ, ವೀರಶೈವಮತದ ಗುರುತುಗಳು ವಿಶೇಷವಾಗಿ ದೊರೆಯಬಹುದೆಂದು ಪೂರ್ಣ ನಂಬುಗೆಯಿದೆ. ಅಸ್ತು ! ' ಮಿ-ಸೋನ್ ' ಗ್ರಾಮದಲ್ಲಿರುವ ವಿಘ್ನೇಶ್ವರನ ಮೂರ್ತಿಗೆ ಮಾತ್ರ ನಾಲ್ಕು ಕೈಗಳಿದ್ದು ನಿಂತುಕೊಂಡಂತೆ ಸ್ಥಾಪಿಸಲ್ಪಟ್ಟಿದೆ.

ಅನ್ನಾಂದೇಶದಲ್ಲಿ ವಿಘ್ನೇಶ್ವರನ ಮೂರ್ತಿಗಳು ವಿಶೇಷವಾಗಿರು ವಂತೆ, ಷಣ್ಮುಖಸ್ವಾಮಿಯ ಮೂರ್ತಿಗಳು ವಿಶೇಷವಾಗಿರುವುದಿಲ್ಲ. ಇಲ್ಲಿಯವರೆಗೆ ಫ್ರೆಂಚ್ ಸರಕಾರದವರು ಶೋಧಿಸಿದ್ದರಲ್ಲಿ ೪ ಮೂರ್ತಿ ಗಳು ಮಾತ್ರ ದೊರೆತಿರುತ್ತವೆ. ಇವುಗಳಲ್ಲಿ ಎರಡು ಮೂರ್ತಿಗಳು ನವಿಲಿನ ಮೇಲೆ ಕುಳಿತಂತೆಯೂ, ಮಿಕ್ಕ ಎರಡು ಮೂರ್ತಿಗಳು ನೀರಾನೆಯ ಮೇಲೆ ಕುಳಿತಂತೆಯೂ ರಚಿಸಲ್ಪಟ್ಟಿವೆ. ಶ್ರೀಷಣ್ಮುಖ ಸ್ವಾಮಿಯ ವಿಷಯವು ೯-೨೪-೩೬-೩೯ ನೆಯ ಶಾಸನಗಳಲ್ಲಿ ಸಂಕ್ಷೇಪವಾಗಿ ಹೇಳಲ್ಪಟ್ಟಿದೆ.

ಇಲ್ಲಿಯವರೆಗೆ ಅನ್ನಾಂ ದೇಶದಲ್ಲಿರುವ ಶಿವವಿಗ್ರಹಗಳ ಮತ್ತು ಶಿವಸಂಬಂಧಿಗಳಾದ ಪಾರ್ವತೀ-ಗಣಪತಿ-ಷಣ್ಮುಖವಿಗ್ರಹಗಳ

ವಿಷಯವು ಪ್ರತಿಪಾದಿಸಲ್ಪಟ್ಟದ್ದಾಯಿತು. ಇನ್ನು ಮುಂದೆ ಆ ದೇಶದ ರಾಜರು ಶಿವನೇ ದೇವತಾಸಾರ್ವಭೌಮನೆಂಬ ನಿರ್ಮಲಬುದ್ಧಿಯಿಂದ, ತಾವು ಬರೆಯಿಸಿದ ಶಾಸನಗಳಲ್ಲಿ ಶಿವನನ್ನು ಅಸಾಧಾರಣಭಕ್ತಿಭಾವದಿಂದ ಕೊಂಡಾಡಿರುವ ವಿಷಯವನ್ನು ಸಂಕ್ಷೇಪವಾಗಿ ವಿವರಿಸುವೆನು.

ಈಗ್ಗೆ ೧೩೦೦ ವರ್ಷಗಳ ಪೂರ್ವದಲ್ಲಿ ಆ ದೇಶವನ್ನಾಳುತ್ತಿದ್ದ ಪ್ರಕಾಶಧರ್ಮನೆಂಬ ಮಹಾರಾಜನು "ಪ್ರಭಾಸೇಶ್ವರ" ಎಂಬ ಶಿವಲಿಂಗವನ್ನು ಸ್ಥಾಪಿಸಿ, ಒಂದು ಶಾಸನವನ್ನು ಬರೆಯಿಸಿದ್ದಾನೆ. ಆ ಶಾಸನದ ಆದಿಯಲ್ಲಿ ಈ ರೀತಿಯಾಗಿ ಶಿವಸ್ತುತಿಯು ಮಾಡಲ್ಪಟ್ಟಿದೆ.

೧೨ ನೆಯ ಶಾಸನದಲ್ಲಿ—

ಯೋ ಬ್ರಹ್ಮವಿಷ್ಣು ತ್ರಿದಶಾಧಿಪಾದಿಸುರಾಸುರಬ್ರಹ್ಮನೃಪರ್ಷಿಮಾನ್ಯಃ ।
ತಥಾಪಿ ಭೂತ್ಯೈ ಜಗತಾಮನೃತ್ಯತ್ ಶ್ಮಶಾನಭೂಮಾವತಿಚಿತ್ರಮೇತತ್ ॥

೨೧ ನೆಯ ಶಾಸನದಲ್ಲಿ—

ಜಯತಿ ಜಿತಮನೋಜೋ ಬ್ರಹ್ಮವಿಷ್ಣ್ವಾದಿದೇವ
ಪ್ರಣತಪದಯುಗಾಬ್ಜೋ ನಿಷ್ಕಲೋಽಪ್ಯಷ್ಟಮೂರ್ತಿಃ ।
ತ್ರಿಭುವನಹಿತಹೇತುಃ ಸರ್ವಸಂಕಲ್ಪಹಾರೀ
ಪರಪುರುಷ ಇಹ ಶ್ರೀಶಾನದೇವೋಽಯಮಾದ್ಯಃ ॥

೩೨ ನೆಯ ಶಾಸನದಲ್ಲಿ—

ಬ್ರಹ್ಮಾದಿಮುನಿಸುರನುತಃ ಸ ಶ್ರೀಭದ್ರೇಶ್ವರಃ ಪ್ರಭುರ್ಭಗವಾನ್ ।
ಜಯತಿ ಜಗದ್ಗುರುರಾದ್ಯಸ್ತ್ರಿಪುರವಿಜಯೀ ಯೋಗಿಭಿಃ ಸಾಧ್ಯಃ ॥

ಈ ಶ್ಲೋಕಗಳಲ್ಲಿ ಶಿವನ ವಿಷಯಕವಾಗಿರುವ ವಿಶೇಷಣಗಳನ್ನು ನೋಡಿದರೆ, ಶಿವಭಕ್ತರ ಮನಸ್ಸಾಗರವು ಮೇರೆದಪ್ಪಿ ಉಕ್ಕುವಂತಿದೆ. ಬ್ರಹ್ಮವಿಷ್ಣ್ವಾದಿದೇವತೆಗಳಿಂದ ಪೂಜಿಸಲ್ಪಟ್ಟ ಪಾದಕಮಲಗಳುಳ್ಳ

ವನೂ, ತ್ರಿಲೋಕಗುರುವೂ ಇವೇ ಮೊದಲಾದ ವಿಶೇಷಣಗಳನ್ನು ಕೊಡಬೇಕಾದರೆ, ಆ ಮಹಾರಾಜರಲ್ಲಿ ಶಿವನ ಬಗ್ಗೆ ವೀರಶೈವರಿಗಿಂತಲೂ ಹೆಚ್ಚಿನ ಭಕ್ತಿಯಿದ್ದಿತೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ.

೪೨ ನೆಯ ಶಾಸನದಲ್ಲಿ—

ಯೋ ಭಸ್ಮರಾಶ್ಯಾಂ ಬಹುಸಂಚಯಾಯಾಂ
ದಿವ್ಯಃ ಸುಖಾಸೀನ ಉರುಪ್ರಭಾವಃ ।
ದೇದೀಪ್ಯತೇ ಸೂರ್ಯ ಇವಾಂಶುಮಾಲಾ-
ಪ್ರದ್ಯೋತಿತಃ ಖೇ ವಿಗತಾಂಬುದೇಯೇ ॥೧॥

ಬ್ರಹ್ಮೇಂದ್ರವಿಷ್ಣ್ವಾದಯ ಏವ ದೇವಾ
ದೃಷ್ಟ್ವಾ ತದಾ ವಿಸ್ಮಯಮಾಗತಾಃ ಸ್ಯುಃ ।
ತತ್ರ ಜ್ವಲಂತಂ ಯಮುಖಂಡಿತಾಭಂ
ನಿರ್ಧೂಮಕಂ ವಹ್ನಿಮಿವಾಜ್ಯಯುಕ್ತಂ ॥೨॥

ದೇವೇಂದ್ರಃ ಕಿಲ ಪೂರ್ವತೋಽಸ್ಥಿತ ತದಾ ಯಾಮ್ಯಾಂ ಸರೋಜೋದ್ಭವಃ
ಚಂದ್ರಾರ್ಕಾವಿಹ ಪೃಷ್ಠತಶ್ಚ ಭಗವಾನ್ ನಾರಾಯಣೋ ವಾಮತಃ ।
ಮಧ್ಯಸ್ಥೋಜ್ವಲಿತಾಭರಶ್ಮಿಸಹಿತಶ್ಚೋಂಕಾರಪೂರ್ವೈಃ ಸ್ವಧಾ
ಸ್ವಾಹಾಂತೈರ್ನಿಜಮಂತ್ರಕೈಸ್ತುತನತೋ ಯೋಽಸೌ ತದಾದ್ಯೈಸ್ಸುರೈಃ ॥

ಇತ್ಯಾದಿಶ್ಲೋಕಗಳು ಬರೆಯಲ್ಪಟ್ಟಿವೆ. ಮೇಘಾದಿಗಳಿಂದ ದೂರವಾದ ನಿರ್ಮಲಾಕಾಶದಲ್ಲಿ ಸೂರ್ಯನು ಪ್ರಕಾಶಿಸುತ್ತಿರುವಂತೆ, ಘನತರವಾದ ಶುಭ್ರಭಸ್ಮರಾಶಿಯ ಮಧ್ಯದಲ್ಲಿ ಅತ್ಯಾನಂದದಿಂದ ಕುಳಿತುಕೊಂಡು ಪ್ರಕಾಶಿಸುತ್ತಿರುವವನೂ, ಹೊಗೆಯಿಲ್ಲದ ಬೆಂಕಿಯು ಪ್ರಜ್ವಲಿಸುತ್ತಿರುವಂತೆ ಪ್ರಜ್ವಲಿಸುತ್ತಿರುವವನೂ ಆದ ಶ್ರೀಪರಮೇಶ್ವರ

ನನ್ನು ವಿಷ್ಣು-ಬ್ರಹ್ಮ-ಇಂದ್ರ ಮೊದಲಾದ ದೇವತೆಗಳು ಕಂಡು ವಿಸ್ಮಯಹೊಂದಿದರೆಂದೂ, ಆಗ್ಗೆ ದೇವೇಂದ್ರನು ಪೂರ್ವಭಾಗದಲ್ಲಿದ್ದನೆಂದೂ, ಬ್ರಹ್ಮನು ಬಲಭಾಗದಲ್ಲಿದ್ದನೆಂದೂ, ವಿಷ್ಣುವು ಎಡಭಾಗದಲ್ಲಿದ್ದನೆಂದೂ, ಸೂರ್ಯ ಚಂದ್ರರು ಹಿಂಭಾಗದಲ್ಲಿದ್ದರೆಂದೂ, ಇವರೇ ಮೊದಲಾದ ಸಮಸ್ತದೇವತೆಗಳು ಕೈಜೋಡಿಸಿಕೊಂಡು ಸ್ವಧಾ-ಸ್ವಾಹಾ ಎಂಬ ಮಂತ್ರಗಳನ್ನುಚ್ಚರಿಸುತ್ತ ಶಿವನನ್ನು ಅತ್ಯಂತಭಕ್ತಿಯಿಂದ ಸ್ತುತಿಸಿ ನಮಸ್ಕರಿಸುತ್ತಿದ್ದರೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

೩೯ ನೆಯ ಶಾಸನದಲ್ಲಿ —

ಲಿಂಗಾವಸಾನಮತಿಗಾಢತಮಂ ತ್ವಧಸ್ತಾತ್
ವಾರಾಹರೂಪವಹತಾ ಹರಿಣಾಪಿ ಜೈತ್ರಂ ।
ವೀರ್ಯೇಣ ಸಾಧಯಿತುಮುತ್ತಮಯೋಗವೇತ್ರಾ
ಶಕ್ತಂ ನ ಯಸ್ಯ ಯದನಿಷ್ಟವರಪ್ರಸಾದಾತ್ ॥

ಲಿಂಗಾವಸಾನಮನಭಿಜ್ಞತಯೋಪರಿಷ್ಟಾದ್
ಮಾನೋಜ್ಝಿತೇನ ಸರಸೀರುಹಯೋನಿನಾದಃ ।
ಸ್ವಧ್ಯಾನವೀರ್ಯರುಚಿರೇಣ ತಥಾಪಿ ವೇತ್ತುಂ
ಶಕ್ತಂ ನ ಯಸ್ಯ ಯದನಿಷ್ಟವರಪ್ರಸಾದಾತ್ ॥

ಯೋ ವಿಜ್ಞಾಯ ಮುರಾರಿಪದ್ಮವರಜಾವಜ್ಞಾನದೋಷೋದ್ಗತಿ
ಪ್ರಾಲೇಯಗ್ಲಪಿತಾನನಾಂಬುಜನಿಭೌ ಪ್ರೋವಾಚ ವಾಣೀಮಿಮಾಂ ।
ಹೇ ಗೋವಿಂದಸರೋಜಜೌ ಕಿಮಪರಂ ಸಾಧ್ವಾ ಯುವಾಭ್ಯಾಂ ಮನಾಗ್
ಯದ್ಮೂಲಾಗ್ರಬುಭುತ್ಸಯಾ ಮಮ ನತಿಃ ಕೃತ್ವಾ ಮುದಾ ನಾನ್ಯಥಾ ॥

ಇತಿ ಯಸ್ಯ ವಚಃ ಶ್ಲಾಘ್ಯಂ ಶ್ರುತವಂತೌ ಚ ಸಾದರಾ ।
ಮುರಾರಿಪದ್ಮಯೋನೀ ತೌ ನೇಮತುರ್ಯಮನುತ್ತರಂ ॥

ಆಹತುರ್ಗಾಶ್ಚ ಯತ್ಸೂರ್ಯಪ್ರಬೋಧಿತಮುಖಾಂಬುಜಾ ।
ತಾ ಮಹಾನ್ ದೇವದೇವಸ್ತ್ವಂ ಕುರ್ಯಾ ಯದ್ವರಮಾಯಯೋಃ ॥

ಇತಿ ಯೋ ದರ್ಶಯನ್ ಮಧ್ಯಲಿಂಗಾನ್ನಿರ್ಗತಮಾನನಂ ।
ನೇತ್ರತ್ರಯಾಗ್ನಿಚಂದ್ರಾರ್ಕಪ್ರಭಾಭಾಸಿತಮಾಸ್ಥಿತಃ ॥

ತತಶ್ಚ ದಕ್ಷಿಣೇ ಬ್ರಹ್ಮಾ ಸಂಸ್ಥಿತೋ ವಾಮತೋ ಹರಿಃ ।
ಇತ್ಯೈಕತ್ವಂ ಇಮಾ ಯೇನ ಲಭೇತೇ ಯದನುಜ್ಞಯಾ ॥

ವಿಷ್ಣು–ಬ್ರಹ್ಮರೀರ್ವರು ನಾನು ಹೆಚ್ಚು, ತಾನು ಹೆಚ್ಚು ಎಂಬ ಹೆಮ್ಮೆಯಿಂದ ಕೂಡಿದವರಾಗಿ, ಲಿಂಗರೂಪಿಯಾದ ಪರಶಿವನ ಮಸ್ತಕ ಮತ್ತು ಪಾದಗಳನ್ನು ಯಾರು ನೋಡುವರೋ ಅವರೇ ಹೆಚ್ಚೆಂದು ತಮ್ಮತಮ್ಮೊಳಗೆ ನಿರ್ಧರಿಸಿ, ವಿಷ್ಣುವು ವರಾಹರೂಪವನ್ನು ಧರಿಸಿ ಅಸಂಖ್ಯವರ್ಷಗಳವರೆಗೆ ಭೂಮಿಯನ್ನು ಭೇದಿಸುತ್ತ ಹೋದರೂ ಲಿಂಗಮೂರ್ತಿಯ ಪಾದವನ್ನು ಕಾಣಲಿಲ್ಲವೆಂದೂ, ಇದರಂತೆ ಬ್ರಹ್ಮನು ಹಂಸರೂಪವನ್ನು ಧರಿಸಿ ಅಸಂಖ್ಯವರ್ಷಗಳವರೆಗೆ ಆಕಾಶದಲ್ಲಿ ಹಾರುತ್ತ ಹೋದರೂ ಲಿಂಗಮೂರ್ತಿಯ ಮಸ್ತಕವನ್ನು ಕಾಣಲಿಲ್ಲ ವೆಂದೂ, ಲಿಂಗಮೂರ್ತಿಯ ಮಸ್ತಕ ಮತ್ತು ಪಾದಗಳನ್ನು ನೋಡದೆ ಚಿಂತಾಕ್ರಾಂತರಾಗಿ ಬಾಡಿದ ಮುಖಗಳಿಂದ ಕೂಡಿದ ವಿಷ್ಣುಬ್ರಹ್ಮರ ಸ್ವರೂಪವನ್ನು ತಿಳಿದು ಶ್ರೀಶಂಕರನು—ಎಲೈ, ವಿಷ್ಣುಬ್ರಹ್ಮರಿರಾ! ನೀವು ವ್ಯಸನಾಕ್ರಾಂತರಾಗದೆ ಅಸಾಧಾರಣಭಕ್ತಿಭಾವದಿಂದ ನನ್ನನ್ನು ನಮಸ್ಕರಿಸಿರೆಂದು ಆಕಾಶವಾಣಿಯಿಂದ ನುಡಿದನೆಂದೂ, ಅತ್ಯಾನಂದ ದಾಯಕವಾದ ಈ ಶಿವವಾಣಿಯನ್ನು ಕೇಳಿ ವಿಷ್ಣುಬ್ರಹ್ಮರು ಅಸದೃಶ ಭಕ್ತಿಯಿಂದೊಡಗೂಡಿ ಸ್ತುತಿಸುತ್ತ ನಮಸ್ಕರಿಸಿ ಪ್ರತ್ಯಕ್ಷನಾಗಬೇಕೆಂಬ ವರವನ್ನು ಬೇಡಿಕೊಂಡರೆಂದೂ, ಕೂಡಲೆ ಶ್ರೀಶಂಕರನು ಚಂದ್ರ-

ಸೂರ್ಯ-ಅಗ್ನಿನೇತ್ರಗಳಿಂದ ಪರಿಶೋಭಿಸುತ್ತಿರುವ ಮುಖವನ್ನು ಲಿಂಗಮಧ್ಯದಲ್ಲಿ ತೋರಿಸಿದನೆಂದೂ, ಆಗ್ಗೆ ಬಲಭಾಗದಲ್ಲಿ ಬ್ರಹ್ಮನೂ, ಎಡಭಾಗದಲ್ಲಿ ವಿಷ್ಣುವೂ ಕೈಜೋಡಿಸಿ ಎದ್ದು ನಿಂತುಕೊಂಡು ಶಿವನ ಅಪ್ಪಣೆಯಮೇರೆಗೆ ಪರಸ್ಪರವಾಗಿ ಏಕತ್ವವನ್ನು ತಾಳಿದರೆಂದೂ ಈ ಶ್ಲೋಕಗಳ ಅಭಿಪ್ರಾಯವಿರುತ್ತದೆ.

ಇಲ್ಲಿಯವರೆಗೆ ದಿಙ್ಮಾತ್ರದಿಂದ ತೋರಿಸಿದ ಶಿವಸ್ತುತಿ ಮತ್ತು ಶಿವಸರ್ವೋತ್ತಮತ್ವವಿಷಯವನ್ನು ವಿಚಾರಮಾಡಿನೋಡಿದರೆ, ಚಂಪಾ ದೇಶದ ರಾಜರಿಗೆ ಶಿವನ ವಿಷಯದಲ್ಲಿರತಕ್ಕ ಪೂಜ್ಯಬುದ್ಧಿಯು ಸೀಮಾತೀತವಾಗಿತ್ತೆಂದು ಸ್ಪಷ್ಟವಾಗಿ ವೇದ್ಯವಾಗುತ್ತದೆ. ಆ ಮಹಾ ರಾಜರಲ್ಲಿ ಈ ವಿಧವಾದ ಮಹಾಶಿವಭಕ್ತಿಯು ನೆಲೆಗೊಂಡಿರುವು ದನ್ನು ನೋಡಿದರೆ ಇದಕ್ಕೆ ವೀರಶೈವಮತಾಚಾರ್ಯರ ಅನುಗ್ರಹವೇ ಮೂಲಕಾರಣವೆಂದು ಕಂಡುಬರುತ್ತದೆ. ಏಕೆಂದರೆ—ಈ ಭೂಮಂಡಲ ದಲ್ಲಿ ಲೋಕೋತ್ತರವಾದ ಶಿವಭಕ್ತಿಯನ್ನು ಸಂಸ್ಥಾಪಿಸಿದವರು ವೀರಶೈವಾಚಾರ್ಯರಲ್ಲದೆ ಬೇರೊಬ್ಬರಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ವೀರಶೈವಾಚಾರ್ಯರು ಸಮಸ್ತಪ್ರಪಂಚದಲ್ಲೆಲ್ಲ ಶಿವಭಕ್ತಿಯನ್ನು ನೆಲೆಗೊಳಿಸುವುದಕ್ಕಾಗಿಯೇ ಪರಮೇಶ್ವರನಿಂದ ಈ ಭೂಮಂಡಲಕ್ಕೆ ಕಳುಹಿಸಲ್ಪಟ್ಟಿರುವ ವಿಷಯವು ಶಿವಾಗಮಗಳಿಂದಲೂ ಇತರಗ್ರಂಥಗಳಿಂದಲೂ ವೇದ್ಯವಾಗುತ್ತದೆ. ಈ ಶಿವಾಚಾರ್ಯರು ಗಗನಮಾರ್ಗವಾಗಿ ಸಮಸ್ತಪ್ರಪಂಚದಲ್ಲೆಲ್ಲ ಸಂಚರಿಸಿ ಶಿವಭಕ್ತಿ ಯನ್ನು ಪ್ರತಿಷ್ಠಾಪಿಸಿದ ವಿಷಯವು ಅವರ ಲೀಲಾಬೋಧಕಚರಿತ್ರ ಗಳಿಂದ ವೇದ್ಯವಾಗುತ್ತದೆ. ಇವರಂತೆಯೇ ಇವರ ಪರಂಪರಾಗತರಾದ ಆಚಾರ್ಯರೂ ಸಹ ಶಿವಭಕ್ತಿಯನ್ನು ಪ್ರಪಂಚದಲ್ಲೆಲ್ಲ ಪ್ರಚಾರ ಗೊಳಿಸಿರುತ್ತಾರೆ.

ಅನ್ನಾಂ ದೇಶದ ‘ ಬರ್ಾಲರ್ಾ ’ ಎಂಬ ಹಳ್ಳಿಯಲ್ಲಿರುವ ಒಂದು ಶಿಲಾಶಾಸನದಲ್ಲಿ ಶ್ರೀಕಲ್ಪವೆಂಬ ರಾಜಮನೆತನದ ಒಬ್ಬಾನೊಬ್ಬ ಅಧಿಕಾರಿಯಿಂದ ಸ್ಥಾಪಿಸಲ್ಪಟ್ಟ ಶಿವಾಲಯದ ವಿಷಯವು ಬರೆಯಲ್ಪಟ್ಟಿರುತ್ತದೆ. ಈ ಮನೆತನದವರು ಪರಮಶಿವಭಕ್ತರಿದ್ದರೆಂಬ ವಿಷಯವು ಆ ಶಾಸನದಿಂದ ತಿಳಿದುಬರುತ್ತದೆ.

೩೫ ನೆಯ ಶಾಸನದಲ್ಲಿ

ಶ್ರೀರುದ್ರಮಧ್ಯೇಶ್ವರಮುದ್ಭುತಾಂಗಂ ಸ ಧರ್ಮಕಾಂಕ್ಷೀ ಶಿವತತ್ತ್ವಸೇವೀ ।
ತದ್ಭಕ್ತಯೇ ಶ್ರೀಜಯಸಿಂಹವರ್ಮಪ್ರಸಾದತಃ ಸ್ಥಾಪಿತವಾನ್ ಧರಿತ್ರ್ಯಾಂ ॥

ಶ್ರೀವೃದ್ಧೇಶ್ವರೇ ಪೂರ್ವಂ ಪ್ರಪಿತಾಮಹೇನ ಸ್ಥಾಪಿತೇ ಪರಚಕ್ರಭಿನ್ನೇ ಯಂ ಶ್ರೀಶಿವಲಿಂಗೇಶಂ ಯೋ ಮುನಿಶ್ಶಿವಾಚಾರ್ಯನಾಮಧೇಯಃ ಪುನಃ ಸ್ಥಾಪಿತವಾನ್ ಇತಿ ॥

ಶೈವಕ್ರಿಯಾವಿತ್ ಸುಕೃತಪ್ರಸಕ್ತೋ ದೇವಾರ್ಚನಜ್ಞಾನಸಮರ್ಥಬುದ್ಧಿಃ ।
ಪಿತ್ರೋರ್ಗುಣಾನ್ ಭಾರತರಾನ್ ಸಚಿತ್ತೇ ಸಂಚಿಂತ್ಯಪುಣ್ಯಂಸಕರೋತುಕೀರ್ತ್ಯೈ ॥

ಶಾಕೇ ಖದ್ವ್ಯಷ್ಟಭಿರ್ಯುಕ್ತೇ ಪಂಚಾಹೇ ಶುಚ್ಯಪಾಂಡರೇ ।
ಸ್ಥಾಪಿತಃ ಶಿವಲಿಂಗೇಶಃ ಶಿವಾಚಾರ್ಯೇಣ ಧೀಮತಾ ॥

ಈ ಪ್ರಕಾರವಾಗಿ ಗದ್ಯಪದ್ಯಗಳು ಬರೆಯಲ್ಪಟ್ಟಿರುವುವು. ಈ ಶಾಸನದಲ್ಲಿರುವ ಗದ್ಯಪದ್ಯಾಭಿಪ್ರಾಯವನ್ನು ವಿಚಾರಮಾಡಿ ನೋಡಿದರೆ, ಪೂರ್ವದಲ್ಲಿ ಈ ಅಧಿಕಾರಿಯ ಮುತ್ತಜ್ಜನಿಂದ ಸ್ಥಾಪಿಸಲ್ಪಟ್ಟಿದ್ದ ‘ ಶ್ರೀವೃದ್ಧೇಶ್ವರ ’ ಎಂಬ ಲಿಂಗಮೂರ್ತಿಯು ವೈರಿಗಳಿಂದ ನಾಶಮಾಡಲ್ಪಟ್ಟಿತೆಂದೂ, ಅದೇ ಸ್ಥಾನದಲ್ಲಿ ಈ ಅಧಿಕಾರಿಯು ಜಯಸಿಂಹವರ್ಮನೆಂಬ ಮಹಾರಾಜನ ಆಶ್ರಯದಿಂದ “ ಶಿವಲಿಂಗೇಶ ” ಎಂಬ ಹೆಸರಿನ ಲಿಂಗಮೂರ್ತಿಯನ್ನು ಶಾಲಿವಾಹನಶಕ ೮೨೦

ಜ್ಯೇಷ್ಠ ಬ|| ೫ ದಿವಸ ಪ್ರತಿಷ್ಠಾಪಿಸಿದನೆಂದೂ, ಈ ಶಿವಲಿಂಗ ಮೂರ್ತಿಯು "**ಶಿವಾಚಾರ್ಯ**" ಎಂಬ ಹೆಸರಿನ ಆಚಾರ್ಯರಿಂದ ಸ್ಥಾಪಿಸಲ್ಪಟ್ಟಿತೆಂದೂ ತಿಳಿದುಬರುತ್ತದೆ. "**ಶಿವಾಚಾರ್ಯ**" ಎಂಬ ಪದವು ಈ ಲೋಕದಲ್ಲಿ ವೀರಶೈವಾಚಾರ್ಯರಿಗೆ ಪ್ರಯೋಗಿಸಲ್ಪಡುವುದಲ್ಲದೆ, ಬೇರೊಬ್ಬರಿಗಿಲ್ಲವೆನ್ನುವ ವಿಷಯವು ಪ್ರತಿಯೊಬ್ಬರಿಗೂ ತಿಳಿದುದಾಗಿದೆ. ಆದುದರಿಂದ ಆ ದೇಶದಲ್ಲಿ ಇಂತಹ ಅತ್ಯುಜ್ವಲವಾದ ಶಿವಭಕ್ತಿಯು ಪ್ರಸಾರವಾಗಿದ್ದುದಕ್ಕೆ ವೀರಶೈವಾಚಾರ್ಯರ ಅನುಗ್ರಹವೇ ಮೂಲಕಾರಣವೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಮೇಲಿನ ಶ್ಲೋಕದಲ್ಲಿ ಆ ಅಧಿಕಾರಿಗೆ 'ಶೈವಕ್ರಿಯಾವಿತ್' ಎಂಬ ವಿಶೇಷಣವನ್ನು ಕೊಟ್ಟಿರುವದರಿಂದ, ಇವನು ಶಿವಾಗಮೋಕ್ತವಾದ ಸಕಲಕ್ರಿಯೆಗಳನ್ನು ಚೆನ್ನಾಗಿ ತಿಳದು ಅದರಂತೆ ಆಚರಿಸುತ್ತಿದ್ದನೆಂದು ವ್ಯಕ್ತವಾಗುತ್ತದೆ.

"ಪೋ-ನಗರ" ಎಂಬ ಗ್ರಾಮದಲ್ಲಿರುವ ಒಂದು ಶಾಸನದಲ್ಲಿ (೪೫ ನೆಯ ಶಾಸನದಲ್ಲಿ) ಭದ್ರವರ್ಮಮಹಾರಾಜನ ಪುತ್ರನಾದ ಇಂದ್ರವರ್ಮಮಹಾರಾಜನ ವಿದ್ವತ್ತೆಯು ಹೀಗೆ ವರ್ಣಿಸಲ್ಪಟ್ಟಿದೆ.

ಮೀಮಾಂಸಷಟ್ತರ್ಕಜಿನೇಂದ್ರಸೂರ್ಮಿಸ್ಸಕಾಶಿಕಾವ್ಯಾಕರಣೋದಕೌಘಃ ।
ಆಖ್ಯಾನಶೈವೋತ್ತರಕಲ್ಪಮೀನಃ ಪಟಿಷ್ಠ ಏತೇಷ್ವಿತಿ ಸತ್ಕವೀನಾಂ ॥

ಇಂದ್ರವರ್ಮಮಹಾರಾಜನು ಮೀಮಾಂಸಾ, ತರ್ಕ, ಜಿನೇಂದ್ರವ್ಯಾಕರಣ, ಪಾಣಿನೀಯವ್ಯಾಕರಣ, ಆಖ್ಯಾನ ಮತ್ತು ಶೈವೋತ್ತರ ತಂತ್ರಗಳಲ್ಲಿ ಜ್ಞಾನಿಯಾಗಿದ್ದನೆಂದು ಈ ಶ್ಲೋಕದ ಅಭಿಪ್ರಾಯವಿರುತ್ತದೆ. ಶೈವೋತ್ತರತಂತ್ರವೆಂದರೆ ಶಿವಾಗಮಗಳ ಉತ್ತರಭಾಗವು.

ಶಿವಾಗಮಗಳ ಉತ್ತರಭಾಗದಲ್ಲಿ ವೀರಶೈವಮತ ವಿಷಯವು ವಿಸ್ತಾರ ವಾಗಿ ಹೇಳಲ್ಪಟ್ಟಿರುವುದು ಪ್ರತಿಯೊಬ್ಬರಿಗೂ ವೇದ್ಯವಾದುದಾಗಿದೆ. ಈ ಶ್ಲೋಕದಲ್ಲಿ ಕೊಟ್ಟಿರುವ ವಿಶೇಷಣವನ್ನು ವಿಚಾರಮಾಡಿನೋಡಿ ದರೆ, ಇಂದ್ರವರ್ಮಮಹಾರಾಜನು ಶೈವಾಗಮೋತ್ತರಭಾಗದಲ್ಲಿ ಉಕ್ತ ವಾಗಿರುವ ವೀರಶೈವಸಿದ್ಧಾಂತವನ್ನು ಚನ್ನಾಗಿ ತಿಳಿದುಕೊಂಡಿದ್ದನೆಂದು ಸ್ಪಷ್ಟವಾಗುತ್ತದೆ.

ಅಲ್ಲದೆ ಆ ದೇಶದಲ್ಲಿರುವ ಅನೇಕವಿಘ್ನೇಶ್ವರಮೂರ್ತಿಗಳ ಹಸ್ತದಲ್ಲಿ ಶಿವಲಿಂಗಧಾರಣವಿರುವುದನ್ನು ಪರಿಶೀಲಿಸಿದರೆ, ಇದಕ್ಕೆ ವೀರಶೈವಾಚಾರ್ಯರ ಉಪದೇಶವೇ ಕಾರಣವಾಗಿರಬಹುದೆಂದೂ, ಶಿವಲಿಂಗಧಾರಣವು ವೀರಶೈವಮತಕ್ಕೆ ಅಂಗವಾಗಿರುವುದರಿಂದ ವೀರಶೈವಾಚಾರ್ಯರು ಆ ಮೂರ್ತಿಗಳನ್ನು ಆ ರೀತಿ ಲಿಂಗಧಾರಣ ಯುತಗಳನ್ನಾಗಿ ಮಾಡಿರಬಹುದೆಂದೂ ತೋರಿಬರುತ್ತದೆ. ೩೫ ನೆಯ ಶಾಸನದಲ್ಲುಕ್ತವಾಗಿರುವ "**ಶಿವಾಚಾರ್ಯ**" ಎಂಬ ಪದದಿಂದಲೂ, ೪೫ ನೆಯ ಶಾಸನದಲ್ಲುಕ್ತವಾಗಿರುವ **ಶೈವಾಗಮೋತ್ತರಭಾಗ**ವನ್ನು ತಿಳಿದ ಇಂದ್ರವರ್ಮಮಹಾರಾಜನ ವರ್ಣನೆಯಿಂದಲೂ, ಅನೇಕ ವಿಘ್ನೇಶ್ವರಮೂರ್ತಿಗಳ ಹಸ್ತದಲ್ಲಿರತಕ್ಕ **ಶಿವಲಿಂಗಧಾರಣ**ದಿಂದಲೂ ಆ ದೇಶದಲ್ಲಿ ಆ ಕಾಲಕ್ಕೆ ವೀರಶೈವರು ವಾಸಿಸುತ್ತಿದ್ದರೆಂದು ಧಾರಾಳ ವಾಗಿ ಹೇಳಬಹುದಾಗಿದೆ. ಈ ರೀತಿಯಾಗಿ ಅಸಾಧಾರಣಶೈವಸಂಪತ್ತಿ ಯಿಂದೊಡಗೂಡಿದ ಅನ್ನಾಂದೇಶವು ಕಾಲಮಹಿಮೆಯಿಂದ ಈಗ ಪರದೇಶೀಯರ ಕೈಸೇರಿ ನಾಸ್ತಿಕಮಯವಾಗಿರುವುದನ್ನು ನೋಡಿದರೆ ಯಾರಿಗೆತಾನೆ ವ್ಯಸನವೆನಿಸಲಿಕ್ಕಿಲ್ಲ? ಕಾಲಾಯ ತಸ್ಮೈ ನಮಃ!

ಅನ್ನಾಂದೇಶದಂತೆ ಕಾಂಬೋಡಿಯಾದೇಶದಲ್ಲಿಯೂ ಸಹ ಶಿವಲಿಂಗಮೂರ್ತಿಗಳು ವಿರಾಜಿಸುತ್ತಿರುವುವು. ಈ ಕಾಂಬೋಡಿಯಾ

ದೇಶವಾದರೂ ಫ್ರೆಂಚರ ಸ್ವಾಧೀನದಲ್ಲಿರುವುದು. ಈ ದೇಶಕ್ಕೆ ಪೂರ್ವದಲ್ಲಿ "ಕಂಬುಜ" ವೆಂದು ಕರೆಯುತ್ತಿದ್ದರು. ಪೂರ್ವದಲ್ಲಿ ಈ ದೇಶವನ್ನಾಳುತ್ತಿದ್ದ ರಾಜೇಂದ್ರವರ್ಮಮಹಾರಾಜನೆಂಬವನು ಶಾಲಿವಾಹನಶಕ ೮೬೬ ರಲ್ಲಿ ಈಗ "ಅಂಕೋರ್‌ತೋಮ್" ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ "ಯಶೋಧರಪುರಿ" ಯ ಕೆರೆಯ ಮಧ್ಯಭಾಗದಲ್ಲಿ ಶಿವಲಿಂಗವನ್ನು ಸ್ಥಾಪಿಸಿರುವ ವಿಷಯವು, ಆ ದೇಶದ "ಸಿಯಾಂರಾಪ್" ಡಿಸ್ಟ್ರಿಕ್ಟಿನಲ್ಲಿ "ಬಾತ್‌ಚೂಮ್" ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಗೋಪುರದ ಕಂಬಗಳ ಮೇಲೆ ಕೆತ್ತಲ್ಪಟ್ಟಿರುವ ಶಾಸನಗಳಿಂದ ಗೊತ್ತಾಗುತ್ತದೆ.

ಅನ್ನಾಂ ಮತ್ತು ಕಾಂಬೋಡಿಯಾ ದೇಶಗಳನ್ನಾಳುತ್ತಿದ್ದ ಮಹಾರಾಜರು ಕರ್ಣಾಟಕ ಅಥವಾ ಆಂಧ್ರದೇಶದವರೆಂದು ಹೇಳಬಹುದಾಗಿದೆ. ಏಕೆಂದರೆ---ಆ ಎರಡೂ ದೇಶಗಳಲ್ಲಿ ದೊರೆಯತಕ್ಕ ಪ್ರತಿಯೊಂದು ಶಾಸನದಲ್ಲಿ ಶಾಲಿವಾಹನಶಕವು ಉಲ್ಲೇಖಿಸಲ್ಪಟ್ಟಿರುವುದರಿಂದಲೂ, ಆ ಕಾಲದಲ್ಲಿ ಈ ಶಕವು ಕರ್ಣಾಟಕ ಮತ್ತು ಆಂಧ್ರದೇಶಗಳಲ್ಲಿಮಾತ್ರ ಪ್ರಚಾರದಲ್ಲಿದ್ದು ಉಳಿದ ದೇಶಗಳಲ್ಲಿ ಇಲ್ಲದಿದ್ದುದರಿಂದಲೂ, ಆ ದೇಶದ ಮಹಾರಾಜರು ತಮ್ಮ ಜನ್ಮಭೂಮಿಯಲ್ಲಿ ಪ್ರಚಾರದಲ್ಲಿದ್ದ ಶಕವನ್ನೇ ತಾವು ಆಳತಕ್ಕ ಆ ದೇಶದಲ್ಲಿಯೂ ಸಹ ಪ್ರಚಾರದಲ್ಲಿ ತಂದಿದ್ದರೆಂದು ಸ್ಪಷ್ಟವಾಗುತ್ತದೆ. ಆ ಮಹಾರಾಜರು ನಮ್ಮ ದೇಶದವರಾದುದರಿಂದಲೇ ಘನತರವಾದ ಶಿವಭಕ್ತಿಯಿಂದೊಡಗೂಡಿ, ವಿದೇಶಗಳಲ್ಲಿಯೂ ಸಹ ಶಿವಭಕ್ತಿಸಂಪತ್ತನ್ನು ಹೆಚ್ಚಿಸಿದರೆಂದು ಕಂಡುಬರುತ್ತದೆ. ಅಸ್ತು!


ನಾನು ಇಲ್ಲಿಯವರೆಗೆ ವಿಶೇಷರೀತಿಯಿಂದ ಪ್ರತಿಪಾದಿಸಿದ ಅನ್ನಾಂದೇಶದ ಶಾಸನಗಳಲ್ಲಿ ಛಂದೋವ್ಯಾಕರಣಾದಿದೋಷಗಳು

ಕಂಡುಬರುವುವು. ನಾನು ಆ ಶಾಸನಗಳಲ್ಲಿದ್ದಂತೆಯೇ ಉದಾಹರಿಸಿದ್ದೇನೆಂಬ ವಿಷಯವನ್ನು ಸರ್ವರೂ ಗಮನಿಸಬೇಕೆಂದಾಶಿಸುತ್ತೇನೆ.

ಇನ್ನು ಡಚ್ಚರ ರಾಜ್ಯದಲ್ಲಿ ಶಿವಲಿಂಗಮೂರ್ತಿಗಳು ವಿರಾಜಿಸುತ್ತಿರುವ ವಿಷಯವನ್ನು ಸಂಕ್ಷೇಪವಾಗಿ ವಿಮರ್ಶಿಸುವೆನು. ಇತಿಹಾಸ ಪ್ರಸಿದ್ಧವಾದ ಜಾವಾ ಮತ್ತು ಸುಮಾತ್ರಾ ದ್ವೀಪಗಳಲ್ಲಿ ಅನೇಕಾನೇಕ ಶಿವಲಿಂಗಮೂರ್ತಿಗಳು ವಿರಾಜಿಸುತ್ತಿರುವುವು. ಪೂರ್ವದಲ್ಲಿ ಈ ದ್ವೀಪಗಳು "ಯವದ್ವೀಪ ಮತ್ತು ಸುವರ್ಣದ್ವೀಪ" ಎಂಬ ಹೆಸರುಗಳಿಂದ ಪ್ರಸಿದ್ಧವಾಗಿದ್ದುವು. ಈ ದ್ವೀಪಗಳು ಸದ್ಯಃ ಡಚ್ಚರ ಸ್ವಾಧೀನದಲ್ಲಿರುವುವು. ಈ ದ್ವೀಪಗಳಲ್ಲಿ ಮಹಾಮಹಾಶಿವಾಲಯಗಳು ಪರಿಶೋಭಿಸುತ್ತಿರುವುವು. ಹಾಲೆಂಡ್ ದೇಶದ ಲೈಡ್ನ್ ಯೂನಿವರ್ಸಿಟಿಯ ಪ್ರೊಫೆಸರಾದ ಡಾ|| ಎನ್. ಜೆ. ಕ್ರೋಮ್ ಎಂಬವರು ವಿಶೇಷ ದ್ರವ್ಯವನ್ನು ವೆಚ್ಚಮಾಡಿ, ಜಾವಾದ್ವೀಪದಲ್ಲಿರುವ ಸಕಲ ದೇವಾಲಯಗಳ ಫೋಟೋಗಳನ್ನು ತೆಗೆಯಿಸಿ, ಆ ದೇವಾಲಯಗಳ ಸಮಗ್ರವೃತ್ತಾಂತವನ್ನು HET OUDE JAVA EN SIJN CUNST (ಯವದ್ವೀಪದ ಪ್ರಾಚೀನಶಿಲ್ಪಕಲಾ) ಎಂಬ ಹೆಸರಿನಿಂದ ಡಚ್‌ಭಾಷೆಯಲ್ಲಿ ದೊಡ್ಡ ಗ್ರಂಥರೂಪವಾಗಿ ಬರೆದು ಸಚಿತ್ರವಾಗಿ ಮುದ್ರಿಸಿ, ಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿರುವರು. ಆ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿರುವ ಶಿವಾಲಯಗಳ ಚಿತ್ರಗಳನ್ನು ನೋಡಿದರೆ, ಶಿವಭಕ್ತರ ಮನಸ್ಸು ಆನಂದಸಾಗರದಲ್ಲಿ ಲೋಲಾಡುವಂತಿದೆ. ಶ್ರೀಜಗದ್ಗುರು ರೇಣುಕಾಚಾರ್ಯರಿಂದ ಶಿವತತ್ತ್ವೋಪದೇಶವನ್ನು ಪಡೆದು ಮಹಾಶಿವಭಕ್ತನೂ, ಅಸಾಧಾರಣಮಹಿಮಾಶಾಲಿಯೂ, ಜಗದ್ವಿಖ್ಯಾತನೂ ಆಗಿಹೋಗಿರುವ ಅಗಸ್ತ್ಯ ಮಹರ್ಷಿಯ ಉಪದೇಶಪ್ರಭಾವದಿಂದಲೇ ಆ ದೇಶದಲ್ಲಿ ಶಿವಭಕ್ತಿಯು

ಹೆಚ್ಚುವುದಕ್ಕೆ ಕಾರಣವಾಯಿತೆಂದು ಅನೇಕಜನ ಇತಿಹಾಸಜ್ಞರು ಅಭಿಪ್ರಾಯಪಡುತ್ತಾರೆ. ಶೈವಚಿಹ್ನಗಳಿಂದ ರಾರಾಜಿಸುತ್ತಿರುವ ಅಗಸ್ತ್ಯಮಹರ್ಷಿಯ ಶಿಲಾವಿಗ್ರಹಗಳು ಜಾವಾ-ಸುಮಾತ್ರಾ ದ್ವೀಪಗಳಲ್ಲಿ ಈಗಲೂ ದೊರೆಯುತ್ತಿರುವುವು. ಅಗಸ್ತ್ಯಮಹರ್ಷಿಯು ಆ ದೇಶಗಳಲ್ಲಿ "**ಶಿವಗುರು**" ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಶೈವಶಿಖಾಮಣಿಯಾದ ಈ ಮಹರ್ಷಿಯ ವಿಗ್ರಹಗಳು ಆ ದೇಶಗಳಲ್ಲಿ ದೊರೆಯುತ್ತಿರುವುದೇ ಈ ವಿಷಯದಲ್ಲಿ ಬಲವಾದ ಸಾಕ್ಷಿಯಾಗಿದೆ. ಈ ಶಿವಗುರುವಿನ ಮೂರ್ತಿಗಳನ್ನು ಈಗಲೂ ಅಲ್ಲಿಯ ಜನರು ಪೂಜಿಸುತ್ತಿರುವರು. ಸದ್ಯಃ ಆ ದೇಶಗಳಲ್ಲಿ ವಿಶೇಷವಾಗಿ ಮಹಮ್ಮದೀಯರು ವಾಸಿಸುತ್ತಾರೆ. ಕ್ರಿ. ಶ. ೧೬ ನೆಯ ಶತಮಾನದಲ್ಲಿ ಮುಸಲ್ಮಾನರು ಆ ದೇಶವನ್ನು ಪ್ರವೇಶಿಸಿ ಅಲ್ಲಿಯ ಶೈವರನ್ನು ಮುಸಲ್ಮಾನರನ್ನಾಗಿ ಮಾಡಿದ್ದಲ್ಲದೆ, ಅಲ್ಲಿದ್ದ ಅನೇಕಾನೇಕಶಿವಾಲಯಗಳನ್ನು ನಾಶಮಾಡಿ ಶಿವಮೂರ್ತಿಗಳನ್ನು ಒಡೆದುಹಾಕಿರುತ್ತಾರೆ. ಮುಸಲ್ಮಾನರ ಕಾಲದಲ್ಲಿಯೇ ಅಲ್ಲಿಯ ಶೈವಸಂಪತ್ತು ನಿರ್ನಾಮವಾಯಿತೆಂದು ಹೇಳಬಹುದಾಗಿದೆ. ಅಲ್ಲಿಯ ಜನರು ಮುಸಲ್ಮಾನರಾಗಿದ್ದರೂ, ಈ ಹೊತ್ತಿನವರೆಗೂ ಅವರಲ್ಲಿ ಹಿಂದೂಸಂಸ್ಕೃತಿಯೇ ಸ್ಥಿರವಾಗಿ ಉಳಿದುಕೊಂಡು ಬಂದಿದೆ. ಅಲ್ಲಿ ವಾಸಿಸುವ ಮುಸಲ್ಮಾನರೆಲ್ಲರೂ ತಮಗೆ ಹಿಂದೂದೇವತೆಗಳ ಹೆಸರುಗಳನ್ನೇ ಇಟ್ಟುಕೊಳ್ಳುತ್ತಿರುವರಲ್ಲದೆ, ಶಿವ-ಪಾರ್ವತಿ-ನಂದಿ-ಶಿವಗುರು ಇತ್ಯಾದಿ ಮೂರ್ತಿಗಳನ್ನು ಅಸಾಧಾರಣಭಕ್ತಿಯಿಂದ ಪೂಜಿಸುತ್ತಿರುವರು.

ಜಾವಾದ್ವೀಪದ ಮಧ್ಯಭಾಗದಲ್ಲಿರುವ "ಪ್ರಾಂಬಣಂ" ಎಂಬ ಪಟ್ಟಣದ ಸಮೀಪದಲ್ಲಿ "ಲಾರಾ ಜೋಂಗ್ರಾಂಗ್" ಎಂಬ ಹೆಸರಿನ ಶಿವದೇವಾಲಯವಿರುವುದು. ಈ ದೇವಾಲಯವು ಆ ದೇಶದಲ್ಲಿ ಒಳ್ಳೆ



ಜಾವಾದ್ವೀಪದಲ್ಲಿರುವ " ಲಾರಾಜೋಂಗ್ರಾಂಗ್ '' ಎಂಬ ಶಿವಾಲಯ.

ಪ್ರಸಿದ್ಧಿಯನ್ನು ಪಡೆದಿದೆ. ಈ ದೇವಾಲಯದಲ್ಲಿ ಶಿವನ ಮೂರ್ತಿಯು ಮನುಷ್ಯಾಕಾರವಾಗಿದ್ದು ಎದ್ದು ನಿಂತಂತೆ ಸ್ಥಾಪಿಸಲ್ಪಟ್ಟಿರುವುದು. ಈ ಮೂರ್ತಿಯು ೧೦ ಅಡಿ (ಫೂಟ್) ಎತ್ತರವಾಗಿರುವುದು. ಈ ಶಿವಮೂರ್ತಿಯ ಎದುರುಭಾಗದಲ್ಲಿರುವ ಒಂದು ಮಂಟಪದಲ್ಲಿ ನಂದೀಶ್ವರನ ಮೂರ್ತಿಯು ಸ್ಥಾಪಿಸಲ್ಪಟ್ಟಿರುವುದಲ್ಲದೆ, ಬಲಭಾಗದ ಮಂಟಪದಲ್ಲಿ ಬ್ರಹ್ಮನಮೂರ್ತಿಯೂ, ಎಡಭಾಗದ ಮಂಟಪದಲ್ಲಿ ವಿಷ್ಣುವಿನ ಮೂರ್ತಿಯೂ ಸ್ಥಾಪಿಸಲ್ಪಟ್ಟಿರುವುವು. ಶಿವನಮೂರ್ತಿಯು ಸದ್ಯಃ ಭಿನ್ನವಾಗಿದ್ದರೂ ಡಚ್ ಸರಕಾರದವರು ಭಿನ್ನವಾಗಿರುವ ಅವಯವಗಳನ್ನೆಲ್ಲ ಚನ್ನಾಗಿ ಸೇರಿಸಿ ಮೂರ್ತಿಯನ್ನು ಇದ್ದಕ್ಕಿದ್ದಹಾಗೆ ಮಾಡಿದ್ದಾರೆ. ಈ ದೇವಸ್ಥಾನದ ದಕ್ಷಿಣಭಾಗದಲ್ಲಿ ಶಿವಗುರುವಿನ ವಿಗ್ರಹವು ನಿಂತುಕೊಂಡಂತೆ ಸ್ಥಾಪಿಸಲ್ಪಟ್ಟಿದ್ದು, ಜಪಮಾಲಿಕೆಯಿಂದ ಯುಕ್ತವಾದ ಹಸ್ತವುಳ್ಳುದಾಗಿದೆ. ಅಲ್ಲದೆ ಈ ದೇವಾಲಯದ ಒಂದು ಭಾಗದಲ್ಲಿ ವಿಘ್ನೇಶ್ವರನ ಮೂರ್ತಿಯೂ, ಮತ್ತೊಂದು ಭಾಗದಲ್ಲಿ ದುರ್ಗಾದೇವಿಯ ಮೂರ್ತಿಯೂ ಸ್ಥಾಪಿಸಲ್ಪಟ್ಟಿರುವುವು. ಈ ದೇವಾಲಯವು ಎರಡು ಅಂತಸ್ತುಗಳುಳ್ಳುದಾಗಿದ್ದು, ೨ ನೆಯ ಅಂತಸ್ತಿನಲ್ಲಿ ಶಿವನ ಮೂರ್ತಿಯು ಸ್ಥಾಪಿಸಲ್ಪಟ್ಟಿದೆ. ಈ ಶಿವದೇವಾಲಯಕ್ಕೆ ಎರಡು ಪ್ರಾಕಾರಗಳಿರುವುವು. ಈ ದೇವಾಲಯವು ಸುಮಾರು ಕ್ರಿ. ಶ. ೯೦೫ ರಲ್ಲಿ ಕಟ್ಟಲ್ಪಟ್ಟಿರಬಹುದೆಂದು ಇತಿಹಾಸಜ್ಞರು ನಿಶ್ಚಯಿಸಿದ್ದಾರೆ. ಜಾವಾದ್ವೀಪದ 'ಪನತರನ್' ಎಂಬ ಗ್ರಾಮದಲ್ಲಿಯೂ ಒಂದು ದೊಡ್ಡ ಶಿವಾಲಯವಿರುವುದು. ಇದರಂತೆಯೇ ಆ ದೇಶದ ಅನೇಕ ಭಾಗಗಳಲ್ಲಿ ಶಿವಾಲಯಗಳು ಪರಿಶೋಭಿಸುತ್ತಿದ್ದರೂ ಅತ್ಯಂತ ಜೀರ್ಣಾವಸ್ಥೆಯಲ್ಲಿರುವುವು. ಇದೆಲ್ಲ ಕಾಲಮಹಿಮೆಯೆಂದೇ ಹೇಳಬೇಕಾಗಿದೆ. ಅಸ್ತು!

ಇಲ್ಲಿಯವರೆಗೆ ನಾನು ಪ್ರತಿಪಾದಿಸಿದ ಅನ್ನಾಂ, ಕಾಂಬೋಡಿಯಾ, ಜಾವಾ ದೇಶಗಳಲ್ಲಿ ಶಿವಭಕ್ತಿಯು ಪೂರ್ವಕಾಲದಲ್ಲಿ ಎಷ್ಟುಮಟ್ಟಿಗೆ ವ್ಯಾಪ್ತವಾಗಿದ್ದಿತೆಂಬ ವಿಷಯವನ್ನು ಕೇಳಿ ಸಭಿಕರು ಸಂತುಷ್ಟಚಿತ್ತರಾಗಿರಬಹುದು. ಆದರೆ ಇಂತಹ ಶಿವಭಕ್ತಿಮಯ ದೇಶಗಳು ಸದ್ಯಃ ಪರದೇಶೀಯರ ಕೈಸೇರಿ ನಾಸ್ತಿಕಮಯವಾಗಿರುವುದನ್ನು ನೋಡಿ ವ್ಯಸನಪಡಬೇಕಾಗಿದೆ. ಒಂದು ಕಾಲದಲ್ಲಿ ಇಡೀ ಭೂಮಂಡಲವನ್ನೇ ವ್ಯಾಪಿಸಿ ಅಸಾಧಾರಣವೈಭವದಿಂದ ಬೆಳಗುತ್ತಿದ್ದ ಶಿವಭಕ್ತಿಯು, ಈ ಕಾಲದಲ್ಲಿ ಎಲ್ಲಿಯೋ ಮಿನುಗುಟ್ಟುತ್ತಿರುವುದನ್ನು ನೋಡಿದರೆ ಕಾಲಚಕ್ರಮಹಿಮೆಯು ವಿಲಕ್ಷಣವಾದುದೆಂದೇ ಹೇಳಬೇಕಾಗಿದೆ. ಇರಲಿ; ಶ್ರೀಜಗದೀಶ್ವರನ ಅನುಗ್ರಹದಿಂದ ಪೂರ್ವಕಾಲದಲ್ಲಿ ಸರ್ವತ್ರ ವ್ಯಾಪಿಸಿದ್ದ ಶಿವಭಕ್ತಿಯು, ಇನ್ನುಮುಂದಾದರೂ ಸರ್ವತೋಮುಖವಾಗಿ ಪ್ರಪಂಚದಲ್ಲೆಲ್ಲ ವ್ಯಾಪಿಸುವಂತಾಗಲೆಂದು ಆ ಜಗನ್ನಿಯಾಮಕನನ್ನು ನಾವೆಲ್ಲರೂ ಭಕ್ತಿಭಾವದಿಂದ ಭಜಿಸೋಣ!

ಇಷ್ಟುಹೊತ್ತಿನವರೆಗೆ ನಾನು ಸಂಭಾಷಿಸಿದ ವಿಷಯವನ್ನು ತಾವೆಲ್ಲರೂ ಶಾಂತಮನಸ್ಸಿನಿಂದ ಕೇಳಿದುದನ್ನು ನೋಡಿ ಸಂತೋಷವೆನಿಸುತ್ತದೆ. ಅಸಾಧಾರಣಧರ್ಮನಿಷ್ಠಾಗರಿಷ್ಠರಾದ ತಮ್ಮಗಳಿಗೆಲ್ಲ ಶ್ರೀಜಗದ್ಗುರು ದಾರುಕಾಚಾರ್ಯನು ಸುಖಪರಂಪರೆಯನ್ನೀಯಲೆಂದು ಆ ಗುರುಸಾರ್ವಭೌಮನನ್ನು ಸ್ಮರಿಸಿ, ನನ್ನೀಭಾಷಣವನ್ನು ಸಮಾಪ್ತಿಗೊಳಿಸುತ್ತೇನೆ.

ಶಿವಂಭೂಯಾತ್! ಶಿವಂಭೂಯಾತ್!!

ಭಾಗ—೫

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು.

ರಾಜಧಾನಿಯಲ್ಲಿ (ತಾ|| ೨-೪-೩೫) ನೆಯ ದಿವಸ ನೆರವೇರಿದ

ತತ್ತ್ವಶಾಸ್ತ್ರಮಹಾಸಭೆಯಲ್ಲಿ

ನಾಗನೂರು ಬೃಹನ್ಮಠಾಧ್ಯಕ್ಷರಾದ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ ಭಾಷಣ

ಶಕ್ತಿವಿಶಿಷ್ಟಾದ್ವೈತಸಿದ್ಧಾಂತ

ಪಂಚಾಸ್ಯವದನೋದ್ಭೂತಾನ್ ಪಂಚತತ್ತ್ವಾಧಿನಾಯಕಾನ್ |
ಪಂಚಬ್ರಹ್ಮಮಯಾನ್ನೌಮಿ ಪಂಚಾಚಾರ್ಯಾನ್ ಜಗದ್ಗುರೂನ್ ||

ತತ್ತ್ವಶಾಸ್ತ್ರೀಯವಿಷಯಶ್ರವಣೋತ್ಸುಕರಾದ ಸಭಿಕಮಹಾಶಯರೇ ! ತತ್ತ್ವಶಾಸ್ತ್ರಜ್ಞರಿಂದ ಪರಿಶೋಭಿತವಾದೀ ತತ್ತ್ವಶಾಸ್ತ್ರಮಹಾಸಭೆಯಲ್ಲಿ ನಾನು **“ಶಕ್ತಿವಿಶಿಷ್ಟಾದ್ವೈತಸಿದ್ಧಾಂತ”** ಸ್ವರೂಪವನ್ನು ಸಂಕ್ಷೇಪವಾಗಿ ಪ್ರತಿಪಾದಿಸತಕ್ಕವನಾಗಿದ್ದೇನೆ. ತಾವುಗಳೆಲ್ಲರೂ ಶಾಂತಮನಸ್ಸಿನಿಂದ ಈ ಸಿದ್ಧಾಂತಸ್ವರೂಪವನ್ನು ಮನನಮಾಡಿಕೊಳ್ಳಬೇಕೆಂದಾಶಿಸುತ್ತೇನೆ.

ನಿಗಮಾಗಮಪ್ರಸಿದ್ಧವಾದೀವೀರಶೈವಮತವು ಅನಾದಿಯಾಗಿರುವುದು. ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರು ಪರಶಿವನ ಅಪ್ಪಣೆಯ ಮೇರೆಗೆ ಚತುರ್ಯುಗಗಳಲ್ಲಿಯೂ ದಿವ್ಯದೇಹಧಾರಿಗಳಾಗಿ ಶಿವಲಿಂಗಮುಖದಿಂದ ಅವತರಿಸಿ ಈ ಮತವನ್ನು ಸ್ಥಾಪಿಸಿದರೆಂದು

ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವುವು. ಈ ಆಚಾರ್ಯರ ಧರ್ಮಪೀಠಗಳು ರಂಭಾಪುರಿ, ಉಜ್ಜಯಿನಿ, ಕೇದಾರ, ಶ್ರೀಶೈಲ, ಕಾಶಿ ಎಂಬ ಸುಪ್ರಸಿದ್ಧ ಶಿವಕ್ಷೇತ್ರಗಳಲ್ಲಿ ಅನಾದಿಕಾಲದಿಂದ ಈ ಹೊತ್ತಿನ ವರೆಗೂ ಪರಿಶೋಭಿಸುತ್ತಿರುವುವು. ಈ ಮಹಾಚಾರ್ಯರು ನಿಗಮಾಗಮಗಳಲ್ಲಿ ಪ್ರತಿಪಾದಿತವಾಗಿರುವ "ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ" ವನ್ನು ಮಾನವಪ್ರಾಣಿಗಳ ಉದ್ಧಾರಕ್ಕೋಸ್ಕರ ಈ ಭೂಮಂಡಲದಲ್ಲಿ ನೆಲೆಗೊಳಿಸಿದರು. ಈ ಮಹನೀಯರು ಶಿವಸೂತ್ರ-ಬ್ರಹ್ಮಸೂತ್ರಗಳ ಮೇಲೆ ಭಾಷ್ಯಗಳನ್ನು ಬರೆದು ತಮ್ಮ ಸಿದ್ಧಾಂತವನ್ನು ಸರ್ವತ್ರ ಪ್ರಕಾಶಪಡಿಸಿದರು. ಈ ಪೂಜ್ಯಪಾದರ ಸಿದ್ಧಾಂತಸ್ವರೂಪವು ಸದ್ಯಃ ಸಂಕ್ಷೇಪವಾಗಿ ವಿವರಿಸಲ್ಪಡುವುದು.

ಶಕ್ತಿವಿಶಿಷ್ಟಾದ್ವೈತವೆಂದರೆ--ಶಕ್ತಿವಿಶಿಷ್ಟಜೀವನಿಗೂ ಶಕ್ತಿವಿಶಿಷ್ಟಶಿವನಿಗೂ ಸಾಮರಸ್ಯವೆಂದರ್ಥವು. **"ಶಕ್ತಿಶ್ಚ ಶಕ್ತಿಶ್ಚ-ಶಕ್ತೀ-ತಾಭ್ಯಾಂ ವಿಶಿಷ್ಟೌ ಜೀವೇಶೌ-ತಯೋಃ ಅದ್ವೈತಂ ಶಕ್ತಿವಿಶಿಷ್ಟಾದ್ವೈತಂ"** ಎಂದು ಪೂರ್ವಾಚಾರ್ಯರು ಶಕ್ತಿವಿಶಿಷ್ಟಾದ್ವೈತಪದದ ವ್ಯುತ್ಪತ್ತಿಯನ್ನು ತೋರಿಸಿರುವರು. ಶಕ್ತಿಯು "ಸ್ಥೂಲಚಿದಚಿದಾತ್ಮಕಶಕ್ತಿ–ಸೂಕ್ಷ್ಮಚಿದಚಿದಾತ್ಮಕಶಕ್ತಿ" ಎಂದು ಎರಡು ಪ್ರಕಾರವಾಗಿರುವುದು. ಜೀವನು ಸ್ಥೂಲಚಿದಚಿದಾತ್ಮಕಶಕ್ತಿಯುಕ್ತನಾಗಿರುವನು; ಶಿವನು ಸೂಕ್ಷ್ಮಚಿದಚಿದಾತ್ಮಕಶಕ್ತಿಯುಕ್ತನಾಗಿರುವನು. ಜೀವನ ಸ್ಥೂಲಚಿಚ್ಛಕ್ತಿಯು ಕಿಂಚಿದ್‌ಜ್ಞತಾರೂಪವಾಗಿರುವುದು. ಸ್ಥೂಲಾಚಿಚ್ಛಕ್ತಿಯು ಕಿಂಚಿತ್ಕರ್ತೃತಾರೂಪವಾಗಿರುವುದು. ಶಿವನ ಸೂಕ್ಷ್ಮಚಿಚ್ಛಕ್ತಿಯು ಸರ್ವಜ್ಞತಾರೂಪವಾಗಿರುವುದು. ಸೂಕ್ಷ್ಮಾಚಿಚ್ಛಕ್ತಿಯು ಸರ್ವಕರ್ತೃತಾರೂಪವಾಗಿರುವುದು. ಈ

ಉಭಯವಿಧಶಕ್ತಿಗಳಿಂದ ಯುಕ್ತರಾದ ಜೀವ ಮತ್ತು ಶಿವ ಇವರ ಅದ್ವೈತವೇ (ಸಾಮರಸ್ಯವೇ) ಶಕ್ತಿವಿಶಿಷ್ಟಾದ್ವೈತವೆನಿಸುವುದು.

ಶಕ್ತಿವಿಚಾರ.

ಶಕ್ತಿಯೆಂದರೆ ಪರಶಿವಬ್ರಹ್ಮದಲ್ಲಿ ಅಪೃಥಕ್ಸಿದ್ಧವಾಗಿರುವ ವಿಶೇಷಣವು. ಪರಬ್ರಹ್ಮವು ಸ್ವಾಭಾವಿಕವಾಗಿ ಇಂತಹ ಅಪೃಥಕ್ಸಿದ್ಧ ವಿಶೇಷಣವಿಶಿಷ್ಟವಾಗಿರುವುದು. ಶಕ್ತಿರೂಪಾಪೃಥಕ್ಸಿದ್ಧವಿಶೇಷಣ ವಿಶಿಷ್ಟಬ್ರಹ್ಮತತ್ತ್ವವನ್ನು ಪ್ರತಿಪಾದಿಸುವುದೇ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತದ ರಹಸ್ಯವಾಗಿರುವುದು. ಶಕ್ತಿಯು ಪರಶಿವಬ್ರಹ್ಮದಲ್ಲಿ ಅವಿನಾಭಾವಸಂಬಂಧದಿಂದಿದ್ದು ನಿತ್ಯವೆನಿಸಿರುವುದು. ಈ ವಿಷಯ ವನ್ನು ಶ್ವೇತಾಶ್ವತರಶ್ರುತಿಯು—

ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ || (೬-೮)

ಎಂಬ ಮಂತ್ರದಿಂದ ಪ್ರತಿಪಾದಿಸುತ್ತಿರುವುದು. ಈ ಮಂತ್ರಾ ರ್ಥವನ್ನು ಪರ್ಯಾಲೋಚಿಸಿದರೆ, ಪರಬ್ರಹ್ಮದಲ್ಲಿ ಶಕ್ತಿಯು ಸ್ವಭಾವ ಸಿದ್ಧವಾಗಿರುವುದೆಂದೂ, ಈ ಶಕ್ತಿಯು ಜ್ಞಾನಶಕ್ತಿ-ಕ್ರಿಯಾಶಕ್ತ್ಯಾದಿ ರೂಪದಿಂದ ನಾನಾಪ್ರಕಾರವಾಗಿರುವುದೆಂದೂ ಸಿದ್ಧವಾಗುವುದು. "**ಸ್ವಾಭಾವಿಕೀ**" ಎಂಬ ಪದವು ಶಕ್ತಿನಿತ್ಯತ್ವವನ್ನು ಘಂಟಾ ಘೋಷವಾಗಿ ಉದ್ಘೋಷಿಸುತ್ತಿರುವುದು. ಇದೇ ಶ್ರುತಿಯು ಬೇರೊಂ ದೆಡೆಯಲ್ಲಿ —

ತೇ ಧ್ಯಾನಯೋಗಾನುಗತಾ ಅಪಶ್ಯನ್ ದೇವಾತ್ಮಶಕ್ತಿಂ ಸ್ವಗುಣೈರ್ನಿಗೂಢಾಂ । ಯಃ ಕಾರಣಾನಿ ನಿಖಿಲಾನಿ ತಾನಿ ಕಾಲಾತ್ಮಯುಕ್ತಾನ್ಯಧಿತಿಷ್ಠತ್ಯೇಕಃ || (೧-೩)

ಎಂಬೀ ಮಂತ್ರದಿಂದ ಶಕ್ತಿಯು ಪರಶಿವಬ್ರಹ್ಮದಲ್ಲಿ ಬಹು ಗೋಪ್ಯವಾಗಿರುವುದೆಂದು ಬೋಧಿಸುತ್ತ ಶಕ್ತಿನಿತ್ಯತ್ವವನ್ನು ಸಾರುತ್ತಿರುವುದು.

ಇದೇ ವಿಷಯವನ್ನು ಇದೇ ಶ್ರುತಿಯು ಮತ್ತೊಂದೆಡೆಯಲ್ಲಿ--

ಯದಾ ತಮಸ್ತನ್ನ ದಿವಾ ನ ರಾತ್ರಿರ್ನಸನ್ನಚಾಸಚ್ಛಿವ ಏವ ಕೇವಲಃ । ತದಕ್ಷರಂ ತತ್ಸವಿತುರ್ವರೇಣ್ಯಂ ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ ॥ (೪-೧೮)

ಎಂಬ ಮಂತ್ರದಿಂದ ಸಮರ್ಥಿಸುತ್ತಿರುವುದು. ಪುರಾಣೀ-ಅನಾದಿಸಂಸಿದ್ಧವಾದ, ಪ್ರಜ್ಞಾ-ಚಿಚ್ಛಕ್ತಿಯು, ಆ ಪರಶಿವಬ್ರಹ್ಮದಿಂದ ಪ್ರಸೃತಾ-ಕ್ರಿಯಾಶಕ್ತ್ಯಾದ್ಯನಂತರೂಪದಿಂದ ಪ್ರಸೃತವಾಯಿತು. ಎಂದು ಬೋಧಿಸುವುದು. ಈ ಶ್ರುತಿವಾಕ್ಯದಲ್ಲಿ ಶಕ್ತಿವಿಕಾಸವು ಸ್ಫುಟವಾಗಿ ತೋರಿಸಲ್ಪಟ್ಟಿರುವುದು. ಇದೇ ಶ್ರುತಿಯಲ್ಲಿರುವ—

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ ।
ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ॥

(೪-೧೦)

ಎಂಬ ಮಂತ್ರವೂ ಸಹ ಪರಮಾತ್ಮನು ಶಕ್ತಿವಿಶಿಷ್ಟನೆಂದು ಬೋಧಿಸುತ್ತಿರುವುದು. ಪೂರ್ವಾಚಾರ್ಯರು ಮಾಯಾಶಬ್ದಕ್ಕೆ "ಮಂ-ಶಿವಂ ಅಯತಿ-ಸ್ವಭಾವತಃ ಪ್ರಾಪ್ನೋತೀತಿ ಮಾಯಾ" ಎಂದು ವಿಗ್ರಹವನ್ನು ಮಾಡಿರುವುದರಿಂದ ಈ ಮಾಯೆಯು ಅದ್ವೈತಿಗಳು ಹೇಳುವಂತೆ ಮೂಲಾವಿದ್ಯಾರೂಪಮಾಯೆಯಾಗಿರದೆ, ವಿಮರ್ಶ

ಶಕ್ತಿರೂಪವಮಾಯೆಯಾಗಿರುವುದು. ಈ ಮಂತ್ರಾಭಿಪ್ರಾಯವನ್ನು ಸಿದ್ಧಾಂತಾಗಮವು—

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ |
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ ||

ಎಂಬೀ ಶ್ಲೋಕದಿಂದ ಬೋಧಿಸುತ್ತಿರುವುದು.

ಯಜುರ್ವೇದತೈತ್ತಿರೀಯಸಂಹಿತೆಯು—

ಆಖುಸ್ತೇ ರುದ್ರ ಪಶುಸ್ತಂ ಜುಷಸ್ವೈಷ ತೇ ರುದ್ರ ಭಾಗಃ ಸಹ ಸ್ವಸ್ರಾಂಬಿಕಯಾ ತಂ ಜುಷಸ್ವ || (೧-೮-೬)

ಎಂಬೀ ಮಂತ್ರದಿಂದ ಶಕ್ತಿನಿತ್ಯತ್ವವನ್ನು ಪ್ರತಿಪಾದಿಸುತ್ತಿರುವುದು. ಈ ಮಂತ್ರದಲ್ಲಿರುವ "**ಸ್ವಸ್ರಾ—ಅಂಬಿಕಯಾ**" ಎಂಬ ಪದಗಳನ್ನು ಪರ್ಯಾಲೋಚಿಸಿದರೆ, ಪರಮಾತ್ಮನಲ್ಲಿ ಶಕ್ತಿಯು ಸ್ವಾಭಾವಿಕವಾಗಿರುವುದೆಂದು ಸಿದ್ಧವಾಗುವುದು.

ನಮಃ ಸೋಮಾಯ ಚ ರುದ್ರಾಯ ಚ |

(ಯಜುಃ. ತೈ. ಸಂಹಿತಾ. ೪-೫-೮)

ಎಂಬ ಶ್ರೀರುದ್ರಮಂತ್ರವೂ ಸಹ ಪರಮೇಶ್ವರನು ಉಮಾರೂಪಶಕ್ತಿಯುಕ್ತನಾಗಿರುವನೆಂದು ಬೋಧಿಸುತ್ತಿರುವುದು. ಇದೇ ಅಭಿಪ್ರಾಯವನ್ನು ಕೈವಲ್ಯಶ್ರುತಿಯು—

ತಮಾದಿಮಧ್ಯಾಂತವಿಹೀನಮೇಕಂ ವಿಭುಂ ಚಿದಾನಂದಮರೂಪಮದ್ಭುತಂ | ಉಮಾಸಹಾಯಂ ಪರಮೇಶ್ವರಂ ಪ್ರಭುಂ ತ್ರಿಲೋಚನಂ ನೀಲಕಂಠಂ ಪ್ರಶಾಂತಂ || ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ ಸಮಸ್ತಸಾಕ್ಷಿಂ ತಮಸಃ ಪರಸ್ತಾತ್ || (೧-೭)

ಎಂಬ ಮಂತ್ರದಿಂದ ಸಮರ್ಥಿಸುತ್ತಿರುವುದು. ಇದೇ ರೀತಿಯಾಗಿ ಅನೇಕಶ್ರುತಿವಾಕ್ಯಗಳು ಶಕ್ತಿಗೆ ನಿತ್ಯತ್ವವನ್ನೂ, ಶಿವಸಮವೇತತ್ವವನ್ನೂ ಪ್ರತಿಪಾದಿಸುತ್ತಿರುವುವು.

ತದೀಯಾ ಪರಮಾ ಶಕ್ತಿಃ ಸಚ್ಚಿದಾನಂದಲಕ್ಷಣಾ ।
ಸಮಸ್ತಲೋಕನಿರ್ಮಾಣಸಮವಾಯಸ್ವರೂಪಿಣೀ ॥
ತದಿಚ್ಛಯಾಽಭವತ್ಸಾಕ್ಷಾತ್ತತ್ಸ್ವರೂಪಾನುಕಾರಿಣೀ ॥೧೨॥

(ಪರಿಚ್ಛೇದ. ೨)

ವಿಮರ್ಶಾಖ್ಯಾ ಪರಾಶಕ್ತಿರ್ವಿಶ್ವವೈಚಿತ್ರ್ಯಕಾರಿಣೀ ।
ಯಸ್ಮಿನ್ ಪ್ರತಿಷ್ಠಿತಾ ಬ್ರಹ್ಮ ತದಿದಂ ವಿಶ್ವಭಾಜನಂ ॥೩೧॥

ಯಥಾ ಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವವಸ್ತುಪ್ರಕಾಶಿನೀ ।
ತಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿ ಸ್ಥಿರಾ ॥೩೨॥

ಅಂತಃಕರಣರೂಪೇಣ ಜಗದಂಕುರರೂಪತಃ ।
ಯಸ್ಮಿನ್ ವಿಭಾತಿ ಚಿಚ್ಛಕ್ತಿರ್ಬ್ರಹ್ಮಭೂತಃ ಸ ಉಚ್ಯತೇ ॥೩೬॥

(ಪರಿಚ್ಛೇದ. ೨೦)

ಸಚ್ಚಿದಾನಂದರೂಪವಾದ ಪರಶಿವಶಕ್ತಿಯು ಸಮಸ್ತಲೋಕಗಳ ನಿರ್ಮಾಣಕ್ಕಾಗಿ ಪರಶಿವನಲ್ಲಿ ಅವಿನಾಭಾವಸಂಬಂಧದಿಂದಿದ್ದು, ಅವನ ಇಚ್ಛೆಗನುಸಾರವಾಗಿ ಸಾಕ್ಷಾತ್ ಅವನ ಸ್ವರೂಪವೇ ಆಗುವುದೆಂದೂ, ಚಿತ್ರವಿಚಿತ್ರವಾದ ವಿಶ್ವಸೃಷ್ಟಿಯನ್ನುಂಟುಮಾಡುವ ವಿಮರ್ಶನಾಮಕವಾದ ಪರಾಶಕ್ತಿಯು ಯಾವುದರಲ್ಲಿ ಅವಿನಾಭಾವಸಂಬಂಧದಿಂದ ಪ್ರತಿಷ್ಠಿತವಾಗಿರುವುದೋ, ಆ ಬ್ರಹ್ಮವೇ "ವಿಶ್ವಭಾಜನ" ವೆನಿಸುವುದೆಂದೂ, ಸಮಸ್ತವಸ್ತುಗಳನ್ನು ಪ್ರಕಾಶಪಡಿಸುವ ಚಂದ್ರಿಕೆಯು ಚಂದ್ರನಲ್ಲಿ ಹೇಗೆ ಸ್ಥಿರವಾಗಿರುವುದೋ, ಹಾಗೆಯೇ ಚರಾಚರಾತ್ಮಕ

ಸಕಲಪದಾರ್ಥಗಳನ್ನು ಪ್ರಕಾಶಪಡಿಸುವ ವಿಮರ್ಶಶಕ್ತಿಯು ಪ್ರಕಾಶ ಸ್ವರೂಪವಾದ ಪರಬ್ರಹ್ಮದಲ್ಲಿ ಸ್ಥಿರವಾಗಿರುವುದೆಂದೂ, ಚಿಚ್ಛಕ್ತಿಯು ಮೂಲಾಹಂಕಾರರೂಪದಿಂದಲೂ ಸೂಕ್ಷ್ಮಜಗದ್ರೂಪದಿಂದಲೂ ಯಾವನಲ್ಲಿ ಪ್ರಕಾಶಿಸುತ್ತಿರುವುದೋ, ಅವನೇ ಪರಬ್ರಹ್ಮಸ್ವರೂಪ ನೆಂದೂ ಸಿದ್ಧಾಂತಶಿಖಾಮಣಿಯಲ್ಲಿ ಶಕ್ತಿಸ್ವರೂಪವು ಸ್ಫುಟವಾಗಿ ಪ್ರತಿ ಪಾದಿಸಲ್ಪಟ್ಟಿರುವುದು.

ಲೋಕವಿಖ್ಯಾತನಾದ ಕಾಲಿದಾಸಮಹಾಕವಿಯು ತನ್ನಿಂದ ರಚಿಸಲ್ಪಟ್ಟ ರಘುವಂಶಕಾವ್ಯದ ಆರಂಭದಲ್ಲಿ —

ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ ॥೧॥

ಎಂದು ಮಂಗಲವನ್ನಾಚರಿಸಿ, ಈ ಮಂಗಲಶ್ಲೋಕದಲ್ಲಿ ಪಾರ್ವತೀಪರ ಮೇಶ್ವರರು ಶಬ್ದಾರ್ಥಗಳಂತೆ ನಿತ್ಯಸಂಬಂಧದಿಂದಿರುವರೆಂದು ಉಲ್ಲೇ ಖಿಸಿರುತ್ತಾನೆ. ಪಾರ್ವತೀಪರಮೇಶ್ವರರೆಂದರೆ ಶಕ್ತಿ-ಶಿವರೆಂದರ್ಥವು. ಶಬ್ದವನ್ನು ಬಿಟ್ಟು ಅರ್ಥವು ಹೇಗೆ ಇರುವುದಿಲ್ಲವೋ, ಅರ್ಥವನ್ನು ಬಿಟ್ಟು ಶಬ್ದವು ಹೇಗೆ ಇರುವುದಿಲ್ಲವೋ, ಹಾಗೆಯೇ ಶಿವನನ್ನು ಬಿಟ್ಟು ಶಕ್ತಿಯೂ, ಶಕ್ತಿಯನ್ನು ಬಿಟ್ಟು ಶಿವನೂ ಇರುವುದಿಲ್ಲವೆಂದು ಈ ಮಹಾಕವಿಯ ಅಭಿಪ್ರಾಯವಾಗಿರುವುದು.

ವೀರಶೈವಸಿದ್ಧಾಂತದಲ್ಲಿ ಶಿವನಿಗೂ ಶಕ್ತಿಗೂ ಅವಿನಾಭಾವ ಸಂಬಂಧವು ಹೇಳಲ್ಪಟ್ಟಿರುವುದು. ಪೃಥಕ್ಕರಿಸಲು ಬಾರದಿದ್ದು ನಿತ್ಯವಾಗಿರುವ ಸಂಬಂಧವೇ ಅವಿನಾಭಾವಸಂಬಂಧವೆನಿಸುವುದು. ಸೂರ್ಯನಲ್ಲಿ ಪ್ರಭೆಯೂ, ಚಂದ್ರನಲ್ಲಿ ಚಂದ್ರಿಕೆಯೂ, ಅಗ್ನಿಯಲ್ಲಿ ದಾಹವೂ, ಸಮುದ್ರದಲ್ಲಿ ಸೌಭಾಗ್ಯವೂ, ಕುಸುಮದಲ್ಲಿ ಗಂಧವೂ,

ಸಕ್ಕರೆಯಲ್ಲಿ ಸವಿಯೂ, ಅವಿನಾಭಾವಸಂಬಂಧದಿಂದಿರುವಂತೆ ಶಿವನಲ್ಲಿ ಶಕ್ತಿಯು ಅವಿನಾಭಾವಸಂಬಂಧದಿಂದಿರುವುದು. ಇದೇ ವಿಷಯವು ಮೃತ್ಯುಂಜಯಭಟ್ಟಾರಕದಲ್ಲಿ—

ಸಾ ಮಮೇಚ್ಛಾ ಪರಾಶಕ್ತಿರವಿಯುಕ್ತಾ ಸ್ವಭಾವಜಾ ।
ವಹ್ನೇರೂಷ್ಮೇವ ವಿಜ್ಞೇಯಾ ರಶ್ಮಿರೂಪಾ ರವೇರಿವ ॥
ಸರ್ವಸ್ಯ ಜಗತೋ ಮಾಪಿ ಸಾ ಶಕ್ತಿಃ ಕಾರಣಾತ್ಮಿಕಾ ॥

ಎಂದು ಹೇಳಲ್ಪಟ್ಟಿರುವುದು.

ವೀರಶೈವಸಿದ್ಧಾಂತದಲ್ಲಿ ಶಕ್ತಿ ಮತ್ತು ಶಕ್ತಿಮತ್ಪದಾರ್ಥಗಳಿಗೆ ಭೇದಾಭೇದಗಳು ಹೇಳಲ್ಪಟ್ಟಿರುವುವು.

ಏಷಾ ಶಕ್ತಿಃ ಶಿವಾ ಹ್ಯೇತಚ್ಛಕ್ತಿಮಾನುಚ್ಯತೇ ಶಿವಃ ।
ಶಕ್ತಿಶಕ್ತಿಮತೋರ್ಭೇದಂ ವದಂತಿ ಪರಮಾರ್ಥತಃ ॥
ಅಭೇದಂ ಚಾನುಪಶ್ಯಂತಿ ಯೋಗಿನಸ್ತತ್ತ್ವಚಿಂತಕಾಃ ॥

ಎಂಬ ಕೂರ್ಮಪುರಾಣವಾಕ್ಯಾನುಸಾರವಾಗಿ ಶಿವಶಕ್ತಿಯರಿಗೆ ಪಾರಮಾರ್ಥಿಕವಾಗಿ ಭೇದಾಭೇದಗಳು ಉಕ್ತವಾಗಿರುವುವು.

ವೀರಶೈವಸಿದ್ಧಾಂತದಲ್ಲಿ ಬ್ರಹ್ಮವು ನಿರ್ವಿಶೇಷವಾಗಿರದೆ ಸವಿಶೇಷವಾಗಿರುವುದು. ಪರಶಿವಬ್ರಹ್ಮವು ಶಕ್ತಿವಿಶಿಷ್ಟವಾದುದರಿಂದ ಸವಿಶೇಷವೆನಿಸಿಕೊಳ್ಳುವುದು. ಬ್ರಹ್ಮವು ಸವಿಶೇಷವಾದುದರಿಂದಲೇ ಚರಾಚರಾತ್ಮಕಜಗದುತ್ಪತ್ತಿಗೆ ಕಾರಣೀಭೂತವಾಗಿರುವುದು. ಶಕ್ತಿವಿಶಿಷ್ಟಬ್ರಹ್ಮದಿಂದುತ್ಪನ್ನವಾದೀ ಜಗತ್ತೂ ಕೂಡ ಶಕ್ತಿವಿಶಿಷ್ಟವಾಗಿರುವುದು. ನಾವು ಈ ಜಗತ್ತಿನಲ್ಲಿರತಕ್ಕ ಪ್ರತಿಯೊಂದು ಪದಾರ್ಥವನ್ನೂ ಪರ್ಯಾಲೋಚಿಸಿದ್ದಾದರೆ, ಪ್ರತಿಯೊಂದು ಪದಾರ್ಥದಲ್ಲಿಯೂ

ಒಂದೊಂದು ವಿಧವಾದ ಶಕ್ತಿಯಿರುವುದು ಕಂಡುಬರುವುದು. ಪೃಥಿವಿಯಲ್ಲಿ ಧಾರಣಶಕ್ತಿಯೂ, ಜಲದಲ್ಲಿ ಆಪ್ಯಾಯನಶಕ್ತಿಯೂ, ತೇಜಸ್ಸಿನಲ್ಲಿ ಉಜ್ಜ್ವಲನಶಕ್ತಿಯೂ, ವಾಯುವಿನಲ್ಲಿ ಸ್ಪಂದನಶಕ್ತಿಯೂ, ಆಕಾಶದಲ್ಲಿ ವ್ಯಾಪನಶಕ್ತಿಯೂ, ಆತ್ಮನಲ್ಲಿ ಬುದ್ಧಿಶಕ್ತಿಯೂ ಇರುವುವಷ್ಟೆ! ಅಲ್ಲದೆ ವೃಕ್ಷಾದಿಗಳಲ್ಲಿ ಜಲಾಕರ್ಷಣಾದಿಶಕ್ತಿಗಳೂ, ಅಗ್ನ್ಯಾದಿಗಳಲ್ಲಿ ದಾಹಾದಿಶಕ್ತಿಗಳೂ, ವನಸ್ಪತಿಗಳಲ್ಲಿ ಮಹಾಮಹಾರೋಗಗಳನ್ನು ಗುಣಪಡಿಸುವ ಶಕ್ತಿಯೂ, ಪಾದರಸದಲ್ಲಿ ತಾಮ್ರವನ್ನು ಸುವರ್ಣವನ್ನಾಗಿ ಮಾಡುವ ಶಕ್ತಿಯೂ, ವಜ್ರದಲ್ಲಿ ಶಿಲೆಯನ್ನು ಭೇದಿಸುವ ಶಕ್ತಿಯೂ, ಮಣಿಮಂತ್ರಾದಿಗಳಲ್ಲಿ ವಿಷಬಾಧೆಯನ್ನೂ, ಭೂತಪ್ರೇತಪಿಶಾಚಾದಿಗಳಿಂದುಂಟಾದ ಬಾಧೆಯನ್ನೂ ಪರಿಹರಿಸುವ ಶಕ್ತಿಯೂ, ರೇಡಿಯೋ (ಧ್ವನ್ಯಾಕರ್ಷಕಯಂತ್ರ) ದಲ್ಲಿ ಧ್ವನಿಯನ್ನು ಆಕರ್ಷಿಸಿ ಅದನ್ನು ವಿಸ್ತಾರಗೊಳಿಸುವ ಶಕ್ತಿಯೂ, ವಿದ್ಯುತ್ತಿನಲ್ಲಿ ನಾನಾವಿಧಯಂತ್ರಚಾಲನಶಕ್ತಿಯೂ, ಸೂಜಿಗಲ್ಲಿನಲ್ಲಿ ಸೂಜಿಯನ್ನು ಆಕರ್ಷಿಸುವ ಶಕ್ತಿಯೂ, ಇರುವೆಗಳಲ್ಲಿ ವೃಕ್ಷಮೂಲಾಘ್ರಾಣನದಿಂದ ವೃಕ್ಷಾಗ್ರದಲ್ಲಿರುವ ಫಲವನ್ನು ಕಂಡುಹಿಡಿಯುವ ಶಕ್ತಿಯೂ, ಶಿಂಗಳಿಕಪ್ರಾಣಿಯಲ್ಲಿ ವಿಷವನ್ನು ಪರೀಕ್ಷಿಸುವ ಶಕ್ತಿಯೂ, ಒಂಟೆಯಲ್ಲಿ ಶ್ವಾಸದ್ವಾರಾ ಸರ್ಪಾಕರ್ಷಣಶಕ್ತಿಯೂ ಇದೇ ರೀತಿಯಾಗಿ ಬ್ರಹ್ಮಸೃಷ್ಟ್ಯಂತರ್ಗತ ಸಕಲಪದಾರ್ಥಗಳಲ್ಲಿಯೂ ಒಂದೊಂದು ವಿಧವಾದ ಶಕ್ತಿಯು ಇರುವುದು ಲೋಕದಲ್ಲಿ ಪ್ರತಿಯೊಬ್ಬರಿಗೂ ಸ್ಫುಟವಾಗಿ ಕಂಡುಬರುವುದಷ್ಟೆ! ಇದರಿಂದ ಸಕಲಚರಾಚರಾತ್ಮಕವಾದ ಜಗತ್ತು ಶಕ್ತಿವಿಶಿಷ್ಟವಾಗಿರುವುದೆಂಮೂ, ಇಂಥ ಶಕ್ತಿವಿಶಿಷ್ಟಜಗತ್ತನ್ನು ನಿರ್ಮಿಸಿದ ಬ್ರಹ್ಮವು ಅರ್ಥಾತ್ ಶಕ್ತಿವಿಶಿಷ್ಟವಾದುದೆಂಮೂ ಸರ್ವರಿಗೂ ಅನುಭವದಿಂದ ವೇದ್ಯವಾಗುವುದು.

ಸತ್-ಚಿತ್-ಆನಂದರೂಪವಾದ ಬ್ರಹ್ಮವು **"ಅಸ್ಮಿ-ಪ್ರಕಾಶೇ-ನಂದಾಮಿ"** ಅಂದರೆ 'ನಾನು ಇದ್ದೇನೆ-ಪ್ರಕಾಶಿಸುತ್ತೇನೆ-ಆನಂದಿಸುತ್ತೇನೆ' ಎಂಬ ಅನುಭವದಿಂದ ಕೂಡಿರುವುದಷ್ಟೆ! ಈ ಅನುಭವವೇ ಪರಬ್ರಹ್ಮದ ವಿಮರ್ಶಶಕ್ತಿಯು. ಈ ಅನುಭವವು ಆ ಪರಬ್ರಹ್ಮದಲ್ಲಿರದಿದ್ದರೆ, ಆ ಬ್ರಹ್ಮಕ್ಕೆ ಪ್ರಕಾಶರೂಪವಾದ ಸ್ಫಟಿಕಶಿಲೆಯಂತೆ ಜಡವೆಂದು ಹೇಳಿಸಿಕೊಳ್ಳಬೇಕಾಗುವ ಪ್ರಸಂಗವು ಬರುವುದು. ಸೌಂದರ್ಯವಿಶಿಷ್ಟನಾದ ಅಂಧನಿಗೆ ತನ್ನ ಸೌಂದರ್ಯವನ್ನು ತಿಳಿಯುವ ಶಕ್ತಿಯಿಲ್ಲದಿರುವುದರಿಂದ ಅವನಿಗೆ ಅವನ ಸೌಂದರ್ಯವು ವ್ಯರ್ಥವಾಗುವಂತೆ, ಪರಬ್ರಹ್ಮಕ್ಕೆ ತನ್ನ ಸಚ್ಚಿದಾನಂದಸ್ವರೂಪವನ್ನು ತಿಳಿಯುವ ಶಕ್ತಿಯಿಲ್ಲದಿದ್ದರೆ, ತನ್ನಲ್ಲಿರುವ ಸಚ್ಚಿದಾನಂದಸ್ವರೂಪಗಳು ವ್ಯರ್ಥಗಳಾಗುವುವಷ್ಟೆ! ಆದುದರಿಂದ ಪರಬ್ರಹ್ಮದಲ್ಲಿ ಸಚ್ಚಿದಾನಂದರೂಪಾನುಭವಶಕ್ತಿಯನ್ನು ಒಪ್ಪಲೇಬೇಕಾಗುವುದು. ಇದರಿಂದ ಪರಬ್ರಹ್ಮವು ಶಕ್ತಿವಿಶಿಷ್ಟವೆಂದು ಸಿದ್ಧವಾಗುವುದು. ಪರಶಿವಬ್ರಹ್ಮನಿಷ್ಠವಾದ ವಿಮರ್ಶಶಕ್ತಿಯೇ ಸೂಕ್ಷ್ಮಚಿದಚಿದಾತ್ಮಕಶಕ್ತಿಯೆನಿಸುವುದು. ಈ ಸೂಕ್ಷ್ಮಚಿದಚಿದಾತ್ಮಕಶಕ್ತಿವಿಶಿಷ್ಟಪರಶಿವಬ್ರಹ್ಮವು **"ಅಥಾತೋ ಬ್ರಹ್ಮಜಿಜ್ಞಾಸಾ" "ಚೈತನ್ಯಮಾತ್ಮಾ"** ಇತ್ಯಾದಿಬ್ರಹ್ಮಸೂತ್ರ-ಶಿವಸೂತ್ರಮಯವೇದಾಂತಶಾಸ್ತ್ರಪ್ರತಿಪಾದ್ಯವಾಗಿರುವುದು.

ಗುಣತ್ರಯಾತ್ಮಿಕಾ ಶಕ್ತಿರ್ಬ್ರಹ್ಮನಿಷ್ಠಾ ಸನಾತನೀ ||೩೬||

(ಪರಿಚ್ಛೇದ ೫)

ಎಂದು ಶ್ರೀಜಗದ್ಗುರುರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಅಪ್ಪಣೆಕೊಡಿಸಿರುವಂತೆ, ವಿಮರ್ಶಶಕ್ತಿಯು ಬ್ರಹ್ಮನಿಷ್ಠವೂ ಸನಾತನವೂ ಆಗಿರುವುದು. ಈ ವಿಮರ್ಶಶಕ್ತಿಯಲ್ಲಿ ಮಯೂರಾಂಡರಸನ್ಯಾಯ

ದಂತೆ (ನವಿಲಿನ ತತ್ತಿಯ ರಸದಲ್ಲಿ ಮುಂದೆ ಉತ್ಪನ್ನವಾಗುವ ನವಿಲಿನ ಪಾದ-ರೆಕ್ಕೆ-ನಾನಾವಿಧಬಣ್ಣಗಳು ಅಡಕವಾಗಿರುವಂತೆ) ಸಕಲಚರಾಚರಾತ್ಮಕವಾದ ಜಗತ್ತು ಅಡಕವಾಗಿರುವುದು. ಚರಾಚರ ವಿಶ್ವಾತ್ಮಕವಾದ ಆ ವಿಮರ್ಶಶಕ್ತಿಯು ಸ್ವವಿಭಾಗಪರಾಮರ್ಶದಶೆಯಲ್ಲಿ ಸತ್ತ್ವಗುಣ-ರಜೋಗುಣ-ತಮೋಗುಣರೂಪವುಳ್ಳದಾಗುವುದು. ಆ ವಿಮರ್ಶಶಕ್ತಿಯ ಅಂಶದಲ್ಲಿ ಉತ್ತಮಕರ್ತೃತ್ವವಿನಿರ್ಮುಕ್ತಜ್ಞಾನಾಂಶ ದಿಂದ ಸತ್ತ್ವಗುಣಾತ್ಮಕವಾದ ವಿದ್ಯಾಶಕ್ತಿಯು ಉತ್ಪನ್ನವಾಗುವುದು. ಉತ್ತಮಜ್ಞಾತೃತ್ವ ವಿನಿರ್ಮುಕ್ತಕ್ರಿಯಾಂಶದಿಂದ ಕಿಂಚಿತ್ಸತ್ತ್ವತಮೋ ಗುಣಮಿಶ್ರವಾದ ರಜೋಗುಣಶಕ್ತಿಯು ಉತ್ಪನ್ನವಾಗುವುದು. ಜ್ಞಾನ ಕ್ರಿಯೆಗಳಿಗೆ ಸ್ವಾಭಾವಿಕವಾಗಿ ಐಕ್ಯವಿದ್ದರೂ ಸೃಷ್ಟಿದಶೆಯಲ್ಲಿ ಜ್ಞಾನ ಶಕ್ತಿಕ್ರಿಯಾಶಕ್ತಿಗಳು ಪರಸ್ಪರವಾಗಿ ವಿಭಾಗವನ್ನು ಹೊಂದುವುದರಿಂದ "ಜ್ಞಾನಂ ಕ್ರಿಯಾ ನ ಭವತಿ ಕ್ರಿಯಾ ಜ್ಞಾನಂ ನ ಭವತಿ" ಜ್ಞಾನವು ಕ್ರಿಯೆಯಾಗುವುದಿಲ್ಲ; ಕ್ರಿಯೆಯು ಜ್ಞಾನವಾಗುವುದಿಲ್ಲವೆಂಬ ಭೇದ ಬುದ್ಧಿರೂಪವಾದ ತಮೋಗುಣಶಕ್ತಿಯು ಉತ್ಪನ್ನವಾಗುವುದು.

ಈ ತಮೋಗುಣಶಕ್ತಿಯೇ ಜಡವಾದ ಮಾಯೆಯೆನಿಸುವುದು. ಸೂರ್ಯಕಿರಣವು ಸೂರ್ಯಕಾಂತಶಿಲೆಗೆ ಸ್ಪರ್ಶಿಸಿ ಪ್ರತಿಸ್ಫುರಣ (ಎದುರು) ಗತಿಯಿಂದ ಅಗ್ನಿಕಣರೂಪವಾಗಿ ಅರಳೆಯನ್ನು ಸೇರಿ ಅಗ್ನ್ಯಾಕಾರವನ್ನು ಧರಿಸುವಂತೆ, ಶಿವನ ವಿಮರ್ಶಶಕ್ತಿಯು ಜಡ ಮಾಯಾಶಕ್ತಿಯನ್ನು ಪ್ರತಿಸ್ಫುರಣಗತಿಯಿಂದ ಪ್ರವೇಶಿಸಿ, ಸುಖ ದುಃಖಮೋಹಗಳನ್ನುಂಟುಮಾಡುವ ಸತ್ತ್ವರಜಸ್ತಮೋಗುಣಾತ್ಮಕ ವಾದ ಪ್ರಕೃತಿಯೆನಿಸುವುದು. ಈ ಪ್ರಕೃತಿಯನ್ನು ವೀರಶೈವಾಚಾರ್ಯರು 'ಚಿತ್ತ'ವೆಂದು ಕರೆಯುವರು. ಈ ಚಿತ್ತಶಕ್ತಿವಿಶಿಷ್ಟವಾದ ಶಿವ ಪ್ರಕಾಶರೂಪಶಿವಾಂಶವೇ ಜೀವನೆನಿಸುವನು.

ಜೀವಾತ್ಮವಿಚಾರ.

ಅನಾದ್ಯವಿದ್ಯಾಸಂಬಂಧಾತ್ತದಂಶೋ ಜೀವನಾಮಕಃ ||೩೪||

(ಸಿ. ಶಿ. ಪರಿಚ್ಛೇದ ೫)

ಎಂದು ರೇಣುಕಭಗವತ್ಪಾದರು ಅಪ್ಪಣೆಕೊಡಿಸಿರುವಂತೆ, ಜೀವನು ಶಿವಾಂಶರೂಪನಾಗಿರುವನು. ಇದೇ ಅಭಿಪ್ರಾಯವನ್ನು ಬ್ರಹ್ಮಸೂತ್ರವು “ **ಅಂಶೋ ನಾನಾವ್ಯಪದೇಶಾತ್** ” ಎಂಬ ಸೂತ್ರದಿಂದ ಸಮರ್ಥಿಸುತ್ತಿರುವುದು.

ಮುಂಡಕಶ್ರುತಿಯು—

ಯಥಾ ಸುದೀಪ್ತಾತ್ ಪಾವಕಾತ್ ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಃ । ತಥಾಽಕ್ಷರಾದ್ವಿವಿಧಾಃ ಸೋಮ್ಯ ಭಾವಾಃ ಪ್ರಜಾಯಂತೇ ತತ್ರ ಚೈವಾಪಿಯಂತಿ || (೨-೧-೧)

ಅಗ್ನಿಯಿಂದ ಆಗ್ನ್ಯಂಶರೂಪಗಳಾದ ಅನಂತಾನಂತಾಗ್ನಿಕಣಗಳು ಹೇಗೆ ಆವಿರ್ಭವಿಸುವುವೋ, ಹಾಗೆಯೇ ಪರಬ್ರಹ್ಮದಿಂದ ತದಂಶಭೂತರಾದ ಅನಂತಾನಂತಜೀವರು ಆವಿರ್ಭವಿಸುವರೆಂದೂ, ಅಲ್ಲಿಯೇ ಲಯವನ್ನು ಹೊಂದುವರೆಂದೂ ಸಾರುತ್ತಿರುವುದು.

ವೀರಶೈವಸಿದ್ಧಾಂತದಲ್ಲಿ ಶಿವಜೀವರಿಗೆ ಪಾರಮಾರ್ಥಿಕಭೇದಾಭೇದವು ಅಂಗೀಕೃತವಾಗಿರುವುದು.

ಅಗ್ನಿಯಿಂದಾವಿರ್ಭವಿಸಿದ ಅಗ್ನಿಕಣಗಳಿಗೂ ಅಗ್ನಿಗೂ ಅತ್ಯಂತಭೇದವನ್ನಾಗಲಿ ಅಥವಾ ಅತ್ಯಂತಾಭೇದವನ್ನಾಗಲಿ ಹೇಳಲಿಕ್ಕೆ ಬಾರದಿರುವಂತೆ, ಶಿವನಿಂದಾವಿರ್ಭವಿಸಿ ಶಿವಾಂಶರೆನಿಸಿದ ಜೀವರಿಗೂ ಶಿವನಿಗೂ ಅತ್ಯಂತಭೇದವನ್ನಾಗಲಿ ಅಥವಾ ಅತ್ಯಂತಾಭೇದವನ್ನಾಗಲಿ

ಹೇಳಲಿಕ್ಕೆ ಬರುವುದಿಲ್ಲ. ಆದರೆ ಭೇದಾಭೇದವನ್ನು ಮಾತ್ರ ಹೇಳ ಬೇಕಾಗುವುದು. ಅಂಶಾಂಶಿಗಳಿಗೆ ಅತ್ಯಂತಾಭೇದವನ್ನು ಹೇಳಿದರೆ, ಅಗ್ನಿಯಿಂದಾಗುವ ಪಾಕಾದಿಕ್ರಿಯೆಗಳು ಅಗ್ನ್ಯಂಶಗಳಾದ ಕಿಡಿಗಳಿಂದಲೂ ಆಗಬೇಕಾದೀತು! ಅತ್ಯಂತಭೇದವನ್ನು ಹೇಳಿದರೆ ಅಗ್ನಿಗೆ ಅತ್ಯಂತಭಿನ್ನವಾದ ಜಲಾದಿಗಳಿಂದ ದಾಹಕಾರ್ಯವಾಗದಿರುವಂತೆ, ಅಗ್ನಿಯ ಕಿಡಿಗಳಿಂದಲೂ ದಾಹಕಾರ್ಯವಾಗದೆ ಹೋಗಬೇಕಾದೀತು! ಅಗ್ನಿಯ ಕಿಡಿಗಳು ಆರಳೆಯನ್ನು ಪ್ರವೇಶಿಸಿ ದಾಹಕಾರ್ಯವನ್ನುಂಟು ಮಾಡುವುದು ಲೋಕಪ್ರಸಿದ್ಧವಷ್ಟೆ! ಇದರಂತೆಯೇ ಶಿವನಿಗೂ ಶಿವಾಂಶ ರೂಪರಾದ ಜೀವರಿಗೂ ಅತ್ಯಂತಾಭೇದವನ್ನು ಹೇಳಿದರೆ, ಶಿವನಲ್ಲಿರುವ ಸರ್ವಜ್ಞತ್ವ-ಸರ್ವಕರ್ತೃತ್ವಾದಿಗಳು ಜೀವರಲ್ಲಿಯೂ ಇರಬೇಕಾದೀತು! ಅತ್ಯಂತಭೇದವನ್ನು ಹೇಳಿದರೆ ಶಿವನಿಗೆ ಭಿನ್ನವಾದ ಘಟಪಟಾದಿಗಳಿಂದ ಜ್ಞಾನರೂಪಕಾರ್ಯವಾಗದಿರುವಂತೆ ಜೀವರಿಂದಲೂ ಆಗಬಾರದಾದೀತು! ಜೀವರಿಗೆ ಘಟಪಟಾದಿವಸ್ತುಗಳ ಜ್ಞಾನವಿರುವುದು ಸರಿಯಷ್ಟೆ! ಆದುದರಿಂದ ವೀರಶೈವಾಚಾರ್ಯರು ಶಿವನಿಗೂ ಜೀವನಿಗೂ ಪಾರಮಾರ್ಥಿಕವಾದ ಭೇದಾಭೇದವನ್ನು ಒಪ್ಪಿರುವರು. ಇದರಿಂದಲೇ ವೀರಶೈವಮತಕ್ಕೆ ದ್ವೈತಾದ್ವೈತಮತವೆಂತಲೂ ನಾಮಾಂತರವು ಪ್ರಾಪ್ತವಾಗಿರುವುದು. ಶ್ರುತಿಗಳಲ್ಲಿ **"ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ"** ಇತ್ಯಾದಿವಾಕ್ಯಗಳು ದ್ವೈತವನ್ನು ಪ್ರತಿಪಾದಿಸತಕ್ಕವುಗಳಾಗಿರುವುವು. **"ತತ್ತ್ವಮಸಿ"** **"ಅಹಂ ಬ್ರಹ್ಮಾಸ್ಮಿ"** **"ನೇಹ ನಾನಾಸ್ತಿ ಕಿಂಚನ"** ಇತ್ಯಾದಿ ವಾಕ್ಯಗಳು ಅದ್ವೈತವನ್ನು ಪ್ರತಿಪಾದಿಸತಕ್ಕವುಗಳಾಗಿರುವುವು. ಈ ಉಭಯವಿಧವಾಕ್ಯಗಳಿಗೂ ಸುಗಮಮಾರ್ಗದಿಂದ ಸಾಮಂಜಸ್ಯವನ್ನು ಉಂಟುಮಾಡುವುದು ವೈದಿಕಮತಾನುಯಾಯಿಗಳ ಮುಖ್ಯಕರ್ತವ್ಯ

ವಾಗಿರುವುದರಿಂದಲೂ, ಇದೇ ಮಾರ್ಗವನ್ನು ವೀರಶೈವಮತಾಚಾರ್ಯರು ಅನುಸರಿಸಿರುವುದರಿಂದಲೂ ಈ ವೀರಶೈವಸಿದ್ಧಾಂತವು ಸರ್ವಶ್ರುತಿ ಸಮ್ಮತವಾಗಿರುವುದು.

ಇದೇ ವಿಷಯವನ್ನು ವೀರಶೈವಮತಭಾಷ್ಯಕಾರರಾದ ಶ್ರೀಪತಿ ಪಂಡಿತರು ತಮ್ಮಿಂದ ರಚಿಸಲ್ಪಟ್ಟ ಶ್ರೀಕರಭಾಷ್ಯದಲ್ಲಿ—

ದ್ವೈತಾದ್ವೈತಮತೇ ಶುದ್ಧೇ ವಿಶೇಷಾದ್ವೈತಸಂಜ್ಞಕೇ |
ವೀರಶೈವೈಕಸಿದ್ಧಾಂತೇ ಸರ್ವಶ್ರುತಿಸಮನ್ವಯಃ ||

ಎಂದು ಉಲ್ಲೇಖಿಸಿರುವರು. ಇದರಿಂದ ವೀರಶೈವಮತವು ಭೇದಾಭೇದಾತ್ಮಕವಾದುದೆಂದು ಸಿದ್ಧವಾಗುವುದು. ಅಸ್ತು !

ಪರಶಿವನಲ್ಲಿ ಅವಿನಾಭಾವಸಂಬಂಧದಿಂದಿರುವ ವಿಮರ್ಶಶಕ್ತಿಯು ಸತ್ತ್ವರಜಸ್ತಮೋಗುಣಗಳ ತಾರತಮ್ಯದಿಂದ ಶುದ್ಧಚಿದ್ರೂಪನಾದ ಪರಶಿವನಲ್ಲಿ ಭೋಕ್ತೃ-ಭೋಜ್ಯ-ಪ್ರೇರಕರೂಪವಾಗಿ ಪರಿಣಮಿಸುವುದು. ಕಿಂಚಿತ್ಸತ್ತ್ವರಜೋಗುಣರೂಪವಾದ ಜೀವಚೈತನ್ಯವು "**ಭೋಕ್ತೃ**" ವೆನಿಸುವುದು. ಅತ್ಯಂತತಾಮಸೋಪಾಧಿವಿಶಿಷ್ಟವಾದ ಚೈತನ್ಯವು ರಸಾದಿರೂಪವಾದ "**ಭೋಜ್ಯ**" ವೆನಿಸುವುದು. ಪರತತ್ತ್ವರೂಪಶುದ್ಧಸತ್ತ್ವಗುಣೋಪಾಧಿವಿಶಿಷ್ಟಬ್ರಹ್ಮಚೈತನ್ಯವುಳ್ಳ ಮಹೇಶ್ವರನು '**ಪ್ರೇರಕ**' ನೆನಿಸುವನು. ಮಾಯೋಪಾಧಿಯು ಶುದ್ಧ ಮತ್ತು ಅಶುದ್ಧವೆಂದು ಎರಡುಪ್ರಕಾರವಾಗಿರುವುದು. ಶುದ್ಧೋಪಾಧಿ ರೂಪಪರಾಮಾಯೆಯು ಶಿವನನ್ನು ಆಶ್ರಯಿಸಿಕೊಂಡಿರುವುದು. ಆದರೂ ಅದು ಅವನಿಗೆ ಮೋಹವನ್ನುಂಟುಮಾಡುವುದಿಲ್ಲ. ಇದೇ "**ಊರ್ಧ್ವಮಾಯೆ**" ಯೆನಿಸುವುದು. ಅಶುದ್ಧೋಪಾಧಿರೂಪವಾದ ಅವಿದ್ಯೆಯು

ಜೀವನನ್ನು ಆಶ್ರಯಿಸಿಕೊಂಡಿದ್ದು, ಅವನನ್ನು ಮೋಹಗೊಳಿಸುವುದು. ಇದೇ "**ಅಧೋಮಾಯೆ**" (ಪ್ರಕೃತಿ) ಯೆನಿಸುವುದು. ಅವಿದ್ಯಾ ಶಕ್ತಿಭೇದದಿಂದ ಜೀವನು ನಾನಾಪ್ರಕಾರನಾಗುವನು. ಅವಿದ್ಯೆಯಿಂದ ಮೋಹಿತನಾದ ಜೀವನು "**ಅಹಂ ಬ್ರಹ್ಮಾಸ್ಮಿ**" ಎಂಬ ತಾದಾತ್ಮ್ಯ ಜ್ಞಾನದಿಂದ ದೂರನಾಗಿರುವನು. ಶಿವಾಂಶಭೂತನಾದ ಜೀವನು ಕಿಂಚಿಜ್ಜ್ಞನೂ, ಕಿಂಚಿತ್ಕರ್ತೃವೂ, ಕಿಂಚಿಚ್ಛಕ್ತಿಸಮನ್ವಿತನೂ, ಅನಾದಿ ಕರ್ಮರೂಪಾವಿದ್ಯಾಮೋಹಿತನೂ, ಬ್ರಹ್ಮೈಕ್ಯಜ್ಞಾನವರ್ಜಿತನೂ, ಘೋರಾಪಾರನಿಸ್ಸಾರಸಂಸಾರತಾಪತ್ರಯಾನಲದಂದಹ್ಯಮಾನನೂ, ಜನನಮರಣಾನ್ವಿತನೂ, ಬದ್ಧನೂ ಆಗಿರುವನು.

ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ ।
ಭಾಗೋ ಜೀವಃ ಸ ವಿಜ್ಞೇಯಃ ಸ ಚಾನಂತ್ಯಾಯ ಕಲ್ಪತೇ ॥

(ಶ್ವೇತಾಶ್ವತರ ೫-೯)

ಎಂಬ ಶ್ರುತಿಪ್ರಮಾಣದಂತೆ ಜೀವಾತ್ಮನು ಕೂದಲಿನ ಅಗ್ರ ಭಾಗದ ಸಾವಿರದಲ್ಲೊಂದುಭಾಗದಷ್ಟು ಸೂಕ್ಷ್ಮನಾಗಿದ್ದು, ಸಮಸ್ತ ಪ್ರಾಣಿಗಳ ಹೃದಯದಲ್ಲಿ ದೀಪದಂತೆ ಪ್ರಕಾಶಿಸುತ್ತಿರುವನು. ದೀಪವು ಮನೆಯ ಯಾವುದಾದರೊಂದು ಭಾಗದಲ್ಲಿದ್ದರೂ ತನ್ನ ಪ್ರಭೆಯಿಂದ ಮನೆಯನ್ನೆಲ್ಲಾ ಪ್ರಕಾಶಪಡಿಸುವಂತೆ, ಜೀವಾತ್ಮನು ಹೃದಯಸ್ಥಾನ ದಲ್ಲಿದ್ದರೂ ತನ್ನ ಜ್ಞಾನಪ್ರಭೆಯಿಂದ ಶರೀರವನ್ನೆಲ್ಲಾ ವ್ಯಾಪಿಸಿ, ಸರ್ವಾವಯವವರ್ತಿಸುಖದುಃಖಗಳನ್ನು ಅನುಭವಿಸುವವನಾಗುವನು. ಅಣುರೂಪನಾದ ಜೀವಾತ್ಮನು ಸಮಸ್ತಪ್ರಾಣಿಗಳ ಅಂತಃಕರಣವನ್ನು ಆಶ್ರಯಿಸಿಕೊಂಡು, ಆಣವಾದಿಮಲತ್ರಯಸಂಬಂಧದಿಂದ ಪ್ರಾಚೀನ ಕರ್ಮಪಾಶಬದ್ಧನಾಗಿರುವನು. ಜೀವಾತ್ಮನು ಸ್ವಭಾವತಃ ಶರೀರರಹಿತ

ನಾಗಿದ್ದರೂ, ಮಾಯಾಮಯಶರೀರದಲ್ಲಿರುವವನಾಗಿ ಜನನಮರಣ ರೂಪಸಂಸಾರದಲ್ಲಿ ಚಕ್ರನೇಮಿಕ್ರಮದಿಂದ ಸದಾ ಸುತ್ತುತ್ತಿರುವನು. ಸ್ಫಟಿಕಮಣಿಗೆ ಜಪಾಕುಸುಮದ (ಕೆಂಪುದಾಸವಾಳದ ಹೂವಿನ) ಸಂಬಂಧದಿಂದ ಕೆಂಪುಬಣ್ಣವು ಹೇಗೆ ಪ್ರಾಪ್ತವಾಗುವುದೋ, ಹಾಗೆಯೇ ಅಹಂಕಾರಸಂಬಂಧದಿಂದ ಜೀವಾತ್ಮನಿಗೆ ದೇಹಾತ್ಮಾಭಿಮಾನವು ಪ್ರಾಪ್ತವಾಗುವುದು. ಶರೀರರಹಿತನಾದ ಜೀವಾತ್ಮನಿಗೆ ಸ್ವಾಭಾವಿಕವಾಗಿ ದೇಹಸಂಬಂಧವಿರುವುದಿಲ್ಲ; ಆದರೆ ಜೀವಾತ್ಮನು ಅಜ್ಞಾನಕರ್ಮ ಸಂಬಂಧದಿಂದ ಕರ್ಮಫಲವನ್ನು ಅನುಭವಿಸುವುದಕ್ಕಾಗಿ ನಾನಾಶರೀರ ಗಳುಳ್ಳವನಾಗುವನು. ಆತ್ಮನು ದೇವನಲ್ಲ; ಗಂಧರ್ವನಲ್ಲ; ಯಕ್ಷನಲ್ಲ; ರಾಕ್ಷಸನಲ್ಲ; ಮನುಷ್ಯನಲ್ಲ; ಪಶುಪಕ್ಷ್ಯಾದಿರೂಪತಿರ್ಯಕ್ಪ್ರಾಣಿಯಲ್ಲ; ಆದರೆ ಆಯಾ ಶರೀರಸಂಬಂಧದಿಂದ ಆಯಾ ಹೆಸರಿನಿಂದ ವ್ಯವಹರಿಸ ಲ್ಪಡುತ್ತಿರುವನು. ಜೀವನು ದೇವ-ಮನುಷ್ಯ-ಪಶು-ಪಕ್ಷಿ-ಜಲಚರ-ಕೃಮಿ-ಕೀಟ ಮೊದಲಾದ ೮೪ ಲಕ್ಷ ಜೀವರಾಶಿಯೋನಿಗಳಲ್ಲಿ ಜನಿಸು ವುದಕ್ಕೂ, ಆಯಾ ಯೋನಿಗಳಲ್ಲಿ ಪ್ರಾಪ್ತವಾಗುವ ಸುಖದುಃಖಗಳನ್ನು ಅನುಭವಿಸುವುದಕ್ಕೂ ಅವನ ಕರ್ಮವೇ ಮೂಲಕಾರಣವಾಗಿರುವುದು. ಕರ್ಮಯಂತ್ರನಿಯಂತ್ರಿತವಾದ ಸಂಸಾರಚಕ್ರದಲ್ಲಿ ಯಾವಾಗಲೂ ಸುತ್ತುತ್ತಿರುವ ಜೀವನಿಗೆ ಪರಮೇಶ್ವರನು ಹಿತಮಾರ್ಗವನ್ನುಪದೇಶಿಸು ವವನೂ, ಪುನರಾವೃತ್ತಿರಹಿತವಾದ ಮೋಕ್ಷಮಾರ್ಗವನ್ನು ತೋರಿಸು ವವನೂ ಆಗಿರುವನು. ಜೀವನು ತನ್ನ ಕರ್ಮಪರಿಪಾಕದಿಂದ ಅನಾದಿ ಮಲವಾಸನೆಯನ್ನು ಕಳೆದುಕೊಂಡು ಶಿವಪ್ರಸಾದದಿಂದ ಶಿವಸ್ವರೂಪ ನಾಗಿ ಶಿವನಲ್ಲಿ ಸಾಮರಸ್ಯವನ್ನು ಹೊಂದುವನು.

ತತ್ತ್ವವಿಚಾರ.

“ಏಕಮೇವಾದ್ವಿತೀಯಂ” “ಸತ್ಯಂ ಜ್ಞಾನಮನಂತಂ ಬ್ರಹ್ಮ” “ಸರ್ವಂ ಖಲ್ವಿದಂ ಬ್ರಹ್ಮ” “ಪ್ರಜ್ಞಾನಂ ಬ್ರಹ್ಮ”

ಇತ್ಯಾದಿಶ್ರುತಿಪ್ರಮಾಣಾನುಸಾರವಾಗಿ ಅದ್ವಿತೀಯವೂ, ಸಚ್ಚಿದಾನಂದಸ್ವರೂಪವೂ, ಸತ್ಯವೂ, ನಿತ್ಯವೂ, ಸಕಲಚರಾಚರ ಪ್ರಪಂಚಸ್ವರೂಪವೂ, ಆದ್ಯಂತರಹಿತವೂ, ಉಪಮಾತೀತವೂ, ಸರ್ವ ಶಕ್ತಿಸಮನ್ವಿತವೂ ಆದ ಪರಶಿವಬ್ರಹ್ಮದಲ್ಲಿ ಅವಿನಾಭಾವಸಂಬಂಧದಿಂ ದಿರುವ ವಿಮರ್ಶಶಕ್ತಿಯ ಸ್ಫುರಣವೇ “ಶಿವ-ಶಕ್ತಿ-ಸದಾಶಿವ-ಈಶ್ವರ-ಶುದ್ಧವಿದ್ಯಾ-ಮಾಯಾ-ಕಲಾ-ವಿದ್ಯಾ-ರಾಗ-ಕಾಲ-ನಿಯತಿ - ಪುರುಷ-ಪ್ರಕೃತಿ-ಬುದ್ಧಿ-ಅಹಂಕಾರ-ಮನಸ್ಸು-ಶ್ರೋತ್ರ-ತ್ವಕ್-ನೇತ್ರ-ಜಿಹ್ವಾ-ಘ್ರಾಣ-ವಾಕ್-ಪಾಣಿ-ಪಾದ-ಪಾಯು-ಉಪಸ್ಥ-ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಆಕಾಶ-ವಾಯು-ಅಗ್ನಿ-ಜಲ-ಪೃಥಿವಿ” ಗಳೆಂಬಮೂವತ್ತಾರು ತತ್ತ್ವಗಳ ರೂಪವಾಗಿ ಪರಿಣಮಿಸುವುದು.

ಶಕ್ತಿವಿಶಿಷ್ಟಪರಶಿವಬ್ರಹ್ಮವು “**ಬಹು ಸ್ಯಾಂ ಪ್ರಜಾಯೇಯ**” (೬—೨—೩) ಎಂಬ ಛಾಂದೋಗ್ಯಶ್ರುತಿವಾಕ್ಯಾಭಿಪ್ರಾಯಾನುಸಾರ ವಾಗಿ ಸೃಷ್ಟಿಗುನ್ಮುಖವಾಗಲು, ತನ್ನಿಷ್ಠವಾದ ವಿಮರ್ಶಶಕ್ತಿಯೇ ಇಚ್ಛಾಶಕ್ತಿರೂಪವಾಗಿ ಪರಿಣಮಿಸುವುದು.

ಅನಾದಿನಿಧನಾಚ್ಛಾಂತಾಚ್ಛಿವಾತ್ ಪರಮಕಾರಣಾತ್ ।
ಇಚ್ಛಾಶಕ್ತಿರ್ವಿನಿಷ್ಕ್ರಾಂತಾ ತತೋ ಜ್ಞಾನಂ ತತಃ ಕ್ರಿಯಾ ॥
ತತೋತ್ಪನ್ನಾನಿ ಭೂತಾನಿ ಭುವನಾನಿ ಚತುರ್ದಶ ॥

ಎಂಬ ಶಿವಾಗಮಪ್ರಮಾಣಾನುಸಾರವಾಗಿ ಉತ್ಪತ್ತಿನಾಶರಹಿತವೂ, ಪರಮಕಾರಣವೂ, ಶಾಂತವೂ ಆದ ಪರಶಿವಬ್ರಹ್ಮದಿಂದ ಮೊದಲು

ಇಚ್ಛಾಶಕ್ತಿಯೂ, ಅದರಿಂದ ಜ್ಞಾನಶಕ್ತಿಯೂ, ಕ್ರಿಯಾಶಕ್ತಿಯೂ ಆವಿರ್ಭವಿಸುವುವು. ಆ ಇಚ್ಛಾಶಕ್ತಿಗೆ ಜ್ಞಾನಶಕ್ತಿಯು ಅಂತರಂಗವಾಗಿಯೂ, ಕ್ರಿಯಾಶಕ್ತಿಯು ಬಹಿರಂಗವಾಗಿಯೂ ಇರುವುವು. ಪರಶಿವಬ್ರಹ್ಮವು ಜ್ಞಾನಶಕ್ತಿಯಲ್ಲಿ ಬೆರೆತು 'ನಾನು ಸರ್ವಜ್ಞನು' ಎಂಬ ಅಭಿಮಾನವನ್ನು ಪಡೆಯಲು, "**ಶಿವತತ್ತ್ವ**" ವೆನಿಸಿಕೊಳ್ಳುವುದು. ಜೇಡರಹುಳವು ಜಾಲಕ್ಕೆ ನಿಮಿತ್ತಕಾರಣವಾಗುವಂತೆ, ಈ ಶಿವತತ್ತ್ವಾತ್ಮಕವಾದ ಪರಶಿವಬ್ರಹ್ಮವೇ ಜ್ಞಾನವಿಶಿಷ್ಟತ್ವಾಕಾರದಿಂದ ಭಾವಿಪ್ರಪಂಚಕ್ಕೆ ನಿಮಿತ್ತಕಾರಣವಾಗುವುದು.

ಪರಶಿವಬ್ರಹ್ಮವು ಕ್ರಿಯಾಶಕ್ತಿಯಲ್ಲಿ ಬೆರೆತು 'ನಾನು ಸರ್ವಕರ್ತೃವು' ಎಂಬ ಅಭಿಮಾನವನ್ನು ಪಡೆಯಲು, "**ಶಕ್ತಿತತ್ತ್ವ**" ವೆನಿಸಿಕೊಳ್ಳುವುದು. ಜೇಡರಹುಳವು ಜಾಲೋತ್ಪತ್ತಿಯೋಗ್ಯಶರೀರ ವಿಶೇಷವಿಶಿಷ್ಟತ್ವಾಕಾರದಿಂದ ಜಾಲಕ್ಕೆ ಉಪಾದಾನಕಾರಣವಾಗುವಂತೆ, ಈ ಶಕ್ತಿತತ್ತ್ವಾತ್ಮಕವಾದ ಪರಶಿವಬ್ರಹ್ಮವೇ ಕ್ರಿಯಾವಿಶಿಷ್ಟತ್ವಾಕಾರ ದಿಂದ ಭಾವಿಪ್ರಪಂಚಕ್ಕೆ ಉಪಾದಾನಕಾರಣವೂ ಆಗುವುದು.

ಪರಶಿವಬ್ರಹ್ಮವೊಂದೇ ಪ್ರಪಂಚಕ್ಕೆ ಅಭಿನ್ನನಿಮಿತ್ತೋಪಾದಾನಕಾರಣವಾಗುವುದೆಂಬುದನ್ನು ಮುಂಡಕಶ್ರುತಿಯು—"ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ" (೧—೧—೭) ಎಂಬೀ ವಾಕ್ಯದಿಂದ ಪ್ರತಿಪಾದಿಸುತ್ತಿರುವುದು.

ಈ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಅಂತರಂಗವಾದ ಜ್ಞಾನಶಕ್ತಿಯಲ್ಲಿ ಪ್ರವೇಶಿಸಿ, ಜಲಾಧಿವಾಸದಿಂದ ಅಂಕುರೋನ್ಮುಖವಾದ ಕಡಲೆಯಂತೆ ಉಬ್ಬಿ, ಅಂಕುರಾಯಮಾಣವಾದ ಭಾವಿಪ್ರಪಂಚವನ್ನು ಕುರಿತು 'ಅಹಮಿದಂ'—'ನಾನು ಈ ಪ್ರಪಂಚವು' ಎಂದು ಅಭಿಮಾನವನ್ನು ಪಡೆಯಲು, "**ಸದಾಶಿವತತ್ತ್ವ**" ವೆನಿಸಿಕೊಳ್ಳುವುದು.

ಈ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಬಹಿರಂಗವಾದ ಕ್ರಿಯಾಶಕ್ತಿಯಲ್ಲಿ ಪ್ರವೇಶಿಸಿ, ಸುಕ್ಷೇತ್ರದಲ್ಲಿ ಬಿತ್ತಿದ ಸುಬೀಜದಂತೆ ಅಂಕುರಿಸಿ, ಅಂಕುರಿತವಾದ ಪ್ರಪಂಚವನ್ನು ಕುರಿತು —'ಅಹಮಿದಂ'—'ನಾನು ಈ ಪ್ರಪಂಚವು' ಎಂದು ಅಭಿಮಾನವನ್ನು ಪಡೆಯಲು, "**ಈಶ್ವರ ತತ್ತ್ವ**"ವೆನಿಸಿಕೊಳ್ಳುವುದು.

ಈ ಶಕ್ತಿತತ್ತ್ವವು, ಸಾಗರತರಂಗನ್ಯಾಯದಂತೆ (ಸಮುದ್ರಕ್ಕೂ ಸಮುದ್ರದಲ್ಲಿರುವ ತೆರೆಗಳಿಗೂ ಅಭೇದವಿರುವಂತೆ) 'ಅಹಮಿದಂ'— 'ನಾನು' ಎಂಬ ಅಹಂಕಾರಕ್ಕೂ 'ಇದು' ಎಂಬ ಪ್ರಪಂಚಕ್ಕೂ ಅಭೇದಜ್ಞಾನವನ್ನು ಪಡೆಯಲು, "**ಶುದ್ಧವಿದ್ಯಾತತ್ತ್ವ**"ವೆನಿಸಿಕೊಳ್ಳುವುದು.

ಶುದ್ಧವಿದ್ಯಾತತ್ತ್ವರೂಪವಾಗಿ ಪರಿಣಮಿಸಿರುವೀ ಶಕ್ತಿತತ್ತ್ವವು ಮಯೂರಾಂಡರಸನ್ಯಾಯದಂತೆ (ನವಿಲಿನ ತತ್ತಿಯ ರಸದಲ್ಲಿ ಪಾದ-ಪಕ್ಷ-ವರ್ಣವೈಚಿತ್ರ್ಯಾದಿಗಳು ವಿಭಾಗರೂಪವಾಗಿ ಸೂಕ್ಷ್ಮರೂಪದಿಂದಿರುವಂತೆ) ತನ್ನಲ್ಲಡಕವಾಗಿರುವ ಭಾವಿಪ್ರಪಂಚನಿರ್ಮಾಣಕಾರಣೀಭೂತಸೂಕ್ಷ್ಮಪದಾರ್ಥಗಳಲ್ಲಿ, ಅನ್ಯೋನ್ಯಾಭಾವರೂಪಭೇದಬುದ್ಧಿಪ್ರಾಧಾನ್ಯದಿಂದ "**ಮಾಯಾತತ್ತ್ವ**"ವೆನಿಸಿಕೊಳ್ಳುವುದು.

ಕಲಾ-ವಿದ್ಯಾ-ರಾಗ-ಕಾಲ-ನಿಯತಿಗಳೆಂಬ ಪಂಚತತ್ತ್ವಗಳು ಪುರುಷನಿಗೆ ಕಂಚುಕರೂಪವಾಗಿರುವುದರಿಂದ, ಮೊದಲು ಕಂಚುಕಿಯಾದ ಪುರುಷತತ್ತ್ವವನ್ನು ನಿರೂಪಿಸಿ, ಬಳಿಕ ಕಲಾದಿಪಂಚತತ್ತ್ವಗಳನ್ನು ನಿರೂಪಿಸುವುದಾಗುವುದು.

ಕಾಷ್ಠಯೋಗದಿಂದ ಅಗ್ನಿಕಣಗಳು ಆವಿರ್ಭವಿಸುವಂತೆ, ಪರಶಿವನ ಇಚ್ಛಾಶಕ್ತಿಯ ಯೋಗದಿಂದ ಆವಿರ್ಭವಿಸುವ ಶಿವಾಂಶವೇ

ಮಾಯಾಶಕ್ತಿಯಲ್ಲಿ ಪ್ರವೇಶಿಸಿ, "**ಪುರುಷತತ್ತ್ವ**"ವೆನಿಸಿಕೊಳ್ಳುವುದು. ಈ ಪುರುಷತತ್ತ್ವಕ್ಕೆ ಮಾಯಾಮಲಸಂಬಂಧವುಂಟಾಗುವುದರಿಂದ, ಆತ್ಮನಲ್ಲಿ ಅನಾತ್ಮತ್ವಜ್ಞಾನವೂ, ಅನಾತ್ಮವಸ್ತುಗಳಲ್ಲಿ ಆತ್ಮತ್ವಜ್ಞಾನವೂ, 'ನಾನು ಸುಖಿಯು—ನಾನು ದುಃಖಿಯು' ಎಂಬ ಬುದ್ಧಿಯೂ ಉತ್ಪನ್ನವಾಗುವುವು. ಪುರುಷನು ಈ ರೀತಿಯಾಗಿ ಆಣವಾದಿಮಲಗಳಿಂದ ಯುಕ್ತನಾಗುವುದರಿಂದ ಸಂಸಾರಿಯೆನಿಸುವನು.

ಪುರುಷನು ಮಾಯಾಮಲಾವೃತನಾಗಿ ತನ್ನ ಸರ್ವಕರ್ತೃತ್ವ-ಸರ್ವಜ್ಞತ್ವ-ಪೂರ್ಣತ್ವ-ನಿತ್ಯತ್ವ-ವ್ಯಾಪಕತ್ವರೂಪಶಕ್ತಿಗಳನ್ನು ಕಳೆದುಕೊಂಡು, ಕಿಂಚಿತ್ಕರ್ತೃತ್ವಾದಿಶಕ್ತಿಗಳಿಂದ ಯುಕ್ತನಾಗುವನು. ಪುರುಷನ ಈ ಕಿಂಚಿತ್ಕರ್ತೃತ್ವರೂಪಶಕ್ತಿಯೇ, "**ಕಲಾತತ್ತ್ವ**"ವೆನಿಸಿಕೊಳ್ಳುವುದು. ಕಿಂಚಿಜ್ಜ್ಞತ್ವರೂಪಶಕ್ತಿಯೇ "**ವಿದ್ಯಾತತ್ತ್ವ**"ವೆನಿಸಿಕೊಳ್ಳುವುದು. ಅಪೂರ್ಣತ್ವರೂಪಶಕ್ತಿಯೇ, ಸ್ರಕ್ಚಂದನವನಿತಾದಿವಿಷಯಕಪ್ರೀತಿರೂಪವಾದ "**ರಾಗತತ್ತ್ವ**"ವೆನಿಸಿಕೊಳ್ಳುವುದು. ಅನಿತ್ಯತ್ವರೂಪಶಕ್ತಿಯೇ, ಭೂತಭವಿಷ್ಯದ್ವರ್ತಮಾನಕಾಲಗಳ ವ್ಯವಹಾರಕ್ಕೆ ಅಸಾಧಾರಣಕಾರಣವಾದ "**ಕಾಲತತ್ತ್ವ**"ವೆನಿಸಿಕೊಳ್ಳುವುದು. ಅವ್ಯಾಪಕತ್ವರೂಪಶಕ್ತಿಯೇ, ಈ ಕಾರಣದಿಂದ ಈ ಕಾರ್ಯವೇ ಹುಟ್ಟುವುದು; ಮತ್ತೊಂದು ಹುಟ್ಟುವುದಿಲ್ಲವೆಂಬ ನಿಯಮಕ್ಕೆ ಅಸಾಧಾರಣಕಾರಣವಾದ "**ನಿಯತಿತತ್ತ್ವ**"ವೆನಿಸಿಕೊಳ್ಳುವುದು.

ಕಾರ್ಯೌನ್ಮುಖ್ಯಗರ್ಭಿತವಾದ ಇಚ್ಛಾಶಕ್ತಿಯು, ಸ್ವಗತವಾದ ಜ್ಞಾನಶಕ್ತಿ ಕ್ರಿಯಾಶಕ್ತಿಗಳಲ್ಲಿರುವ 'ಜ್ಞಾನಂ ಕ್ರಿಯಾ ನ ಭವತಿ ಕ್ರಿಯಾ ಜ್ಞಾನಂ ನ ಭವತಿ' ಎಂಬ ಅನ್ಯೋನ್ಯಾಭಾವರೂಪಭೇದ

ಬುದ್ಧಿಪ್ರಧಾನವಾದ ಮಾಯಾತತ್ತ್ವದಲ್ಲಿ ಪ್ರತಿಸ್ಫುರಿಸಲು, "**ಪ್ರಕೃತಿತತ್ತ್ವ**"ವೆನಿಸಿಕೊಳ್ಳುವುದು. ಈ ಪ್ರಕೃತಿತತ್ತ್ವವು ಸುಖದುಃಖಮೋಹಗಳಿಗೆ ಕಾರಣಗಳಾದ ಸತ್ವರಜಸ್ತಮೋಗುಣಗಳ ಸಾಮ್ಯಾವಸ್ಥಾರೂಪವಾಗಿದ್ದು, ಮಹತ್ತತ್ತ್ವವೇ ಮೊದಲ್ಗೊಂಡು ಪೃಥಿವ್ಯಂತವಾಗಿರುವ ೨೩ ತತ್ತ್ವಗಳಿಗೆ ಮೂಲಕಾರಣವಾಗಿರುವುದು.

ಪ್ರಕೃತಿತತ್ತ್ವರೂಪವಾದೀ ಶಕ್ತಿತತ್ತ್ವವೇ, 'ಇದಮಿತ್ಥಂ' ಇದು ಹೀಗೆಯೇ ಸರಿ ! ಎಂಬ ನಿಶ್ಚಯಕ್ಕೆ ಕಾರಣವಾದುದಾಗಿ "**ಬುದ್ಧಿತತ್ತ್ವ**"ವೆನಿಸಿಕೊಳ್ಳುವುದು. ಇದಕ್ಕೆ ಮಹತ್ತತ್ತ್ವವೆಂಬ ನಾಮಾಂತರವೂ ಉಂಟು. ಬುದ್ಧಿತತ್ತ್ವರೂಪವಾದೀ ಶಕ್ತಿತತ್ತ್ವವೇ 'ನಾನು–ನನ್ನದು' ಎಂಬ ಅಹಂಕಾರ-ಮಮಕಾರಗಳಿಗೆ ಕಾರಣವಾದುದಾಗಿ "**ಅಹಂಕಾರತತ್ತ್ವ**"ವೆನಿಸಿಕೊಳ್ಳುವುದು. ಅಹಂಕಾರತತ್ತ್ವರೂಪವಾದೀ ಶಕ್ತಿತತ್ತ್ವವೇ, 'ಸ್ಥಾಣುರ್ವಾ ಪುರುಷೋ ವಾ' ಎಂಬ ಸಂಕಲ್ಪವಿಕಲ್ಪಗಳಿಗೆ ಕಾರಣವಾದುದಾಗಿ "**ಮನಸ್ತತ್ತ್ವ**"ವೆನಿಸಿಕೊಳ್ಳುವುದು. ಬುದ್ಧ್ಯಹಂಕಾರಮನಸ್ತತ್ತ್ವಗಳು ಶರೀರದೊಳಗಿರುವುದರಿಂದ ಈ ಮೂರೂ "ಅಂತಃಕರಣ"ವೆನಿಸುವುವು. ಈ ಅಂತಃಕರಣವು ಇಚ್ಛಾಶಕ್ತಿಪ್ರಧಾನವಾಗಿರುವುದು.

ಅಂತಃಕರಣರೂಪವಾಗಿ ಪರಿಣಮಿಸಿದ ಈ ಶಕ್ತಿತತ್ತ್ವವೇ, ಬಾಹ್ಯಶರೀರವನ್ನವಲಂಬಿಸಿ ಶಬ್ದಜ್ಞಾನಕ್ಕೆ ಸಾಧನವಾಗಿ "**ಶ್ರೋತ್ರತತ್ತ್ವ**"ವೆಂದೂ, ಸ್ಪರ್ಶಜ್ಞಾನಕ್ಕೆ ಸಾಧನವಾಗಿ "**ತ್ವಕ್‌ತತ್ತ್ವ**"ವೆಂದೂ, ರೂಪಜ್ಞಾನಕ್ಕೆ ಸಾಧನವಾಗಿ "**ನೇತ್ರತತ್ತ್ವ**"ವೆಂದೂ, ರಸಜ್ಞಾನಕ್ಕೆ ಸಾಧನವಾಗಿ "**ಜಿಹ್ವಾತತ್ತ್ವ**"ವೆಂದೂ, ಗಂಧಜ್ಞಾನಕ್ಕೆ ಸಾಧನವಾಗಿ "**ಘ್ರಾಣತತ್ತ್ವ**"ವೆಂದೂ ಹೇಳಿಸಿಕೊಳ್ಳುವುದು. ಈ

ಐದು ಇಂದ್ರಿಯಗಳು ಜ್ಞಾನಶಕ್ತಿಪ್ರಧಾನವಾದುದರಿಂದ ಜ್ಞಾನೇಂದ್ರಿಯಗಳೆಂದು ಹೇಳಿಸಿಕೊಳ್ಳುವುವು.

ಜ್ಞಾನೇಂದ್ರಿಯರೂಪವಾಗಿ ಪರಿಣಮಿಸಿದ ಈ ಶಕ್ತಿತತ್ತ್ವವೇ, ಉಚ್ಚಾರಣಕ್ರಿಯೆಗೆ ಸಾಧನವಾಗಿ "**ವಾಕ್ತತ್ತ್ವ**" ವೆಂದೂ, ದಾನಾದಾನಾದಿಕ್ರಿಯೆಗಳಿಗೆ ಸಾಧನವಾಗಿ "**ಪಾಣಿತತ್ತ್ವ**" ವೆಂದೂ, ಗಮನಾಗಮನಾದಿಕ್ರಿಯೆಗಳಿಗೆ ಸಾಧನವಾಗಿ "**ಪಾದತತ್ತ್ವ**" ವೆಂದೂ, ಮಲಪರಿತ್ಯಾಗಕ್ಕೆ ಸಾಧನವಾಗಿ "**ಪಾಯುತತ್ತ್ವ**" ವೆಂದೂ, ರೇತೋಮೂತ್ರಪರಿತ್ಯಾಗಕ್ಕೆ ಸಾಧನವಾಗಿ "**ಉಪಸ್ಥತತ್ತ್ವ**" ವೆಂದೂ ಹೇಳಿಸಿಕೊಳ್ಳುವುದು. ಈ ಐದು ಇಂದ್ರಿಯಗಳು ಕ್ರಿಯಾಶಕ್ತಿಪ್ರಧಾನವಾದುದರಿಂದ ಕರ್ಮೇಂದ್ರಿಯಗಳೆಂದು ಹೇಳಿಸಿಕೊಳ್ಳುವುವು. ಈ ಮೇಲೆ ಹೇಳಿದ ಬುದ್ಧಿತತ್ತ್ವಾದಿತ್ರಯೋದಶತತ್ತ್ವಗಳು, ಇಚ್ಛಾಶಕ್ತಿ-ಜ್ಞಾನಶಕ್ತಿ-ಕ್ರಿಯಾಶಕ್ತಿಪ್ರಧಾನವಾಗಿರುವುವು.

ಈ ಶಕ್ತಿತತ್ತ್ವವೇ, ಕೇವಲ ಶ್ರೋತ್ರೇಂದ್ರಿಯಗ್ರಾಹ್ಯವಾದ "**ಶಬ್ದತತ್ತ್ವ**" ರೂಪವಾಗಿಯೂ, ಕೇವಲ ತ್ವಗಿಂದ್ರಿಯಗ್ರಾಹ್ಯವಾದ "**ಸ್ಪರ್ಶತತ್ತ್ವ**" ರೂಪವಾಗಿಯೂ, ಕೇವಲ ನೇತ್ರೇಂದ್ರಿಯಗ್ರಾಹ್ಯವಾದ "**ರೂಪತತ್ತ್ವ**" ರೂಪವಾಗಿಯೂ, ಕೇವಲ ಜಿಹ್ವೇಂದ್ರಿಯಗ್ರಾಹ್ಯವಾದ "**ರಸತತ್ತ್ವ**" ರೂಪವಾಗಿಯೂ, ಕೇವಲ ಘ್ರಾಣೇಂದ್ರಿಯಗ್ರಾಹ್ಯವಾದ "**ಗಂಧತತ್ತ್ವ**" ರೂಪವಾಗಿಯೂ ಪರಿಣಮಿಸುವುದು. ಶಬ್ದದಲ್ಲಿ ಧ್ವನ್ಯಾತ್ಮಕ-ವರ್ಣಾತ್ಮಕಶಬ್ದವೆಂದೂ, ಸ್ಪರ್ಶದಲ್ಲಿ ಶೀತೋಷ್ಣಸ್ಪರ್ಶವೆಂದೂ, ರೂಪದಲ್ಲಿ ನೀಲಪೀತಾದಿರೂಪವೆಂದೂ, ರಸದಲ್ಲಿ ಮಧುರಾಮ್ಲಾದಿರಸವೆಂದೂ, ಗಂಧದಲ್ಲಿ ಸುಗಂಧ-ದುರ್ಗಂಧವೆಂದೂ ವಿಭಾಗವು ವ್ಯಕ್ತವಾಗದೆ ಸಾಮಾನ್ಯ

ರೂಪವಾಗಿರುವುದರಿಂದ, ಶಬ್ದಾದಿಗಳು "ತನ್ಮಾತ್ರ" ಗಳೆಂದು ಹೇಳಿಸಿಕೊಳ್ಳುವುವು.

ಪೂರ್ವೋಕ್ತವಾದೀ ಶಕ್ತಿತತ್ತ್ವವೇ, ಶಬ್ದೈಕಗುಣವುಳ್ಳ "**ಆಕಾಶತತ್ತ್ವ**" ರೂಪವಾಗಿಯೂ, ಸ್ಪರ್ಶವೆಂಬ ಪ್ರಧಾನಗುಣವುಳ್ಳ "**ವಾಯುತತ್ತ್ವ**" ರೂಪವಾಗಿಯೂ, ರೂಪವೆಂಬ ಪ್ರಧಾನಗುಣವುಳ್ಳ "**ತೇಜಸ್ತತ್ತ್ವ**" ರೂಪವಾಗಿಯೂ, ರಸವೆಂಬ ಪ್ರಧಾನಗುಣವುಳ್ಳ "**ಜಲತತ್ತ್ವ**" ರೂಪವಾಗಿಯೂ, ಗಂಧವೆಂಬ ಪ್ರಧಾನಗುಣವುಳ್ಳ "**ಪೃಥಿವೀತತ್ತ್ವ**" ರೂಪವಾಗಿಯೂ ಪರಿಣಮಿಸುವುದು. ಈ ಪಂಚಭೂತಗಳೊಳಗೆ ಉತ್ತರೋತ್ತರಭೂತಗಳಲ್ಲಿ ಪೂರ್ವಪೂರ್ವಭೂತಗಳ ಗುಣಗಳು ಅನುವರ್ತಿಸುವುವು. ನಿಗಮಾಗಮಪ್ರಸಿದ್ಧವಾದೀ ಮೂವತ್ತಾರುತತ್ತ್ವಗಳು ಸಚ್ಚಿದಾನಂದರೂಪವಾದ ಶಕ್ತಿವಿಶಿಷ್ಟಪರಶಿವಬ್ರಹ್ಮದ ಪರಿಣಾಮರೂಪವಾಗಿರುವುದರಿಂದ, ವೀರಶೈವಮತವು ಪರಿಣಾಮವಾದವನ್ನೂ ಜಗತ್ಸತ್ಯತ್ವವಾದವನ್ನೂ ಬೋಧಿಸುತ್ತಿರುವುದು.

ಪರಿಣಾಮವಾದವಿಚಾರ.

ಚರಾಚರಾತ್ಮಕವಾದೀ ಸಮಸ್ತಪ್ರಪಂಚವು ಶಕ್ತಿವಿಶಿಷ್ಟಪರಶಿವನ ಪರಿಣಾಮರೂಪವಾಗಿರುವುದು. ಸಾಕ್ಷಾತ್ ಶಕ್ತಿವಿಶಿಷ್ಟಪರಶಿವನೇ ಸಮಸ್ತಪ್ರಪಂಚಸ್ವರೂಪದಿಂದ ಪ್ರಕಾಶಿಸುತ್ತಿರುವನೆಂದು ನಿಗಮಾಗಮಗಳು ಸಾರುತ್ತಿರುವವು. ಇದೇ ವಿಷಯವನ್ನು ಶ್ರೀರೇಣುಕಭಗವತ್ಪಾದರು ಸಿದ್ಧಾಂತಶಿಖಾಮಣಿಯಲ್ಲಿ—

ಆತ್ಮಶಕ್ತಿವಿಕಾಸೇನ ಶಿವೋ ವಿಶ್ವಾತ್ಮನಾ ಸ್ಥಿತಃ ।
ಕುಟೀಭಾವಾದ್ಯಥಾ ಭಾತಿ ಪಟಃ ಸ್ವಸ್ಯ ಪ್ರಸಾರಣಾತ್ ॥೬೫॥

ಪತ್ರಶಾಖಾದಿರೂಪೇಣ ಯಥಾ ತಿಷ್ಠತಿ ಪಾದಪಃ ।
ತಥಾ ಭೂವ್ಯಾದಿರೂಪೇಣ ಶಿವ ಏಕೋ ವಿರಾಜತೇ ॥೬೬॥
(ಪರಿಚ್ಛೇದ ೧೦)

ವೃಕ್ಷಸ್ಯ ಪತ್ರಪುಷ್ಪಾದಿ ವಟಬೀಜೇ ಸ್ಥಿತಂ ಯಥಾ ।
ತಥಾ ಹೃದಯಬೀಜಸ್ಥಂ ವಿಶ್ವಮೇತತ್ಪರಾತ್ಮನಃ ॥೩೬॥
(ಪರಿಚ್ಛೇದ ೨೦)

ವಸ್ತ್ರವು ತನ್ನ ಪ್ರಸಾರಣದಿಂದ ವಸ್ತ್ರಮಂದಿರ (ಡೇರಾ) ವಾಗಿ ಹೇಗೆ ತೋರುತ್ತಿರುವುದೋ, ಹಾಗೆಯೇ ಶಿವನು ತನ್ನಲ್ಲಿ ನಿತ್ಯಸಂಬಂಧದಿಂದಿರುವ ವಿಮರ್ಶಶಕ್ತಿಯ ವಿಕಾಸದಿಂದ ವಿಶ್ವರೂಪನಾಗಿ ತೋರುತ್ತಿರುವನೆಂದೂ, ವೃಕ್ಷವು ಪತ್ರಶಾಖಾದಿರೂಪದಿಂದ ಹೇಗೆ ವಿರಾಜಿಸುತ್ತಿರುವುದೋ, ಹಾಗೆಯೇ ಶಿವನು ಭೂಮಿ-ಜಲಾದಿರೂಪದಿಂದ ವಿರಾಜಿಸುತ್ತಿರುವನೆಂದೂ, ಅತಿವಿಶಾಲವಾದ ಆಲದಮರದ ಎಲೆ-ಹೂ-ಹಣ್ಣು ಮೊದಲಾದವುಗಳು ಆಲದಬೀಜದಲ್ಲಿ ಹೇಗೆ ಸೂಕ್ಷ್ಮರೂಪದಿಂದ ಅಡಗಿರುವುವೋ, ಹಾಗೆಯೇ ಚರಾಚರಾತ್ಮಕವಾದೀ ಪ್ರಪಂಚವು ಪರಮಾತ್ಮನ ಹೃದಯರೂಪಬೀಜದಲ್ಲಿ ಸೂಕ್ಷ್ಮರೂಪವಾಗಿ ಅಡಗಿರುವುದೆಂದೂ ಸ್ಪಷ್ಟವಾಗಿ ಅಪ್ಪಣೆಕೊಡಿಸಿರುವರು.

ಇದೇ ವಿಷಯವು “ **ಸ್ವಶಕ್ತಿಪ್ರಚಯೋಽಸ್ಯ ವಿಶ್ವಂ** ” (೩-೩೦) ಎಂಬೀ ಶಿವಸೂತ್ರದಲ್ಲಿಯೂ—

ಶಕ್ತಿಶ್ಚ ಶಕ್ತಿಮಾಂಶ್ಚೈವ ಪದಾರ್ಥದ್ವಯಮುಚ್ಯತೇ ।
ಶಕ್ತಯೋಽಸ್ಯ ಜಗತ್ ಕೃತ್ಸ್ನಂ ಶಕ್ತಿಮಾಂಸ್ತು ಮಹೇಶ್ವರಃ ॥

ಎಂಬೀ ಸರ್ವಮಂಗಲಾನಾಮಕಗ್ರಂಥೋಕ್ತಶ್ಲೋಕದಲ್ಲಿಯೂ ಪ್ರತಿಪಾದಿಸಲ್ಪಟ್ಟಿರುವುದು.

ಬಹು ಸ್ಯಾಂ ಪ್ರಜಾಯೇಯ । (೬-೨-೩)

ಎಂಬೀ ಛಾಂದೋಗ್ಯಶ್ರುತಿಯಲ್ಲಿ, ಪರಬ್ರಹ್ಮವು—"ನಾನೇ ನಾನಾವಿಧಪ್ರಪಂಚರೂಪವಾಗಿ ಪರಿಣಮಿಸುವೆನು." ಎಂದು ಬೋಧಿಸಲ್ಪಟ್ಟಿರುವುದು.

ಮುಂಡಕಶ್ರುತಿಯು—

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ । (೧-೧-೭)

ಎಂಬೀ ಮಂತ್ರದಿಂದ–ಜೇಡರಹುಳವು ತನ್ನ ವಿಶಿಷ್ಟಸ್ವರೂಪದಿಂದಲೇ ಜಾಲವನ್ನು ನಿರ್ಮಿಸಿ, ತಿರುಗಿ ತನ್ನ ವಿಶಿಷ್ಟಸ್ವರೂಪವಲ್ಲಿಯೇ ಆ ಜಾಲವನ್ನು ಅಡಗಿಸಿಕೊಳ್ಳುವಂತೆ, ಶಕ್ತಿವಿಶಿಷ್ಟಪರಶಿವನು ತನ್ನ ಶಕ್ತಿವಿಕಾಸರೂಪವಾದೀ ಪ್ರಪಂಚವನ್ನು ತನ್ನ ವಿಶಿಷ್ಟಸ್ವರೂಪದಿಂದಲೇ ನಿರ್ಮಿಸಿ, ತಿರುಗಿ ತನ್ನ ವಿಶಿಷ್ಟಸ್ವರೂಪದಲ್ಲಿಯೇ ಅಡಗಿಸಿಕೊಳ್ಳುವನೆಂದು ಸಾರುತ್ತಿರುವುದು.

ಆನೆಯು ಒಂದು ಸಮಯದಲ್ಲಿ ತನ್ನ ಕಾಲುಗಳನ್ನು ಹೊರಗೆ ನೀಡಿಕೊಂಡು ನೀರಿನಲ್ಲಿ ವಿಹರಿಸುತ್ತಿರುವುದೂ, ಮತ್ತೊಂದು ಸಮಯದಲ್ಲಿ ಆ ತನ್ನ ಕಾಲುಗಳನ್ನು ತನ್ನ ಶರೀರವಲ್ಲಿಯೇ ಅಡಗಿಸಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತಿರುವುದೂ ಸರ್ವರಿಗೂ ತಿಳಿದ ವಿಷಯವಷ್ಟೆ! ಇವರಂತೆಯೇ ಪರಶಿವನು ತನ್ನಲ್ಲಿ ನಿತ್ಯಸಂಬಂಧದಿಂದಿರುವ ಜಗತ್ತನ್ನು ಒಂದು ಸಮಯದಲ್ಲಿ ವಿಕಾಸಗೊಳಿಸುವನೆಂದೂ, ಬೇರೊಂದುಸಮಯದಲ್ಲಿ ಸಂಕೋಚಗೊಳಿಸುವನೆಂದೂ ತಿಳಿಯಬೇಕು. ಆನೆಯು ತನ್ನ ಕಾಲುಗಳನ್ನು ಹೊರಗೆ ನೀಡಿದಾಗ ಅವುಗಳಿಗೆ ಉತ್ಪತ್ತಿಯನ್ನೂ, ಒಳಗೆ ಎಳೆದುಕೊಂಡಾಗ ಅವುಗಳಿಗೆ ನಾಶವನ್ನೂ ಹೇಳುವುದು ಅತ್ಯಂತಹಾಸ್ಯಾಸ್ಪದವಾಗುವಂತೆ, ಸತ್ಯವೂ ನಿತ್ಯವೂ ಆದ

ಜಗತ್ತಿಗೆ ಉತ್ಪತ್ತಿಯನ್ನಾಗಲಿ, ನಾಶವನ್ನಾಗಲಿ ಹೇಳುವುದು ಅತ್ಯಂತ ಹಾಸ್ಯಾಸ್ಪದವಾಗುವುದು. ಆದರೆ ಇವುಗಳಿಗೆ ಉತ್ಪತ್ತಿನಾಶಗಳೆಂದು ಹೇಳದೆ ಶಕ್ತಿವಿಕಾಸ-ಶಕ್ತಿಸಂಕೋಚಗಳೆಂದು ಹೇಳಬೇಕೆನ್ನುವುದೇ ನಿಗಮಾಗಮಗಳ ಅಭಿಪ್ರಾಯವಾಗಿರುವುದು. ಪರಬ್ರಹ್ಮದ ಪರಿಣಾಮ ರೂಪವಾದ ಜಗತ್ತಿಗೆ ಉತ್ಪತ್ತಿನಾಶಗಳನ್ನು ಹೇಳಿದರೆ, ಪರಬ್ರಹ್ಮಕ್ಕೂ ಕೂಡ ಉತ್ಪತ್ತಿನಾಶಗಳನ್ನು ಹೇಳಬೇಕಾಗುವ ಪ್ರಸಂಗವು ಬರುವುದಷ್ಟೆ! ಆದುದರಿಂದ ಅನಾದಿಯಾದ ಜಗತ್ತಿಗೆ ಆ ರೀತಿಯಾಗಿ ಹೇಳಬಾರದೆನ್ನುವುದೇ ವೀರಶೈವಸಿದ್ಧಾಂತದ ರಹಸ್ಯವು.

ಜಗತ್ಸತ್ಯತ್ವವಿಚಾರ.

ಶಕ್ತಿವಿಶಿಷ್ಟಪರಶಿವಬ್ರಹ್ಮದಿಂದ ಉತ್ಪನ್ನವಾದ ಸಕಲಚರಾಚರಾತ್ಮಕವಾದೀ ಜಗತ್ತು ಮಿಥ್ಯೆಯಾಗಿರದೆ ಸತ್ಯವಾಗಿರುವುದೆಂದು ಅನಂತಶ್ರುತಿಗಳು ಮುಕ್ತಕಂಠದಿಂದ ಸಾರುತ್ತಿರುವುವು.

ತೈತ್ತಿರೀಯಶ್ರುತಿಯು—

ಸೋಽಕಾಮಯತ । ಬಹು ಸ್ಯಾಂ ಪ್ರಜಾಯೇಯೇತಿ । ಸ ತಪೋಽತಪ್ಯತ । ಸ ತಪಸ್ತಪ್ತ್ವಾ । ಇದಂ ಸರ್ವಮಸೃಜತ । ಯದಿದಂ ಕಿಂಚ । ತತ್ಸೃಷ್ಟ್ವಾ । ತದೇವಾನುಪ್ರಾವಿಶತ್ । ತದನುಪ್ರವಿಶ್ಯ । ಸಚ್ಚ ತ್ಯಚ್ಚಾಭವತ್ । ನಿರುಕ್ತಂ ಚಾನಿರುಕ್ತಂ ಚ । ನಿಲಯನಂ ಚಾನಿಲಯನಂ ಚ । ವಿಜ್ಞಾನಂ ಚಾವಿಜ್ಞಾನಂ ಚ । ಸತ್ಯಂ ಚಾನೃತಂ ಚ ಸತ್ಯಮಭವತ್ । ಯದಿದಂ ಕಿಂಚ । ತತ್ಸತ್ಯಮಿತ್ಯಾಚಕ್ಷತೇ ॥ (ಅನುವವಲ್ಲೀ ೬)

ಎಂಬೀ ಮಂತ್ರದಿಂದ—ಸಕಲಚರಾಚರಾತ್ಮಕವಾದ ಜಗತ್ತು ಪರಬ್ರಹ್ಮದಿಂದ ನಿರ್ಮಿಸಲ್ಪಟ್ಟಿತೆಂದೂ, ಆ ಪರಬ್ರಹ್ಮವು ತನ್ನಿಂದ

ನಿರ್ಮಿತವಾದ ಜಗತ್ತಿನಲ್ಲಿ ಪ್ರವೇಶಿಸಿ ಜಗದ್ರೂಪವಾಗಿ ಪರಿಣಮಿಸಿತೆಂದೂ, ಪರಬ್ರಹ್ಮಪರಿಣಾಮರೂಪವಾದೀ ಜಗತ್ತು ಸತ್ಯವಾದುದೆಂದೂ, ಸ್ಪಷ್ಟೋಕ್ತಿಗಳಿಂದ ಪ್ರತಿಪಾದಿಸುತ್ತಿರುವುದು.

ಇದೇ ವಿಷಯವನ್ನು ರೇಣುಕಭಗವತ್ಪಾದರು—

ಯಸ್ಮಾದೇತತ್ ಸಮುತ್ಪನ್ನಂ ಮಹಾದೇವಾಚ್ಚರಾಚರಂ ।
ತಸ್ಮಾದೇತನ್ನ ಭಿದ್ಯೇತ ಯಥಾ ಕುಂಭಾದಿಕಂ ಮೃದಃ ॥೬೨॥
ಶಿವತತ್ತ್ವಾತ್ ಸಮುತ್ಪನ್ನಂ ಜಗದಸ್ಮಾನ್ನ ಭಿದ್ಯತೇ ।
ಫೇನೋರ್ಮಿಬುದ್ಬುದಾಕಾರೋ ಯಥಾ ಸಿಂಧೋರ್ನ ಭಿದ್ಯತೇ॥

(ಪರಿಚ್ಛೇದ ೧೦)

ಯಥಾ ಪುಷ್ಪಪಲಾಶಾದಿರ್ವೃಕ್ಷರೂಪಾನ್ನ ಭಿದ್ಯತೇ ।
ತಥಾ ಶಿವಾತ್ ಪರಾಕಾಶಾಜ್ಜಗತೋ ನಾಸ್ತಿ ಭಿನ್ನತಾ ॥೭೧॥

(ಪರಿಚ್ಛೇದ ೧೯)

ಮಣ್ಣಿನಿಂದ ಹುಟ್ಟಿದ ಕೊಡ ಮೊದಲಾದವುಗಳು ಮಣ್ಣಿಗಿಂತಲೂ ಹೇಗೆ ಭಿನ್ನವಲ್ಲವೋ, ಹಾಗೆಯೇ ಶಿವನಿಂದುತ್ಪನ್ನವಾದ ಚರಾಚರಾತ್ಮಕವಾದೀ ಜಗತ್ತು ಶಿವನಿಗಿಂತಲೂ ಭಿನ್ನವಾಗಿರುವುದಿಲ್ಲವೆಂದೂ, ಸಮುದ್ರದಿಂದ ಹುಟ್ಟಿದ ನೊರೆ-ತೆರೆ-ಬುದ್ಬುದಾದಿಗಳು ಸಮುದ್ರಕ್ಕಿಂತಲೂ ಹೇಗೆ ಭಿನ್ನವಾಗಿಲ್ಲವೋ, ಹಾಗೆಯೇ ಶಿವತತ್ತ್ವದಿಂದ ಉತ್ಪನ್ನವಾದೀ ಜಗತ್ತು ಶಿವನಿಗಿಂತಲೂ ಭಿನ್ನವಾಗಿರುವುದಿಲ್ಲವೆಂದೂ, ಪತ್ರಪುಷ್ಪಶಾಖಾದಿಗಳು ವೃಕ್ಷಸ್ವರೂಪಕ್ಕಿಂತಲೂ ಹೇಗೆ ಭಿನ್ನವಾಗುವುದಿಲ್ಲವೋ, ಹಾಗೆಯೇ ಚರಾಚರಾತ್ಮಕವಾದೀ ಜಗತ್ತು ಪರಾಕಾಶಸ್ವರೂಪನಾದ ಶಿವನಿಗಿಂತಲೂ ಭಿನ್ನವಾಗುವುದಿಲ್ಲವೆಂದೂ, ಸಿದ್ಧಾಂತಶಿಖಾಮಣಿಯಲ್ಲಿ ಸ್ಪಷ್ಟವಾಗಿ ಅಪ್ಪಣೆಕೊಡಿಸಿದ್ದಾರೆ.

ಪ್ರಮಾಣವಿಚಾರ.

ವೀರಶೈವಸಿದ್ಧಾಂತದಲ್ಲಿ ಪ್ರತ್ಯಕ್ಷ-ಅನುಮಾನ-ಶಬ್ದಗಳೆಂಬ ಮೂರು ಪ್ರಮಾಣಗಳು ಅಂಗೀಕೃತವಾಗಿರುವುವು. ಮಿಕ್ಕ ದರ್ಶನ ಕಾರರು ವಿವಿಧಪ್ರಮಾಣಗಳನ್ನು ಅಂಗೀಕರಿಸಿರುವರು. ಚಾರ್ವಾಕರು ಪ್ರತ್ಯಕ್ಷವೆಂಬ ಒಂದು ಪ್ರಮಾಣವನ್ನೂ, ವೈಶೇಷಿಕರು ಮತ್ತು ಬೌದ್ಧರು ಪ್ರತ್ಯಕ್ಷಾನುಮಾನಗಳೆಂಬ ಎರಡು ಪ್ರಮಾಣಗಳನ್ನೂ, ಸಾಂಖ್ಯರು ಪ್ರತ್ಯಕ್ಷಾನುಮಾನಶಬ್ದಗಳೆಂಬ ಮೂರು ಪ್ರಮಾಣಗಳನ್ನೂ, ಉದಯ ನಾಚಾರ್ಯಾದಿನೈಯಾಯಿಕರು ಈ ಮೂರರೊಡನೆ ಉಪಮಾನವನ್ನು ಸೇರಿಸಿ ನಾಲ್ಕು ಪ್ರಮಾಣಗಳನ್ನೂ, ಪ್ರಾಭಾಕರರು ಈ ನಾಲ್ಕರೊಡನೆ ಅರ್ಥಾಪತ್ತಿಯನ್ನು ಸೇರಿಸಿ ಐದು ಪ್ರಮಾಣಗಳನ್ನೂ, ಭಟ್ಟಮತದವರು ಮತ್ತು ಅದ್ವೈತಿಗಳು ಈ ಐದರೊಡನೆ ಅನುಪಲಬ್ಧಿಪ್ರಮಾಣವನ್ನು ಸೇರಿಸಿ ಆರು ಪ್ರಮಾಣಗಳನ್ನೂ, ಪೌರಾಣಿಕರು ಮತ್ತು ಐತಿಹಾಸಿಕರು ಈ ಆರರೊಡನೆ ಸಂಭವ-ಐತಿಹ್ಯಗಳೆಂಬ ಎರಡು ಪ್ರಮಾಣಗಳನ್ನು ಸೇರಿಸಿ ಎಂಟುಪ್ರಮಾಣಗಳನ್ನೂ ಅಂಗೀಕರಿಸಿರುವರು. ಇವರು ಅಂಗೀಕರಿಸಿರುವ ಉಪಮಾನಾದಿಪಂಚಪ್ರಮಾಣಗಳೂ ಪ್ರತ್ಯಕ್ಷಾನು ಮಾನಶಬ್ದಪ್ರಮಾಣಗಳಲ್ಲಿಯೇ ಅಂತರ್ಗತವಾಗುವುವೆಂದು ವೀರಶೈವ ಮತಾಚಾರ್ಯರು ಪ್ರಮಾಣನಿರೂಪಣಾವಸರದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿರುವರು. ಅಂದರೆ ಅನುಪಲಬ್ಧಿ ಎಂಬ ಪ್ರಮಾಣವು ಪ್ರತ್ಯಕ್ಷ ಪ್ರಮಾಣದಲ್ಲಿಯೂ, ಉಪಮಾನ-ಅರ್ಥಾಪತ್ತಿ-ಸಂಭವಗಳೆಂಬ ಮೂರು ಪ್ರಮಾಣಗಳು ಅನುಮಾನಪ್ರಮಾಣದಲ್ಲಿಯೂ, ಐತಿಹ್ಯವೆಂಬ ಪ್ರಮಾಣವು ಶಬ್ದಪ್ರಮಾಣದಲ್ಲಿಯೂ ಅಂತರ್ಭಾವವನ್ನು ಪಡೆದಿರುವು ವೆನ್ನುವುದೇ ಭಗವತ್ಪಾದರ ಅಭಿಪ್ರಾಯವಾಗಿರುವುದು.

ಲಿಂಗಾಂಗಸಾಮರಸ್ಯವಿಚಾರ.

ವೀರಶೈವಸಿದ್ಧಾಂತದಲ್ಲಿ ಪರಶಿವಬ್ರಹ್ಮವು "**ಸ್ಥಲ**" ಎಂಬ ಅಭಿಧಾನದಿಂದ ನಿರ್ದೇಶಿಸಲ್ಪಟ್ಟಿರುವುದು.

ಸ್ಥೀಯತೇ ಲೀಯತೇ ಯತ್ರ ಜಗದೇತಚ್ಚರಾಚರಂ।
ತದ್ಬ್ರಹ್ಮ ಸ್ಥಲಮಿತ್ಯುಕ್ತಂ ಸ್ಥಲತತ್ತ್ವವಿಶಾರದೈಃ ॥

ಚರಾಚರಾತ್ಮಕವಾದೀ ಜಗತ್ತು ಯಾವುದರಲ್ಲಿ ಸ್ಥಿತಿಯನ್ನೂ ಲಯವನ್ನೂ ಹೊಂದುವುದೋ, ಆ ಬ್ರಹ್ಮವು "ಸ್ಥಲ" ವೆಂದು ಹೇಳಿಸಿಕೊಳ್ಳುವುದು. ಈ ಸ್ಥಲರೂಪಪರಶಿವಬ್ರಹ್ಮವು ಸ್ವಲೀಲೆಯಿಂದ ಅಂಗಸ್ಥಲ-ಲಿಂಗಸ್ಥಲವೆಂದು ಎರಡು ಪ್ರಕಾರವಾಗುವುದು. ಪೂರ್ವೋಕ್ತ ಚಿತ್ತಶಕ್ತಿವಿಶಿಷ್ಟಜೀವನೇ ಅಂಗಪದವಾಚ್ಯನೆನಿಸುವನು. ಚಿಚ್ಛಕ್ತಿವಿಶಿಷ್ಟಪರಶಿವನೇ ಲಿಂಗಪದವಾಚ್ಯನೆನಿಸುವನು. ಲಿಂಗವು ಭಕ್ತಾನುಗ್ರಹಕ್ಕಾಗಿ ಸ್ಥೂಲ-ಸೂಕ್ಷ್ಮ-ಕಾರಣನಾಮಕಶರೀರಸ್ಥಾನಭೇದದಿಂದ ಇಷ್ಟಲಿಂಗ-ಪ್ರಾಣಲಿಂಗ-ಭಾವಲಿಂಗವೆಂದು ಮೂರು ಪ್ರಕಾರವಾಗುವುದು. ಅಂಗವಾದರೂ ತ್ಯಾಗಾಂಗ-ಭೋಗಾಂಗ-ಯೋಗಾಂಗವೆಂದು ಮೂರು ಪ್ರಕಾರವಾಗುವುದು. ಇಷ್ಟಲಿಂಗವು—ಆಚಾರಲಿಂಗ-ಗುರುಲಿಂಗವೆಂದೂ, ಪ್ರಾಣಲಿಂಗವು — ಶಿವಲಿಂಗ-ಚರಲಿಂಗವೆಂದೂ, ಭಾವಲಿಂಗವು — ಪ್ರಸಾದಲಿಂಗ-ಮಹಾಲಿಂಗವೆಂದೂ ಆರು ಪ್ರಕಾರವಾಗುವುವು. ಇದರಂತೆ ತ್ಯಾಗಾಂಗವು—ಭಕ್ತ-ಮಾಹೇಶ್ವರನೆಂದೂ, ಭೋಗಾಂಗವು—ಪ್ರಸಾದಿ-ಪ್ರಾಣಲಿಂಗಿಯೆಂದೂ, ಯೋಗಾಂಗವು—ಶರಣ-ಐಕ್ಯನೆಂದೂ ಆರು ಪ್ರಕಾರವಾಗುವುವು. ಅಂಗಸ್ಥಲವು ಅವಾಂತರಭೇದದಿಂದ ೪೪ ಪ್ರಕಾರವಾಗಿಯೂ, ಲಿಂಗಸ್ಥಲವು ೫೭ ಪ್ರಕಾರವಾಗಿಯೂ ಆಗುವುವು. ಈ ಎರಡು ಸ್ಥಲಗಳೂ ಸೇರಿ ಒಟ್ಟಿಗೆ ೧೦೧ ಸ್ಥಲಗಳಾಗುವುವು.

ಏಕೋತ್ತರಶತಸ್ಥಲಾತ್ಮಕವಾದೀ ಲಿಂಗಾಂಗಸಾಮರಸ್ಯಜ್ಞಾನವೇ ವೀರಶೈವಸಿದ್ಧಾಂತದಲ್ಲಿ ಮೋಕ್ಷಮೂಲಭೂತವಾಗಿರುವುದು.

ಈ ಉಭಯವಿಧಸ್ಥಲಗಳಲ್ಲಿ ಮೊದಲು ಲಿಂಗಸ್ಥಲವಿಷಯವನ್ನು ವಿಮರ್ಶಿಸುವದಾಗುವುದು.

ಇಷ್ಟಲಿಂಗಮಿದಂ ಸ್ಥೂಲಂ ಯದ್ಬಾಹ್ಯೇ ಧಾರ್ಯತೇ ತನೌ ।
ಪ್ರಾಣಲಿಂಗಂ ತು ತತ್ಸೂಕ್ಷ್ಮಂ ಯದಂತರ್ಭಾವನಾಮಯಂ ॥
ಪರಾತ್ಪರಂ ತು ಯತ್ಪ್ರೋಕ್ತಂ ತೃಪ್ತಿಲಿಂಗಂ ತದುಚ್ಯತೇ ॥

ಸ್ಥೂಲದೇಹದಲ್ಲಿ ಧರಿಸಲ್ಪಡುವುದೇ ಇಷ್ಟಲಿಂಗವೆಂದೂ, ಸೂಕ್ಷ್ಮಶರೀರದಲ್ಲಿ ಧರಿಸಲ್ಪಡುವುದೇ ಪ್ರಾಣಲಿಂಗವೆಂದೂ, ಕಾರಣ ಶರೀರದಲ್ಲಿ ಧರಿಸಲ್ಪಡುವುದೇ ಭಾವಲಿಂಗವೆಂದೂ ಹೇಳಿಸಿಕೊಳ್ಳುವುವು. ಈ ತ್ರಿವಿಧಲಿಂಗಗಳಿಂದ ಆರುಬಗೆಯಾಗಿರುವ ಆಚಾರಾದಿಲಿಂಗಗಳ ಸ್ವರೂಪವೆಂತೆಂದರೆ—

ಆಚಾರಲಿಂಗಂ ಘ್ರಾಣಾಖ್ಯಂ ಭಕ್ತಸ್ಥಲಸಮಾಶ್ರಯಂ ।
ನಿವೃತ್ತಿಕಲಯೋಪೇತಂ ಗಂಧಗ್ರಹಣಸಾಧನಂ ॥೧॥

ಗುರುಲಿಂಗಂ ತು ಜಿಹ್ವಾಖ್ಯಂ ಮಹೇಶಸ್ಥಲಸಂಶ್ರಯಂ ।
ಪ್ರತಿಷ್ಠಾಕಲಯೋಪೇತಂ ರಸಗ್ರಹಣಸಾಧನಂ ॥೨॥

ಶಿವಲಿಂಗಂ ತು ನೇತ್ರಾಖ್ಯಂ ಪ್ರಸಾದಿಸ್ಥಲಸಂಶ್ರಯಂ ।
ವಿದ್ಯಾಕಲಾಸಮಾಯುಕ್ತಂ ರೂಪಗ್ರಹಣಸಾಧನಂ ॥೩॥

ತ್ವಗಾಖ್ಯಂ ಜಂಗಮಂಲಿಂಗಂ ಪ್ರಾಣಲಿಂಗಿಸ್ಥಲಾಶ್ರಯಂ ।
ಶಾಂತ್ಯಾಖ್ಯಕಲಯೋಪೇತಂ ಸ್ಪರ್ಶಗ್ರಹಣಸಾಧನಂ ॥೪॥

ಪ್ರಸಾದಲಿಂಗಂ ಶ್ರೋತ್ರಾಖ್ಯಂ ಶರಣಸ್ಥಲಸಂಶ್ರಯಂ ।
ಶಾಂತ್ಯತೀತಕಲೋಪೇತಂ ಶಬ್ದಗ್ರಹಣಸಾಧನಂ ॥೫॥

ಮಾನಸಂ ತು ಮಹಾಲಿಂಗಮೈಕ್ಯಸ್ಥಲಸಮಾಶ್ರಯಂ ।
ಶಾಂತ್ಯತೀತೋತ್ತರೋಪೇತಂ ಸರ್ವಗ್ರಹಣಸಾಧನಂ ॥೬॥

ಘ್ರಾಣರೂಪವಾದ ಆಚಾರಲಿಂಗವು ಭಕ್ತಸ್ಥಲವನ್ನಾಶ್ರಯಿಸಿ, ನಿವೃತ್ತಿಕಲಾಯುಕ್ತವಾಗಿ, ಗಂಧಗ್ರಹಣಸಾಧನವಾಗಿರುವುದು. ಘ್ರಾಣವು ಇಡಾಪಿಂಗಳನಾಡೀದ್ವಾರಾ ಪ್ರಾಣವಾಯುವಿನ ಸಂಚಾರಕ್ಕೆ ಆಶ್ರಯವಾಗಿರುವುದರಿಂದಲೂ, ದೇಹಶುದ್ಧಿಗೆ ಹೇತುಭೂತವಾದ ಪ್ರಾಣಾಯಾಮಾಚರಣೆಗೆ ಸಾಧನವಾದುದರಿಂದಲೂ ಇದಕ್ಕೆ "**ಆಚಾರ ಲಿಂಗ**" ಎಂಬ ನಾಮವು ಪ್ರಾಪ್ತವಾಗಿದೆ.

ಜಿಹ್ವಾರೂಪವಾದ ಗುರುಲಿಂಗವು ಮಾಹೇಶ್ವರಸ್ಥಲವನ್ನಾಶ್ರಯಿಸಿ, ಪ್ರತಿಷ್ಠಾಕಲಾಯುಕ್ತವಾಗಿ ರಸಗ್ರಹಣಸಾಧನವಾಗಿರುವುದು. ಜಿಹ್ವೆಯು ಷಡಕ್ಷರಮಂತ್ರದ ಉಚ್ಚಾರಕ್ಕೆ ಸಾಧನವಾದುದರಿಂದಲೂ, ಈ ಮಹಾಮಂತ್ರವು ಮಂತ್ರಮೂರ್ತಿಯಾದ ಗುರುವಿನ ಮುಖದಿಂದ ಪ್ರಾಪ್ತವಾಗುವುದರಿಂದಲೂ ಇದಕ್ಕೆ "**ಗುರುಲಿಂಗ**" ಎಂಬ ನಾಮವು ಪ್ರಾಪ್ತವಾಗಿದೆ.

ನೇತ್ರರೂಪವಾದ ಶಿವಲಿಂಗವು ಪ್ರಸಾದಿಸ್ಥಲವನ್ನಾಶ್ರಯಿಸಿ, ವಿದ್ಯಾಕಲಾಯುಕ್ತವಾಗಿ, ರೂಪಗ್ರಹಣಸಾಧನವಾಗಿರುವದು. ನೇತ್ರವು ತನ್ನ ಗೋಳಕದಲ್ಲಿರುವ ಶಿವಪ್ರಕಾಶದಿಂದ ಯುಕ್ತವಾಗಿ ಸಕಲರೂಪ ಪದಾರ್ಥಪ್ರಕಾಶಕ್ಕೆ ಸಾಧನವಾದುದರಿಂದ, ಇದಕ್ಕೆ "**ಶಿವಲಿಂಗ**" ಎಂಬ ನಾಮವು ಪ್ರಾಪ್ತವಾಗಿದೆ.

ತ್ವಗ್ರೂಪವಾದ ಚರಲಿಂಗವು ಪ್ರಾಣಲಿಂಗಿಸ್ಥಲವನ್ನಾಶ್ರಯಿಸಿ, ಶಾಂತಿಕಲಾಯುಕ್ತವಾಗಿ, ಸ್ಪರ್ಶಗ್ರಹಣಸಾಧನವಾಗಿರುವುದು. ತ್ವಕ್ಕು ಸರ್ವಾಂಗವನ್ನು ವ್ಯಾಪಿಸಿ ಶೀತಸ್ಪರ್ಶಾದಿಜ್ಞಾನಕ್ಕೆ ಸಾಧನವಾದುದ

ರಿಂದಲೂ, ಇದು ಸಂಚರಣಶೀಲವಾದ ವಾಯುವಿನ ಅಂಶವಾಗಿರುವುದ ರಿಂದಲೂ ಇದಕ್ಕೆ "**ಚರಲಿಂಗ**" ಎಂಬ ನಾಮವು ಪ್ರಾಪ್ತವಾಗಿದೆ.

ಶ್ರೋತ್ರರೂಪವಾದ ಪ್ರಸಾದಲಿಂಗವು ಶರಣಸ್ಥಲವನ್ನಾಶ್ರಯಿಸಿ, ಶಾಂತ್ಯತೀತಕಲಾಯುಕ್ತವಾಗಿ ಶಬ್ದಗ್ರಹಣಸಾಧನವಾಗಿರುವುದು. ಶ್ರೋತ್ರವು ಶಬ್ದಗ್ರಹಣಕ್ಕೆ ಸಾಧನವಾದುದರಿಂದಲೂ, ನಾದ-ಸುನಾದ - ನಿನಾದ - ಮಹಾನಾದರೂಪ ಪರಾ-ಪಶ್ಯಂತೀ - ಮಧ್ಯಮಾ-ವೈಖರೀಕ್ರಮದಿಂದ ಪ್ರಾಪ್ತವಾಗುವ ಅನುಗ್ರಹರೂಪಪ್ರಸಾದಕ್ಕೆ ಹೇತುವಾಗಿರುವುದರಿಂದಲೂ ಇದಕ್ಕೆ "**ಪ್ರಸಾದಲಿಂಗ**" ಎಂಬ ನಾಮವು ಪ್ರಾಪ್ತವಾಗಿದೆ.

ಮನೋರೂಪವಾದ ಮಹಾಲಿಂಗವು ಐಕ್ಯಸ್ಥಲವನ್ನಾಶ್ರಯಿಸಿ, ಶಾಂತ್ಯತೀತೋತ್ತರಕಲಾಯುಕ್ತವಾಗಿ, ಸರ್ವಗ್ರಹಣಸಾಧನವಾಗಿರುವುದು. ಮನಸ್ಸು ಶ್ರೋತ್ರಾದೀಂದ್ರಿಯಗಳಂತೆ ಒಂದೊಂದು ವಿಷಯವನ್ನು ಗ್ರಹಿಸದೆ ಸರ್ವವಿಷಯಗಳನ್ನೂ ಗ್ರಹಿಸುವುದರಿಂದಲೂ, ಇದು ಇಂದ್ರಿಯಗಳಿಗೆಲ್ಲ ಮಹಾರಾಜನಂತಿರುವುದರಿಂದಲೂ ಇದಕ್ಕೆ "**ಮಹಾಲಿಂಗ**" ಎಂಬ ನಾಮವು ಪ್ರಾಪ್ತವಾಗಿದೆ.

ಇನ್ನು ಅಂಗಸ್ಥಲವಿಷಯವನ್ನು ವಿಮರ್ಶಿಸೋಣ !

ಅಂಗಸ್ಥಲಂ ತಥಾ ಪ್ರೋಕ್ತಮಾಚಾರ್ಯೈಃ ಸೂಕ್ಷ್ಮದರ್ಶಿಭಿಃ । ಯೋಗಾಂಗಂ ಪ್ರಥಮಂ ಪ್ರೋಕ್ತಂ ಭೋಗಾಂಗಂ ಚ ದ್ವಿತೀಯಕಂ ॥ ತ್ಯಾಗಾಂಗಂ ಚ ತೃತೀಯಂ ಸ್ಯಾದಿತ್ಯೇವಂ ತ್ರಿವಿಧಂ ಸ್ಮೃತಂ ॥

ಅಂಗಸ್ಥಲವು ಯೋಗಾಂಗ-ಭೋಗಾಂಗ-ತ್ಯಾಗಾಂಗವೆಂದು ಮೂರುವಿಧವಾಗಿರುವುದು. ವೀರಶೈವನು ತನಗೂ ಗುರುಲಿಂಗಜಂಗಮ

ರಿಗೂ ಐಕ್ಯಯೋಗಾನುಸಂಧಾನವನ್ನು ಮಾಡುವುದರಿಂದ ಇದಕ್ಕೆ "**ಯೋಗಾಂಗ**" ಎಂಬ ನಾಮವು ಪ್ರಾಪ್ತವಾಗಿದೆ. ಗುರುಲಿಂಗಜಂಗಮಾರ್ಪಿತಪ್ರಸಾದಸ್ವೀಕಾರದ್ವಾರಾ ಸುಖಭೋಗವನ್ನನುಭವಿಸುವುದರಿಂದ ಇವಕ್ಕೆ "**ಭೋಗಾಂಗ**" ಎಂಬ ನಾಮವು ಪ್ರಾಪ್ತವಾಗಿದೆ. ಗುರುಲಿಂಗಜಂಗಮರಿಗೆ ನಿರ್ವಂಚನೆಯಿಂದ ತನುಮನೋಧನಗಳನ್ನು ತ್ಯಾಗಮಾಡುವುದರಿಂದ ಇದಕ್ಕೆ "**ತ್ಯಾಗಾಂಗ**" ಎಂಬ ನಾಮವು ಪ್ರಾಪ್ತವಾಗಿದೆ.

ಸದಾಚಾರಃ ಶಿವೇ ಭಕ್ತಿರ್ಲಿಂಗೇ ಜಂಗಮ ಏಕಧೀಃ ।
ಲಾಂಛನೇ ಶರಣೇ ಭಕ್ತಿರ್ಭಕ್ತಸ್ಥಲಮನುತ್ತಮಂ ॥
ಕೇವಲೇ ಸಹಜೇ ದಾನೇ ನಿಷ್ಣಾತಃ ಶಿವತತ್ಪರಃ ।
ಬ್ರಹ್ಮಾದಿಸ್ಥಾನವಿಮುಖೋ ಭಕ್ತೋ ಮಾಹೇಶ್ವರಃಸ್ಮೃತಃ ॥
ಮನಃಪ್ರಸಾದಸಿದ್ಧ್ಯರ್ಥಂ ನಿರ್ಮಲಜ್ಞಾನಕಾರಣಂ ।
ಶಿವಪ್ರಸಾದಂ ಸ್ವೀಕುರ್ವನ್ ಪ್ರಸಾದೀತ್ಯೇಷ ಕಥ್ಯತೇ ॥
ಲಿಂಗಂ ಚಿದಾತ್ಮಕಂ ಬ್ರಹ್ಮ ತಚ್ಛಕ್ತಿಃ ಪ್ರಾಣರೂಪಿಣೀ ।
ತದ್ರೂಪಲಿಂಗವಿಜ್ಞಾನೀ ಪ್ರಾಣಲಿಂಗೀತಿ ಕಥ್ಯತೇ ॥
ಸತೀ ಚಾಹಂ ಪತಿರ್ಲಿಂಗಂ ಹೃದಿ ಯುಕ್ತಃ ಸ್ವಯಂಪ್ರಭುಃ ।
ಪ್ರಾಪಂಚಿಕಸುಖಂ ನಾಸ್ತಿ ಶರಣಸ್ಥಲಮುತ್ತಮಂ ॥
ಪ್ರಾಣಲಿಂಗಾದಿಯೋಗೇನ ಸುಖಾತಿಶಯಮೇಯಿವಾನ್ ।
ಶರಣಾಖ್ಯಃ ಶಿವೇನೈಕ್ಯಭಾವನಾದೈಕ್ಯವಾನ್ ಭವೇತ್ ॥

ಸದಾಚಾರಶೀಲನೂ, ಶಿವನಲ್ಲಿ ಭಕ್ತಿಯುಳ್ಳವನೂ, ಗುರುಲಿಂಗಜಂಗಮರಲ್ಲಿ ಒಂದೇ ವಿಧವಾದ ಬುದ್ಧಿಯುಳ್ಳವನೂ, ಶಿವಲಾಂಛನ ಮತ್ತು ಶಿವಶರಣರಲ್ಲಿ ಭಕ್ತಿಯುಳ್ಳವನೂ "**ಭಕ್ತ**" ನೆನಿಸುವನು.

ಸಹಜದಾನದಲ್ಲಿ ನಿಷ್ಣಾತನೂ, ಶಿವಾಸಕ್ತನೂ, ಬ್ರಹ್ಮಾದಿಸ್ಥಾನ ವಿಮುಖನೂ ಆದ ಭಕ್ತನೇ "**ಮಾಹೇಶ್ವರ**" ನೆನಿಸುವನು. ಈ ಮಾಹೇಶ್ವರನು ತನ್ನ ಮನಃಪ್ರಸನ್ನತೆಗಾಗಿ ನಿರ್ಮಲಜ್ಞಾನಕಾರಣ ವಾದ ಶಿವಪ್ರಸಾದವನ್ನು ಸ್ವೀಕರಿಸುವುದರಿಂದ "**ಪ್ರಸಾದಿ**" ಯೆನಿಸು ವನು. ಪರಶಿವಬ್ರಹ್ಮವು ಚಿತ್ಸ್ವರೂಪವೆಂದೂ, ಆ ಪರಶಿವಬ್ರಹ್ಮ ದಲ್ಲಿರುವ ಶಕ್ತಿಯು ಪ್ರಾಣಸ್ವರೂಪವೆಂದೂ, ಲಿಂಗವು ಈ ಎರಡರ ಸ್ವರೂಪವಾಗಿರುವುದೆಂದೂ ತಿಳಿಯುವ ಪ್ರಸಾದಿಯೇ "**ಪ್ರಾಣಲಿಂಗಿ**" ಯೆನಿಸುವನು. ಲಿಂಗವು ಪತಿಯೆಂದೂ ತಾನು ಸತಿಯೆಂದೂ ಭಾವಿಸಿ, ಪ್ರಾಪಂಚಿಕಸುಖಶೂನ್ಯನಾಗಿರುವ ಪ್ರಾಣಲಿಂಗಿಯೇ "**ಶರಣ**" ನೆನಿಸುವನು. ಈ ಶರಣನು ಪ್ರಾಣಲಿಂಗಾದಿಯೋಗದಿಂದ ಸುಖಾತಿಶಯ ವನ್ನು ಹೊಂದಿ ಶಿವೋಹಂಭಾವನೆಯಿಂದ ಶಿವನಲ್ಲಿ ಏಕತ್ವವನ್ನು ಹೊಂದುವುದರಿಂದ "**ಐಕ್ಯ**"ನೆನಿಸುವನು. ಈ ಭಕ್ತಾದಿಷಟ್ಸ್ಥಲಗಳು ಮುಕ್ತಿಮಂದಿರಕ್ಕೆ ಸೋಪಾನರೂಪಗಳಾಗಿರುವುವು.

ಅಂಗಸ್ಥಲಪ್ರತಿಪಾದ್ಯನಾದ ಭಕ್ತನು ಲಿಂಗಸ್ಥಲಪ್ರತಿಪಾದ್ಯ ವಾದ ಆಚಾರಲಿಂಗಕ್ಕೆ ಅಂಗವಾಗಿರುವುದರಂದ, ಈ ಭಕ್ತನು ಆಚಾರ ಲಿಂಗದಲ್ಲಿ ಸಾಮರಸ್ಯವನ್ನು ಹೊಂದುವನು. ಇದರಂತೆಯೇ ಮಾಹೇಶ್ವ ರನು ಗುರುಲಿಂಗದಲ್ಲಿಯೂ, ಪ್ರಸಾದಿಯು ಶಿವಲಿಂಗದಲ್ಲಿಯೂ, ಪ್ರಾಣ ಲಿಂಗಿಯು ಜಂಗಮಲಿಂಗದಲ್ಲಿಯೂ, ಶರಣನು ಪ್ರಸಾದಲಿಂಗದಲ್ಲಿಯೂ, ಐಕ್ಯನು ಮಹಾಲಿಂಗದಲ್ಲಿಯೂ ಸಾಮರಸ್ಯವನ್ನು ಹೊಂದುವರು.

ಇದೇರೀತಿಯಾಗಿ ಆಚಾರಲಿಂಗವು ಗುರುಲಿಂಗದಲ್ಲಿಯೂ, ಗುರುಲಿಂಗವು ಶಿವಲಿಂಗದಲ್ಲಿಯೂ, ಶಿವಲಿಂಗವು ಜಂಗಮಲಿಂಗದ ಲ್ಲಿಯೂ, ಜಂಗಮಲಿಂಗವು ಪ್ರಸಾದಲಿಂಗದಲ್ಲಿಯೂ, ಪ್ರಸಾದಲಿಂಗವು

ಮಹಾಲಿಂಗದಲ್ಲಿಯೂ, ಮಹಾಲಿಂಗವು ಪರಶಿವರೂಪಘನಲಿಂಗದ ಲ್ಲಿಯೂ ಸಾಮರಸ್ಯವನ್ನು ಹೊಂದಲು ಶಿವೈಕತ್ವವುಂಟಾಗುವದು.

"ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ, ತಥಾ ವಿದ್ವಾನ್ನಾಮರೂಪಾ ದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಂ" (೩-೨-೮)

ಎಂಬ ಮುಂಡಕಶ್ರುತ್ಯಭಿಪ್ರಾಯಾನುಸಾರವಾಗಿ ನದಿಗಳು ಸಮುದ್ರದಲ್ಲಿ ಸೇರಿ ನಾಮರೂಪಗಳನ್ನು ಬಿಟ್ಟು ಸಾಮರಸ್ಯವನ್ನು ಹೊಂದುವಂತೆ, ಶಿವಜ್ಞಾನವುಳ್ಳ ವೀರಶೈವನು ನಾಮರೂಪಗಳಿಂದ ವಿಮುಕ್ತನಾಗಿ ಪರಶಿವನಲ್ಲಿ ಸಾಮರಸ್ಯವನ್ನು ಹೊಂದುವನು.

ಜಲೇ ಜಲಮಿವ ನ್ಯಸ್ತಂ ವಹ್ನೌ ವಹ್ನಿರಿವಾರ್ಪಿತಃ ।
ಪರೇ ಬ್ರಹ್ಮಣಿ ಲೀನಾತ್ಮಾ ವಿಭಾಗೇನ ನ ದೃಶ್ಯತೇ ॥೨॥

(ಪರಿಚ್ಛೇದ ೨೦)

ಎಂದು ಶ್ರೀಜಗದ್ಗುರುರೇಣುಕಾಚಾರ್ಯರು ಸಿದ್ಧಾಂತಶಿಖಾಮಣಿಯಲ್ಲಿ ಅಪ್ಪಣೆಕೊಡಿಸಿರುವಂತೆ, ಲಿಂಗಾಂಗಿಯಾದ ವೀರಶೈವನು ಷಟ್ಸ್ಥಲಾ ಚರಣೆಯಿಂದ ನೀರಿನಲ್ಲಿ ನೀರನ್ನು ಕೂಡಿಸಿದಂತೆಯೂ, ಬೆಂಕಿಯಲ್ಲಿ ಬೆಂಕಿಯನ್ನು ಕೂಡಿಸಿದಂತೆಯೂ ಪರಶಿವಬ್ರಹ್ಮದಲ್ಲಿ ಸಮರಸಗೊಂಡು ಏಕಾಕಾರನಾಗುವನು. ಶುದ್ಧಾತ್ಮನಾದ ಅಂಗನಾಮಕಜೀವನು ಲಿಂಗ ನಾಮಕಶಿವನಲ್ಲಿ ಸಾಮರಸ್ಯವನ್ನು ಹೊಂದುವುದರಿಂದ ಇದೇ ಲಿಂಗಾಂಗಸಾಮರಸ್ಯವೆನಿಸುವುದು. ಇದೇ ಶಿವಜೀವೈಕ್ಯವೆನಿಸುವುದು. ಇದೇ "ಶಕ್ತಿವಿಶಿಷ್ಟಾದ್ವೈತ" ವೆನಿಸುವುದು.

ಶಿವಂಭೂಯಾತ್ ! ಶಿವಂಭೂಯಾತ್ !! ಶಿವಂಭೂಯಾತ್ !!!

ಶ್ರೀಜಗದ್ಗುರುಪಂಚಾಚಾರ್ಯಾಃ ಪ್ರಸೀದಂತು.

ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು

ಜಗದ್ವಿಖ್ಯಾತವಾಗಿರುವ

ಕಲ್ಯಾಣಪತ್ರಿಕೆಯ ವಿಶೇಷಾಂಕ (ಯೋಗಾಂಕ) ಕ್ಕೆ

೧೯೩೫ ನೆಯ ಇಸ್ವಿಯಲ್ಲಿ ಶಿವಯೋಗದ ಬಗ್ಗೆ ಬರೆದು ಕಳುಹಿಸಿದ

ಹಿಂದೀಲೇಖನದ ಅನುವಾದ.

ಶಿವಯೋಗ

ಯೋಗಶಾಸ್ತ್ರಪ್ರವರ್ತಕರಾದ ಪತಂಜಲಿ ಮಹರ್ಷಿಗಳು "**ಯೋಗಶ್ಚಿತ್ತವೃತ್ತಿನಿರೋಧಃ**" ಎಂಬ ಸೂತ್ರದಲ್ಲಿ ಚಿತ್ತವೃತ್ತಿಯನ್ನು ನಿರೋಧಮಾಡುವುದೇ '**ಯೋಗ**' ವೆಂದು ಉಲ್ಲೇಖಿಸಿರುವರು. ಚಿತ್ತವೃತ್ತಿನಿರೋಧಸಾಧನೀಭೂತವಾದ ಈ ಯೋಗವು ಮಂತ್ರಯೋಗ–ಲಯಯೋಗ – ಹಠಯೋಗ – ರಾಜಯೋಗ – ಶಿವಯೋಗವೆಂದು ಐದು ಪ್ರಕಾರವಾಗಿರುವುದು.

ಏಕಾಕ್ಷರಂ ದ್ವ್ಯಕ್ಷರಂ ವಾ ಷಡಕ್ಷರಮಥಾಽಪಿ ವಾ ।
ಅಷ್ಟಾಕ್ಷರಂ ವಾ ಮೋಕ್ಷಾಯ ಮಂತ್ರಯೋಗೀ ಜಪೇತ್ಸದಾ॥

ಏಕಾಕ್ಷರಾತ್ಮಕವಾದ 'ಓಂ' ಎಂಬ ಮಂತ್ರವನ್ನಾಗಲಿ, ದ್ವ್ಯಕ್ಷರಾತ್ಮಕವಾದ 'ಹಂಸ' ಅಥವಾ 'ಸೋಽಹಂ' ಎಂಬ ಮಂತ್ರವನ್ನಾಗಲಿ, ಷಡಕ್ಷರಾತ್ಮಕವಾದ 'ಓಂ ನಮಃ ಶಿವಾಯ' ಎಂಬ

ಮಂತ್ರವನ್ನಾಗಲಿ, ಅಷ್ಟಾಕ್ಷರಾತ್ಮಕವಾದ 'ಓಂ ಹ್ರಾಂ ಹ್ರೀಂ ನಮಃ ಶಿವಾಯ' ಎಂಬ ಮಂತ್ರವನ್ನಾಗಲಿ ಮಂತ್ರಕ್ರಮವನ್ನನುಸರಿಸಿ ಮುಕ್ತಿಗೋಸುಗ ಜಪಿಸುವುದೇ "**ಮಂತ್ರಯೋಗ**" ವೆನಿಸುವುದು.

ಯಸ್ಯ ಚಿತ್ತಂ ನಿಜಧ್ಯೇಯೇ ಮನಸಾ ಮರುತಾ ಸಹ।
ಲೀನಂ ಭವತಿ ನಾದೇ ವಾ ಲಯಯೋಗೀ ಸ ಏವ ಹಿ ॥

ಯಾವನ ಚಿತ್ತವು ತನ್ನ ಧ್ಯಾನಕ್ಕೆ ಯೋಗ್ಯವಾದ ಮೂರ್ತಿಯಲ್ಲಾಗಲಿ ಅಥವಾ ಪ್ರಾಣಾಯಾಮದಿಂದ ಅಭಿವ್ಯಕ್ತವಾದ ನಾದದಲ್ಲಿಯಾಗಲಿ ಮನೋಮಾರುತಗಳೊಡನೆ ಕೂಡಿ ಲಯವಾಗುವುದೋ ಅದೇ "**ಲಯಯೋಗ**" ವೆನಿಸುವುದು.

ಭವೇದಷ್ಟಾಂಗಮಾರ್ಗೇಣ ಮುದ್ರಾಕರಣಬಂಧನೈಃ।
ತಥಾ ಕೇವಲಕುಂಭೇ ವಾ ಹಠಯೋಗೀ ವಶಾನಿಲಃ ॥

ಯಮ-ನಿಯಮ-ಆಸನ-ಪ್ರಾಣಾಯಾಮ-ಪ್ರತ್ಯಾಹಾರ- ಧ್ಯಾನ ಧಾರಣ-ಸಮಾಧಿಗಳೆಂಬ ಅಷ್ಟಾಂಗಗಳಿಂದಾಗಲಿ, ಮಹಾಮುದ್ರಾ-ಮಹಾಬಂಧ-ಮಹಾವೇಧ-ಖೇಚರೀ - ಉಡ್ಡಿಯಾನ - ಮೂಲಬಂಧ - ಜಾಲಂಧರಬಂಧ-ವಿಪರೀತಕರಣೀ - ವಜ್ರೋಳೀ - ಶಕ್ತಿಚಾಲನಗಳೆಂಬ ದಶವಿಧ ಬಂಧಗಳಿಂದಾಗಲಿ, ಧೌತಿ-ಬಸ್ತಿ-ನೇತಿ-ತ್ರೋಟಕ - ನೌಲಿ - ಕಪಾಲಭಾತಿಗಳೆಂಬ ಷಟ್ಕರ್ಮಗಳಿಂದಾಗಲಿ ಅಥವಾ ರೇಚಕಪೂರಕ ಪ್ರಾಣಾಯಾಮಗಳಿಲ್ಲದೆ ಕೇವಲಕುಂಭಕಪ್ರಾಣಾಯಾಮದಿಂದಾಗಲಿ ವಾಯುವನ್ನು ವಶಮಾಡಿಕೊಳ್ಳುವುದು "**ಹಠಯೋಗ**" ವೆನಿಸುವುದು.

ತ್ರಿಷು ಲಕ್ಷ್ಯೇಷು ಯೋ ಬ್ರಹ್ಮಸಾಕ್ಷಾತ್ಕಾರಂ ಗಮಿಷ್ಯತಿ।
ಜ್ಞಾನೇ ವಾಽಥ ಮನೋವೃತ್ತಿರಹಿತೋ ರಾಜಯೋಗವಿತ್ ॥

ಯಾವನು ಬಾಹ್ಯಲಕ್ಷ್ಯ-ಮಧ್ಯಲಕ್ಷ್ಯ- ಅಂತರ್ಲಕ್ಷ್ಯಗಳಿಂದಾಗಲಿ ಅಥವಾ ಅಮನಸ್ಕಜ್ಞಾನ (ಅಂತರ್ಮುದ್ರಾಜ್ಞಾನ) ದಿಂದಾಗಲಿ ಪರಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವನೋ, ಅವನು ಮನೋವ್ಯಾಪಾರಶೂನ್ಯನಾದ ರಾಜಯೋಗಿಯೆನಿಸುವನು. ಈ ರೀತಿಯಾಗಿ ಆಚರಿಸುವುದೇ " **ರಾಜಯೋಗ** " ವೆನಿಸುವುದು.

ಈ ನಾಲ್ಕುವಿಧವಾದ ಯೋಗಗಳಲ್ಲಿ ರಾಜಯೋಗವೇ ಶ್ರೇಷ್ಠವಾಗಿರುವುದು.

ನ ಭೇದಃ ಶಿವಯೋಗಸ್ಯ ರಾಜಯೋಗಸ್ಯ ತತ್ತ್ವತಃ ।
ಶಿವಾರ್ಥಿನಾಂ ತಥಾಪ್ಯೇವಮುಕ್ತೋ ಬುದ್ಧೇಃ ಪ್ರವೃದ್ಧಯೇ ॥

ರಾಜಯೋಗಕ್ಕೂ ಶಿವಯೋಗಕ್ಕೂ ಪಾರಮಾರ್ಥಿಕವಾಗಿ ಯಾವ ಭೇದವೂ ಇರುವುದಿಲ್ಲ. ಆದರೂ ಪರಶಿವಬ್ರಹ್ಮಸಾಕ್ಷಾತ್ಕಾರಾಪೇಕ್ಷಿಗಳಾದ ಮುಮುಕ್ಷುಗಳ ಜ್ಞಾನಾಭಿವೃದ್ಧಿಗೋಸ್ಕರ ಶಿವಯೋಗವು ಬೇರೆಯಾಗಿ ಹೇಳಲ್ಪಟ್ಟಿದೆ.

ಪ್ರತಿಪಾದ್ಯಸ್ತಯೋರ್ಭೇದಸ್ತಥಾ ಶಿವರತಾತ್ಮನಾಂ ।
ತಸ್ಮಾನ್ಮನೀಷಿಭಿರ್ಗ್ರಾಹ್ಯಃ ಶಿವಯೋಗಸ್ತು ಕೇವಲಃ ॥

ಶಿವಪ್ರೀತಾತ್ಮರಿಗೆ ರಾಜಯೋಗ-ಶಿವಯೋಗಗಳಲ್ಲಿ ಭೇದವು ಹೇಳಲ್ಪಡಬೇಕಾಗಿದೆ. ಆದುದರಿಂದ ಮೋಕ್ಷಾಪೇಕ್ಷಿಗಳು ಶಿವಯೋಗವನ್ನೇ ಆಚರಿಸಬೇಕು. ರಾಜಯೋಗಕ್ಕೂ ಶಿವಯೋಗಕ್ಕೂ ಇರುವ ಭೇದವೇನೆಂದರೆ— ಪಾತಂಜಲಯೋಗಶಾಸ್ತ್ರದಲ್ಲಿ ಗುಣತ್ರಯ ಸಾಕ್ಷಾತ್ಕಾರವೇ ತಾರಕತ್ರಯವೆಂದೂ, ಪ್ರಕೃತಿಯಲ್ಲಿ ಮನೋಲಯವೇ ಅಮನಸ್ಕವೆಂದೂ ತಿಳಿದು ಪುರುಷಸಾಕ್ಷಾತ್ಕಾರವನ್ನು ಮಾಡಿಕೊಳ್ಳು

ವುದೇ ರಾಜಯೋಗವೆಂದು ಹೇಳಲ್ಪಡುವುದು. ಆದರೆ ಶಿವಾಗಮಗಳಲ್ಲಿ ಶಿವಭಕ್ತಿಗಾಧಾರವಾದ ಮಹಾಕುಂಡಲಿನೀಜನಿತತಾರಕತ್ರಯಸಾಕ್ಷಾತ್ಕಾರದ್ವಾರಾ ಶಕ್ತಿಯಲ್ಲಿ ವೃತ್ತಿಜ್ಞಾನವನ್ನು ಲಯಗೊಳಿಸಲು ಸರ್ವತೋಮುಖವಾಗಿ ವ್ಯಾಪ್ತವಾಗುವ ಶಿವತ್ವಾಭಿವ್ಯಕ್ತಿಯೇ "**ಶಿವಯೋಗ**" ವೆಂದು ಹೇಳಲ್ಪಡುವುದು.

ಜ್ಞಾನಂ ಶಿವಮಯಂ ಭಕ್ತಿಃ ಶೈವೀ ಧ್ಯಾನಂ ಶಿವಾತ್ಮಕಂ ।
ಶಿವವ್ರತಂ ಶಿವಾರ್ಚೇತಿ ಶಿವಯೋಗೋ ಹಿ ಪಂಚಧಾ ॥

ಈ ಶಿವಯೋಗವು—ಶಿವಜ್ಞಾನ, ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಪೂಜಾ ಎಂದು ಐದುಬಗೆಯಾಗಿದೆ. ಶಿವಪೂಜೆಯು ಶಿವಜ್ಞಾನಾದಿಗಳನ್ನು ಗರ್ಭೀಕರಿಸಿಕೊಂಡಿರುವುದರಿಂದ, ಶಿವಪೂಜೆಯೇ ಮುಖ್ಯವಾಗಿ ಶಿವಯೋಗವೆನಿಸುವುದು.

ಶಿವಾರ್ಚನವಿಹೀನೋ ಯಃ ಪಶುರೇವ ನ ಸಂಶಯಃ ।
ಸ ತು ಸಂಸಾರಚಕ್ರೇಽಸ್ಮಿನ್ನಜಸ್ರಂ ಪರಿವರ್ತತೇ ॥

ಯಾವನು ಶಿವಪೂಜಾರೂಪವಾದ ಶಿವಯೋಗದಿಂದ ವಿಮುಖನಾಗುವನೋ ಅವನು ಪಶುವೆನಿಸಿಕೊಳ್ಳುವನು. ಅವನು ಈ ಸಂಸಾರಚಕ್ರದಲ್ಲಿ ಜನನಮರಣರೂಪದಿಂದ ಯಾವಾಗಲೂ ಸುತ್ತುತ್ತಿರುವನು.

ಅಂತರ್ಯಾಗೋ ಬಹಿರ್ಯಾಗೋ ದ್ವಿವಿಧಂ ತಚ್ಛಿವಾರ್ಚನಂ ।
ಮುಖ್ಯಾ ಚಾಭ್ಯಂತರೀ ಪೂಜಾ ಸಾ ಚ ಬಾಹ್ಯಾರ್ಚನೋದಿತಾ ॥

ಶಿವಪೂಜೆಯು ಅಂತಃಪೂಜಾ-ಬಹಿಃಪೂಜಾ ಎಂದು ಎರಡು ಬಗೆಯಾಗಿರುವದು. ಅಂತಃಪೂಜೆಯೇ ಮುಖ್ಯವಾದುದು. ಈ ಅಂತಃಪೂಜೆಯು ಬಾಹ್ಯಲಿಂಗಪೂಜೆಯಿಂದಲೇ ಉತ್ಪನ್ನವಾಗುವುದು.

ಬಾಹ್ಯವಾದ ಇಷ್ಟಲಿಂಗಪೂಜೆಯಿಲ್ಲದೆ ಅಂತರ್ಲಿಂಗಪೂಜೆಯು ಸಿದ್ಧಿಸುವುದಿಲ್ಲ. ಅಂತರ್ಲಿಂಗಪೂಜೆಗೆ ಇಷ್ಟಲಿಂಗಪೂಜೆಯೇ ಮೂಲ ಸಾಧನವಾಗಿರುವುದು.

ತ್ರಿನೇತ್ರಂ ತ್ರಿಗುಣಾಧಾರಂ ತ್ರಿಮಲಕ್ಷಯಕಾರಣಂ ।
ಸರ್ವಮಂಗಲಯಾ ದೇವ್ಯಾ ನಿಜವಾಮಾಂಗಶೋಭಿತಂ ॥

ಪರಂ ಶಿವಂ ಹೃದಿ ಧ್ಯಾತ್ವಾ ನಿಶ್ಚಲೀಭೂತಮಾನಸಃ ।
ಯಜೇದಾಭ್ಯಂತರದ್ರವ್ಯೈರವಧಾನೇನ ತದ್ಯಥಾ ॥

ಶಮಾಂಬುಪರಿಷೇಚನಂ ಸಕಲಪೂರ್ಣಭಾವಾಂಬರಂ
ತ್ರಿಶಕ್ತಿಗುಣಸಂಯುತಂ ವಿಹಿತಯಜ್ಞಸೂತ್ರಂ ತಥಾ ।
ಸ್ವಸಂವಿದನುಲೇಪನಂ ಸಮಧಿಕಾನುಕಂಪಾಕ್ಷತಾನ್
ಶಿವಾಯ ವಿನಿವೇದಯೇತ್ ಪ್ರಕಟಭಕ್ತಿಪುಷ್ಪಾಣಿ ಚ ॥

ಧೂಪಮಾಂತರಚತುಷ್ಟಯೇನ ತ
ದ್ದೀಪಮಿಂದ್ರಿಯಗುಣೋತ್ಕರೇಣ ತು ।
ಕಲ್ಪಯೇಚ್ಚ ಸುಖದುಃಖವರ್ಜಿತಂ
ಜೀವರೂಪಮುಪಹಾರಮಾಂತರೇ ॥

ರಜಸ್ತಮಸ್ಸತ್ತ್ವಗುಣತ್ರಯಾಖ್ಯ
ತಾಂಬೂಲಕಂ ಪ್ರಾಣನಮಸ್ಕೃತಿಂ ಚ ।
ಇತ್ಯೇವಮಾಭ್ಯಂತರಮುಖ್ಯಪೂಜಾ
ದ್ರವ್ಯಾಣಿ ಸಂಪಾದಯ ಶಂಕರಾಯ ॥

ಶಿವಲಿಂಗಪೂಜಕನು ತ್ರಿನೇತ್ರಭೂಷಿತನೂ, ತ್ರಿಗುಣಾಧಾರನೂ, ಆಣವಾದಿಮಲತ್ರಯನಾಶಕಾರಣನೂ, ತನ್ನ ವಾಮಭಾಗ

ದಲ್ಲಿ ಉಮಾದೇವಿಯಿಂದ ಶೋಭಿಸುತ್ತಿರುವವನೂ ಆದ ಪರಶಿವನನ್ನು ಹೃತ್ಕಮಲದಲ್ಲಿ ಧ್ಯಾನಿಸುತ್ತ ನಿಶ್ಚಲಮನಸ್ಸುಳ್ಳವನಾಗಿ, ಅಭ್ಯಂತ ರೋಪಚಾರಗಳಿಂದ ಪೂಜಿಸಬೇಕು. ಆಭ್ಯಂತರೋಪಚಾರಗಳಾವು ವೆಂದರೆ—ಶಾಂತಿಯೇ ಅಭಿಷೇಕಜಲ, ವಿಶ್ವವ್ಯಾಪಕತಾಭಾವವೇ ವಸ್ತ್ರ, ಇಚ್ಛಾ-ಜ್ಞಾನ-ಕ್ರಿಯಾರೂಪಶಕ್ತಿತ್ರಯವೇ ಯಜ್ಞೋಪವೀತ, ಸ್ವಸ್ವರೂಪಜ್ಞಾನವೇ ಗಂಧ, ಅಧಿಕವಾದ ಭೂತದಯೆಯೇ ಅಕ್ಷತ, ಪರಿಶುದ್ಧವಾದ ಭಕ್ತಿಯೇ ಪುಷ್ಪ, ಅಂತಃಕರಣಚತುಷ್ಟಯವೇ ಧೂಪ, ಇಂದ್ರಿಯಗುಣೋತ್ಕರವೇ ದೀಪ, ಸುಖದುಃಖವರ್ಜಿತವಾದ ಆತ್ಮಸ್ವರೂಪವೇ ನೈವೇದ್ಯ, ಸತ್ವರಜಸ್ತಮೋಗುಣಗಳೇ ತಾಂಬೂಲ, ಪ್ರಾಣವೇ ನಮಸ್ಕಾರ.

ಶಿವಯೋಗಸಾಧಕರಿಗೆ ಶಿವಯೋಗವು ಸಾಧ್ಯವಾಗಿಯೂ, ಹಠಯೋಗವು ಸಾಧನವಾಗಿಯೂ ಇರುವುದು. ಹಠಯೋಗವು ಬಾಹ್ಯಾಷ್ಟಾಂಗ-ಅಂತರಷ್ಟಾಂಗಗಳಿಂದ ಯುಕ್ತವಾಗಿರುವದು. ವೀರಶೈವನು ಅಂತರಷ್ಟಾಂಗಾತ್ಮಕಹಠಯೋಗದ್ವಾರಾ ಶಿವಯೋಗ ವನ್ನು ಸಾಧಿಸಬೇಕು.

ಯಮನಿಯಮಗುಣೈಶ್ಚ ಸ್ವಾತ್ಮಶುದ್ಧಿಂ ವಿಧಾಯ
ಸ್ವವಶವಿವಿಧಪೀಠೈರೇವ ಭೂತ್ವಾ ಸ್ಥಿರಾತ್ಮಾ ।
ಅಸುನಿಯಮಜಲೇನ ಸ್ನಾಪಯೇದ್ದಿವ್ಯಲಿಂಗಂ
ಪ್ರಕಟಿತಚತುರಂಗಂ ಬಾಹ್ಯಮೇತದ್ವಿಧಾನಂ ॥

ಶಂಭೋರಥೇಂದ್ರಿಯನಿವರ್ತನಮೇವ ಗಂಧೋ
ಧ್ಯಾನಂ ಪ್ರಸೂನನಿಚಯೋ ದೃಢಧಾರಣಾ ಸಾ ।
ಧೂಪಃ ಸಮಾಧಿರಥ ಶುದ್ಧಮಹೋಪಹಾರ
ಮಾಭ್ಯಂತರಾಖ್ಯಚತುರಂಗವಿಧಾನಮೇತತ್ ॥

ಏವಮಷ್ಟಾಂಗಯೋಗೇನ ಸದಾಂತಃಪದ್ಮಸದ್ಮನಿ ।
ಪೂಜಯೇತ್ಪರಮಂ ದೇವಂ ಕಿಂ ಬಾಹ್ಯೈರ್ದೇವಪೂಜನೈಃ ॥

ಯಮ-ನಿಯಮಗಳಿಗೆ ಸಂಬಂಧಪಟ್ಟ ಇಪ್ಪತ್ತು ಗುಣಗಳಿಂದ ಆತ್ಮಶುದ್ಧಿಯನ್ನು ಮಾಡಿಕೊಂಡು, ತನಗೆ ವಶಗಳಾದ ಪದ್ಮಾಸನಾದ್ಯಾಸನಗಳಿಂದ ಸ್ಥಿರವಾದ ದೇಹವುಳ್ಳವನಾಗಿ, ಪ್ರಾಣಾಯಾಮವೆಂಬ ಜಲದಿಂದ ದಿವ್ಯಲಿಂಗವನ್ನು ಅಭಿಷೇಚಿಸಬೇಕು. ಇದು ಬಾಹ್ಯಚತುರಂಗವೆನಿಸುವುದು. ಶಿವನಿಗೆ ನೇತ್ರಾದೀಂದ್ರಿಯವಿಷಯನಿವೃತ್ತಿರೂಪ ಪ್ರತ್ಯಾಹಾರವೇ ಗಂಧವು, ಆ ಇಂದ್ರಿಯವಿಷಯನಿವೃತ್ತಿಯಿಂದ ಅಂತರ್ಮುಖವಾದ ಮನಸ್ಸಿನಲ್ಲಿ ಮಾಡಲ್ಪಡುವ ಶಿವಧ್ಯಾನವೇ ಪುಷ್ಪವು, ಶಿವನನ್ನು ಧೃಢವಾಗಿ ಧರಿಸುವುದೇ ಧಾರಣವು, ಜ್ಞಾತಾಜ್ಞಾತರೂಪ ಸಮಾಧಿಯೇ ನೈವೇದ್ಯವು, ಇವೇ ಆಭ್ಯಂತರಚತುರಂಗವೆನಿಸುವುದು. ಶಿವಯೋಗಸಾಧಕನು ಈರೀತಿಯಾಗಿರುವ ಅಷ್ಟಾಂಗಯೋಗದಿಂದ ತನ್ನ ಹೃತ್ಕಮಲದಲ್ಲಿ ಶಿವನನ್ನು ಪೂಜಿಸಬೇಕು.

ವೀರಶೈವಮತದಲ್ಲಿ ಶಿವಯೋಗಕ್ಕೆ ಭಕ್ತ-ಮಹೇಶ-ಪ್ರಸಾದಿ-ಪ್ರಾಣಲಿಂಗಿ-ಶರಣ-ಐಕ್ಯ ಎಂಬ ಷಟ್‌ಸ್ಥಲಗಳೇ ಮುಖ್ಯಾಂಗಗಳಾಗಿರುತ್ತವೆ. ಯಮನಿಯಮಾದ್ಯಷ್ಟಾಂಗಗಳು ಈ ಆರುಸ್ಥಲಗಳಲ್ಲಿಯೇ ಸಮಾವೇಶವಾಗುತ್ತವೆ.

ಯಮೇನ ನಿಯಮೇನೈವ ಮನ್ಯೇ ಭಕ್ತ ಇತಿ ಸ್ವಯಂ ।
ಸ್ಥಿರಾಸನಸಮಾಯುಕ್ತೋ ಮಾಹೇಶ್ವರಪದಾನ್ವಿತಃ ॥

ಚರಾಚರಲಯಸ್ಥಾನಂ ಲಿಂಗಮಾಕಾಶಸಂಜ್ಞಕಂ ।
ಪ್ರಾಣೇ ತದ್ವ್ಯೋಮ್ನಿ ಸಂಲೀನೇ ಪ್ರಾಣಲಿಂಗೀ ಭವೇತ್ ಪುಮಾನ್ ॥

ಪ್ರತ್ಯಾಹಾರೇಣ ಸಂಯುಕ್ತಃ ಪ್ರಸಾದೀತಿ ನ ಸಂಶಯಃ ।
ಧ್ಯಾನಧಾರಣಸಂಪನ್ನಃ ಶರಣಸ್ಥಲವಾನ್ ಸುಧೀಃ ॥
ಲಿಂಗೈಕ್ಯೋಽದ್ವೈತಭಾವಾತ್ಮಾ ನಿಶ್ಚಲೈಕಸಮಾಧಿನಾ ।
ಏವಮಷ್ಟಾಂಗಯೋಗೇನ ವೀರಶೈವೋ ಭವೇನ್ನರಃ ॥

ಯಮನಿಯಮಗಳುಳ್ಳವನೇ 'ಭಕ್ತ'ನೆನಿಸುವನು. ಆಸನದಿಂದ ಯುಕ್ತನಾದವನೇ 'ಮಾಹೇಶ್ವರ'ನೆನಿಸುವನು. ಚರಾಚರಪ್ರಪಂಚ ಲಯಸ್ಥಾನಭೂತವಾದ ಲಿಂಗಾಕಾಶದಲ್ಲಿ ಪ್ರಾಣವು ಲೀನವಾಗಲು ಆವನು 'ಪ್ರಾಣಲಿಂಗಿ' ಯೆನಿಸುವನು. ಪತ್ರ್ಯಾಹಾರದಿಂದ ಕೂಡಿದವನು 'ಪ್ರಸಾದಿ' ಯೆನಿಸುವನು. ಶಿವಧ್ಯಾನಧಾರಣಗಳಿಂದ ಕೂಡಿದವನು 'ಶರಣ'ನೆನಿಸುವನು. ನಿಶ್ಚಲಸಮಾಧಿಯಿಂದ ಕೂಡಿದವನು ಅದ್ವೈತಭಾವಾಪನ್ನನಾದ 'ಐಕ್ಯ'ನೆನಿಸುವನು. ಈ ರೀತಿಯಾಗಿ ಅಷ್ಟಾಂಗರೂಪವಾಗಿರುವ ಷಟ್‌ಸ್ಥಲಗಳ ಆಚರಣೆಯುಳ್ಳವನೇ ವೀರಶೈವನೆನಿಸುವನೆಂದು ಲಿಂಗಪುರಾಣವು ಬೋಧಿಸುತ್ತಿರುವುದು.

ಕ್ರೀಟೋ ಭ್ರಮರಯೋಗೇನ ಭ್ರಮರೋ ಭವತಿ ಧ್ರುವಂ ।
ಮಾನವಃ ಶಿವಯೋಗೇನ ಶಿವೋ ಭವತಿ ಕೇವಲಂ ॥

ಕೀಟವು ಭ್ರಮರಯೋಗದಿಂದ ಸಾಕ್ಷಾತ್ ಭ್ರಮರವಾಗುವಂತೆ, ಮಾನವನು ಶಿವಯೋಗದಿಂದ ಕೇವಲ ಶಿವನೇ ಆಗುವನು. ಇದೇ ಶಿವಯೋಗದ ರಹಸ್ಯವು.

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಸ್ವಾಮಿತ್ವದಿಂದ
ಆವಿರ್ಭವಿಸಿರುವ

ಶ್ರೀಕಾಶೀನಾಥಗ್ರಂಥಮಾಲೆಯಲ್ಲಿ ಪ್ರಕಟವಾಗಿರುವ ಗಂಥಗಳು.

ಪುಷ್ಪ			
೧	ವೈದಿಕವಾಙ್ಮಯರಹಸ್ಯ	....	೪ ಆಣೆ.
೨	ಸಚಿತ್ರರೇಣುಕವಿಜಯ	....	೧ ರೂ.
೩	ರೇಣುಕಾಚಾರ್ಯಶತಕ	....	೨ ಆಣೆ.
೪	ಮಾಹೇಶ್ವರದೀಕ್ಷಾವಿಧಿ	....	೧೨ ಆಣೆ.
೫	ವೀರಶೈವರತ್ನ (೫ನೆಯ ಆವೃತ್ತಿ)	....	೨ ರೂ.
೬	ಸಿದ್ಧಾಂತಶಿಖೋಪನಿಷದ್ಭಾಷ್ಯ	....	೧ ರೂ.
೭	ಸಿದ್ಧಾಂತಸಾರಾವಳಿ	....	೧೨ ಆಣೆ.
೮	ಬಸವಧ್ವಾಂತದಿವಾಕರ	....	೮ ಆಣೆ.
೯	ಆಗಮಪರಿಜ್ಞಾನ	....	೮ ಆಣೆ.
೧೦	ಗೋತ್ರಸೂತ್ರಪಟ	....	೧ ಆಣೆ.
೧೧	ಪಂಚಾಚಾರ್ಯಾಷ್ಟೋತ್ತರಶತನಾಮಾವಳಿ		೨ ಆಣೆ.
೧೨	Speeches by Pandit Shri Kāshināthashāstriji (*in English*)		12 As.
೧೩	ಪಂಡಿತಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು(ತೆಲಗು)		೮ ಆಣೆ.
೧೪	ಶಿವಶಕ್ತಿವಿಲಾಸ	....	೨ ಆಣೆ.
೧೫	ಬಸವಾದಿನಿಜತತ್ತ್ವದರ್ಪಣ	....	೨ ಆಣೆ.
೧೬	ಸಂಕ್ಷಿಪ್ತಶಿವಪೂಜಾವಿಧಿ	....	೧ ಆಣೆ.
೧೭	ಸನ್ಯಾಸಾಶ್ರಮವಿಮರ್ಶ (ಸಂಸ್ಕೃತ)	....	೧ ಆಣೆ.
೧೮	ರೇಣುಕವಿಜಯಪುರಾಣ	....	೧ ರೂ.
೧೯	ಪಂಚಾಚಾರ್ಯಸ್ತೋತ್ರರತ್ನಾಕರ	....	೧೨ ಆಣೆ.

೨೦ ಶ್ರೀಗುರುತತ್ತ್ವಪದಗಳು .... ೨ ಆಣೆ.

೨೧ ವೀರಶೈವಾಚಾರವಿಧಿ .... ೩ ಆಣೆ.

೨೨ ಶಿವಾದ್ವೈತಮಂಜರಿ (೧೩೪೪ ಪುಟಗಳು) ೮ ರೂ.

೨೩ ಶಿಖಾಸೂತ್ರಸಿದ್ಧಾಂತದರ್ಪಣ .... ೧೨ ಆಣೆ.

೨೪ ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ ೬ ಆಣೆ.

೨೫ ಶ್ರೀರುದ್ರಮುನೀಶ್ವರಶತಕ .... ೨ ಆಣೆ.

೨೬ ವೈದಿಕಶಿವಪೂಜಾವಿಧಿ .... ೧೨ ಆಣೆ.

೨೭ ವಿವಾಹವಿಧಿ .... ೪ ಆಣೆ.

೨೮ ಶ್ರೀಪಂಚಾಚಾರ್ಯಮಂಗಲಸ್ತೋತ್ರಾವಳಿ ೧ ಆಣೆ.

२९ नंदिकेश्वरकारिका (संस्कृत) .... **२ आणे.**

೩೦ ಸಿದ್ಧಾಂತಶಿಖಾಮಣಿ (ಕನ್ನಡಟೀಕಾಸಹಿತ) ೨ ರೂ.

೩೧ ಸಿದ್ಧಾಂತಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ೬ ಆಣೆ.

೩೨ A Brief Life-Sketch of Pandit
Shri Kāshinātha Shāstriji (*in English*) As 4.

३३ वीरशैवरत्न (मराठी) .... **१ रु.**

೩೪ ವೀರಶೈವಮಹಾತ್ಮರು .... ೮ ಆಣೆ.

೩೫ ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ ೪ ಆಣೆ.

೩೬ ಶ್ರೀಕರಭಾಷ್ಯ (ಚತುಸ್ಸೂತ್ರೀ-ಸಂಸ್ಕೃತ) .... ೧ ರೂ.

೩೭ Shakti-Vishistadvaita or The Philosophical
Aspect of Veerasaivism (*in English*) As 8.

೩೮ ಲಿಂಗಧಾರಣವಿಧಿ .... ೪ ಆಣೆ.

೩೯ ಶಿವಾದ್ವೈತಪರಿಭಾಷಾ (ಸಂಸ್ಕೃತ) .... ೮ ಆಣೆ.

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ.ಪಿ. ಕಳುಹಿಸುವುದಿಲ್ಲ. ೫ ರೂಪಾಯಿಗಳ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೂ, ಪುಸ್ತಕ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**



